ಪ್ರಬುದ್ಧ ಕರ್ಣಾಟಕ

ಸಂಪುಟ ೩೫—ಸಂಚಿಕೆ ೧

೧೩೫

ವಿಜಯ ಸಂವತ್ಸರ

ಚೈತ್ರ ಸಂಚಿಕೆ

•

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೩

ಪುಟ

ಶ್ರೀಯುತರಾದ

ಪ್ರಬುದ್ಧ ಕರ್ಣಾಟಕ

ವಿಜಯ ಸಂವತ್ಸರ	೧೩೪	ಚೈತ್ರ ಸಂಚಿಕೆ

ಅದ್ಭುತ ರಾಮಾಯಣ

ಅಥವಾ

ವಾಲ್ಮೀಕಿಗೊಂದು ಎಚ್ಚರಿಕೆ !

ಓ ತಾಯೆ ಸರಸತಿಯೆ, ನಿನ್ನ ಬೀಣೆಯ ಮೇಲೆ
ಕುಳಿತೇನ ಮಾಡುತಿವೆ ಈ ಗೂಬೆಗಳ ಮಾಲೆ?
ಒಂದೆರಡೆ? ಮೂರ್‌ನಾಲ್ಕೆ? ಐದಾರೆ? ಏಳೆ?
ಹೊರಳುತಿವೆ ಮೆಳ್ಳೆಗಣ್ಗಳು ಸಾಲು ಸಾಲೆ!
ಆವುದೊ ಹಿರಿಯ ಚಿಂತೆ ಅಧ್ಯಕ್ಷಗೂಬೆಯ ತಲೆಯ ಸುತ್ತ
ನೊಣದಂತೆ ಹಾರಾಡಿ ವ್ಯೂಹವನು ರಚಿಸುತಿದೆ ಅತ್ತ ಇತ್ತ.
ಪಕ್ಕದೊಳದರ ಸಚಿವ, ಹೊಗೆಸೊಪ್ಪ ಸೇದುತ್ತ,
ತಲೆಗಣ್ಣ ಹೊರಳಾಡಿಸುತ ಕುಳಿತಿಹುದು ಉನ್ಮತ್ತ!
ಮತ್ತೊಂದಕೇನೊ ಕೆದರಿದಂತಿದೆ ಪಿತ್ತ.
ಅತ್ತೊಂದರಾ ಚಿತ್ತಸ್ಥಿತಿಯೊ ತ್ರತ್ತತ್ತತ್ತತ್ತಾ!
ದೇವಕವಿ ವಾಲ್ಮೀಕಿಯಾ ದಿವ್ಯ ಪರ್ಣಶಾಲೆ:
ಸುತ್ತಲೂ ಹಬ್ಬಿಹುದು ಸುಂದರ ಗಿರಿ ಅರಣ್ಯಮಾಲೆ.
ನೆತ್ತಿಯಲಿ ನಿಂತಿಹುದು ನೀಲಿಯಾಗಸ ಋಷಿಯ ಶಾಂತಿಯೋಲೆ.

ವನವ ತುಂಬಿದೆ ಪಕ್ಷಿಕೂಜನದ ಮಧುಕಂಠ ಮಧುರ ಲೀಲೆ.
ಬಳಿಯೆ ಹರಿದಿದೆ ಮಂದ ಮಂದಾಕಿನಿಯ ಶಾಶ್ವತ ಸಲಿಲಯಾತ್ರೆ ;
ನೀರ ರೂಪದಿ ಲೋಕಕಿಳಿದಿಹ ಪವಿತ್ರೆ ಆ ತ್ರಿಣೇತ್ರೆ.
ಏನಿದಚ್ಚರಿ! ಅಲ್ಲಿ ನೆರೆದಿಹುದೊಂದು ಗೂಬೆಗೊಟ್ಟಿ !
ಆದಿಕವಿಯಿಾ ದಿವ್ಯ ಪರ್ಣಕುಟಿಯೊಳಿಯೆ ಈ ಘೂಕಗೋಷ್ಠಿ ?
ವ್ಯಾಸಪೀಠದ ಮೇಲೆ ಬಿಚ್ಚಿರುವುದೊಂದು ಭೂರ್ಜಪತ್ರದ ಪುಸ್ತಕ ;
ಆ ಬಳಿಯೆ ಗರಿಯ ಚಾಪೆಯ ಮೇಲೆ ಪೇರೊಡಲ ವೀಣೆ !
ರಾಮಾಯಣವೈ ಆ ಪುಸ್ತಕ ;
ಆ ವೀಣೆ ಲವಕುಶರ ವೀಣೆ !
ತೆರೆದ ಹಾಳೆಯ ಓದು : ಓವೊ ಸುಂದರ ಕಾಂಡದಾದಿ !
 ತಾಯಿ ಸೀತೆಯ ಕರೆಗೆ ವಿಾಹಕೆಂದು
ಕವಿಯೊಡನೆ ಹೊಳೆಯ ದಂಡೆಗೆ ಓಡಿದರು ಲವನು ಕುಶನು.
ಬಿಚ್ಚಿದಾ ಪುಸ್ತಕಂ ಬಿಚ್ಚಿದಂತೆಯೆ ಇಹುದು ವ್ಯಾಸಪೀಠದಲಿ ;
ಮಿಡಿಯುತಿರ್ದಾ ಬೀಣೆ ಮೌನವಾಂತಿಹುದಲ್ಲಿ ರಸಸಮಾಧಿಯಲಿ !
ಆಗಳಿಯೆ ಪರ್ಣಶಾಲೆಗೆ ಪೊಕ್ಕುದಾ ಗೂಬೆವಿಂಡು
ಕವಿವರನ ಮೇಣ್ ಕುಶಲವರ ಗೈರುಹಾಜರಿಯ ಕಂಡು !
 " ಏನು ಅನ್ಯಾಯ ! ಏನಿದೀ ಧೂರ್ತತನ ! ಏನಹಂಕಾರ !
ಕವಿಯೆಂಬ ಹೆಮ್ಮೆಯಾ ಪಿತ್ತಕಿಕ್ಕಲೆಬೇಕು ಮದ್ದುಖಾರ !
ಈ ಬೀಣೆಯಾ ಬುರುಡೆ ನಮ್ಮ ಹಕ್ಕಿಗೆ ತಕ್ಕ ಗುಹೆಯಲ್ತೆ ?
ಅದನಿವನು ತಂದು, ಮಕ್ಕಳಾಟಕೆ ತಂತಿಯಿಕ್ಕಿ,
ಕರ್ಕಶದ ಸದ್ದು ಮಾಡಿಸುತಿಹನು ಕವಿಯೆಂದು ಸೊಕ್ಕಿ !
ಇನಿತೊಂದು ದೊಡ್ಡ ಹೊತ್ತಗೆಯನೆಯೆ ಬರೆದಿರುವನಾದರೂ
ನಮ್ಮೊಂದು ಪೆಸರ ನುತಿಗೆಯ್ಯದಿವನ ಬಿಮ್ಮು
ಬಿರಿಯುವಂತೆಸಗವೇಳ್ಕುಂ ! ವೇ . . . ಳ್ಕು . . . ಮ್ಮೊ ! !
ಬರೆ, ಸಚಿವ, ಒಂದೆಚ್ಚರಿಕೆಯೋಲೆಯಂ :—
' ಎಲವೊ ಕವಿ ವಾಲ್ಮೀಕಿ, ತಮ್ಮೊಂದಸಂತೋಷಮಂ
ನಿನಗೆ ತಿಳಿಸಲ್ಕಾಟಿಪುದು ಈ ಮಹಾ ಧ್ವಾಂಕ್ಷಾರಾತಿ ವಿದ್ವನ್ಮಂಡಲಂ !
ಎಚ್ಚರಿಕೆ ! ಇನ್ನು ಮುಂದಾದೊಡಂ ನೀನಿಂತು
ನಮ್ಮನವಹೇಳನಂಗೈದೆಯಾದೊಡೆ ನಿನಗೆ . . .

ನಿನಗೆ . . . ನಿ . . ನ . . ಗೆ' . ನಿ . ." ನಗೆ ಕೇಳಿಸಿತು ಹೊರಗೆ!
ಕೇಕೆ ಹಾಕುತ ನುಗ್ಗಿದರು ಲವಕುಶರು ಒಳಗೆ!
ಹಾರೋಡಿದುವು ಗೂಬೆ ಬೆಳಕಂಡಿಯಿಂ ಪೊರಗೆ!
ಬೆನ್ನೊಳೆ ಒಳಗೆವಂದ ವಾಲ್ಮೀಕಿಗಾ ಲವಂ
"ಗುರುದೇವ, ಈ ಗೂಬೆಗಳಿಗೇನು ಮಾಳ್ಪುದೊ ಕಾಣೆ!
ಹಾಳಾಗುವುದು ಇವರ ದೆಸೆಯಿಂದೆಮ್ಮ ವೀಣೆ.
ನಾವಿಲ್ಲದಾಗಳೆ ಬಂದು ಮಾಳ್ಪವು ಅಸಹ್ಯಮಂ,
ಕುಳಿತು ತಂತಿಯ ಮೇಲೆ."
"ಬಿಡು, ವತ್ಸ, ಬಾಗಿಲಿಗೆ
ತಡಿಕೆಯಂ ಬಿಗಿದರಾಯ್ತು!" ಎನುತೆ ಹಾಸ್ಯಕೆ ಮತ್ತೆ
"ಪಿಂತೆ ತುಂಬುರ ಮುನಿಗೆ ಕರುಬಿ ನಾರದನೊಂದು
ಗೂಬೆಯಿಂ ಸಂಗೀತಮಂ ಕಲ್ತು ಗಾನಯೋಗಿ
ತಾನಾದನೈಸೆ! ಆ ಘೂಕಯೋಗಿಯ ನೆನೆದು
ಗೌರವಂದೋರಿವುಗಳಿಗೆ!" "ಕತೆ ಅದೇನ್, ಗುರುದೇವ?"
"ಅದೊಂದು ರಾಮಾಯಣಾದ್ಭುತಂ! ನನ್ನ ರಾಮಾಯಣಕೆ ಮಿಗಿಲ್!
ನಾಳೆ ಪೇಳ್ವೆನ್. ಶುಚಿಗೆಯ್ದು ಮಿಡಿಯಿಮಾ ವೀಣೆಯಂ."

—ಕುವೆಂಪು.

ಇದಾವ ನ್ಯಾಯ?

"ಇದಾವ ನ್ಯಾಯ?
ಏನನ್ಯಾಯ?
ಕೃಷ್ಣನ ಕುಹಕವ ನೋಡಲ್ಲಿ!"
—"ಕುಮಾರವ್ಯಾಸ."

ವೈಶಂಪಾಯನ ಸರೋವರ ತೀರಪ್ರದೇಶದಲ್ಲಿ ರಣರೌದ್ರಾವೇಶಿಗಳಾದ ಭೀಮ ದುರ್ಯೋಧನರ ನಿರ್ಣಾಯಕವಾದ ಕೊಟ್ಟಕೊನೆಯ ಗದಾಯುದ್ಧವನ್ನು ಪುಲಕಿತ ನಾಗಿ ಕಾಣುತ್ತಿರುವ ಕವಿ, ಶ್ರೀಕೃಷ್ಣನ ಸನ್ನೆಯ ಮೇರೆಗೆ ಭೀಮಸೇನನು ವೈರಿಯ ತೊಡೆಗೆ ಮೋದಿ ಅವನನ್ನು ಧರೆಗುರುಳಿಸುವ ರುದ್ರಭೀಷಣ ಸನ್ನಿವೇಶದಲ್ಲಿ, ತಾಳ ಲಾರದೆ ಕೂಗಿಕೊಳ್ಳುತ್ತಾನೆ "ಇದಾವ ನ್ಯಾಯ? ಏನನ್ಯಾಯ?" ಎಂದು. ನಮ್ಮ ಪುರಾಣ ಮಹಾಕಾವ್ಯಗಳನ್ನು ಓದುತ್ತಿರುವ ಸಹೃದಯ ವಾಚಕನಿಗೆ ಅಂತಹ ಇನ್ನೆಷ್ಟೊ ಸನ್ನಿವೇಶಗಳು ಪ್ರಾಪ್ತವಾಗುತ್ತವೆ. 'ಇದಾವ ನ್ಯಾಯ? ಏನನ್ಯಾಯ?' ಎಂದು ಮನಸ್ಸು ಮತ್ತೆ ಮತ್ತೆ ಮರುಗುತ್ತದೆ, ಮುನಿದೇಳುತ್ತದೆ. ಪ್ರಶ್ನೆಗೆ ಸಮಾ ಧಾನಕರವಾದ ಉತ್ತರವನ್ನು ಹುಡುಕಿ ಕಾಣಲಾರದೆ ಬುದ್ಧಿ ತಡವರಿಸುತ್ತದೆ, ಹೃದಯ ತತ್ತರಿಸುತ್ತದೆ. ಅನೇಕವೇಳೆ ಸೋತು, ಪ್ರತೀಕಾರ ಕಾಣದ ಧರ್ಮಕೋಪ ಕ್ಕೆಂಬಂತೆ, ತಿರಸ್ಕರಿಸಿಯೂ ಬಿಡುತ್ತದೆ. ಆರನ್ನೊ? ಏನನ್ನೊ? ಏತಕ್ಕೊ?

ಸತ್ಯ ಧರ್ಮ ತ್ಯಾಗ ವೀರ ಇತ್ಯಾದಿ ಮಹಾಗುಣಗಳೆಲ್ಲ ಮೂರ್ತಿಮತ್ತಾಗಿದ್ದ ಶ್ರೀರಾಮಚಂದ್ರನು ಮರದ ಮರೆಹೊಕ್ಕು ಅಡಗಿನಿಂತು ವಾಲಿಯನ್ನು ಸಂಹರಿಸು ತ್ತಾನೆ; ನಿರಪರಾಧಿನಿ ಗರ್ಭಿಣಿ ಸಹಧರ್ಮಿಣಿಯನ್ನು ಕಾಡಿಗಟ್ಟುತ್ತಾನೆ. ಶ್ರೀಮದ್ ಭಗವದ್‌ಗೀತೆಯಂತಹ ಅಲೋಕಸಾಮಾನ್ಯವಾದ ಪೂರ್ಣಯೋಗಶಾಸ್ತ್ರವನ್ನು ಜಗತ್ತಿಗೆ ಬೋಧಿಸಿದ ಶ್ರೀಕೃಷ್ಣನು, ಅವತಾರಪುರುಷನೆಂದು ಪೂಜ್ಯನಾದ ಶ್ರೀಕೃಷ್ಣನು, ತನ್ನ ಪಾಂಡವರ ಗೆಲವಿಗಾಗಿ ಕೌರವವೀರರನ್ನು ಪಡಲ್ವಡಿಸುವ ಲೋಕಸಂಗ್ರಹ ಕಾರ್ಯದಲ್ಲಿ, ಸಾಮಾನ್ಯಜೀವದ ಧರ್ಮದೃಷ್ಟಿ ತತ್ತರಿಸುವಂತಹ, ಅಕಾರ್ಯ ವೆಂದು ತೋರುವ, ಎಷ್ಟು ಸಾಹಸವರ್ತನೆಗಳಲ್ಲಿ ಭಾಗಿಯಾಗಿಲ್ಲ? ಮತ್ತೆಷ್ಟನ್ನು ಪ್ರೇರಿಸಿಲ್ಲ? ತಾನು ರಣದಲ್ಲಿ ಕೈದುವಿಡಿಯುವುದಿಲ್ಲ ಎಂದು ಪೂಣ್ದಿದ್ದರೂ ಗಾಂಗೇ ಯನ ಮೇಲೆ ಚಕ್ರ ಪ್ರಯೋಗ ಮಾಡುತ್ತಾನೆ! ಸಾರಥಿ ತ್ಯಜಿಸಿಹೋದ ಮೇಲೆ ರಕ್ತವಾರಿಯಿಂದ ಕೆಸರೆದ್ದ ನೆಲದಲ್ಲಿ ರಥದ ಗಾಲಿ ಹೂತುಕೊಂಡಿದ್ದಾಗ, ತನಗೆ ಸ್ವಲ್ಪ

ಸಮಯಬೇಕೆಂದು ಕೇಳಿ ತೇರಿಳಿದು, ಅದನ್ನೆತ್ತುವ ಕಾರ್ಯದಲ್ಲಿ ತೊಡಗಿದ್ದ ಕರ್ಣನ ಮೇಲೆ ಅರ್ಜುನನ ಕೈಯಿಂದ ಬಾಣ ಹೊಡೆಸುತ್ತಾನೆ. ಸಂಧಿಕಾರ್ಯಕ್ಕೆ ಹೋಗು ವಾಗಲೂ ಯುಧಿಷ್ಠಿರನಿಗೆ ಒಂದು ಮಾತು ಕೊಡುತ್ತಾನೆ; ಅದನ್ನು ಸಂಪೂರ್ಣ ವಾಗಿ ಮುರಿಯುವ ಮತ್ತೊಂದು ಮಾತಿನ ಅಭಯವನ್ನು ದ್ರೌಪದಿಗೆ ನೀಡುತ್ತಾನೆ. ದ್ರೋಣನನ್ನು ಕೊಲ್ಲಿಸಲು ಶ್ರೀಕೃಷ್ಣನು ಹೂಡಿದ ಉಪಾಯವನ್ನು ಇನ್ನಾರಾದರೂ ಮಾಡಿದ್ದರೆ? ಯಾವ ಹೆಸರಿಗೆ ಪಕ್ಕಾಗುತ್ತಿದ್ದರು?

ಅವತಾರಪುರುಷರು ಎಂದೆನ್ನಿಸಿಕೊಳ್ಳುವವರ ವಿಚಾರ ಹೀಗಾದರೆ ಆದರ್ಶ ವಿಭೂತಿ ಪುರುಷರು ಎನ್ನಿಸಿಕೊಳ್ಳುವವರೂ ಧರ್ಮಪರೀಕ್ಷಣೆಗೆ ಒಳಗಾಗುವಂತಹ ಎಷ್ಟೋ 'ಅಕಾರ್ಯ'ಗಳನ್ನು ಮಾಡಿರುವುದೂ ಪುರಾಣ ಮಹಾಕಾವ್ಯಗಳಲ್ಲಿ ಕಂಡು ಬರುತ್ತದೆ. ಆಚಾರ್ಯ ಭೀಷ್ಮರು ದುರ್ಯೋಧನನ ಪ್ರಪ್ರಥಮ ಮಹಾ ಸೇನಾನಿಯಾಗಿ ನಿಂತು ಭಾರತ ಯುದ್ಧವನ್ನು ಪ್ರಾರಂಭಿಸಿದರೂ, ದೇವತೆಗಳು ಹೊಗಳುವಂತೆ ಮತ್ತು ಶತ್ರುಪಕ್ಷ ದಿಗಿಲುಗೊಳ್ಳುವಂತೆ ಕಾಳಗಂಗೊಟ್ಟರೂ, ಕೊನೆಯಲ್ಲಿ ಪಾಂಡವರಿಗೆ ತಮ್ಮ ಸಾವಿನ ಅಥವಾ ಸೋಲಿನ ಗುಟ್ಟನ್ನು ಹೇಳಿಕೊಟ್ಟು ಶರಶಯ್ಯಾಗತರಾದರಷ್ಟೆ? ಈಗಣ ಮಹಾರಾಷ್ಟ್ರಗಳ ಮಹಾಸೇನಾನಿಗಳಲ್ಲಿ ಯಾವನಾದರೂ ಹಾಗೆಮಾಡಿದರೆ ಅವನನ್ನು ಏನನ್ನುತ್ತೇವೆ? ಅವನಿಗೆ ಏನು ಶಿಕ್ಷೆ ಒದಗುತ್ತದೆ? ಅವನು 'ಪಂಚಮ ದಳ ದಳಪತಿ'ಯೆಂದು ಅವಹೇಳಿತನಾಗಿ ಮರಣದಂಡನೆಗೆ ಗುರಿಯಾಗುವುದಿಲ್ಲವೆ? ರಾಜದ್ರೋಹಿ, ಸ್ವಾಮಿದ್ರೋಹಿ ಅಥವಾ ರಾಷ್ಟ್ರದ್ರೋಹಿ ಎಂದು ನಿಂದನೀಯ ನಾಗುವುದಿಲ್ಲವೆ?

ಅವರನ್ನೆಲ್ಲ ವಿಚಾರಣೆಗಾಗಿ ನ್ಯಾಯಸ್ಥಾನಕ್ಕೆ ಎಳೆಯುವುದೇನೊ ಸುಲಭ. ನ್ಯಾಯಾಧೀಶರ ಮುಂದೆ ವಾದಮಾಡಲು ನ್ಯಾಯವಾದಿಗಳೂ ದೊರೆಯುತ್ತಾರೆ. ಆದರೆ ಸಮಂಜಸವಾದ ಸಾಕ್ಷ್ಯವನ್ನು ಸಂಗ್ರಹಿಸಿ, ಸರಿಯಾದ ಸಾಕ್ಷಿಗಳನ್ನು, ತರಬಿಯತ್ತು ಮಾಡಿಯಾದರೂ ಚಿಂತೆಯಿಲ್ಲ, ಒದಗಿಸದಿದ್ದರೆ ನ್ಯಾಯಾಧೀಶರು ಕೇಸನ್ನೆ ವಜಾಮಾಡಬೇಕಾಗುತ್ತದೆ. ಈ ಕಾವ್ಯಸತ್ತೆಯ ಅಪರಾಧ ಮತ್ತು ಅಪರಾಧಿಗಳ ವಿಚಾರದಲ್ಲಿ ಅಂತಹ ಸಾಕ್ಷ್ಯ ಸಾಕ್ಷೀ ಸಾಮಂಜಸ್ಯವೆ ದೊಡ್ಡ ಸಮಸ್ಯೆ. ಏಕೆಂದರೆ ಒಬ್ಬೊಬ್ಬ ಕವಿಯೂ ತನ್ನ ಪಾತ್ರಗಳನ್ನೂ ಪಾತ್ರಕ್ರಿಯೆಯನ್ನೂ ತನ್ನ 'ದರ್ಶನ'ಕ್ಕೆ ಅನುಗುಣವಾಗಿ ಸೃಷ್ಟಿಸುತ್ತಾನೆ. ಆ ರಚನೆ 'ಅನನ್ಯ ಪರತಂತ್ರ'*ವಾದದ್ದು. ವ್ಯಾಸನ ದುರ್ಯೋಧನನ ಮೇಲೆ ಅಪರಾಧ ಹೊರಿಸಿ ನಾವು

* ಕುವೆಂಪು ಅವರ 'ಕವಿಕೃತಿಯಲ್ಲಿ ಅನನ್ಯಪರತಂತ್ರತೆ' ಎಂಬ ವಿಮರ್ಶೆಯನ್ನು ಓದಬಹುದು. (ಪ್ರ.ಕ. ನಂದನ ಸಂವತ್ಸರದ ೧ ನೆಯ ಸಂಚಿಕೆ).

ಒದಗಿಸುವ ಸಾಕ್ಷ್ಯವನ್ನು ಭಾಸನ ದುರ್ಯೋಧನ ಸುಳ್ಳುಸಾಕ್ಷ್ಯವೆಂದು ತಳ್ಳಿಹಾಕಬಹುದು. ಸಂಸ್ಕೃತ ರಾಮಾಯಣದ ಉತ್ತರಕಾಂಡದಲ್ಲಿ ಬರುವ ಶಂಬೂಕವಧೆಗಾಗಿ ಅಲ್ಲಿಯ ರಾಮನ ಮೇಲೆ ನಾವು ಹೊರಿಸಬಹುದಾದ ಆರೋಪದ ತೀಕ್ಷ್ಣತೆ ಭವಭೂತಿಯ ಉತ್ತರರಾಮಚರಿತದ ರಾಮನಿಂದ ತನ್ನ ಉಗ್ರತೆಯನ್ನು ಬಹುಪಾಲು ಕಳೆದುಕೊಂಡು ಸೌಮ್ಯವಾಗಿ ಬಿಡುತ್ತದೆ. ಕನ್ನಡ ನಾಟಕ 'ಶೂದ್ರತಪಸ್ವಿ' ಯಲ್ಲಿಯಾದರೊ ಆ ಸಾಕ್ಷ್ಯದ ಸ್ವರೂಪವೇ ಮಾರ್ಪಾಡಾಗಿ, ಅಪರಾಧಿಯಾರು? ಅಪರಾಧವೇನು? ಎಂಬ ಪ್ರಶ್ನೆಯೆದ್ದು, ಕೋರ್ಟಿಗೆ ಕೇಸನ್ನು ಕೊಂಡೊಯ್ದವನೆ ಅಪರಾಧಿಸ್ಥಾನದಲ್ಲಿ ನಿಲ್ಲಬೇಕಾದ ಪ್ರಮೇಯ ಒದಗಬಹುದು. ಹೀಗೆ ಭಿನ್ನ ಭಿನ್ನ ದೃಷ್ಟಿಯ ಬೇರೆ ಬೇರೇ ಕವಿಕೃತಿಗಳಲ್ಲಿ ಒಂದು ವ್ಯಕ್ತಿಯ ಅಥವಾ ಒಂದು ಘಟನೆಯ ಸಂಬಂಧದಲ್ಲಿ ವಿವಿಧ ಪ್ರಕಾರದ ಸೃಷ್ಟಿಗಳಿರುವುದರಿಂದ ಲೋಕಚರಿತ್ರೆಯಲ್ಲಿ ನಡೆದ ಘಟನೆಯೊಂದರ ನ್ಯಾಯಾನ್ಯಾಯ ಮತ್ತು ಧರ್ಮಾಧರ್ಮಗಳನ್ನು ಪರಿಶೀಲಿಸುವಂತೆ ವ್ಯವಹರಿಸಲು ಸಾಧ್ಯವಾಗುವುದಿಲ್ಲ. ಕಾವ್ಯಸತ್ತೆಯ ಈ ಧರ್ಮಪರೀಕ್ಷಣ ಕಾರ್ಯದಲ್ಲಿ ನ್ಯಾಯಸ್ಥಾನ ನಾಯಾಧೀಶ ನ್ಯಾಯವಾದಿ ಅಪರಾಧಿ ಸಾಕ್ಷಿ ಎಲ್ಲರೂ ಒಂದು ವಿಲಕ್ಷಣ ಪರಿಸ್ಥಿತಿಯಲ್ಲಿ ಸಿಲುಕಿ, ಬಹುಶಃ ಸಮಯ ಸಂದರ್ಭಕ್ಕೆ ತಕ್ಕಂತೆ ಪರಸ್ಪರ ಸ್ಥಾನಪಲ್ಲಟವಾಗುವ ಪರಿಸ್ಥಿತಿಯೂ ಒದಗಬಹುದೆಂದು ತೋರುತ್ತದೆ. ಏಕೆಂದರೆ ಅಲ್ಲಿಯ 'ಧರ್ಮಸೂಕ್ಷ್ಮತೆ' ಬಹು ಭೂಮಿಕಾ ವ್ಯವಹಾರ್ಯವಾದದ್ದು; ಪೂರ್ಣ ದೃಷ್ಟಿಯೊಂದರಿಂದಲೆ ಸಂಪೂರ್ಣವಾಗಿ ಗ್ರಾಹ್ಯವಾದದ್ದು.*

ಆದರೆ ನಮ್ಮ ಅನುಕೂಲದ ಮಟ್ಟಿಗಾಗಿ, ಅಪೂರ್ಣವಾದರೂ ಚಿಂತೆಯಿಲ್ಲವೆಂದು, ಒಂದು ನಿಷ್ಕೇವಲವಾದ ವ್ಯಾವಹಾರಿಕ ಮಾರ್ಗದಲ್ಲಿ ಸಾಗಬಹುದು. ಯಾವುದಾದರೂ ಒಂದು ಘಟನೆಯನ್ನು ವ್ಯಷ್ಟಿದೃಷ್ಟಿಯಿಂದ ನೋಡಬಹುದು; ಸಮಷ್ಟಿದೃಷ್ಟಿಯಿಂದ ನೋಡಬಹುದು; ಅತೀತವೂ ಭಗವತ್ ಸಾಧ್ಯವೂ ಆದ ಪೂರ್ಣದೃಷ್ಟಿಯಿಂದ ಸಮೀಕ್ಷಿಸಲು ಪ್ರಯತ್ನಿಸಬಹುದು. ಅಥವಾ ಒಂದು ವ್ಯಕ್ತಿಧರ್ಮದೃಷ್ಟಿಯಿಂದ ನೋಡಬಹುದು; ಒಂದು ಸಮಾಜಧರ್ಮದೃಷ್ಟಿಯಿಂದ ನೋಡಬಹುದು; ಒಂದು ಸಮಗ್ರಮಾನವಧರ್ಮದೃಷ್ಟಿಯಿಂದ ನೋಡಬಹುದು. ಉದಾಹರಣೆಗಾಗಿ ಕೌರವೇಶ್ವರನ ಊರುಭಂಗ ಸನ್ನಿವೇಶವನ್ನು ತೆಗೆದುಕೊಂಡರೆ, ನಮ್ಮ ದೃಷ್ಟಿ ಹಿಂದೆ ನಡೆದುದನ್ನೂ ಮುಂದೆ ನಡೆಯಬೇಕಾದುದನ್ನೂ ಗಮನಿಸದೆ ತತ್ಕಾಲದ ಘಟನಾ

* Letters of Srı Aurobindo (Second Series) Section Fourteen—'Avatarhood and Evolution' ಅಲ್ಲಿ ಈ ವಿಚಾರವಾಗಿ ಪತ್ರವ್ಯವಹಾರರೂಪದಲ್ಲಿರುವ ತಲಸ್ಪರ್ಶಿಯಾದ ಜಿಜ್ಞಾಸೆಯನ್ನು ಆಸಕ್ತಿಯಿರುವ ವಾಚಕರು ಓದಬಹುದು.

ಬಿಂದುವಿನಲ್ಲಿಯೆ ಕೇಂದ್ರೀಕೃತವಾಯಿತೆಂದರೆ, ಕೃಷ್ಣನು ಸನ್ನೆಗೆಯ್ದುದೂ ಭೀಮನು ತೊಡೆಗೆ ಹೊಡೆದುದೂ ವೀರೋಚಿತವಲ್ಲದ ಮಹಾ ಅವಮಾನಕರವಾದ ಅನ್ಯಾಯಗಳೆಂದು ತೋರಿ, ಕ್ರೀಡಾರಂಗದಲ್ಲಿ ಫೌಲ್ ನಡೆದಾಗ ರೆಫ್ರಿ ಸಿಳ್ಳಿ ಊದುವಂತೆ, 'ಇದಾವನ್ಯಾಯ? ಏನನ್ಯಾಯ?' ಎಂದು ಕೂಗಿಕೊಳ್ಳುತ್ತೇವೆ. ರಂಗಕ್ಕೂ ನುಗ್ಗುತ್ತಿದ್ದೆವೊ ಏನೊ, ಸಾಧ್ಯವಾಗಿದ್ದರೆ! ನ್ಯಾಯರಕ್ಷಣೆಮಾಡಲೋಸುಗ! ಧರ್ಮಪರಿಪಾಲನಾರ್ಥವಾಗಿ!

ಆದರೆ ನಾವೆ ಭೀಮನಾಗಿ ನೋಡತೊಡಗಿದ್ದರೆ ಏನಾಗುತ್ತಿತ್ತು? 'ನನ್ನ ಮನೆ ಮಾರು ಹಾಳುಮ್ಹಾಡಿದ್ದಾನೆ; ನನ್ನ ಹೆಂಡತಿಗೆ ಮಾನಭಂಗಮಾಡಿದ್ದಾನೆ; ನನ್ನ ಮಕ್ಕಳನ್ನೂ ಬಂಧುಗಳನ್ನೂ ಕೊಂದಿದ್ದಾನೆ, ಕೊಲ್ಲಿಸಿದ್ದಾನೆ; ನನಗೆ ಅವಮಾನದ ಮೇಲೆ ಅವಮಾನಮಾಡಿದ್ದಾನೆ. ನನ್ನ ಹೊಟ್ಟೆಗೆ ಕಿಚ್ಚಿಟ್ಟಿದ್ದಾನೆ. ಇವನ ನೆತ್ತರು ಸಪ್ತಸಾಗರಗಳಾಗಿದ್ದರೂ ಕುಡಿದೀಂಟುವ ಅಗಸ್ತ್ಯನಾಗಿಬಿಡುತ್ತೇನೆ. ಹೊಡಿಯೋ! ಹೊಡಿಯೋ! ತೊಡೆ ಮುರಿಯಲಿ, ಚೂರಾಗಲಿ, ಹಾಕೋ! ಇನ್ನೂ ಹಾಕೋ! ಒದೆಯೋ! ಅವನ ಕಿರೀಟ ಪುಡಿಯಾಗಲಿ!' ಎಂದು ಗ್ರಾಮ್ಯಸ್ತ್ರೀ ಶಾಪಹಾಕುವಂತೆ ಒರಲಿ, ಒಬ್ಬನಲ್ಲ ಸಾಧ್ಯವಾಗಿದ್ದರೆ ನೂರುಭೀಮರಾಗುತ್ತಿದ್ದೆವಲ್ಲವೆ? ಉದ್ದಕ್ಕೂ ಅನ್ಯಾಯ ಅಧರ್ಮ ಹಿಂಸೆಗಳಲ್ಲಿಯೆ ಬಾಳುಸಾಗಿಸಿದ ದುಷ್ಟನನ್ನು ಕೊಲ್ಲುವ ಕೊನೆಯ ಮುಹೂರ್ತದಲ್ಲಿ ಧರ್ಮವಂತೆ ಅಧರ್ಮವಂತೆ ನ್ಯಾಯವಂತೆ ಅನ್ಯಾಯವಂತೆ!—ಎಂದು ಮೂದಲಿಸುತ್ತಿರಲಿಲ್ಲವೆ? ಮರಣದಂಡನೆಗೆ ಗುರಿಯಾಗಿ ಗಲ್ಲಿಗೇರುವವನ ಕುತ್ತಿಗೆಗೆ ನೋವಾಗುತ್ತದೆಂದು ಉರುಳಿಗೆ ಮೆತ್ತೆಹಾಕಬೇಕಂತೆ! ಎಂದು ಪರಿಹಾಸ್ಯಮಾಡುತ್ತಿರಲಿಲ್ಲವೆ?

ವ್ಯಕ್ತಿದೃಷ್ಟಿಯಿಂದ ನೋಡದೆ ಸಮಾಜದೃಷ್ಟಿಯಿಂದ ನೋಡತೊಡಗಿದರೆ ನಾವು ತಾತ್ಕಾಲಿಕತೆಯಿಂದ ಪಾರಾಗಿ, ತತ್‌ಕ್ಷಣದ ನಮ್ಮ ಅಹಂಕಾರದ ಭಾವಸ್ಥಿತಿಯ ಆವೇಶಕ್ಕೆ ವಶರಾಗಿ ಕೂಗಿಕೊಳ್ಳುವುದಕ್ಕೆ ಬದಲಾಗಿ, ಭೀಮ ಅಥವಾ ದುರ್ಯೋಧನರ ವ್ಯಕ್ತಿತ್ವಗಳಲ್ಲಿ ವಿಲೀನರಾಗಿ ಅವನ ಅಥವಾ ಇವನ ಪಕ್ಷಪಾತಿಗಳಾಗದೆ, ಯಾವುದು ಹೇಗೆ ನಡೆದರೆ ಸಮಾಜದ ಸಮುದಾಯ ಕ್ಷೇಮ ಸಾಧನೆಯಾಗುತ್ತದೆ ಎಂದು ನಿರ್ಣಯಿಸುತ್ತೇವೆಯೋ ಆ ನಿರ್ಣಯಕ್ಕೆ ತಲೆಬಾಗಬೇಕಾಗುತ್ತದೆ, ನಮ್ಮ ಧರ್ಮಾಧರ್ಮ ಬುದ್ಧಿ. ಅಂತಹ ಪೂರ್ವಾಪರಗ್ರಾಹಿಯಾದ ಬುದ್ಧಿಗೆ ಭೀಮನ ವರ್ತನೆ, ಅದಕ್ಕದೆ ಒಂದು ಅಲ್ಪದೋಷವಾಗಿ ತೋರಿದರೂ, ಅದು ಸಾಧಿಸುವ ಲೋಕಕಲ್ಯಾಣಕಾರಿಯಾಗುವ ಒಂದು ಭೂಮಪ್ರಯೋಜನದ ಮುಂದೆ ಸಾಧುಕ್ರಿಯೆಯಾಗಿ ತೋರಿ, ಆ ಭೂಮಪ್ರಯೋಜನದ ಒಂದು ಅನಿವಾರ್ಯವಾದ

ಅಂಗವೂ ಆಗಿಬಿಡುತ್ತದೆ. ಅಂತಹ ಎತ್ತರಕ್ಕೂ ಬಿತ್ತರಕ್ಕೂ ಏರಿ ಹಬ್ಬುವ ಸಮಷ್ಟಿ ದೃಷ್ಟಿ ಇನ್ನೊಂದು ಹೆಜ್ಜೆ ಮುನ್ನೆಗೆದರೆ ಪೂರ್ಣದೃಷ್ಟಿಯಾಗುತ್ತದೆ.

ಆ ಪೂರ್ಣದೃಷ್ಟಿಗೆ ಪ್ರತಿಮೆಯಾಗಿ ನಿಲ್ಲುತ್ತದೆ, ಶ್ರೀ ಕೃಷ್ಣನ ಬೃಹನ್ ಮಹಾಭಗವತ್ ಪಾತ್ರ. ಆ ಪೂರ್ಣದೃಷ್ಟಿ ಸಾರ್ವಕಾಲಿಕ; ಸಾರ್ವದೇಶಿಕ; ಸರ್ವಾಂತರ್ಯಾಮಿ; ಸರ್ವಾತೀತ. ಅದರ ಇಚ್ಛೆ ಋತಚಿದಿಚ್ಛೆ. "ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ | ಭ್ರಾಮಯನ್ ಸರ್ವಭೂತಾನಿ ಯಂತ್ರಾ ರೂಢಾನಿ ಮಾಯಯಾ ‖" ಆ ನಿತ್ಯಶಕ್ತಿ ತನ್ನ ಲೀಲಾರ್ಥವಾಗಿ, ತನಗೆ ಮಾತ್ರ ಪೂರ್ಣಗೋಚರವಾಗಿರುವ ತನ್ನ ಅಚಿಂತ್ಯೋದ್ದೇಶಕ್ಕಾಗಿ, ಮನೋಮಯ ಮಾತ್ರ ನಿಷ್ಠವಾಗಿರುವ ಮಾನವ ವಿಚಾರಾವಲೋಕನಕ್ಕೆ ಅಗಮ್ಯವಾಗಿರುವ ಸಚ್ಚಿದಾನಂದ ಪ್ರಯೋಜನಕ್ಕಾಗಿ, ನಮಗೆ ಅರ್ಥವಾಗದ ಅಥವಾ ಅನರ್ಥವಾಗಿ ತೋರುವ ಅನೇಕಾನೇಕ ರೀತಿಗಳಲ್ಲಿ ಪ್ರವರ್ತಿಸುತ್ತದೆ. "ಅಹಂಕಾರ ವಿಮೂಢಾತ್ಮಾ ಕರ್ತಾಹ ಮಿತಿ ಮನ್ಯತೇ" ಅದನ್ನರಿಯದೆ ಅಹಂಕಾರ ಭ್ರಾಂತವಾದ ಮನುಷ್ಯಚೇತನೆ 'ನಾನೆ ಅದನ್ನೆಲ್ಲ ಮಾಡುತ್ತಿದ್ದೇನೆ' ಎಂದು ಸಂಸಾರ ಭಾರವನ್ನೆಲ್ಲ ತನಗೆ ತಾನೆ ಆರೋಪಿಸಿಕೊಳ್ಳುತ್ತಾ ತಲೆಯಮೇಲೆ ಹಾಕಿಕೊಂಡು ದಿಗ್ಭ್ರಾಂತವಾಗುತ್ತದೆ. ಅಂತಹ ದಿಗ್‌ಭ್ರಾಂತಿ ಅಹಂದೃಷ್ಟಿಗೆ ಅತ್ಯಂತ ಸತ್ಯವಾದುದಾದರೂ ಪೂರ್ಣದೃಷ್ಟಿಗೆ ಶಶವಿಷಾಣಸದೃಶವಾದ ಒಂದು ಮಿಥ್ಯೆ. ಅಹಂದೃಷ್ಟಿಯ ಮುಂದೆ ಭಯಂಕರವಾಗಿ ನಿಂತು, ಪರಿಹಾರ ನೀಡು ಎಂದು ಉಗ್ರವಾಗಿ ಒರಲುವ ಯಕ್ಷಪ್ರಶ್ನೋಪಮವಾದ ಆ ಸಮಸ್ಯೆಯ ಬೂತು ಪೂರ್ಣದೃಷ್ಟಿಯ ಮುಂದೆ ಸಂಪೂರ್ಣವಾಗಿ ನಿರಸನ ಹೊಂದುತ್ತದೆ.

ಅಂತಹ ಪೂರ್ಣದೃಷ್ಟಿ ಲೋಕದಲ್ಲಿಯೂ ಕಾವ್ಯಲೋಕದಲ್ಲಿಯೂ, ಅಜ್ಞಾನ ವಶವಾದ ಅವಿದ್ಯಾಭೂಮಿಕೆಗಳಿಗೆ ಅನುರೂಪವಾದ ರೂಪರೀತಿಗಳಲ್ಲಿ, ಪ್ರತಿಮಾ ವಿಧಾನದಲ್ಲಿ ಪ್ರಕಟವಾಗಲು ಪ್ರಯತ್ನಿಸಿರುವುದನ್ನು ನಾವು ನೋಡುತ್ತೇವೆ. ಬದುಕಿನಲ್ಲಿ ಸದ್ಧರ್ಮಿಗೋ ಸಜ್ಜನಕ್ಕೋ ಕೇಡೊದಗಿದಾಗ, ಆ ಕೇಡಿಗೆ ಈ ಜನ್ಮದ ಅಥವಾ ಈ ಲೋಕದ ಕಾರಣಗಳನ್ನು ಒಡ್ಡಲು ಅಸಮರ್ಥವಾದ ನಮ್ಮ ಬುದ್ಧಿ ಜನ್ಮಾಂತರ ಕರ್ಮಕಾರಣಗಳನ್ನೋ ಅನ್ಯಲೋಕ ದೇವತಾಪ್ರಭಾವಗಳನ್ನೋ ತಂದೊಡ್ಡುತ್ತದೆ.* ಜರಾ ಎಂಬ ವ್ಯಾಧನು ಅರಣ್ಯದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ಶ್ರೀಕೃಷ್ಣನ ಪಾದವನ್ನೇ ಪಕ್ಷಿ ಎಂಬುದಾಗಿ ಭ್ರಮಿಸಿ, ಬಾಣಪ್ರಯೋಗ ಮಾಡಿ, ಆತನ ದೇಹತ್ಯಾಗಕ್ಕೆ ನಿಮಿತ್ತನಾದ ಸನ್ನಿವೇಶದಲ್ಲಿ, ಶ್ರೀರಾಮನು ವಾಲಿಯನ್ನು

* ಜೈನಕಾವ್ಯಗಳಲ್ಲಂತೂ ಇದಕ್ಕೆ ಉದಾಹರಣೆಗಳು ಯಥೇಚ್ಛವಾಗಿ ದೊರೆಯುತ್ತವೆ.

ಅಡಗಿನಿಂತು ಹೊಡೆದು ಕೊಂದ ಕರ್ಮಕ್ಕಾಗಿ ಶ್ರೀಕೃಷ್ಣಜನ್ಮದಲ್ಲಿ ವ್ಯಾಧಜನ್ಮವೆತ್ತಿ ಜರನಾಗಿ ಬಂದ ವಾಲಿಯ ಬಾಣದಿಂದಲೆ ಸಾಯಬೇಕಾಯಿತು ಎಂಬ ಕರ್ಮ ಸಿದ್ಧಾಂತದ ಅದಮ್ಯತೆಯನ್ನು ಸ್ಥಾಪಿಸಿ ಸಮಾಧಾನ ಪಡೆಯುತ್ತದೆ, ನ್ಯಾಯ ಪಕ್ಷಪಾತಿಯಾದ ಜನಮನೋಧರ್ಮಬುದ್ಧಿ.

ಆಚಾರ್ಯ ಭೀಷ್ಮನಂತಹ ಮಹಾನ್ ದೇವಾಂಶ ವ್ಯಕ್ತಿಯ ವರ್ತನೆಯನ್ನು ಸಮಾಜದ ಸಾಮಾನ್ಯ ವ್ಯಕ್ತಿಯ ಲೌಕಿಕಮಾತ್ರವಾದ ವ್ಯವಹಾರವನ್ನು ಎಂತೊ ಅಂತೆ ಪರಿಶೀಲಿಸಿದರೆ ತಪ್ಪಾಗುತ್ತದೆ. ಲೋಕದಲ್ಲಿ ನಮಗೆ ಪೂರ್ಣದೃಷ್ಟಿ ಸಿದ್ಧಿಸುವುದು ಅತ್ಯಪೂರ್ವವಾದರೂ ಮಹಾಭಾರತದಂತಹ ಮಹಾಕಾವ್ಯಲೋಕದಲ್ಲಿ ವ್ಯಾಸಮಹರ್ಷಿಯ ಕೃಪೆಯಿಂದ, ಪ್ರತಿಮಾರೂಪದಿಂದಲಾದರೂ, ಒಂದು ರೀತಿಯ ಪೂರ್ಣದೃಷ್ಟಿ ನಮಗೆ ಸಾಧ್ಯವಾಗುತ್ತದೆ. ಆ ಪೂರ್ಣದೃಷ್ಟಿಗೆ ಭೀಷ್ಮನು ಬರಿಯ ಒಂದು ಲೌಕಿಕರಾಜ್ಯದಲ್ಲಿ ಹೆಚ್ಚು ಸಂಬಳ ತೆಗೆದುಕೊಳ್ಳುವ ಒಬ್ಬ ಸೇನಾಪತಿ ಮಾತ್ರನಾಗುವುದಿಲ್ಲ. ಅವನು ಅಷ್ಟವಸುಗಳಲ್ಲಿ ಒಬ್ಬನಾಗುತ್ತಾನೆ. ಅವನ ಜೀವನ ಚರಿತ್ರೆ ನರತ್ವದಿಂದ ಮಾತ್ರವೆ ಮೊದಲಾಗುವುದಿಲ್ಲ. ಅದು ಊರ್ಧ್ವಲೋಕಗಳಲ್ಲಿ ಆವಿರ್ಭವಿಸಿ ಇಲ್ಲಿಗೆ ಅವತರಿಸುತ್ತದೆ. ಇಲ್ಲಿಯ ಅವನ ಅವಸಾನ ಅವನ ಪರ್ಯವಸಾನ ವಲ್ಲ. ಆ ಜೀವನರೇಖೆ ದಿವ್ಯಲೋಕಗಳಲ್ಲಿ, ಅನಂತವಾಗಿ, ದಿವ್ಯತರ ರೀತಿಗಳಿಂದ ಮುಂದುವರಿಯುತ್ತದೆ. ಅದಕ್ಕೆ ಒಂದಲ್ಲ ಅನೇಕ ರೀತಿಯ ಉದ್ದೇಶಗಳಿವೆ; ಅನೇಕ ಪ್ರಕಾರದ ಪ್ರಯೋಜನಗಳಿವೆ. ಅದರ ಒಂದೊಂದೂ ವರ್ತನೆಯ ಹೃದಯದಲ್ಲಿರುವ ಧರ್ಮಸೂಕ್ಷ್ಮತೆ ಅತ್ಯಂತ ಜಟಿಲ. ಭೀಷ್ಮನಂತಹನನ್ನು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ, ಒಂದು ಸಾಹಿತ್ಯಗ್ರಂಥದ ಒಂದು ಮನುಷ್ಯಮಾತ್ರ ವಾದ 'ಪಾತ್ರ' ಎಂದು ಪರಿಗಣಿಸಿದರೆ ಸಾಲದು, ಮ್ಯಾಕ್‌ಬೆತ್‌ನ ದುರಂತ ಪಾತ್ರವನ್ನು ಪರಿಶೀಲಿಸುವಂತೆ. ಪಾಶ್ಚಾತ್ಯ ಸಾಹಿತ್ಯವಿಮರ್ಶೆ ಕ್ರಿಸ್ತಮತದ ತತ್ತ್ವಗಳ ಮೇಲೆ ನಿಲ್ಲುತ್ತದೆ. ಆ ತತ್ತ್ವಗಳ ಎಲ್ಲ ಉಪಾಧಿಗಳಿಂದಲೂ ಅದು ಬದ್ಧವಾಗಿ, ಅತ್ಯಂತ ಪರಿಮಿತವೂ ಸಂಕುಚಿತವೂ ಆಂಶಿಕವೂ ಆಗುತ್ತದೆ. ಅದರ ಆ ನ್ಯೂನತೆಯಿಂದ ನಾವು ಪಾರಾಗಿ, ಸರ್ವತೋಮುಖವೂ ಸರ್ವಗ್ರಾಸಿಯೂ ಆಗಿರುವ ನಮ್ಮ ಋಷಿದರ್ಶದ ಪೂರ್ಣದೃಷ್ಟಿಯ ಮೇಲೆ ನಿಲ್ಲಬೇಕಾಗುತ್ತದೆ. ಜನ್ಮಾಂತರ, ಕರ್ಮ, ದೇವತಾಂಶ, ಅವತಾರ, ವಿಭೂತಿ, ರಹಸ್ಯವಾಗಿರುವ ಆಲೋಕವೆ ಅಥವಾ ಲೋಕಾಂತರಗಳೆ ಪ್ರಕಟವಾಗಿರುವ ಲೋಕದ ವ್ಯಾಪಾರಗಳಿಗೆಲ್ಲ ಮೂಲ ಶಕ್ತಿ, ಮುಖ್ಯಕಾರಣ ಮತ್ತು ಪ್ರಧಾನಪ್ರಚೋದನೆ—ಇತ್ಯಾದಿ ತತ್ತ್ವಗಳನ್ನೂ ಶ್ರದ್ಧೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಿದರೆ ಭೀಷ್ಮನ ವರ್ತನೆ ಅರ್ಥ

ಪೂರ್ಣವಾಗುತ್ತದೆ, ಮಹೋದ್ದೇಶ ಪೂರ್ವಕವಾಗುತ್ತದೆ. ಪಾಶ್ಚಾತ್ಯ ಸಾಹಿತ್ಯ ಕೃತಿಗಳಲ್ಲಿ ಎಲ್ಲಿಯೂ ಕಾಣಬರದ ಅದ್ಭುತ ಪಾತ್ರಸೃಷ್ಟಿಯ ಕಲಾವೈಭವವನ್ನು ಸಂದರ್ಶಿಸಿ ರಸಾನಂದ ಪುಲಕಿತರಾಗುತ್ತೇವೆ.

ನಮ್ಮ ಪುರಾಣಕಾವ್ಯಗಳ ವಿರಾಟ್‌ಪಾತ್ರಗಳನ್ನೂ ದಿವ್ಯಚೈತನ್ಯಾವತರಣ ಪ್ರವಾಹ ಪಾತ್ರಗಳಾಗಿರುವ ಆ ದೇವಪಾತ್ರಗಳ ವರ್ತನೆಗಳನ್ನೂ ಲೋಕಸಾಮಾನ್ಯ ಜೀವನದ ಲೋಕವಾಸ್ತವಿಕ ಮನುಷ್ಯಪಾತ್ರಗಳ ವರ್ತನೆಯನ್ನು ಪರಿಶೀಲಿಸುವಂತೆ ಸಮೀಕ್ಷಿಸಿದರೆ ಸಾಹಿತ್ಯಮಾತ್ರವಾದ ಆಂಶಿಕ ಪ್ರಯೋಜನವನ್ನು ಪಡೆಯುತ್ತೇವೆಯೆ ಹೊರತು ಅಖಂಡ ಜೀವನದೃಷ್ಟಿಯ ಮಹತ್ತರಭವ್ಯವಾದ ಪೂರ್ಣಪ್ರಯೋಜನದಿಂದ ವಂಚಿತರಾಗುತ್ತೇವೆ. ಯಾವುದಾದರೂ ಒಂದು ಸಮಾಜಕ್ಕೆ ಅಥವಾ ಒಂದು ಜನಾಂಗಕ್ಕೆ, ಒಂದುಕಾಲಕ್ಕೆ ಅಥವಾ ಒಂದು ಪ್ರದೇಶಕ್ಕೆ ಅಥವಾ ಒಂದು ಮಾನವ ವರ್ಗಕ್ಕೆ ಸಮ್ಮತವಾದ ನೀತಿದೃಷ್ಟಿಯ ಪರಿಪೂರ್ಣತೆಯನ್ನೆ ಅವರಲ್ಲಿ ಕಾಣಬೇಕೆಂದಾಗಲಿ ಅಥವಾ ಅವರು ಅದನ್ನೆ ಆದರ್ಶಿಸಬೇಕೆಂದಾಗಲಿ ಹಟಹಿಡಿದು ಹೊರಡುವ ವಿಮರ್ಶೆಗೆ ಆ ದಿವ್ಯಪಾತ್ರಗಳ ಶಕ್ತಿಯೆ ದೌರ್ಬಲ್ಯದಂತೆ ತೋರುತ್ತದೆ; ಅವರ ಜ್ಞಾನವೆ ಅಜ್ಞಾನದಂತೆ ಭಾಸವಾಗುತ್ತದೆ; ಅವರ ವರ್ತನೆಗಳ ಅಂತಃಸ್ವರೂಪವಾಗಿರುವ ಸ್ವಾತಂತ್ರ್ಯವೆ ಅವರ ಮನಸ್ಸಿನ ಅನಿಶ್ಚಯತೆಯು, ಚಿತ್ತದ ಚಂಚಲತೆಯು ಅಥವಾ ಹೃದಯದ ಅವಶತೆಯ ಪಾರತಂತ್ರ್ಯವೆಂಬಂತೆ ತೋರುತ್ತದೆ ; ಅವರ ಪೂರ್ಣಪ್ರಜ್ಞಾರೂಢವಾದ ಧರ್ಮಬುದ್ಧಿ ಕೈಕೊಳ್ಳುವ ಕರ್ಮಗಳನ್ನೆ ನಮ್ಮ ಅಪೂರ್ಣದೃಷ್ಟಿಯ ಅಲ್ಪಬುದ್ಧಿ ಅಧರ್ಮವರ್ತನೆಗಳೆಂದು ಭ್ರಮಿಸುತ್ತದೆ.

ಆದರೆ ಪ್ರತಿಮಾವಿಧಾನದ ಕಲಾರಹಸ್ಯವನ್ನರಿತ ಪೂರ್ಣದೃಷ್ಟಿಗೆ ಅವರ ವರ್ತನೆಗಳ ಬಹುಪ್ರಕಾರಾಂತರವಾದ ಜಟಿಲತೆಯ ನಿಜಸ್ವರೂಪ ಗೋಚರವಾಗಿ, ಅವರ ಅಲ್ಪ 'ಅನ್ಯಾಯ'ದ ಹೃದಯದಲ್ಲಿರುವ ಭೂಮನ್ಯಾಯವನ್ನೂ ಅವರ ಅಲ್ಪ 'ಅಧರ್ಮ'ದ ಹಿಂದಿರುವ ಮತ್ತು ಮುಂಬರುವ ಭೂಮಧರ್ಮವನ್ನೂ ಗ್ರಹಿಸುವ ಧೀಚೇತನೆ ತೃಪ್ತವಾಗುತ್ತದೆ: ಏಕೆಂದರೆ ಎಲ್ಲಿಯಂತೆ ಇಲ್ಲಿಯೂ

"ಯೋ ವೈ ಭೂಮಾ ತತ್‌ಸುಖಂ ನಾಲ್ಪೇ ಸುಖಮಸ್ತಿ !"
"ಅಲ್ಪದೊಳ್ ಸೊಗವಿಲ್ಲ ಮಾ ಭೂಮವೊಂದೆಯೆ ಸೊಗಂ !"

—ಕುವೆಂಪು

ಕಾವ್ಯ ಮತ್ತು ನೀತಿಬೋಧೆ

ಸಾವಿರಾರು ವರ್ಷಗಳ ಹಿಂದೆ ಗುಹೆಗಳಲ್ಲಿ ಕೆತ್ತಿರುವ ಚಿತ್ರಗಳನ್ನು ನೋಡಿ ನಾವು ಸಂತೋಷಪಡುತ್ತೇವೆ. ಏಕೆ ಎಂದು ಯಾರಾದರೂ ಕೇಳಿದರೆ ಆ ಚಿತ್ರಗಳು ಸುಂದರವಾಗಿವೆ ಎಂದು ಹೇಳುತ್ತೇವೆ. ಸೌಂದರ್ಯವೆಂದರೇನು? ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟವಾದರೂ ಇಷ್ಟು ಹೇಳಬಹುದು: ನಮ್ಮ ಮನಸ್ಸನ್ನು ಆಕರ್ಷಿಸಿ ಆನಂದವನ್ನು ಪ್ರಚೋದಿಸುವ ವಿಶೇಷ ಗುಣ. ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸೌಂದರ್ಯದ ಹೊಳೆ ಹರಿಯುತ್ತಿದೆ. ಪಕ್ಷಿಗಳಿಗೆ ಬಣ್ಣ ಬಣ್ಣದ ಪುಕ್ಕಗಳಿವೆ. ಹೂವುಗಳು ನಾನಾ ಬಣ್ಣಗಳಿಂದ ಮನೋಹರವಾಗಿ ಕಾಣುತ್ತವೆ. ಚಿಟ್ಟೆಗಳು ಅದೆಷ್ಟೋ ಬಣ್ಣ ಬಣ್ಣಗಳ ರೆಕ್ಕೆಗಳನ್ನು ಬಡಿದು ಗಾಳಿಯಲ್ಲಿ ಹಾರಾಡುತ್ತವೆ. ಅದೆಷ್ಟು ಬಣ್ಣದ ಪ್ರಾಣಿಗಳಿಲ್ಲ! ನವಿಲು ಗರಿಗೆದರಿ ನಾಟ್ಯವಾಡುವಾಗ ಯಾರು ಸಂತೋಷಪಡುವುದಿಲ್ಲ? ದಿನ ದಿನವೂ ಬೈಗು ಬೆಳಗುಗಳಲ್ಲಿ ಅದೆಷ್ಟು ಬಣ್ಣದ ಮೋಡಗಳು ಆಕಾಶದಲ್ಲಿ ಯಾನಮಾಡುವುದಿಲ್ಲ! ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸೌಂದರ್ಯವೇ ನಮ್ಮ ಮನಸ್ಸನ್ನು ಸೆಳೆಯುತ್ತದೆ. ಭಗವಂತನ ಸೃಷ್ಟಿ, ಸೌಂದರ್ಯ ಪೂರ್ಣವಾದುದಲ್ಲವೆ?

ಮಾನವನಿಗೆ ಬದುಕುವ ಆಸೆ. ಬದುಕುವುದಕ್ಕಾಗಿ ಆಹಾರ ಗಳಿಸುತ್ತಾನೆ. ಅವನ ಮೂಲ ಬಯಕೆಗಳ ತೃಪ್ತಿಯಾಗಿ ವಿಶ್ರಾಂತಿ ದೊರೆತಾಗ ಅವನ ಮನಸ್ಸು ಸೌಂದರ್ಯದ ಕಡೆ ಹರಿಯುತ್ತದೆ; ಸೌಂದರ್ಯ ಸಾಧಕವಾದುದನ್ನು ಸೃಷ್ಟಿಸಲು ತೊಡಗುತ್ತಾನೆ. ಸೌಂದರ್ಯಸೃಷ್ಟಿ, ಶಿಲ್ಪ, ಚಿತ್ರ, ಸಂಗೀತ, ಕಾವ್ಯ ಮೊದಲಾದ ನಾನಾ ರೂಪಗಳಲ್ಲಿ ಅಭಿವ್ಯಕ್ತತೆಯನ್ನು ಪಡೆಯಬಹುದು. ಈ ಸೃಷ್ಟಿಗೆ ಮೂಲ ಶಕ್ತಿ ಕಲ್ಪನೆ. ಕಲ್ಪನೆ ನಮ್ಮ ಸ್ವಸ್ವರೂಪವನ್ನು ತೋರಲು ಅತ್ಯಂತ ಉಪಯೋಗವಾದುದು. ಕಲಾಸೃಷ್ಟಿ ನಮ್ಮ ಆತ್ಮಪ್ರಕಾಶನ, ನಿತ್ಯಸತ್ಯದ ಕರೆಗೆ ನಮ್ಮ ಆತ್ಮದ ಉತ್ತರ*. ಮಾನವನಿಗೆ ಚಿರವಾದುದನ್ನೇ ಸೃಷ್ಟಿಸುವ ಬಯಕೆ. ಏಕೆಂದರೆ ಅವನ ಆತ್ಮ ಚಿರವಾದುದು, ದಿವ್ಯವಾದುದು. ಶ್ರೇಷ್ಠ ಕಲಾಸೃಷ್ಟಿ ದರ್ಶನದಿಂದಲೇ ಸೃಷ್ಟಿಸಲ್ಪಡುತ್ತದೆ. 'ದರ್ಶನ'ದ ಅಭಿವ್ಯಕ್ತತೆಗೆ 'ನಿದರ್ಶ'ನ ಅತ್ಯಾವಶ್ಯಕವಾದುದು. ಈಜಿಪ್ಟಿನ ಮರುಭೂಮಿಯಲ್ಲಿ ಕಾಣುವ ಬೃಹದಾಕಾರದ ಪಿರಮಿಡ್ಡುಗಳೂ, ಆಗ್ರಾದ ಸಕಲ ಹೃದಯರಂಜಕವಾದ ಟಾಜ್‌ಮಹಲೂ, ಬೇಲೂರು ಹಳೇಬೀಡುಗಳಲ್ಲಿ ರಸಿಕರ

* Art is the response of the creative soul to the call of the Real.
—Tagore.

ಹೃದಯವನ್ನು ಸೂರೆಗೊಳ್ಳುವ ಶಿಲ್ಪಕಲೆಯೂ, ಅಜಂತ ಎಲ್ಲೋರ ಗುಹೆಗಳಲ್ಲಿ ಕಾಣುವ ಮನೋಹರ ಚಿತ್ರಗಳೂ, ರಾಮಾಯಣ ಮಹಾಭಾರತ ಮೊದಲಾದ ಮಹಾಕಾವ್ಯಗಳೂ 'ನಿದರ್ಶನ ಸಾಕ್ಷಿ'ಗಳಾಗಿವೆ.

ಜೀವಿಗೂ ಜಗತ್ತಿಗೂ ಕ್ರಿಯೆ ಪ್ರತಿಕ್ರಿಯೆ ನಡೆದು ಅನುಭವ ಉಂಟಾಗುತ್ತದೆ. ಅನುಭವವನ್ನು ವ್ಯಕ್ತಪಡಿಸುವುದಕ್ಕಾಗಿ ಮಾನವನು ಭಾಷೆಯನ್ನು ಬಳಸುತ್ತಾನೆ. ಭಾಷೆ ಜನ್ಮತಾಳಿದಾಗಲೆ ಕಾವ್ಯರೂಪವಾಗಿ ಹರಿದುಬಂದಿತೆಂದು ಅಭಿಪ್ರಾಯ ಪಡುತ್ತಾರೆ. ಭಾವದೀಪ್ತವಾದ ಶಬ್ದಗಳ ರೂಪದಿಂದ ಆತ್ಮಪ್ರಕಾಶವನ್ನು ಕೈಗೊಳ್ಳುವುದೇ ಕಾವ್ಯ. ಕಾವ್ಯ ಎಂದರೇನು ಎಂಬ ಪ್ರಶ್ನೆಗೆ ಅನೇಕರು ಉತ್ತರ ಹೇಳಿದ್ದಾರೆ. ಭಾಮಹನು 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದೂ ವಿಶ್ವನಾಥನು 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದೂ ಜಗನ್ನಾಥನು 'ರಮಣೀಯಾರ್ಥ ಪ್ರತಿಪಾದಕಶ್ಶಬ್ದಃ ಕಾವ್ಯಂ' ಎಂದೂ ಹೇಳಿದ್ದಾರೆ. ಭಾಮಹನ ಕಾಲದಿಂದ ಮುಂದೆ ಬಂದಂತೆ ಕಾವ್ಯದ ವ್ಯಾಪ್ತಿ ವಿಸ್ತಾರವಾದುದು ಸೂತ್ರಗಳಿಂದ ತಿಳಿದು ಬರುತ್ತದೆ. ಎಲ್ಲರೂ ಕಾವ್ಯವು ಶಬ್ದ ರೂಪವಾದುದೆಂದೂ ಅದಕ್ಕೆ ಅರ್ಥ ಉಂಟೆಂದೂ ಒಪ್ಪುತ್ತಾರೆ. ಅಲಂಕಾರ ಮುಖ್ಯವೆಂದೂ ರೀತಿಯೇ ಕಾವ್ಯದ ಆತ್ಮವೆಂದೂ ನಾನಾ ರೀತಿಯಲ್ಲಿ ಪ್ರತಿಪಾದಿಸಲು ಹೊರಟಿದ್ದಾರೆ. ಇವೆಲ್ಲವೂ ಕಾವ್ಯ ಶರೀರದ ಅಂಗಗಳಾಗಿರುತ್ತವೆ.

ಕಾವ್ಯವನ್ನು ಕುರಿತು ಚರ್ಚಿಸುವಾಗ ಕಾವ್ಯದ ಕರ್ತೃವಾದ ಕವಿಯನ್ನೂ ತಿಳಿಯಬೇಕಾದುದು ಆವಶ್ಯಕ. ಕವಿಗೆ ಉಳಿದ ಮಾನವರಿಗಿಂತ ಹೆಚ್ಚಾದ ಒಂದು ಶಕ್ತಿ ಇದೆ. ಈ ಶಕ್ತಿಯೇ ಪ್ರತಿಭೆ. ಈ ಶಕ್ತಿ ದೈವದತ್ತವಾದುದು. ಅಲೌಕಿಕ ನಿತ್ಯರೂಪಗಳಿಗೂ ಸೌಂದರ್ಯಕ್ಕೂ ಪೂರ್ಣತೆಗೂ ಕವಿಯ ಮನಸ್ಸು ಆಕರವಾಗಿದೆ. ಕವಿ ಈ ನಿತ್ಯರೂಪಗಳಿಗೆ ಪ್ರತಿಮೆಗಳನ್ನು ಸೃಷ್ಟಿಸುತ್ತಾನೆ. ಈ ಸೃಷ್ಟಿಯೇ ಕಾವ್ಯ. ನಿತ್ಯರೂಪಗಳ ಪ್ರತೀಕಗಳನ್ನು ದಾನಮಾಡುವ ಕವಿಯ ಉತ್ತಮ ಕಲ್ಪನಾ ಶಕ್ತಿಯೇ ಪ್ರತಿಭೆ. ಕವಿ ತನ್ನ ಮನಸ್ಸನ್ನು ವಿಶ್ವಗಾನಕ್ಕೆ ಶ್ರುತಿಮಾಡುವುದರಿಂದ ಅವನಿಗೆ ನಾನಾ ನಾದಗಳೂ ದೃಶ್ಯಗಳೂ ಗೋಚರಿಸುತ್ತವೆ. ಇದಕ್ಕೆ ದರ್ಶನ (Vision)ವೆಂದು ಹೆಸರು. ಇಂತಹ ದರ್ಶನ, ಕವಿಗೆ ತಪಸ್ಸಿನಿಂದಲೂ, ಧ್ಯಾನದಿಂದಲೂ, ಅವಲೋಕನದಿಂದಲೂ ಸಾಧ್ಯ. ಕವಿಯ ದರ್ಶನ ಭೂಮವಾದಷ್ಟೂ ಕಾವ್ಯದಲ್ಲಿ ಭವ್ಯತೆ ಕಂಗೊಳಿಸುತ್ತದೆ. ಉಪನಿಷತ್ತಿನ ಋಷಿ—

'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ' ಎಂದು ಹಾಡಿದ್ದಾನೆ. ಭೂಮವಾದುದರಲ್ಲಿ ಸುಖವಿದೆ. ಅಲ್ಪದಲ್ಲಿ ಸುಖವಿಲ್ಲ. ಕವಿಯ ಮಹತ್ ದರ್ಶನದ ಬೃಹದಾಲಿಂಗನಕ್ಕೆ ಯಾವುದೂ ಹೊರಗಾಗಿರಬಾರದು. ಷೆಲ್ಲಿ ಮಹಾಕವಿಯು

"To be a poet is to apprehend the true and the beautiful." "Poets are the unacknowledged legislators of this world" ಎಂದು ಹೇಳಿದ್ದಾನೆ. ಕವಿ, ಸತ್ಯ ಸೌಂದರ್ಯಗಳನ್ನು ಅನುಸಂಧಾನ ಮಾಡುತ್ತಾನೆ. ತಾನು ಗುಪ್ತವಾಗಿದ್ದು ಜಗದ ಬದುಕಿಗೆ ರೂಪುಕೊಡುತ್ತಾನೆ. ಅತ್ಯುತ್ತಮವೂ ಸುಖತಮವೂ ಆದ ಮನಸ್ಸಿನಿಂದ ಕೂಡಿದ ಸೌಂದರ್ಯ ಯೋಗಿ ತನ್ನ ಜೀವಮಾನದ ಸುಖತಮವಾದ ಅತ್ಯುತ್ತಮ ಮುಹೂರ್ತಗಳಲ್ಲಿ ಹಾಡಿದ ಆತ್ಮಗೀತಾಂಜಲಿಯೇ ಕಾವ್ಯ.*

Poetry is the breath and finer spirit of all knowledge.
Poetry is the spontaneous overflow of powerful feelings. It takes its origin from emotion recollected in tranquility.—Wordsworth.
Poetry is the very image of life expressed in its eternal truth.
Poetry lifts the veil from the hidden beauty of the world.
—Shelly.

ಷೆಲ್ಲಿ ಮತ್ತು ವರ್ಡ್ಸ್‌ವರ್ತ್ ಮಹಾಕವಿಗಳು ಕಾವ್ಯದ ಮಹತ್ವವನ್ನು ಹೇಗೆ ವಿವರಿಸಿದ್ದಾರೆ ಎನ್ನುವುದನ್ನು ಮೇಲೆ ಹೇಳಿದ ಸೂತ್ರರೂಪದ ವಾಕ್ಯಗಳು ನಮಗೆ ವಿಶದಪಡಿಸುತ್ತವೆ. ಕಾವ್ಯ ವ್ಯಕ್ತಿಯದಲ್ಲ, ಅದು ದೈವವಾಣಿ. ದೈವಸೃಷ್ಟಿ ಹೇಗೆ ತನ್ನ ಒಳ್ಳೆಯದು, ಕೆಟ್ಟದು, ಸಂಪೂರ್ಣತೆ, ಅಸಂಪೂರ್ಣತೆ ಇವುಗಳಿಂದ ಕೂಡಿ ಹೇಗೆ ಚಿರದಿನವೂ ವ್ಯಕ್ತವಾಗಲು ಪ್ರಯತ್ನಿಸುವುದೋ ಹಾಗೆ ಈ ವಾಣಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಭಾಷೆಗಳಲ್ಲಿ ಮಾನವ ಹೃದಯದಿಂದ ಹೊರಬೀಳಲು ಯತ್ನಿಸುತ್ತದೆ. ಕಾವ್ಯರಚನೆಗೆ ಕಾರಣವನ್ನು ಕುರಿತು ನಾಗವರ್ಮನು ಹೀಗೆ ಹೇಳುತ್ತಾನೆ:

ಪ್ರತಿಭಾನಂ ಕಾವ್ಯ ವಿದ್ಯಾ ಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇಳ್ವೊಡಂತಾ |
ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರ
ಸ್ಥಿತನಪ್ಪಂ ವೃದ್ಧನಾಲಸ್ಯಮನುಟಿದೆಸಪುದ್ಯೋಗಮಭ್ಯಾಸಕರ್ಮಂ ||

ದೈವದತ್ತವಾದ ಪ್ರತಿಭೆಯೂ ಕಾವ್ಯಗಳ ಪೂರ್ಣಪರಿಚಯವೂ ಸತ್ಕವಿಗಳ ಸತ್ಸಂಗವೂ ಅವರ ಆಶೀರ್ವಾದವೂ ಸತತಾಭ್ಯಾಸವೂ ಕಾವ್ಯರಚನೆಗೆ ಬೇಕಾದ ಸಂಪತ್ತು. ಕಾವ್ಯರಚನೆ ಬರಿಯ ಆಲಸಜೀವಿಗಳಿಗೆಂದಿಗೂ ಸಾಧ್ಯವಾಗದು. ಕವಿತೆಯ ಉದ್ದೇಶ ಪ್ರಯೋಜನಗಳನ್ನು ಕುರಿತು ಹರೀಶ್ವರನು ಹೀಗೆ ಹೇಳಿದ್ದಾನೆ.

ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ವಾ
ಗ್ದೇವ್ಯಾವಾಸಂ ವಿವೇಕೋನ್ನತ ಜಲನಿಧಿ ಸಂಸಾರವಿಶ್ರಾಮದೇಶಂ

* *Defence of Poetry*—Shelly (ಶ್ರೀ ಕುವೆಂಪು ಅವರ ಭಾಷಾಂತರ)

ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೊರ್ತು ಪೇಳ್ವಟ್ಟಿಯಿಂದಂ
ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ||

ಪ್ರಸನ್ನವೂ ಸರಸ್ವತಿಯ ಆವಾಸಸ್ಥಾನವೂ ಸಂಸಾರದಲ್ಲಿ ಬಳಲಿದವರಿಗೆ ವಿಶ್ರಾಂತಿಯನ್ನು ನೀಡುವುದೂ ದಿವ್ಯವಾದ ಜ್ಞಾನಮಾರ್ಗವನ್ನು ಬೋಧಿಸುವುದೂ ಕಾವ್ಯ. ಕಾವ್ಯಕ್ಕೆ ಚಿರತ್ವವಿದೆ ಎಂದು ಹೇಳುವ ಹರೀಶ್ವರನ ದೃಷ್ಟಿ ಭವ್ಯವಾಗಿದೆ.

ಕಾವ್ಯದೇವಿ ಸೌಂದರ್ಯಶಾಲಿಯಾದರೂ ಅವಳ ಅಂತರಂಗದಲ್ಲಿ ತಪಸ್ಸಿದೆ. ಕಾವ್ಯದಲ್ಲಿ ಕಲ್ಪನೆ, ಭಾವ, ಆಲೋಚನೆ ಎಲ್ಲವೂ ಸಮರಸವಾಗಿರಬೇಕು. ಕಾವ್ಯರಚನೆಗೆ ಕಲ್ಪನೆ ಅತಿ ಮುಖ್ಯವಾದ ಶಕ್ತಿ. "Imagination has been, is, and always will be the prime source of every thing that has intrinsic value in life." ಕಲ್ಪನೆ ಅತ್ಯಮೂಲ್ಯವಾದ ಶಕ್ತಿಯಾಗಿ ಸರ್ವಕಾಲದಲ್ಲಿಯೂ ಸಜೀವಶಕ್ತಿಯಾಗಿರಬಲ್ಲುದೆಂದು ಕವಿ ಷೆಲ್ಲಿ ಹೇಳಿದ್ದಾನೆ. ಕಲ್ಪನೆಯ ಬೆನ್ನೇರಿ ನಿತ್ಯರೂಪಗಳನ್ನು ಅನುಸಂಧಾನಮಾಡಿ ಅದನ್ನು ಅರಿತು ಪ್ರಕಾಶಪಡಿಸುವುದು ಕವಿಯ ಕೆಲಸ. ಕವಿಯ ಕುಶಲ ಕರ್ಮವೇ ಕಾವ್ಯ. ಕವಿಪ್ರತಿಭೆಯು ಲೌಕಿಕ ನಶ್ವರಕ್ಕೆ ಅಮೃತತ್ವವನ್ನು ದಯಪಾಲಿಸುತ್ತದೆ; ಕಾಲದೇಶದ ಮೃತ್ಯುವಿನಿಂದ ಪಾರುಮಾಡಿ ಚಿರತ್ವವನ್ನು ದಯಪಾಲಿಸುತ್ತದೆ. ತಾಯಿ ಮಗುವನ್ನು ಒಂಭತ್ತು ತಿಂಗಳು ಧರಿಸಿ ತನ್ನ ಶರೀರದಲ್ಲಿಯೇ ಪೋಷಿಸಿದರೂ ಅದರ ಬೆಳವಣಿಗೆಯನ್ನು ಅರಿಯಳು. ಅಂತೆಯೇ ಕಾವ್ಯಶಿಶುವನ್ನು ಧರಿಸಿ ಪೋಷಿಸಿದರೂ ಕವಿಗೆ ಅದರ ಬೆಳವಣಿಗೆ ತಿಳಿಯದು. ಜಗತ್ತಿಗಿಳಿದು ಉಸಿರಾಡಲು ಪ್ರಾರಂಭಿಸಿದಾಗ ಮಾತ್ರ ನಮಗೆ ಗೋಚರ!

ಕಾವ್ಯಶಿಶು ಜನ್ಮತಾಳುವಾಗಲೇ ಛಂದಶ್ಶರೀರಿಯಾಗಿರುತ್ತದೆ. ಛಂದಸ್ಸು ಕಾವ್ಯದ ಅಂತರ್ ಮಾಧುರ್ಯದ ಬಾಹ್ಯರೂಪ. ಛಂದಸ್ಸು ಕೃತಕವಾದುದಲ್ಲ. ದಿವ್ಯವಾದ ಅನುಭವಗಳನ್ನು ಪ್ರಕಾಶಪಡಿಸುವಾಗ ಕವಿಯ ಭಾಷೆ ಅಲಂಕಾರವಾಗುತ್ತದೆ. ಈ ಆಲಂಕಾರಿಕವಾದ ಭಾಷೆಯೂ ಕೂಡ ಅನುಭವಗಳ ಪ್ರಕಾಶನಕ್ಕೆ ಅತಿ ದರಿದ್ರೋಪಾಯ. ಕವಿಯ ಆತ್ಮದ ಸುರುಚಿರಾನುಭವಗಳ ಸುಂದರಾವಿರ್ಭಾವಕ್ಕೆ ಅಲಂಕೃತ ಭಾಷೆ ಸಾಧಕವಾದುದೆಂಬುದನ್ನು ಮರೆಯಬಾರದು. ಸತ್ಯಬೋಧಕವಾದರೂ ಕಾವ್ಯ ಸೌಂದರ್ಯಸಾಧಕವಾದುದು. ಕಾವ್ಯದಲ್ಲಿ ಮಾತ್ರವಲ್ಲದೆ ಸೃಷ್ಟಿಯ ಹೃದಯದಲ್ಲಿಯೂ ಒಂದು ಛಂದೋಗತಿ ಕಾಣುತ್ತದೆ. ನಮಗೆ ಕಾಣುವ ನಕ್ಷತ್ರ ಸೂರ್ಯ ಚಂದ್ರ ಚಿನ್ನ ಗುಲಾಬಿ ಸಕಲ ಚರಾಚರವಸ್ತುಗಳೂ ಕಾಲದೇಶಗಳ ರಂಗದಲ್ಲಿ ನಡೆಯುವ ಅಣುಗಳ (Atoms) ವಿವಿಧ ನೃತ್ಯಾಭಿನಯ. ಇದೇ ಮಾಯೆ, ಇದೇ ಸಂಗೀತ, ಇದೇ ಕಾವ್ಯ.

ಕವಿರಾಜಮಾರ್ಗದಲ್ಲಿ ಕಾವ್ಯಪ್ರಯೋಜನವನ್ನು ಕುರಿತು ಹೀಗೆ ಹೇಳಿದೆ:

ಅಧಿಕೃತ ಸತ್ಪುರುಷಾರ್ಥ
ಪ್ರಧಾನ ಧರ್ಮಾರ್ಥ ಕಾಮಮೋಕ್ಷಂಗಳವಾ
ಬುಧಜನ ವಿವಿಕ್ತ ಕಾವ್ಯ
ಪ್ರಧಾರಿತಾರ್ಥಂಗಳಖಿಳಭುವನ ಹಿತಂಗಳ್ ||

ಎಂದು ಕಾವ್ಯದಿಂದ ಧರ್ಮ ಅರ್ಥ ಕಾಮ ಮೋಕ್ಷಗಳು ಲಭಿಸುತ್ತವೆ ಎಂದೂ ಜೀವನದ ಸಕಲ ಭಾಗ್ಯಗಳು ದೊರಕುವುದಕ್ಕೆ ಮಾರ್ಗವೆಂದೂ ಕವಿ ಹೇಳಿದ್ದಾನೆ. ಸ್ಥೂಲವಾಗಿ ನಾವು ಕಾವ್ಯ ಪ್ರಯೋಜನವನ್ನು ಆನಂದವೆಂದು ಹೇಳುತ್ತೇವೆ. ಕಾವ್ಯವನ್ನು ಓದಿದಾಗ ನಾವು ಬೇರೊಂದು ಲೋಕಕ್ಕೆ ಕಾಲಿಡುತ್ತೇವೆ. ಅಂದರೆ ಈ ಜಗತ್ತಿನ ಆವರಣದಿಂದ ಭಂಗವುಂಟಾಗುತ್ತದೆ. ಪಿತೃವಾಕ್ಯ ಪರಿಪಾಲನೆಗಾಗಿ ರಾಮನು ರಾಜ್ಯವನ್ನು ಬಿಟ್ಟುಹೋದ ಸಂದರ್ಭ, ಬೇಡವೆಂದರೂ ಸೀತೆ ಅವನೊಡನೆ ಕಾಡಿಗೆ ಹೋದುದು, ಲಕ್ಷ್ಮಣನ ಸಹೋದರ ಪ್ರೇಮ ಈ ಸನ್ನಿವೇಶಗಳು ನಮ್ಮನ್ನು ಒಂದು ಸತ್ಯಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಗಂಡಸರಿಗೆ ತಾವೂ ರಾಮನಂತಾಗಬೇಕು ಎಂಬ ಆಕಾಂಕ್ಷೆಯೂ ಹೆಂಗಸರಿಗೆ ತಾವು ಸೀತೆಯಂತಾಗಬೇಕೆಂಬ ಆಕಾಂಕ್ಷೆಯೂ ಮೂಡಿ ಜನತೆಯನ್ನು ಕೇವಲ ಸತ್ಯದ ಕಡೆಗೆ ಕರೆದೊಯ್ಯಲು ಮಾರ್ಗದರ್ಶಿಯಾಗಿವೆ. ಕಾವ್ಯಪ್ರಕಾಶದ ಕರ್ತೃವಾದ ಮಮ್ಮಟನು ಕಾವ್ಯ ಪ್ರಯೋಜನವನ್ನು ಹೀಗೆ ಹೇಳಿದ್ದಾನೆ:

ಕಾವ್ಯಂ ಯಶಸೇಽರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ
ಸದ್ಯಃ ಪರನಿರ್ವೃತಯೇ ಕಾಂತಾಸಮ್ಮಿತ ತಯೋಪದೇಶಯುಜೇ ||

ಕಾವ್ಯದಿಂದ ಯಶಸ್ಸು, ಧನ, ಲೋಕವ್ಯವಹಾರಜ್ಞಾನ, ಅಮಂಗಳ ಪರಿಹಾರ, ತಾತ್ಕಾಲಿಕ ಆನಂದ, ಕಾಂತಾ ಸಮ್ಮಿತದಂತೆ ಉಪದೇಶ ಎಂಬ ಪ್ರಯೋಜನಗಳನ್ನು ಹೇಳಿದೆ. ಕಾವ್ಯದಿಂದ ಯಶಸ್ಸು, ಧನ ಇವುಗಳು ದೊರಕಿದರೂ ದೊರಕಬಹುದು. ನಿರ್ದಿಷ್ಟವಾಗಿ ಹೇಳುವಂತಿಲ್ಲ. ಆದರೆ ಲೋಕವ್ಯವಹಾರಜ್ಞಾನವೂ ಆನಂದವೂ ಲಭಿಸುತ್ತವೆ.

ಕಾವ್ಯವು ನೀತಿಬೋಧೆಗಾಗಿಯೇ ರಚಿಸಲ್ಪಟ್ಟಿದೆಯೇ? ನೀತಿಬೋಧೆಯು ಕಾವ್ಯದ ಉದ್ದೇಶವೆಂದು ಹೇಳುವುದು ಯುಕ್ತವಲ್ಲವೆಂದು ಕೆಲವರ ಮತ. ಏಕೆಂದರೆ ನೀತಿಬೋಧೆಗೆ ಹೊರಟ ಕಾವ್ಯದ ಮುಖ್ಯ ಲಕ್ಷಣವಾದ ಆನಂದವು ಹುಟ್ಟದೇ ಹೋಗಬಹುದೆಂದು ಹೇಳುತ್ತಾರೆ. ಕೆಲವು ಬಳ್ಳಾರಿ ತತ್ತ್ವಗಳನ್ನು ಉದ್ದಕ್ಕೆ ಓದುತ್ತ ಹೋದಾಗ ನಮಗೆ ಆನಂದ ಉಂಟಾಗುವುದಿಲ್ಲ. ಆದರೆ ಎಚ್ಚತ್ತ ಚೇತನಕ್ಕೆ

ಈ ನೀತಿಬೋಧಕವಾದ ತತ್ತ್ವಗಳೂ ಆನಂದವನ್ನುಂಟುಮಾಡಬಲ್ಲುವು. ಆದರೆ ಸಾಮಾನ್ಯರಿಗೆ ಕಾವ್ಯವು ಕಾಂತಾಸಮ್ಮಿತದಂತೆ ಇರಬೇಕಾಗುವುದು ಅಗತ್ಯವಾಗುತ್ತದೆ. ಹರೀಶ್ವರ ಕವಿ "ಪ್ರಿಯವಚದಂತೆ, ಕೂರ್ತಮುಗ್ಧೆಯ ಕಡುನೇಹದಂತೆ, ಪುಷ್ಪಮಾಲೆಯ ಪೊಸಗಂಪಿನಂತೆ" ಕಾವ್ಯದಲ್ಲಿ ಮಾಧುರ್ಯವೂ ಇರಬೇಕೆಂದು ಹೇಳಿದ್ದಾನೆ. ಕೆಲವರು ಕಾವ್ಯದಲ್ಲಿ ಉಪದೇಶವಿಲ್ಲದಿದ್ದರೂ ಆನಂದದಾಯಕವಾಗಿದ್ದರೆ ಸಾಕು ಎಂದು ಹೇಳುತ್ತಾರೆ. ಈ ವಿಷಯವನ್ನು ವಿಮರ್ಶಿಸುವುದು ಅಗತ್ಯ.

ಯಾವ ಉತ್ತಮ ಕಾವ್ಯವನ್ನು ಪರಿಶೀಲಿಸಿದರೂ ಅದರಲ್ಲಿ ನೀತಿಬೋಧೆ ಧ್ವನಿಪೂರ್ಣವಾಗಿ ಐಕ್ಯವಾಗಿದೆ. ನೀತಿಬೋಧೆ ಇಲ್ಲದ ಉತ್ತಮ ಕಾವ್ಯಗಳನ್ನು ಹುಡುಕಿದರೂ ಸಿಕ್ಕುವುದು ಅಪೂರ್ವ. ಇಲ್ಲವೆಂದೇ ಹೇಳಬಹುದು. ಕೇವಲ ಬುದ್ಧಿವಿಚಾರದಿಂದ ಎಷ್ಟನ್ನು ನೋಡುತ್ತೇವೆಯೋ ಅದರೊಂದಿಗೆ ಹೃದಯಭಾವವೂ ಸೇರಿದರೆ ಮನೋವೈಶಾಲ್ಯವುಂಟಾಗುತ್ತದೆ; ಧರ್ಮಬುದ್ಧಿಯೂ ಸೇರಿದರೆ ಮನಃಪರಿಪಾಕವುಂಟಾಗುತ್ತದೆ; ಆಧ್ಯಾತ್ಮದ ಕಣ್ಣು ತೆರೆದರೆ ಆಗ ದೃಷ್ಟಿ ಕ್ಷೇತ್ರಕ್ಕೆ ಮೇರೆಯೇ ಇರುವುದಿಲ್ಲ. ಆದುದರಿಂದಲೇ ಕಾವ್ಯಕ್ಕೆ ಆಧ್ಯಾತ್ಮದ ವಿದ್ಯುತ್ ಶಕ್ತಿ ಪ್ರವಹಿಸಿದಾಗ ಪ್ರಜ್ವಲಿಸುವುದು. ಅಂತಹ ಕಾವ್ಯ ಆತ್ಮಕ್ಕೆ ಆಹಾರ; ಉನ್ಮೀಲನಕ್ಕೆ ಸೋಪಾನ. ಕಾಳಿದಾಸನ ಕುಮಾರಸಂಭವ, ಪಂಪನ ಆದಿಪುರಾಣ, ಕುಮಾರವ್ಯಾಸನ ಭಾರತ ಇವುಗಳಲ್ಲಿ ನೀತಿಬೋಧೆ ಅಂತರ್ಗಾಮಿಯಾಗಿ ಹರಿಯುತ್ತಿದೆ. ಇಂದ್ರಿಯಗಳನ್ನು ಕೆರಳಿಸಿ ಮನಸ್ಸಿನ ಒಂದು ಚಾಪಲ್ಯವನ್ನು ನಿವಾರಿಸುವುದು ಕಾವ್ಯದ ಉದ್ದೇಶವಲ್ಲ. ನೀತಿ ಬೋಧೆಗಾಗಿಯೇ ಹೊರಡುವ ಸಾಹಿತ್ಯ ಕಾವ್ಯವಾಗುವುದಿಲ್ಲ, ಶಾಸ್ತ್ರವಾಗುತ್ತದೆ.

'Beauty is truth, truth beauty' ಎಂದು ಆಂಗ್ಲಕವಿ ಕೀಟ್ಸ್ ಹೇಳಿದ್ದಾನೆ. ಕಾವ್ಯದೇವಿ ಸತ್ಯ ಸೌಂದರ್ಯ ರೂಪಿಯಾಗಿದ್ದಾಳೆ. ಉಪನಿಷತ್ತಿನ ಋಷಿಗಳೂ "ಆನಂದರೂಪಮಮೃತಂ ಯದ್ವಿಭಾತಿ"—ಯಾವುದು ಪ್ರಕಾಶವಾಗುವುದೋ ಅದೇ ಪರಮಾತ್ಮನ ಆನಂದರೂಪ, ಅವನ ಅಮೃತರೂಪ—ಎಂದು ಹೇಳಿದ್ದಾರೆ. ಕವಿಯ ದರ್ಶನದಿಂದ ಪ್ರಕಾಶವಾದ ಕಾವ್ಯವು ಸರ್ವದಾ ಸತ್ಯ ಸೌಂದರ್ಯ ರೂಪವಾಗಿರುವುದು. ಆದುದರಿಂದ ಶ್ರೇಷ್ಠ ಕಾವ್ಯಗಳಲ್ಲಿ ಸತ್ಯ ಪ್ರಚೋದಕವಾದ ನೀತಿ ಬೋಧೆಯೂ ಕಾವ್ಯದ ಉದ್ದೇಶ ಮತ್ತು ಪ್ರಯೋಜನವಾಗುತ್ತದೆ.

ಸೌಂದರ್ಯವನ್ನು ಮಾತ್ರ ತೋರುವೆನೆಂದ ಕಲಾವಿದನು 'ಕಲೆಗಾಗಿ ಕಲೆ' ಎಂಬ ಭ್ರಮೆಯಿಂದ ಮುಂದೆ ಸಾಗಿದರೂ ಎಡವುತ್ತಾನೆ. ಏಕೆಂದರೆ ದೇಹದಲ್ಲಿ ಆರೋಗ್ಯವೂ ಶಕ್ತಿಯೂ ಇಲ್ಲದ ತರುಣಿ ಅದೆಷ್ಟು ಅಂಗರಾಗ (Powder)ವನ್ನು

ಬಳಿದು ಕೊಂಡರೂ ಅದೆಷ್ಟು ಬಣ್ಣ ಬಣ್ಣದ ಸೀರೆಯನ್ನುಟ್ಟರೂ, ಅದೆಷ್ಟು ಒಡವೆಗಳಿಂದ ಅಲಂಕಾರ ಮಾಡಿಕೊಂಡರೂ ಅವಳ ಸೌಂದರ್ಯ ಬಾಹ್ಯವಾದು ದೆಂಬುದು ಸ್ವಲ್ಪ ಹೊತ್ತಿನಲ್ಲಿ ತಿಳಿಯುತ್ತದೆ. ಕನ್ನಡ ಸಾಹಿತ್ಯದಲ್ಲಿ 'ಲೀಲಾವತಿ ಪ್ರಬಂಧ' ಇಂತಹ ಜಾತಿಗೆ ಸೇರಿದ ಕಾವ್ಯ. 'ಸ್ತ್ರೀ ರೂಪಮೆ ರೂಪಂ, ಶೃಂಗಾರಮೆ ರಸಂ' ಎಂದು ಹೊರಟ ಕವಿಯ ಕೃತಿ ಎಲುಬಿನ ಗೂಡಿಗೆ ಅಲಂಕಾರಮಾಡಿದಂತಾಗಿ ಸತ್ತ್ವಹೀನವಾಗಿದೆ. ತತ್ತ್ವಗರ್ಭಿತವಲ್ಲದ ಕಾವ್ಯ, ಸಮುದ್ರದ ನೊರೆಯಂತೆ ಕ್ಷಣಿಕ ವಾದುದು. ಪಾಶ್ಚಾತ್ಯದೇಶದಲ್ಲಿ 'ಕಲೆಗಾಗಿ ಕಲೆ' ಎಂಬ ಕೂಗೆದ್ದು ಅನೇಕ ಕಲಾವಿದರು ಈ ಗುರಿಗೆ ತಮ್ಮ ಸೇವೆ ಸಲ್ಲಿಸಿದರು. ಆಸ್ಕರ್ ವೈಲ್ಡ್ ಎಂಬ ಕಲಾವಿದ ಈ ಮಾರ್ಗದಲ್ಲಿ ಬಹುದೂರ ಮುಂಬರಿದು ತನ್ನ ಜೀವನದ ಅಂತ್ಯದಲ್ಲಿ ಅಧೋಗತಿಗಿಳಿದು ತನ್ನ ತಪ್ಪಿಗಾಗಿ ಎದೆನೊಂದುಕೊಳ್ಳುವನು. ಬೆತ್ತಲೆಯ ಚಿತ್ರ ಗಳನ್ನೂ ಇಂದ್ರಿಯ ಚಾಪಲ್ಯತೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಅಶ್ಲೀಲ ಸಾಹಿತ್ಯ ವನ್ನೂ ಕಲಾವಿದರು ರಚಿಸಿದ್ದಾರೆ. ಆದರೆ ಅದರ ಉಪಾಸನೆಯಿಂದ ಮನುಷ್ಯನು ಅಧೋಗತಿಗೆ ಇಳಿಯುತ್ತಾನೆ. ಇದರಿಂದ ಮನುಸ್ಸು ಹದಗೆಟ್ಟು ದಿಕ್ಕುಗೆಟ್ಟು ಆತ್ಮಕ್ಕೆ ಚಿರಹಾನಿ ತಪ್ಪದು. ಕಲೆಯು ದೃಷ್ಟಿ ಭೂಮವಾಗಿ ಜನತೆಗೆ ಅಮೃತಾಹಾರ ವನ್ನು ಒದಗಿಸಬೇಕು. ಜೀವನದಲ್ಲಿ ತತ್ತ್ವಕ್ಕೆ ಒಂದು ಮಹತ್ವವಿರುವಂತೆ ಜೀವನಕ್ಕೆ ಸದೃಶವಾದ ಕಾವ್ಯದಲ್ಲಿಯೂ ತತ್ತ್ವಕ್ಕೆ ಪ್ರಾಮುಖ್ಯತೆ ಇದೆ. ಆದುದರಿಂದ ನೀತಿ ಬೋಧೆಯೂ ಕಾವ್ಯದ ಅನಿವಾರ್ಯವಾದ ಒಂದು ಅಂಗ. ಆದರೆ ನೀತಿಬೋಧೆಯೇ ಕಾವ್ಯವಲ್ಲ.

ಕವಿಯ ಸ್ವಾತಂತ್ರ್ಯವನ್ನು ಕುರಿತು ಮಾತನಾಡುವವರು ಕವಿಯೂ ಒಬ್ಬ ಸಮಾಜ ಜೀವಿ ಎಂಬುದನ್ನು ಮರೆಯುತ್ತಾರೆ. ಕಲೆ ಪೂರ್ಣವಾಗಿ ಸ್ವತಂತ್ರ ವಾದುದು; ಕವಿಯು ತನ್ನ ಪ್ರೇರಣೆಯಿಂದಲೇ ರಚಿಸುತ್ತಾನೆ; ಕಲೋಪಾಸಕರು ತಮ್ಮ ಇಷ್ಟದಂತೆ ಬೇಕಾದುದನ್ನು ಸ್ವೀಕರಿಸಬಹುದು ಎಂದು ಕೆಲವು ಕವಿಗಳು ತಮ್ಮ ಕೃತಿಗಳ ವಿಚಾರವಾಗಿ ತಮ್ಮ ಸ್ವಾತಂತ್ರ್ಯವನ್ನು ಪ್ರತಿಪಾದಿಸುವುದುಂಟು. ಆದರೆ ಕವಿಯ ಕೃತಿಯಿಂದ ಸಮಾಜಕ್ಕೆ ಅನೀತಿ ಬೋಧೆಯಾಗುವಂತಿದ್ದರೆ ಅಂತಹ ಕಲೆಯೇ ಬೇಡ. ಅಂತಹ ಕಲೆಗಿಂತ ಜೀವನವೇ ಸತ್ಯವಾದುದು. ಜೀವನದ ತತ್ತ್ವಕ್ಕೆ ವಿರುದ್ಧವಾದ ಕಾವ್ಯ ಎಂದಿಗೂ ಪೂಜಾರ್ಹವಾಗಲಾರದು. ಅದರಿಂದ ಆನಂದ ವಾಗಲಾರದು. ನಾವು ಅಂತಹ ಕಾವ್ಯವಿಲ್ಲದೆ ಬದುಕಬಹುದು; ತತ್ತ್ವವಿಲ್ಲದೆ ಬದುಕ ಲಾರೆವು. ಈ ದೃಷ್ಟಿಯಿಂದ ಕಾವ್ಯದಲ್ಲಿ ನೀತಿಬೋಧೆಯೂ ಒಂದು ಮುಖ್ಯ ಅಂಗ.

ಯು. ಕೆ. ಸುಬ್ಬರಾಯಾಚಾರ್.

ಸೌಂದರ್ಯಕೆಲ್ಲಂತ್ಯ ?

ಒಂದೆ ದೆಸೆಯಂಚಿನಲಿ ದಿನದಿನವು ಮೂಡುತಿವೆ
 ರವಿಶಶಿಗಳನುಕ್ರಮದಿ ಬೆಳಕೆರೆದು ಬುವಿಗೆ.
ನೋಡುತಿಹೆನನುದಿನವು ತಣಿಯದಿಹುದೆದೆಯಕಟ !
 ಜನ್ಮ ಸಾಲವೊ ಏನೊ ಸೌಂದರ್ಯ ಸವಿಗೆ !
ರವಿಯುದಿಸಿ ಬಂದನಹ ಅಕೊ ಅಲ್ಲಿ ಎನ್ನುತಿರೆ
 ಇತ್ತಣಿಂ ತೀಡುವುದು ಗಂಧವನೆ ಗಾಳಿ
ಮತ್ತೆ ಬಾನ್ಮನೆಯಲ್ಲಿ ಮುಗಿಲೆದ್ದು ಕುಣಿಯುವುವು
 ಎತ್ತಿ ಬರುವುದು ಸುತ್ತ ಪ್ರತ್ಯೂಷ ಧಾಳಿ !
ಗಿಡಗಿಡಕು ಮರಮರಕು ಆನಂದ ಪುಲಕವೋ
 ಅಹುದಹುದು ನೋಡೆನಲು ಮೂಡಿಬಹವರಳು
ಸೃಷ್ಟಿಯಾನಂದವೇ ಉದ್ಗಾರವೆತ್ತುದೆನೆ
 ಗಾನನುಡಿವುವೊ ಹಕ್ಕಿ ತಾವೆತ್ತಿ ಕೊರಳು !
ಧ್ವನಿಯಲ್ಲಿ ! ಹೊವಿಲ್ಲಿ ! ಚೆಲುವುಲಿಗಳೊಂದಾಗಿ
 ದಿನವುದಯದಾ ನೆವದಿ ತಾವಿಳಿವವಿಳೆಗೆ
ಮತ್ತದೇ ಬೆಳಕುಗಳೆ ಬಾನ್ಮನೆಯಿನೈತಂದು
 ಶಶಿರವಿಗಳಸ್ತದಲಿ ಇಳಿಯುತಿಹವಿಳೆಗೆ !
ಸೌಂದರ್ಯಕೆಲ್ಲಂತ್ಯ ?—ಅಂತ್ಯವಿಲ್ಲದ ಶಕ್ತಿ !
 ಹೂವಿನೊಲು ಹಸುರಿನೊಲು ಹೊಸತಾಗುತಿಹುದು !
ರವಿಯಾಗಿ ಶಶಿಯಾಗಿ ಋತುಋತುಗಳಾರಾಗಿ
 ಇಳೆಯ ಚೆಲುವಾವರಿಸುತಿಹುದು !
ಇಂದೊ ನಿನ್ನೆಯೊ ಅಲ್ಲ ದಿನದಿನವು ಇದೆ ಚೆಲುವೆ
 ಹೊಸತೆನುವೊಲೆಂದಿನೊಲೆ ಇಳಿಯುತಿಹುದಲ್ಲೊ !
ಒಂದೆ ರವಿಯೊಂದೆ ಮುಗಿಲೊಂದೆ ಖಗವಾದರೂ
 ಹೊಸತಾಗಿ ಚೆಲುವ ಧರೆಗಿಳಿಸುತಿಹವಲ್ಲೊ !
ಓ ಸನಾತನವಿದುವೆ, ನಿತ್ಯನೂತನವಿದುವೆ
 ಹೌದಿದುವೆ ಸೃಷ್ಟಿಯಲಿ ದಿನನಿತ್ಯಕೂಡ
ಕಳೆದಂತೆ ಹೊಳೆಯುತಿದೆ ; ಮುಳುಗಿದೊಲೆ ಹೊಳೆಯುತಿದೆ !
 ಮತ್ತೆ ಮತ್ತೂ ಹೆಚ್ಚು ಹೊಳೆಯುತಿದೆ ನೋಡ !

ಜಿ. ಎಸ್. ಸಿದ್ಧಲಿಂಗಯ್ಯ

ತಂತ್ರ ವಿಮೋಚನೆ

ರಜಾದಲ್ಲಿ ಊರಿಗೆ ಹೋದಸಮಯದಲ್ಲಿ ಅಲ್ಲಿಂದ ಆ ಹಳ್ಳಿಗೂ ಆಗಾಗ ನಾನು ಹೋಗುವುದುಂಟು. ಆ ಸಾರಿ ಒಮ್ಮೆ ಹೋದಾಗ ನನ್ನ ಸಂಬಂಧಿ ಮಿತ್ರನೊಡನೆ ನಡೆಯುತ್ತಿದ್ದ ಕಟ್ಟೆಯಮೇಲಿನ ಹರಟೆಯಲ್ಲಿ ಮಾತಿಗೆ ಮಾತು ಬಂದು :

"ಏನಪ್ಪಾ, ನಿಮ್ಮ ಊರಿನಲ್ಲಿ ಈ ಸಾರಿ ಯಾವ ಆಟವನ್ನೂ ಕಟ್ಟಿಲ್ಲವೋ ? ಸುಮ್ಮನೆ ಇರೋರಲ್ಲ ಇಲ್ಲಿಯವರು" ಎಂದೆ.

"ಆ ಪೂಜಾರಪ್ಪ, ಇದ್ದಿದ್ರೆ ಇಷ್ಟರಲ್ಲಿ ಇನ್ನೊಂದು ಆಟ ಎಬ್ಬಸೇ ಇರ್‍ತಿದ್ದ. ಅವನು ಹೋದಾ ಹೋದಾ ನಮ್ಮೂರಿನಲ್ಲಿ ಆಟ ನಿಂತುಹೋದಂತೆಯೇ."

"ಪೂಜಾರಪ್ಪ ಇಲ್ಲವೇನು ಈಗ ? ಎಲ್ಲಿಗೆ ಹೋದ ?" ಮತ್ತೆ ಕೇಳಿದೆ.

"ಓಹೋ ನಿನಗೆ ಗೊತ್ತಿಲ್ಲ ಅಲ್ವೆ? . . . ಅದೇ ಒಂದು ದೊಡ್ಡ ರಾಮಾಯಣ" ಎಂದು ಆತ ಪ್ರಾರಂಭಿಸಿದ. "ಏನ್‌ಹೇಳ್ಲಿ ? ಆ ಸಮಯದಲ್ಲಿ ತಲೆ ತಪ್ಪಿಸಿಕೊಂಡ ಸರಿಹೋಯ್ತು. ಇಲ್ಲದೇ ಹೋಗಿದ್ರೆ ಕಾಲ್ ಮುರಿದು ಕೈಗೆ ಕೊಡುತ್ತಿದ್ದರು" ಎಂದು ನಗುತ್ತಾ "ಅಲ್ಲಾ, ಎಂಥ ಕೆಲಸಮಾಡಿದ್ದ ಅಂತೀಯ !"

"ಏನಪ್ಪ ಅಂತಹ ಕೆಲಸ ! ಜನರಿಗೆಲ್ಲಾ ಬಹಳ ಬೇಕಾಗಿದ್ದವನಲ್ಲವೇ ?"

"ಬೇಕಾದವನೇ . . . ಆದ್ರೂ ಇಷ್ಟಕ್ಕೆ ಅವನು ಹೋಗಬಾರದಾಗಿತ್ತು"

"ಏನು ವಿಷಯ ಹೇಳಬಾರದೇ ?" ನಾನು ಕೇಳಿದೆ.

"ಈಗ ಸುಮಾರು ಐದಾರು ತಿಂಗಳಾಗಿರಬೇಕು" ಎಂದು ಯೋಚಿಸುತ್ತಾ "ಯಾವ ತಿಂಗಳು ಇದು ಚೈತ್ರ ಅಲ್ಲವೇ ? ಆಶ್ವೀಜದಲ್ಲೋ ಅಥವಾ . . ."

ನಾನು ಮಧ್ಯದಲ್ಲೇ ಹೇಳಿದೆ. "ಇರಬೇಕು ಇರಬೇಕು. ಆಶ್ವೀಜದಲ್ಲೇ ಇರಬೇಕು ಮುಂದೆ ಹೇಳು" ಎಂಬುದಾಗಿ.

"ಅಲ್ಲ, ಅಲ್ಲ, ನೆನಪಾಯ್ತು ಕಾರ್ತಿಕದಲ್ಲಿ. ಕಾರ್ತಿಕ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ ಐದು ತಿಂಗಳು. ಅದೇ ಐದಾರು ತಿಂಗಳು ಅಂತ ನಾನು ಮೊದಲೇ ಹೇಳಲಿಲ್ಲವೇ ?"

ನನ್ನ ಸಹನೆ ಮೀರಿತು "ಮುಂದೆ ಹೇಳಬಾರದೇನೋ ಮಹರಾಯ. ನಿನ್ನ ತಿಂಗಳು ಯಾರಿಗೆ ಬೇಕು ?" ಎಂದೆ.

"ನೋಡಪ್ಪಾ, ಐದಾರು ತಿಂಗಳ ಹಿಂದೆ ನಡೆದ ಕಥೆಯಿದು" ಎಂದು ಕಥೆಯ ಕಡೆ ಹೊರಟವನು ಮತ್ತೆ ತಿರುಗಿದ. "ಪೂಜಾರಪ್ಪ, ಗೊತ್ತುತಾನೇ ನಿನಗೆ ?"

"ಗೊತ್ತು ಅಂದರೆ ಒಂದುಸಾರಿ ನೋಡಿದ್ದೆ. ಅದೂ ಅವನ ಆಟ ನಡೆಯುತ್ತಿರುವಾಗ. ಅಲ್ಲದೆ ಮಾಟ ಮಂತ್ರ ಮಾಡ್ತಾನೆ, ದೆವ್ವನ್ನ ಬಿಡಿಸುತ್ತಾನೆ ಅಂತಲೂ ಕೇಳಿದ್ದೆ."

"ಹಾಂ ನೋಡು ಅದಕ್ಕೆ ಸಂಬಂಧಪಟ್ಟದ್ದು ಈ ಕಥೆ. ಮಾನಾಚಾರಿಯು ಪೂಜಾರಪ್ಪನಾದ ಕಥೆ ನಿನಗೆ ಗೊತ್ತಿರಬೇಕು ?"

"ಮಾನಾಚಾರಿ, ಅದು ಅವನ ಮೊದಲನೆಯ ಹೆಸರೇನು ?"

"ಓ ನಿನಗೆ ಮೂಲದಿಂದಲೇ ಹೇಳಬೇಕಾಯಿತು."

ಒಳ್ಳೆ ಮನೆತನದಲ್ಲಿ ಹುಟ್ಟಿದವನು ಮಾನಾಚಾರಿ. ಇವರ ಅಪ್ಪನಿಗಂತೂ ಈ ತಾಟಾಪೋಟಿ ವಿದ್ಯೆ ಗೊತ್ತೇ ಇರಲಿಲ್ಲ. ಊರಿನ ಹನುಮಂತನ ಪೂಜೆ ಹೇಗೋ ಇವರಿಗೆ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿತ್ತು. ತನ್ನ ಕುಲಕಸುಬಿನಲ್ಲೂ ಒಳ್ಳೇ ಹೆಸರನ್ನೇ ಸಂಪಾದಿಸಿದ್ದ ಅವರಪ್ಪ. ಇವನಿಗೆ ಏನುಬಂತೋ ಹೊತ್ತು ಈ ಮಗನಿಗೆ ಗಂಟೆಯನ್ನು ಬಾರಿಸಿಕೊಂಡೋ ಚಿನ್ನವನ್ನು ಗುದ್ದಿಕೊಂಡೋ ಸುಖವಾಗಿರಬಾರದಾಗಿತ್ತೇ. ಊರಿನ ಜನರೆಲ್ಲಾ ತನ್ನನ್ನು ಗೌರವಿಸಬೇಕು, ತನ್ನ ಸುತ್ತ ಅವರು ಸುತ್ತಾಡುತ್ತಿರಬೇಕು, ತಾನೊಬ್ಬ ಗಣ್ಯವ್ಯಕ್ತಿಯಾಗಿ ಮೆರೆಯಬೇಕು, ಎನ್ನುವ ಆಕಾಂಕ್ಷೆಗೆ ಜೋತುಬಿದ್ದ. ಬಯಲಾಟ ಕಲಿಸುವ ಹವ್ಯಾಸದಿಂದ ಅವನಾಶೆ ತಕ್ಕಮಟ್ಟಿಗೆ ಫಲಿಸಿತ್ತು. ಊರಿನ ಹತ್ತಾರು ಹುಡುಗರ ತಂಡ ಇವನನ್ನು ಸುತ್ತುವರಿಯಲು ಇದರಿಂದ ಅವಕಾಶವಾಗಿತ್ತು. ಒಂದೆರಡು ಯಕ್ಷಗಾನ ಕಥೆಗಳನ್ನು ಇಟ್ಟುಕೊಂಡು "ಇವು ನಾನೇ ಸ್ವತಃ ಬರೆದವುಗಳು"—ಎಂದು ಹೇಳಿಕೊಳ್ಳುತ್ತಿದ್ದುದೂ ಉಂಟು.

ಒಮ್ಮೆ ಇದ್ದಕ್ಕಿದ್ದಂತೆಯೇ ಮಾನಾಚಾರಿ ಮಾಯವಾದ. ವಾರ, ಪಕ್ಷ, ತಿಂಗಳುಗಳು ಉರುಳಿದುವು. ಆಚಾರಿಯ ಪತ್ತೆಯೇ ಇಲ್ಲವಾಯಿತು. ಎಲ್ಲಿ ಹೋದ? ಏಕೆ ಹೋದ? ಹೇಗೆ ಹೋದ?—ಕೆಲವುದಿನ ಊರಿನ ಬಂಡಾಡಿಗರಿಗೆ ಹರಟೆಯ ವಿಷಯ ಇದೇ ಆಗಿತ್ತು. ಇವನ ತಾಯಿ, ತಮ್ಮ, ಇವರೂ ಸಹಾ ಅಲ್ಲಿ ಇಲ್ಲಿ ವಿಚಾರಿಸಿ ಹುಡುಕಿ ಸುಮ್ಮನಾಗಬೇಕಾಯಿತು. ಪ್ರಶ್ನೆ ಯಾರಿಗೂ ಬಗೆಹರಿಯಲಿಲ್ಲ.

ವಾಸ್ತವವಾಗಿ ಆತ ಹೋಗಿದ್ದು ಒಬ್ಬ ಬೈರಾಗಿಯ ಜೊತೆಯಲ್ಲಿ. ಆ ಬೈರಾಗಿ ತನ್ನಲ್ಲಿರುವ ಮಾಯ ಮಂತ್ರ ತಂತ್ರಗಳನ್ನೆಲ್ಲಾ ಧಾರೆ ಎರೆಯುವುದಾಗಿಯೂ ಅದರಿಂದ ಜನರನ್ನು ಒಲಿಸಿಕೊಳ್ಳಬಹುದೆಂದೂ ತನ್ನ ಪ್ರಭಾವವನ್ನು ಬೀರಬಹುದೆಂದೂ ನಂಬಿಸಿ ಕರೆದುಕೊಂಡು ಹೋಗಿದ್ದ. ಹಾಗೂ ಹೀಗೂ ಒಂದು ವರ್ಷ ಕಳೆಯಿತು. ಮಾನಾಚಾರಿ ಹೇಗೆ ಅದೃಶ್ಯನಾಗಿದ್ದನೋ ಹಾಗೆಯೇ ಮೈದೋರಿದ.

"ಅಲ್ಲಪ್ಪ ಈ ಒಂದು ವರ್ಷದ ಲಾಗಾಯ್ತು ಎಲ್ಲಿಗೆ ಹೋಗಿದ್ದಿ?" ಎಂದು ಸ್ನೇಹಿತರು ಕೇಳಿದರೆ "ಅಯ್ಯೋ ಅದೇ ಒಂದು ದೊಡ್ಡ ಕಥೆ" ಎಂದು ತನ್ನ ಬತ್ತಳಿಕೆ ಯನ್ನು ಬಿಚ್ಚುವನು: "ತಾಳಿ ತಾಳಿ, ಹೇಳಬೇಕೋ ಬೇಡವೋ ನಮ್ಮ ಗುರುಗಳನ್ನೇ ಕೇಳುತ್ತೇನೆ" ಎನ್ನುತ್ತಾ 'ಹ್ರಾಂ, ಹ್ರೀಂ, ಭ್ರೂಂ' ಎಂದು ಉಚ್ಚರಿಸಿ ಕಣ್ಣು ಗಳನ್ನು ಮುಚ್ಚಿದ. ಸ್ನೇಹಿತರು ತಬ್ಬಿಬ್ಬಾಗಿ ಒಬ್ಬರ ಮುಖವನ್ನೊಬ್ಬರು ನೋಡಿ ದರು. ಸ್ವಲ್ಪಹೊತ್ತಿನ ಮೇಲೆ ಮೆಲ್ಲನೆ ಕಣ್ದೆರೆದು; "ಆಹಾ ನಮ್ಮ ಗುರುಗಳು ಎಂಥಾ ಕರುಣಾಶಾಲಿಗಳು. ಈ ನಿನ್ನ ವಿದ್ಯೆಯನ್ನು ಪರೋಪಕಾರಕ್ಕಾಗಿ ಮಾತ್ರ ಉಪ ಯೋಗಿಸು" ಎಂದರು. ಎಂದು ಒಂದು ಬಾಣವನ್ನು ಬಿಟ್ಟನು.

"ಇದಾವುದಪ್ಪ ಹೊಸ ವಿದ್ಯೆ ಕಲಿತುಕೊಂಡು ಬಂದಿದ್ದೀ?" ಒಬ್ಬ ಪ್ರಶ್ನಿಸಿದ.

"ಇದು ಯೋಗ ಕಣಯ್ಯ ಇದು. ಯಾರಿಗೆ ಏನು ಖಾಹಿಲೆ ಆಗಲಿ, . . . ದೆವ್ವ ಹಿಡಿಯಲಿ. . . ."

"ಆ್ಞಂ; ಅದನ್ನೂ ಕಲಿತುಕೊಂಡು ಬಂದಿದ್ದೀರೇನು?" ಸ್ನೇಹಿತರು ಒಟ್ಟಿಗೇ ಕೇಳಿದರು.

"ಸಣ್ಣ ಪುಟ್ಟ ದೆವ್ವಗಳ ಮಾತು ಹಾಗಿರಲಿ ದೊಡ್ಡದೊಡ್ಡ ಬ್ರಹ್ಮರಾಕ್ಷಸಗಳು ಬಂದರೂ ನನಗೆ ನೀರು ಕುಡಿದ ಹಾಗೆ."

"ಓಹೋ ನಮ್ಮ ಆಚಾರ್ಯರು ಮೊದಲಿನವರಲ್ಲವಪ್ಪ" ಎಂದರು. ಆಚಾರಿ ಹಿಗ್ಗಿನಿಂದ ಬಿರಿದುಹೋದ. ಇನ್ನೊಬ್ಬ ಸ್ನೇಹಿತ "ಅದು ಸರಿ ಇದನ್ನೆಲ್ಲಾ ಎಲ್ಲಿ ಕಲಿತಿರಿ ಆಚಾರ್ಯರೇ?" ಎಂದ. ಅದಕ್ಕೆ ಆಚಾರಿ "ಇದು ಬಹಳ ಗುಟ್ಟು ಕಣಪ್ಪ. ಗರತಿಗೆ ಗಂಡನ ಹೆಸರಿದ್ದಹಾಗೆ ಎಂದು ಪ್ರಾರಂಭಮಾಡಿದರೂ ತಾನು ಬಾಬಾ ಬುಡನಗಿರಿಗೆ ಹೋದುದು, ಅಲ್ಲಿ ಅನೇಕ ಸಾಧುಗಳೊಡನೆ ಮಂತ್ರವಾದಿಗಳೂಡನೆ ತಿರುಗಿ ಅವರಲ್ಲಿರುವ ವಿದ್ಯೆಯನ್ನೆಲ್ಲಾ ಅರೆದು ಕುಡಿದುದು, ಎಲ್ಲವನ್ನೂ ತನ್ನ ಶಕ್ತಿ ಮೀರಿದ ಕಲ್ಪನೆಯಿಂದ ವಿವರಿಸಿದ. "ಅಲ್ಲಿದ್ದ ಬ್ರಹ್ಮರಾಕ್ಷಸಗಳನ್ನು ಹೊಡೆದು ಹೊಡೆದು ಸೋಲಿಸುವ ರೀತಿಯನ್ನೂ ನೀವೇ ನೋಡಬೇಕಾಗಿತ್ತು" ಎಂದು ಹೆದರಿಸಿದ. ಕೊನೆಯಲ್ಲಿ ತೃಪ್ತಿಯ ನಗೆಯನ್ನು ಸೂಸುತ್ತಾ ಮೇಲೆದ್ದು "ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ ಅಂತ ಇಟ್ಟುಕೊಳ್ಳಿ. ಏನೋ ಕಲಿತ ವಿದ್ಯೆಯಿಂದ ನಮ್ಮ ಜನದ ಸೇವೆಮಾಡಬೇಕು ಅನಿಸ್ತು ಬಂದೆ. ಅದಿರಲಿ ಇದನ್ನು ಈಗಲೇ ಯಾರಿಗೂ ಹೇಳಬೇಡಿ. ಸುಮ್ಮನೇ ಬಂದು ತೊಂದರೆ ಕೊಡುತ್ತಾರೆ. ಸಮಯ ಬಂದಾಗ ಮುಂದೆಯೇ ತೋರಿಸಿದರಾಯಿತಲ್ಲ."

"ಇದನ್ನು ಯಾರಿಗೂ ಹೇಳಬೇಡಿ, ಯಾರಿಗೂ ಹೇಳಬೇಡಿ" ಎನ್ನುತ್ತಾ

ಆಚಾರಿ ಎಲ್ಲರ ಬಳಿಗೂ ತಾನೇ ಹೋಗಿ ಹೇಳಿಕೊಂಡು ಬಂದ. ಜನಗಳಲ್ಲಿ ಗುಜು ಗುಜು ಪ್ರಾರಂಭವಾಯಿತು. ಸಾಧ್ಯವಾದಷ್ಟು ದೊಡ್ಡ ಭೂತಕನ್ನಡಿಗಳ ಮೂಲಕವೇ ವಿಷಯದ ವಿವರ ಪ್ರಸಾರವಾಯಿತು. ಯಾರ ಬಾಯಲ್ಲಿ ನೋಡಿದರೂ ಆಚಾರಿಯ ಮಾತೇ ಮಾತಾಯಿತು.

ಈ ಮಧ್ಯದಲ್ಲಿ ಆಚಾರಿಗೆ ಪೂಜಾರಪ್ಪನೆಂಬ ಬಿರುದು ಬೇರೆ ಗಂಟುಬಿದ್ದಿತ್ತು. ಅದಕ್ಕೆ ಕಾರಣವಿಷ್ಟೇ. ಆತನು ಬಾಬಾಬುಡನ್‌ಗಿರಿಯಿಂದ ಬರುವಾಗ ಎಲ್ಲಿಲ್ಲದ ಭಕ್ತಿರಸವನ್ನು ತುಂಬಿಕೊಂಡು ಬಂದಂತೆ ಕಾಣುತ್ತಿತ್ತು. ಬೆಳಿಗ್ಗೆ ಎದ್ದು ಸ್ನಾನ ಮಾಡಿ ಹೊರಟನೆಂದರೆ ಹನುಮಂತನ ಪೂಜೆ ಮುಗಿಸುವಷ್ಟರಲ್ಲಿ ಆ ಹನುಮಂತನಿಗೆ ಸಾಕುಬೇಕಾಗಿ ಹೋಗುತ್ತಿತ್ತು. ಈತ ತುಂಬುತ್ತಿದ್ದ ಕುಂಕುಮದ ಭಾರವನ್ನೂ ಹೂವಿನ ವಾಸನೆಯನ್ನೂ ತಡೆಯಲಾರದೆ ಮೊದಲೇ ಓರೆಯಾದ ಮುಖವನ್ನು ಇನ್ನೂ ಓರೆಮಾಡಿದರೂ ಈತನು ಲಕ್ಷಿಸುತ್ತಿರಲಿಲ್ಲ. ಅದನ್ನು ನೋಡಿದವರು "ನೋಡಪ್ಪ ಪೂಜೆ ಅಂದರೆ ಇದು, ನಮ್ಮ ಆಚಾರ್ರು 'ಪೂಜಾರಪ್ಪ' ಎನ್ನುವ ಹೆಸರಿಗೆ ಯೋಗ್ಯರು" ಎಂದರು. ಬರುಬರುತ್ತಾ ಅದೇ ಹೆಸರಿನಿಂದ ಕರೆಯತೊಡಗಿದರು. ಅದೇ ಹೆಸರೆನ್ನುವಷ್ಟರಮಟ್ಟಿಗೆ ರೂಢವಾಯಿತು.

ಇದುವರೆಗೂ ಸುಮ್ಮನೆ ಕಥೆಯನ್ನು ಕೇಳುತ್ತಿದ್ದ ನಾನು "ಓಹೋ ಹೀಗೋ ಮಾನಾಚಾರಿ ಪೂಜಾರಪ್ಪನಾದದ್ದು" ಎಂದೆ.

ಸ್ನೇಹಿತ ಮುಂದುವರಿದ: "ಅಷ್ಟೇ ಅಲ್ಲ. ಅವನ ಚತುರತೆಗೆ ಎಲ್ಲರೂ ಮಾರು ಹೋದರು. ಕೆಳದರ್ಜೆಯ "ಕಾಟಿಗರ" ಜನರಿಗಂತೂ ಪೂಜಾರಪ್ಪನೆಂದರೆ ಸಾಕ್ಷಾತ್ ದೇವರು . . . ಅವನ ಮಾತು ಸುತ್ತಮುತ್ತಲ ಹಳ್ಳಿಗೆಲ್ಲಾ ಹಬ್ಬಿತು. ಇಂದು ಇಲ್ಲಿ ಮಂತ್ರಮಾಡಿದ. ನಾಳೆ ಅಲ್ಲಿ ದೆವ್ವನ್ನ ಬಿಡಿಸಿದ. ಇಂದು ಇವರನ್ನು ಬದುಕಿಸಿದ . . . ಹೀಗೇ ಪೂಜಾರಪ್ಪ ಮುಟ್ಟಿದಲ್ಲಿ ಹುಸಿಯೇ ಇಲ್ಲ ಎಂಬ ಹೆಸರನ್ನು ಗಳಿಸಿಬಿಟ್ಟ."

"ಈ ನಮ್ಮ ಬೆಪ್ಪ ಜನಗಳನ್ನು ನಂಬಿಸುವುದು ಬಹಳ ಸುಲಭ." ಆ ಹಳ್ಳಿಯ ಸಮಾಜವೇ ನನ್ನ ಆಕ್ಷೇಪಣೆಗೆ ಗುರಿಯಾಯಿತು.

"ಬರೀ ನಂಬಿಗೆ ಅಂತ ಅಲ್ಲ. ಆ ಒಂದು ವರ್ಷದಲ್ಲಿ ಏನಾದರೂ ಅಲ್ಪಸ್ವಲ್ಪ ಕಲಿತುಕೊಂಡು ಬಂದಹಾಗೂ ಕಾಣುತ್ತಿತ್ತು. ಕೆಲವುಕಡೆ ನಿಜವಾಗಿಯೂ ಒಳ್ಳೇ ಕೆಲಸವನ್ನೇ ಮಾಡಿದ. ಆದರೆ ಅವನು ಕಲಿತಿರುವ ವಿದ್ಯೆಗಳು ಸುಲಭವಾಗಿ ಅವನನ್ನು ಅಡ್ಡಹಾದಿಗೆಳೆಯಲು ಸಹಾಯಕವಾದುವು. ಆತ ಅವುಗಳ ಬಲೆಗೆ ಬಿದ್ದ."

"ಅಂದರೆ?" ನಾನು ಕೇಳಿದೆ.

"ಅಂದರೆ ಆಜನ್ಮ ಬ್ರಹ್ಮಚಾರಿಯ ಆ ಉಪಾಸಕ ದೆವ್ವವನ್ನು ಬಿಡಿಸುವ

ಸೋಗಿನಿಂದ ಹೆಣ್ಣುಗಳನ್ನು ಭೋಗಿಸತೊಡಗಿದ. ಆ ದೆವ್ವದಿಂದ ಬಿಡುಗಡೆ ಹೊಂದಿ ಈ ದೆವ್ವಕ್ಕೆ ಬಲಿಯಾಗಬೇಕಾಯಿತು. ಜನರ ಮುಗ್ಧ ಸರಳತೆಯನ್ನು ದುರುಪಯೋಗ ಪಡಿಸಿಕೊಂಡ."

"ಏನೋ ಅಪ್ಪಾ ನೀನು ಹೇಳಿದ್ದೇನೋ ನನಗೆ ಅರ್ಥವಾಗಲಿಲ್ಲ" ಎಂದೆ ನಾನು ಕುತೂಹಲದಿಂದ.

"ಹೇಳುತ್ತೇನೆ ಕೇಳು ಕೊನೆಯಲ್ಲಿ ಆತ ಸಿಕ್ಕುಬಿದ್ದ ಘಟನೆಯನ್ನು ಮಾತ್ರ ಹೇಳುತ್ತೇನೆ:

"ಒಮ್ಮೆ ಅಂದರೆ ಮೊದಲೇ ಹೇಳಿದೆನಲ್ಲ ಈಗ ಐದಾರು ತಿಂಗಳ ಹಿಂದೆ ಆಚೆ ಹಳ್ಳಿಯ ಗೌಡರ ಮಗಳು ಒಳ್ಳೇ ಹದಿನೆಂಟರ ಹುಡುಗಿ, ತುಂಬಾ ರೂಪವಂತೆ ಅಂತಲೂ ಇಟ್ಟುಕೋ, ಆಕೆಗೆ ಏನೋ ಖಾಯಿಲೆಯಾಯಿತಂತೆ. ಆ ಕುರುಬ ಗೌಡನಿಗೆ ಇಲ್ಲಿದ್ದಾಳಲ್ಲ ಕರಿಯವ್ವ ಈಕೆಯಮೇಲೆ ತುಂಬಾ ಭಕ್ತಿ. ಬಂದವನೇ ಆಕೆಯನ್ನು ಹೊರಡಿಸಿಕೊಂಡು ಹೋದ."

"ಆ ಖಾಯಿಲೆಗೂ ಈ ದೇವರು ಕರಿಯವ್ವನಿಗೂ ಏನಪ್ಪ ಸಂಬಂಧ" ನಾನು ನಗುತ್ತ ಕೇಳಿದೆ.

"ಔಷಧಿ ಮಾಡಿಸಲಿಕ್ಕೇ ಅಲ್ಲವೆ ದೇವರನ್ನು ಹೊರಡಿಸುವುದು. ಅದನ್ನು ನೀನು ನೋಡಿಲ್ಲ. ನಾಲ್ಕು ಜನ ಕಟ್ಟುಮಸ್ತಾದ ಆಳುಗಳು ದೇವರನ್ನು ಹೊರುತ್ತಾರೆ. 'ನೋಡು, ಇಂತಹವರಿಗೆ ಖಾಯಿಲೆಯಾಗಿದೆ ಅವರಿಗೆ ಏನು ಔಷಧಿ ಕೊಡಬೇಕೆಂಬುದನ್ನು ನೀನೇ ತೋರಿಸಿ ಕಾಪಾಡಬೇಕು'—ಎಂದು ಬೇಡಿಕೊಳ್ಳುತ್ತಾರೆ. ಸರಿ ದೇವರು ಅದನ್ನು ಹೊತ್ತುಕೊಂಡವರನ್ನು ತಾನೇ ನೂಕಿಕೊಂಡು ಹೋಗುತ್ತದೆ. ಅದು ಕರೆದುಕೊಂಡು ಹೋದಕಡೆ ಇವರು ಹೋಗುತ್ತಾರೆ. ಎಲ್ಲಿಯೋ ಒಂದುಕಡೆ ನಿಲ್ಲುತ್ತದೆ ಅಂತ ಇಟ್ಟುಕೋ. ಅಲ್ಲಿಯೇ ಔಷಧಿಗೆ ಬೇಕಾದ ಸಾಮಾನು ಇದೆಯೆಂದು ಅರ್ಥ. ಅಲ್ಲಿದ್ದ ಪ್ರತಿಯೊಂದು ವಸ್ತುವನ್ನೂ ಮುಟ್ಟಿ ಮುಟ್ಟಿ 'ಇದಾ? ಇದಾ?' ಎಂದು ಪ್ರಶ್ನಿಸುತ್ತಾರೆ. ಅದೇ ಆಗಿದ್ದರೆ ದೇವರು ಇದ್ದಕ್ಕಿದ್ದಂತೆಯೇ ಹೆಚ್ಚು ಭಾರವನ್ನು ಹಾಕಿ ಹೊತ್ತವರನ್ನು ಕೆಳಕ್ಕೆ ಅದುಮುತ್ತದೆ. ಆ ವಸ್ತುವನ್ನು ತೆಗೆದುಕೊಂಡು ಮುಂದೆ ನಡೆಯುತ್ತಾರೆ. ಹೀಗೆ ಅನೇಕ ಬೇರುಗಳನ್ನೂ, ಗಿಡದ ಸೊಪ್ಪುಗಳನ್ನೂ ಆರಿಸಿಕೊಂಡು ದೇವರು ಹಿಂದಿರುಗುತ್ತದೆ. ಅದರಿಂದ ಔಷಧಿ ತಯಾರಿಸಿಕೊಡುತ್ತಾರೆ. ತಯಾರಿಸುವಾಗಲೂ ಅಷ್ಟೇ. "ಇದನ್ನು ಅರೆಯಬೇಕಾ? ಇದನ್ನು ತೇಯಬೇಕಾ?' ಎಂಬ ಪ್ರಶ್ನೆಗಳನ್ನು ಕೇಳುತ್ತಾರೆ. ದೇವರು ಯಾವುದೋ ಒಂದಕ್ಕೆ ತಲೆಹಾಕುತ್ತದೆ. ಹಾಗೆ ಮಾಡಿಕೊಡುತ್ತಾರೆ."

"ಭೇಷ್, ಭೇಷ್, ನಾನು ಏನೋ ಅಂತಿದ್ದೆ. ಈ ಜನಗಳೇ ಉತ್ತಮ. 'ಕಾಯಕವೇ ಕೈಲಾಸ' ಎಂಬಂತೆ ದೇವತೆಗಳ ಕೈಯಿಂದಲೂ ದುಡಿಸಿಕೊಳ್ಳುವುದನ್ನು ಕಲಿತಿದ್ದಾರೆ" ಎಂದು ನಗತೊಡಗಿದೆ. ಮತ್ತೆ "ಹೋಗಲಿ ಮುಂದೆ ಹೇಳಪ್ಪ" ಎಂದೆ.

ಕಥೆ ಮುಂದುವರಿಯತೊಡಗಿತು: ಹೀಗೆ ಆ ಕರಿಯವ್ವನಿಂದ ಔಷಧಿಯನ್ನು ಮಾಡಿಸಿಕೊಟ್ಟನಂತೆ ಗೌಡ. ಏನೂ ಪರಿಹಾರ ಕಾಣಲಿಲ್ಲ ಅಂದರು. ಕೊನೆಗೆ ಒಂದು ತೀರ್ಮಾನಕ್ಕೆ ಬಂದರು: ಎಂತಹ ಖಾಯಿಲೆಯಾದರೂ ಕರಿಯವ್ವನ ಔಷಧಿ ಬಿದ್ದಮೇಲೆ ಓಡಿಹೋಗಲೇ ಬೇಕು. ಹಾಗಾದರೂ ಹೋಗಲಿಲ್ಲ ಅಂದ ಮೇಲೆ ಇದು ಖಾಯಿಲೆಯಲ್ಲ ಎಂಬುದಾಗಿ ನಿಶ್ಚಯಿಸಿ ಪೂಜಾರಪ್ಪನ ಬಳಿಗೆ ಬಂದರು. ಹೀಗಾಗುತ್ತದೆಂದು ಆಚಾರಿ ಕಾಯುತ್ತಲೇ ಇದ್ದ. ಆದರೂ ಮೊದ ಮೊದಲು ಸ್ವಲ್ಪ ಬಿಗುವಾಗಿಯೇ ವರ್ತಿಸಿದ. "ನೀವು ಒಂದನ್ನು ಸಂಬುವವರಲ್ಲ ನಾಳೆ ನನ್ನ ಮೇಲೂ ಅಪನಂಬಿಕೆ ಮಾಡಿದರೆ" ಎಂದು ರಾಗ ಎಳೆದ. ಕೊನೆಗೆ ಗೌಡರೇ ಬಂದು ಉಪಚರಿಸಿದಮೇಲೆ "ನಡೆಯಿರಿ ಹಾಗಾದರೆ ಬರುತ್ತೇನೆ" ಎಂದು ಹೊರಟ.

ಪೂಜಾರಪ್ಪ ಹುಡುಗಿಯನ್ನು ನೋಡಿದ. ಒಳ್ಳೇ ತುಂಬು ಯೌವನದಲ್ಲಿದ್ದ ಆ ಚೆಲುವೆ ನಸುಬಾಡಿದ್ದರೂ ಅದೂ ಒಂದು ರೀತಿಯ ಮನೋಹರತೆಯನ್ನುಂಟು ಮಾಡಿತ್ತು. ಕುರುಬರ ಜಾತಿಯಲ್ಲಿ ಹುಟ್ಟುವ ಹುಡುಗಿಯೇ ಅಲ್ಲ ಇದು" ಎನಿಸಿತು ಅವನ ಮನಸ್ಸಿಗೆ.

ಗೌಡರನ್ನು ನೋಡಿದ. ಅವರು ಇವನನ್ನೇ ನೋಡುತ್ತಿದ್ದರು. ಭರಮಸೂ (ಇವನೇ ಗೌಡರ ಅಳಿಯ) ಇವನನ್ನೇ ದಿಟ್ಟಿಸುತ್ತಿದ್ದ. ಹುಡುಗಿಯನ್ನು ಹಿಡಿದು ಕೊಂಡಿದ್ದ ಹೆಂಗಸರ ನಾಲ್ಕು ಕಣ್ಣುಗಳು ಇವನ ಮೇಲಿದ್ದುವು. ದೂರದ ಬಾಗಿಲಿನ ಹತ್ತಿರ ಆಳುಗಳು ನಿಂತುಕೊಂಡು ಈ ಕಡೆಯೇ ನೋಡುತ್ತಿದ್ದರು.

ಪೂಜಾರಪ್ಪ ಮಾತನಾಡಿದ: ಗೌಡರೇ, ನೀವು ಹೇಳಿದ ಹಾಗೆ ಇದರಲ್ಲಿ ಗಾಳಿದೋಷವೂ ಇದೆ. ನಾಡಿಪರೀಕ್ಷೆ ಮಾಡುತ್ತೇನೆ ತಾನೇ ಗೊತ್ತಾಗಿ ಹೋಗುತ್ತಲ್ಲ, ಎಂದು ಸ್ವಲ್ಪ ಮುಂದಕ್ಕೆ ಸರಿಯುತ್ತ ಆಕೆಯ ಮುಂಗೈಯನ್ನು ಹಿಡಿದುಕೊಂಡ. ಮೈಯಲ್ಲಾ 'ಜುಂ' ಎಂದಂತಾಯಿತು. ಅದನ್ನು ತೋರ್ಪಡಿಸದೆ "ಕರಿಯವ್ವ, ಸಲ್ಪ ತಲೆ ಎತ್ತು, ಇಲ್ಲಿ ನೋಡಿ ನನ್ನನ್ನು." ಹುಡುಗಿ ನಾಚಿಕೆಯಿಂದ ತಲೆ ಎತ್ತಿತು. ನಸುಬಾಡಿದ ಸುಂದರ ಮುಖಕ್ಕೆ ನಾಚಿಕೆಯ ಮೆರುಗು ಮನೋಹರವಾಗಿತ್ತು.

ಆಕೆಯ ಹೆಸರನ್ನು ಮತ್ತೊಮ್ಮೆ ಮನಸ್ಸಿನಲ್ಲಿಯೇ ಉಚ್ಚರಿಸುತ್ತಾ 'ಹುಂ, ಚಿನ್ನದಂತಹ ಹುಡುಗಿಗೆ ಕರಿಯವ್ವ ಎಂದೇ ಕರೆಯಬೇಕು. ಇದ್ದಲಿನೊಡನೆ ಸ್ಪರ್ಧೆ

ಹೂಡಿದ್ದರೂ ಚಿಂತೆಯಿಲ್ಲ ಕೆಂಚವ್ವ ಎನ್ನುತ್ತಾರೆ' ಎಂದು ಮನಸ್ಸಿನಲ್ಲಿಯೇ ನಕ್ಕ. ದಿಟ್ಟತನದೊಡನೆ ನಾಚಿಕೆಯು ಬೆರತ ಆಕೆಯ ವಿಶಾಲವಾದ ಕಣ್ಣುಗಳನ್ನು ನೋಡುತ್ತಿದ್ದ. ಕೈಯ್ಯನ್ನು ಇನ್ನೂ ಬಿಟ್ಟಿರಲಿಲ್ಲ. ಗೌಡರಾದಿಯಾಗಿ ಸರ್ವರೂ ಪೂಜಾರಪ್ಪನ ಆ ಬಹಳ ಗಹನವಾದ ಪರೀಕ್ಷೆಯನ್ನು ತಬ್ಬಿಬ್ಬಾಗಿ ನೋಡುತ್ತಿದ್ದರು.

ಪೂಜಾರಿ ಏನನ್ನೋ ಯೋಚಿಸಿ ನಿಶ್ಚಯಿಸಿ ಒಂದು ಲೋಟದಲ್ಲಿ ನೀರನ್ನು ತರಿಸಿಕೊಂಡ. ಪಿಟಪಿಟ ಎಂದು ಅದನ್ನು ಮಂತ್ರಿಸಿದ. ತನ್ನಲ್ಲಿದ್ದ ಒಂದು ಬೇರನ್ನು ಹೊರತೆಗೆದು ಅದೇ ನೀರನ್ನು ಹಾಕಿ ಸ್ವಲ್ಪ ತೇದು ಅದನ್ನು ನೀರಿನಲ್ಲಿ ಬೆರಸಿ ಆಕೆಗೆ ಕುಡಿಸಿದ. ಮತ್ತು ಗೌಡರೊಡನೆ ಪೂಜಾರಿ ತನ್ನ ಹರಿತವಾದ ನಾಲಗೆಯನ್ನು ಆಡಿಸಿ ಅದು ಖಾಯಿಲೆಯಲ್ಲವೆಂದೂ ಗುಪ್ತವಾದ ದುಷ್ಟ ಕಾಳಿಕಾಶಕ್ತಿ ಎಂಬುದಾಗಿಯೂ ಹೇಳಿ, ಅದು ಹುಚ್ಚುಚ್ಚಾಗಿ ಹೊರಗೆ ಕುಣಿಯದಿದ್ದರೂ ಪ್ರಾಣವನ್ನೇ ಹೀರುವಷ್ಟು ಭಯಂಕರವಾದುದೆಂದೂ ಬೆದರಿಕೆಯನ್ನು ಹಾಕಿ ಗೌಡರನ್ನು ತನ್ನ ಹಿಡಿತಕ್ಕೆ ಎಳೆದುಕೊಂಡ. ಮತ್ತೆ: "ನೋಡಿ ಅದು ಬಹಳ ಅಪಾಯಕರವಾದ ಕೆಲಸವೇ. ಆದರೂ ನನ್ನ ಮಾತಿನಲ್ಲಿ ನಿಮಗೆ ವಿಶ್ವಾಸವಿರುವುದಾದರೆ ನಿಮಗಾಗಿ ಈ ಕೆಲಸಕ್ಕೆ ಕೈಹಾಕುತ್ತೇನೆ" ಎಂದ. ಹೆಂಗಸರು ಗಾಬರಿಯಾಗಿ ನೋಡುತ್ತಿದ್ದರು.

"ಛೆ. ಛೆ. ಎಂಥ ಮಾತು ಪೂಜಾರಪ್ಪನವರೇ. ನನಗಿರುವುದು ಒಬ್ಬಳೇ ಮಗಳು ಅವಳಿಗೆ ಹುಷಾರಾದರೆ ಸಾಕು. ದುಡ್ಡಿನ ವಿಷಯವನ್ನೇನೂ ಯೋಚಿಸಬೇಡಿ."

"ಆ ವಿಷಯ ನನ್ನ ಯೋಚನೆಯಲ್ಲಿಯೇ ಇಲ್ಲ ಬಿಡಿ. ಮುಂದೆ ಎಂಥೆಂಥ ವಿಷಯಗಳೋ ಇರುವಾಗ ಇದಾವ ಮಹಾವಿಷಯ. ಏನಪ್ಪ ಭರಮಣ್ಣ?"

"ಓ, ನಿಮಗೆ ಏನು ಬೇಕು ಅದನ್ನು ಒದಗಿಸುವುದಕ್ಕೆ ನಾನೇ ಸಿದ್ಧವಾಗಿದ್ದೇನೆ" ಎಂದ ಪಕ್ಕದಲ್ಲಿದ್ದ ಗೌಡರಳಿಯ.

"ಅಷ್ಟು ಮಾಡಿಬಿಡು ಸಾಕು" ಎಂದು ಪೂಜಾರಿ ಮುಂದೆ "ನೀನು ಒದಗಿಸಲು ಸಿದ್ಧವಾಗಿಲ್ಲದ್ದನ್ನು ನಾನೇ ಒದಗಿಸಿಕೊಳ್ಳುತ್ತೇನೆ" ಎಂದ ಮನಸ್ಸಿನಲ್ಲಿ.

ಪೂಜಾರಿ ಮನೆಗೆ ಬರುತ್ತಿದ್ದಂತೆಯೇ ಅವನ ಆಪ್ತಸ್ನೇಹಿತನೊಬ್ಬನು ಒಳಗೆ ಬಂದ. ಪೂಜಾರಿಗೆ ಸ್ನೇಹಿತರ ತಂಡವೇ ಇದ್ದರೂ ಅವರಲ್ಲಿ ತನ್ನ ಅಂತರಂಗಕ್ಕೆ ಬಿಟ್ಟುಕೊಂಡಿದ್ದವನೆಂದರೆ ಇವನೊಬ್ಬನೇ. ಒಬ್ಬರಿಗಿಂತ ಇಬ್ಬರು ಲೇಸೆಂದು ತನ್ನ ಕಾರ್ಯಗಳಲ್ಲಿ ಈತನ ಸಲಹೆಯನ್ನು ತೆಗೆದುಕೊಳ್ಳುತ್ತಿದ್ದ. ಅವನನ್ನು ಕಂಡು ಪೂಜಾರಿ: "ಬಲವಾದ ಬೇಟೆಯೇ ಬಿದ್ದಿದೆ ಕಣಯ್ಯ ಬಲೆಯಲ್ಲಿ" ಎಂದ.

"ದೊಡ್ಡ ಸಹವಾಸವಪ್ಪ ಬಹಳ ಹುಷಾರಾಗಿರಬೇಕು," ಸ್ನೇಹಿತ ಎಚ್ಚರಿಸಿದ.

"ಅದನ್ನು ಯೋಚಿಸಬೇಡ. ನಾನು ಕೈಯಿಟ್ಟಮೇಲೆ ಹುಸಿಯೇ ಇಲ್ಲ. ಗೌಡನಂತೂ ಸಂಪೂರ್ಣವಾಗಿ ನಂಬಿಬಿಟ್ಟಿದ್ದಾನೆ. ನಾಳೆ ಇನ್ನು ಸ್ವಲ್ಪ ಆರ್ಭಟವನ್ನು ಹೆಚ್ಚಾಗಿ ಮಾಡಿ 'ಡಂಗು' ಹೊಡೆಸಿಬಿಡುತ್ತೇನೆ. ಮನೆಯಿಂದ ಎಲ್ಲರನ್ನೂ ಒಂದು ಫರ್ಲಾಂಗು ದೂರ ಇರುವಂತೆ ಮಾಡುತ್ತೇನೆ ನೋಡಿಕೋ."

"ಅದರ ಜೊತೆಗೆ ಹುಡುಗಿಯ ವಿಚಾರ ಸ್ವಲ್ಪ ಎಚ್ಚರಿಕೆಯಿಂದಿರು . . . ಗೌಡ ಹಣಸ್ಥ. ಚನ್ನಾಗಿ ಕಸಿಯಬೇಕು."

"ಎಷ್ಟೇ ಕೊಡಲಿ ನಿನಗೊಂದು ಪಾಲು ಇದ್ದೇ ಇದೆಯಲ್ಲ" ಎಂದ ಆಚಾರಿ.

"ಒಳ್ಳೇ ವಿದ್ಯೆ ಕಲಿತುಕೊಂಡು ಬಂದೆಕಣೋ ಆಚಾರಿ. ಹೊನ್ನಿಗೆ ಹೊನ್ನೂ ಆಯ್ತು . . ." ಎಂದು ನಿಲ್ಲಿಸಿದ.

"ಮತ್ತೇನು? ಹೆಣ್ಣಿಗೆ ಹೆಣ್ಣೂ ಆಯ್ತು ಅಂತೀಯ? ಇನ್ನು ಮಣ್ಣು ಒಂದು ಉಳೀತು ಅಲ್ಲವೇ ?"

"ಸಿಕ್ಕಿಬಿದ್ದರೆ ಅದೇಗತಿ ಅನ್ನು" ಎಂದು ನಗುತ್ತ ಸ್ನೇಹಿತ ಎದ್ದುನಿಂತ. ಪೂಜಾರಿಯ ಹೃದಯ ಬೆಚ್ಚಿತು. "ಛೇ. ಹಾಗೆಲ್ಲಾ ಅಪಶಕುನ ಆಡಬಾರದು" ಎಂದು ಸ್ನೇಹಿತನನ್ನು ಬೀಳ್ಕೊಂಡ. ಸ್ನೇಹಿತನ ಆ ಕೊನೆಯ ಮಾತು ಬಹಳ ಹೊತ್ತು ಆತನ ಮನಸ್ಸಿನಲ್ಲಿ ಕೆಲಸಮಾಡುತ್ತಿದ್ದಂತೆ ಕಾಣಿಸಿತು.

ಬೆಳಗಾಗುತ್ತಿದ್ದಂತೆಯೇ ಭರಮಣ್ಣ ಓಡಿಬಂದ: "ಏನ್ ಹೇಳ್ಲಿ ಪೂಜಾರಪ್ಪನವರೇ, ಹುಚ್ಚುಹುಚ್ಚಾಗಿ ಕುಣಿಯಲಿಕ್ಕೆ ಹತ್ತಿಬಿಟ್ಟಿದ್ದಾಳೆ ಯಾರು ಎದುರಿಗೆ ಹೋದರೂ ಬೈಯುವುದು 'ನೀವೇ ನನಗೆ ಮಾಡಿದವರು' ಎಂದು ಹೊಡೆಯುವುದಕ್ಕೆ ಬರುವುದು, ಹುಚ್ಚಾಬಟ್ಟೆ ಕೂಗಿಕೊಳ್ಳುವುದು, . . . ಏನ್ ಸ್ವಾಮಿ, ಯದ್ವಾತದ್ವಾ . . ."

ಇದನ್ನು ನಿರೀಕ್ಷಿಸಿಯೇ ಇದ್ದ ಪೂಜಾರಿ ಅವನನ್ನು ಸಮಾಧಾನಪಡಿಸುತ್ತಾ, ಹೊರಟ. ಪೂಜಾರಿ ಬರುವ ವೇಳೆಗೆ ಮನೆಯ ಮುಂದೆ ಜನಜಂಗುಳಿ ಜಮಾಯಿಸಿ ಗುಜುಗುಜು ಎಬ್ಬಿಸಿತ್ತು. ಮನೆಯವರೆಲ್ಲಾ ದಿಗ್ಭ್ರಾಂತರಾಗಿ ಹೋಗಿದ್ದರು. ಪೂಜಾರಪ್ಪ ಗೌಡರಿಗೆ ಧೈರ್ಯವನ್ನು ತುಂಬುತ್ತಾ ಒಳಗೆ ಹೋದ. ಆ ವೇಳೆಗೆ ಹುಡುಗಿ "ಯಾವನೇ ಅವನು ? ನನ್ನ ಹಾಳ್‌ಮಾಡ್ತಾನೆ. ಅಯ್ಯೋ ನಿಮ್ಮನ್ನ ಕೊಂದುಹಾಕಿಬಿಡ್ತೀನಿ. ನನ್ನನ್ನು ಬಲಿ ಕೊಡ್ತೀರಾ?" ಎಂದು ಹುಚ್ಚುಚ್ಚಾಗಿ ಕೂಗುತ್ತಿತ್ತು. ಪೂಜಾರಿಯ ಮನಸ್ಸಿಗೆ 'ಕೆಂಜಗ' ಕಡಿದಂತಾಯಿತು.

ಅಷ್ಟರಲ್ಲಿ ಭರಮಣ್ಣ ಒಳಗೆ ಹೋದ, ಇಬ್ಬರು ಹೆಂಗಸರು ಮತ್ತು ಭರಮಣ್ಣ ಮೂವರೂ ಹುಡುಗಿಯನ್ನು ಬಲವಾಗಿ ಹಿಡಿದುಕೊಂಡು ಬಂದರು. ಹುಡುಗಿ ಅತ್ತ,

ಇತ್ತು, ಎಳೆದಾಡುತ್ತಾ ಬಿಡಿಸಿಕೊಳ್ಳಲು ಯತ್ನಿಸುತ್ತಿತ್ತು. ಬಲಾತ್ಕಾರದಿಂದ ಎಳೆದು ತಂದು ಅದುಮಿ ಕುಳ್ಳಿರಿಸಿದರು.

ಪೂಜಾರಪ್ಪನ ಕರ್ತವ್ಯಬುದ್ಧಿ ಜಾಗ್ರತವಾಯಿತು. ಹುಡುಗಿಯನ್ನು ದಿಟ್ಟಿಸಿ ನೋಡಿದ ಮುಖ ಗಂಭೀರವಾಯಿತು. ಇದ್ದಕ್ಕಿದ್ದಂತೆಯೇ ಸಿಟ್ಟಿಗೆದ್ದವನಂತೆ ಕೈಲಿದ್ದ ಕೋಲನ್ನು ನೆಲಕ್ಕೆ ಅಪ್ಪಳಿಸಿದ. ಜೊತೆಜೊತೆಯಲ್ಲಿಯೇ 'ಏ ಏ ಏ' ಎಂಬ ಕರ್ಕಶ ಧ್ವನಿಯಿಂದಲೂ ಮನೆಯನ್ನು ತುಂಬಿದ. ಪಕ್ಕದಲ್ಲಿದ್ದವರೆಲ್ಲಾ ಬೆಚ್ಚಿಬಿದ್ದರು. ಎಷ್ಟೋ ಜನಕ್ಕೆ ಪ್ರಾಣ ಕಂಠದವರೆಗೂ ಬಂದಂತಾಯಿತು. ಹೊರಗೆ ನಿಂತಿದ್ದವರಲ್ಲನೇಕರು ಮನೆಯನ್ನು ಬಿಟ್ಟು ಸ್ವಲ್ಪ ದೂರಕ್ಕೆ ಸರಿದು ಓಡಿಹೋಗುವುದಕ್ಕೆ ಸರಿಯಾದ ಸ್ಥಳವನ್ನು ಹುಡುಕಿಕೊಂಡು ನಿಂತರು.

ಪೂಜಾರಿ ದೀರ್ಘವಾಗಿ ಮತ್ತೊಮ್ಮೆ ಕೂಗಿದ. "ಯಾರು ನೀನು? ಹೂಂ, ಯಾರು ನೀನು? ಬೊಗಳು. ಅ್ಹಂ. ಮಾತನಾಡುವುದಿಲ್ಲವೇ? ನೋಡು ಹಾಗಾದರೆ" ಎಂದು ಬೆತ್ತವನ್ನು ನೆಲಕ್ಕೆ ಅಪ್ಪಳಿಸಿದ. ಬೂದಿಯನ್ನು ತರಿಸಿಕೊಂಡು ಮಂತ್ರಿಸಿ ಊದಿದ, ಮತ್ತೊಮ್ಮೆ ಕೂಗಿದ.

ಹುಡುಗಿ ಪಿಳಿಪಿಳಿ ಕಣ್ಣನ್ನು ಬಿಡುತ್ತಾ ಇವನನ್ನೇ ನೋಡುತ್ತಿದ್ದಳು. ಹಾಗೇ ಕಿಲಕಿಲನೆ ನಗತೊಡಗಿದಳು. ನಗು ಅಟ್ಟಹಾಸವಾಗಿ ಬುಗ್ಗೆಬುಗ್ಗೆಯಾಗಿ ಚಿಮ್ಮತೊಡಗಿತು. ಆ ಉನ್ಮಾದ ನಗುವನ್ನು ಕೇಳಿ ಎಷ್ಟೋ ಜನರಿಗೆ ಮೈರಕ್ತ ಹೆಪ್ಪುಗಟ್ಟಿದಂತಾಯಿತು. ನಗು ಗಕ್ಕನೆ ನಿಂತಿತು. ಹುಡುಗಿ ಕಿರಿಚಿದಳು:

"ಕಳ್ಳಪೂಜಾರಿ, ಏ ಕಳ್ಳಪುಜಾರಿ, ನನ್ನನ್ನು ನಾಶಮಾಡುವುದಕ್ಕೆ ಬಂದಿದ್ದೀಯ. ನನ್ನನ್ನು ಕೆಡಿಸುವುದಕ್ಕೆ ಬಂದಿದ್ದೀಯಾ? ನಾನು ಯಾರು? ನಾನು ಯಾರು? ನಾನು ಶಕ್ತಿ, ಕಾಳಿ, ದುರ್ಗೆ. ನನ್ನನ್ನು ಮುಟ್ಟುವೆಯಾ? ನನ್ನನ್ನು . . ." ಎಂದು ಹಿಡಿತವನ್ನು ಬಿಡಿಸಿಕೊಳ್ಳುತ್ತಾ ಒದ್ದಾಡತೊಡಗಿದಳು.

ಪೂಜಾರಿಗೆ ಎದೆಯಲ್ಲಿ ಯಾರೋ ಜಾಡಿಸಿ ಒದ್ದಂತಾಯಿತು. ಆದರೆ ಅದನ್ನು ಅದುಮಿಟ್ಟುಕೊಂಡು "ನೋಡಿದಿರಾ ಗೌಡರೇ ಹೇಗೆ ಬರುತ್ತದೆ ದಾರಿಗೆ? ಬಹಳ ಸಿಟ್ಟು ಇದಕ್ಕೆ ಎಲ್ಲಿ ನಡೆದರೂ ನನ್ನ ಹತ್ತಿರ ನಡೆಯುವುದಿಲ್ಲ ಇದರ ಪುಂಗಿ" ಎನ್ನುತ್ತಾ ಹೊರಗೆ ಬಂದ.

ಮತ್ತೊಮ್ಮೆ ಕಾಳಿಕಾಭೂತದ ಲಕ್ಷಣಗಳನ್ನು ವಿವರಿಸಿ, ಅದನ್ನು ಓಡಿಸಲು ಈ ದಿನ ಸಾಯಂಕಾಲವೇ 'ಹೋಮಯಜ್ಞ'ವನ್ನು ಮಾಡುವುದಾಗಿ ಹೇಳಿದ. ಅದಕ್ಕಾಗಿ ಜಪತಪಾದಿಗಳನ್ನು ಉಪವಾಸನಿಯಮದಿಂದ ಮಾಡಬೇಕೆಂದೂ ಅದನ್ನು ಮುಗಿಸಿಕೊಂಡು ಸಾಯಂಕಾಲದ ವೇಳೆಗೆ ಬರುವುದಾಗಿಯೂ ಹೇಳಿಯೂ; ಹಣ್ಣು,

ಕಾಯಿ, ಎಲೆ, ಕೆಂಪುದಾಸವಾಳ, ಮುತ್ತಗದ ಹೂ, ಕುಂಕುಮ, ಮೊದಲಾದ ಸಾಮಾನುಗಳನ್ನು ಸಿದ್ಧಗೊಳಿಸುವುದಕ್ಕೆ ಹೇಳಿದ. ಅಲ್ಲದೆ ಮುಖ್ಯವಾದ ಇನ್ನೊಂದು ಮಾತನ್ನು ಗೌಡರ ಕಿವಿಯಮೇಲೆ ಈಗಲೇ ಹಾಕಿ ಅವರ ಒಪ್ಪಿಗೆಯನ್ನು ಪಡೆಯ ಬೇಕಾಗಿತ್ತು. ಅದಕ್ಕಾಗಿ ಪೀಠಿಕೆ ಹಾಕಿದ "ಗೌಡರೇ ಇನ್ನೊಂದು ಮಾತು . . ." ಎಂದು ಗೌಡರ ಮನೆಯ ಎರಡು ಪಕ್ಕಗಳಲ್ಲಿಯೂ ಸುತ್ತುಮುತ್ತು ನೋಡ ತೊಡಗಿದ.

"ಏಸು ಪೂಜಾರಪ್ಪನವರೇ ಏನು ?"

"ಏನೂ ಇಲ್ಲ. ನಿಮ್ಮ ಮನೆಗೆ ಹೊಂದಿಕೊಂಡೇ ಯಾವುದಾದರೂ ಮನೆ ಗಳಿವೆಯೇನೋ ಅಂತ ನೋಡಿದೆ" ಎಂದ.

"ಏಕೆ ?"

"ಇದ್ದರೆ ಕಷ್ಟ ನೋಡಿ. ಮನೆ ಬಿಟ್ಟು ಸುಮಾರು ನೂರು ಗಜ ಸುತ್ತಳತೆಯಲ್ಲಿ ಯಾರೂ ಇರಕೂಡದು. ಮನೆಯವರನ್ನೆಲ್ಲಾ ನೂರು ಗಜ ದೂರ ಕಳುಹಿಸಬಹುದು. ಆದರೆ ಪಕ್ಕದ ಮನೆಯೂ ತೀರಾ ಒತ್ತಿನಲ್ಲೇ ಇದ್ದರೆ ಅವರನ್ನು ಕಳುಹಿಸ ಬೇಕಾಗುತ್ತಿತ್ತು ಅಂತ ನೋಡಿದೆ."

"ಅಂದರೆ . . . ಮನೆಯಲ್ಲಿ ಯಾರೂ ಇರಕೂಡದು ?" ಗೌಡರು ಅನುಮಾನಿ ಸುತ್ತಾ ಕೇಳಿದರು.

"ಎಲ್ಲಿಯಾದರೂ ಉಂಟೇ ಗೌಡರೇ ? ಮೊದಲಿನ ಕೆಲಸಗಳನ್ನು ಮುಗಿಸುವ ವರೆಗೆ, ಆಹ್ವಾನಾದಿಗಳನ್ನು ಮಾಡುವ ವರೆಗೆ ಬೇಕಾದರೆ ಇರಬಹುದು. ಆದರೆ ಒಮ್ಮೆ ಪ್ರತಿಷ್ಠೆ ಮಾಡಿದೆ ಅಂದರೆ ಸುತ್ತಮುತ್ತ ಯಾರೂ ಇರಲೇಕೂಡದು. ಮನುಷ್ಯರಿರಲಿ ದನಕರುಗಳು ಕೂಡಾ ಇರಕೂಡದು. ಇದೇನು ಸಾಮಾನ್ಯ ದೆವ್ವವೇ, ಪ್ರಾಣವನ್ನು ಪಣವಿಡುವ ಕೆಲಸ ಇದು. ಒಂದು ಕಡೆ ಬೇತಾಳನ ಪ್ರತಿಷ್ಠೆ. ಇನ್ನೊಂದು ಕಡೆ ಹನುಮಂತನ ಸಾಕ್ಷಿ. ಇವುಗಳ ಸಮ್ಮುಖದಲ್ಲಿ ಕಾಳಿಯನ್ನು ಆಹ್ವಾನಿಸಿ, ಪ್ರತಿಷ್ಠಿಸಿ ಅದರಿಂದ ಹುಟ್ಟಿದ ಅಗ್ನಿಯಲ್ಲಿ ಕಾಳಿಕಾಭೂತವನ್ನು ಬಲಿಹಾಕಬೇಕು. ಇವುಗಳ ದೃಷ್ಟಿ ಬಿದ್ದರೆ ಯಾರಾದರೂ ಉಳಿದಾರೇ ?" ಪೂಜಾರಿ ತನ್ನ ಹರಿತವಾದ ನಾಲಗೆಯನ್ನು ಪ್ರಯೋಗಿಸಿದ.

"ಹಾಗಾದರೆ ಮನೆಯಲ್ಲಿ ಹುಡುಗಿಯ ಹೊರತಾಗಿ ಯಾರೂ ಇರಲೇ ಕೂಡದು ಎನ್ನುತ್ತೀರಾ ?" ಗೌಡರು ಇನ್ನೂ ಅನುಮಾನಿಸುತ್ತಲೇ ಕೇಳಿದರು.

"ಹೌದು, ಹೌದು. ಹೋದವರ್ಷ ಹೀಗೇ ಅಲ್ಲವೇ ಆ ಹಳ್ಳಿಯಲ್ಲಿ ನಾನು ಓಡಿಸಿದ್ದು ?" ಗೌಡರು ಸುಮ್ಮನಿದ್ದರು. "ಏಕೆ ಗೌಡರೇ ಅನುಮಾನಿಸುತ್ತಿದ್ದೀರಿ?"

"ಛೇ, ಛೇ. ಅನುಮಾನವೇನೂ ಇಲ್ಲ . . . ಕೇಳಿದೆ . . ."

"ಸರಿ ತಾನೇ ಹಾಗಾದರೆ?"

"ಮುಖ್ಯ ನನ್ನ ಮಗಳಿಗೆ ಗುಣ ಆದರೆ ಸಾಕು" ಎಂದು ಒಪ್ಪಿದರು.

ಗೌಡರ ಹೆಂಡತಿ ಈ ಷರತ್ತನ್ನು ಕೇಳಿ ಬೆರಗಾದಳು. "ಹುಡುಗಿಯೊಬ್ಬಳನ್ನು ಬಿಟ್ಟು . . ." ಎಂದು ಹಿಂದೆ ಮುಂದೆ ನೋಡಿದಳು. ಆದರೆ ಅಲ್ಲಿ ಸೇರಿದ್ದ ಜನಗಳಲ್ಲಿ ಅನೇಕರು "ಅವರು ಅನೇಕ ಕಡೆಗಳಲ್ಲಿ ಹೀಗೆಯೇ ಮಾಡಿದ್ದಾರೆಂದೂ, ಆದರಿಂದ ಅಪಾಯವೇನೂ ಇಲ್ಲವೆಂದೂ ಹೇಳಿದಮೇಲೆ ಒಪ್ಪಿದಳು. ಅದೂ ಅಲ್ಲದೆ ಒಪ್ಪದೆ ಇದ್ದರೆ ಮಗಳ ಗತಿ?

ಪೂಜಾರಿ ಮನೆಗೆ ಹಿಂದಿರುಗಿದ. ಸ್ನಾನ ಮುಗಿಸಿ ಎಂದಿನಂತೆ ಹನುಮಪ್ಪನ ಪೂಜೆಯನ್ನು ಮಾಡಿಕೊಂಡು ಬಂದ. ಕ್ರಿಯೆಗಳೆಲ್ಲಾ ಯಾಂತ್ರಿಕವಾಗಿ ನಡೆಯುತ್ತಿದ್ದುವು. ಮನಸ್ಸಿನಲ್ಲಿ ಮಾತ್ರ ಸಮಾಧಾನವಿಲ್ಲ. ಆಗಾಗ ಎದೆ ಯಾಕೋ ನಡುಗಿದಂತಾಗುತ್ತಿತ್ತು. ನಿನ್ನ ಹುಷಾರಿ ನಿನ್ನ ಕೈಲಿರಲಿ" ಎಂದು ಯಾರೋ ಎಚ್ಚರಿಸಿದಂತಾಗುತ್ತಿತ್ತು. "ಲೇ ಕಳ್ಳಪೂಜಾರಿ" ಎಂಬ ಕರಿಯವ್ವನ ಕೂಗು ಹೃದಯದಲ್ಲಿ ನೂರಾರು ಬಾರಿ ಪ್ರತಿಧ್ವನಿತವಾಗುತ್ತಿತ್ತು. ಆಕೆಯ ದಿಟ್ಟತನದ ಮೂರ್ತಿ ಕಣ್ಣಿನ ಮುಂದೆ ತಾಂಡವವಾಡಿದಂತಾಗುತ್ತಿತ್ತು. ಎಂದೂ ಇಲ್ಲದ ಈ ಹೊಸ ಪರಿಯ ದುಗುಡವನ್ನು ಕಂಡು ಆಚಾರಿಗೆ ಆಶ್ಚರ್ಯವಾಯಿತು. ಅಳುಕೂ ಆಗದಿರಲಿಲ್ಲ.

ಮಧ್ಯಾಹ್ನವಾಗುತ್ತಾ ಬಂದಂತೆ ಪೂಜಾರಿಯ ಆತುರವೂ ಹೆಚ್ಚಾಯಿತು. ಆ ಪಕ್ಕದ ಹಳ್ಳಿಗೆ ಹೋಗುವುದಕ್ಕೆ ಹೆಚ್ಚು ಹೊತ್ತೇನೂ ಬೇಕಾಗದಿದ್ದರೂ ಮಧ್ಯಾಹ್ನಕ್ಕೆ ಹೊರಡಲು ತನ್ನ ಸಾಮಾನುಗಳ ಸಿದ್ಧತೆಗೆ ತೊಡಗಿದ. ಜೋಳಿಗೆಗೆ ಕೈ ಹಾಕಿ ಕೆಲವು ಮೂಲಿಕೆಗಳನ್ನೂ ಬೇರುಗಳನ್ನೂ ತೆಗೆದುಕೊಂಡ. ಜೊತೆಗೆ ಒಂದು ಕಪ್ಪಾದ ಕಪಾಲ, ಮನುಷ್ಯನ ಅಸ್ಥಿಪಂಜರದ ತಲೆಬುರುಡೆ, ತೋಳು ಎಲುಬಿನ ತುಂಡುಗಳು ಎರಡು, ಇವುಗಳ ಜೊತೆಯಲ್ಲಿ ಆಂಜನೇಯನ ವಿಗ್ರಹ ಬೇರೆ—ಹೀಗೆ ವಿಚಿತ್ರರೀತಿಯ ಸಾಮಾನುಗಳನ್ನು ತೆಗೆದುಕೊಂಡು ಎಲ್ಲವನ್ನೂ ಒಂದು ಬಟ್ಟೆಯಲ್ಲಿ ಕಟ್ಟತೊಡಗಿ ಮತ್ತೇನನ್ನೋ ಜ್ಞಾಪಿಸಿಕೊಂಡು "ಓ ಮುಖ್ಯವಾದುದನ್ನೇ ಮರೆತಿದ್ದೆ," ಎಂದು ಜೋಳಿಗೆಗೆ ಕೈಹಾಕಿ ಚರ್ಮದ ಒರೆಹಾಕಿದ ಒಂದು ಚೂರಿಯನ್ನು ತೆಗೆದು ಗಂಟಿನಲ್ಲಿಟ್ಟು ಮತ್ತೆ ಕಟ್ಟಿದ.

ಸೂರ್ಯ ಈ ವೇಳೆಗಾಗಲೇ ನೆತ್ತಿಯ ಮೇಲಕ್ಕೆ ಬಂದು ಇಳಿಯುತ್ತಿದ್ದ. ಪೂಜಾರಿಗೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಯಾಕೋ ಸಮಾಧಾನವಾಗಲಿಲ್ಲ. "ಹ್ಞೂಂ ಹೊರಟೇಬಿಡೋಣ" ಎಂದು ಶುಭ್ರವಾದ ಜರತಾರಿ ಪಂಚೆಯನ್ನು ತೀಡಿತೀಡಿ ಉಟ್ಟು

ಕೊಂಡು ಉದ್ದವಾದ ಕೂದಲುಗಳನ್ನು ಹಿಂದಕ್ಕೆ ಬಾಚಿಕೊಂಡು ಉತ್ತರೀಯವನ್ನು ಹೊದ್ದುಕೊಳ್ಳುತ್ತಾ ಹೊರಗೆಬಂದ. ಗಂಟನ್ನು ಬಗಲಿನಲ್ಲಿ ಸೇರಿಸಿಕೊಂಡು ಹೊರಬಿದ್ದ.

ಪೂಜಾರಿ ಬರುವ ವೇಳೆಗೆ ಭರಮಣ್ಣ ಬಾಳೆ ಕಂಬಗಳನ್ನು ಹೊರಿಸಿಕೊಂಡು ಬರುತ್ತಿದ್ದ. ಕೈಯಲ್ಲಿ ವೀಳೆದೆಲೆಯ ಕಟ್ಟಿತ್ತು: "ಪೂಜಾರಪ್ಪನವರು ಆಗಲೇ ಬಂದೇ ಬಿಟ್ಟರು."

"ನನ್ನ ಕೆಲಸ ಮುಗಿಯಿತು, ಭರಮಣ್ಣ. ನಿಮ್ಮ ಕೆಲಸ ಎಷ್ಟರಮಟ್ಟಿಗೆ ಆಗಿದೆ ಅಂತ ಬಂದೆ. ಸ್ವಲ್ಪವೂ ಹೆಚ್ಚು ಕಡಮೆ ಆಗಬಾರದಲ್ಲಪ್ಪಾ. ಅದಕ್ಕೇ ಸ್ವಲ್ಪ ಮುಂಚೆ ಬಂದು ವಿಧಿಗಳನ್ನು ನಡೆಸುವುದು ಒಳ್ಳೇದಲ್ಲವೇ ? ಗೌಡರೆಲ್ಲಿ ? ಕಾಣುವುದಿಲ್ಲ ?"

ತೋಟದಲ್ಲಿದ್ದಾರೆ. ನಿಂಬೆಹಣ್ಣು ತೆಗೊಂಡು ಬರ್‍ತಾರೆ ಬನ್ನಿ." ಅಷ್ಟರಲ್ಲಿ ಗೌಡರೂ ಬಂದರು. ಮುಂದಿನ ಏರ್ಪಾಡಿಗೆ ಪ್ರಾರಂಭವಾಯಿತು.

ಪೂಜಾರಿ ನಡುಮನೆಯ ಪಕ್ಕದ ಒಂದು ದೊಡ್ಡ ಕೋಣೆಯನ್ನೇ ತನ್ನ ಕಾರ್ಯರಂಗಕ್ಕೆ ತಕ್ಕ ಸ್ಥಳವೆಂದು ಆರಿಸಿಕೊಂಡ. ಆ ಕೋಣೆಯನ್ನು ಸಾರಿಸಿದನಂತರ ಒಳಗೆ ಪ್ರವೇಶಿಸಿ ರಂಗದ ಸಿದ್ಧತೆಗೆ ತೊಡಗಿದ.

ನಾಲ್ಕು ಮೂಲೆಯಲ್ಲಿಯೂ ನಾಲ್ಕು ಬಾಳೆಕಂಬಗಳನ್ನು ನೆಟ್ಟರು. ಪೂಜಾರಿ ಕೋಣೆಯ ಉತ್ತರ-ಪಶ್ಚಿಮ ಮೂಲೆಯಲ್ಲಿ ಒಂದು ಮಂಟಪವನ್ನು ರಚಿಸಿದ. ಮಧ್ಯದಲ್ಲಿ ರಂಗೋಲಿಯಿಂದ ಅಷ್ಟಾವಕ್ರವಾದ ಒಂದು ಕುಬ್ಜರಕ್ಕಸನಂತಹ ಚಿತ್ರವನ್ನು ಬರೆದು, ಎರಡು ಕೋರೆದಾಡೆಗಳನ್ನು ಮಾತ್ರ ಬಹು ದಪ್ಪವಾಗಿ ಮಾಡಿ ಸೇರಿಸಿದ. ಕಣ್ಣಿನ ಸ್ಥಾನಕ್ಕೆ ಕುಂಕುಮವನ್ನಿಟ್ಟು ಒಳ್ಳೇ ರಂಗಾಗಿ ಮಾಡಿದ. ಅದರ ಹೊಟ್ಟೆಯ ಮೇಲೆ ತಾನು ತಂದ ತಲೆಬುರುಡೆಯನ್ನು ಅದರ ಕಣ್ಣುಗಳು ತನಗೆ ಸರಿಯಾದ ಎದುರು ಮೂಲೆಯನ್ನು ನೋಡುವಂತೆ ಕುಳ್ಳಿರಿಸಿದ. ಅದೇರೀತಿ ದಕ್ಷಿಣ-ಪಶ್ಚಿಮ ಮೂಲೆಯಲ್ಲಿ ಇನ್ನೊಂದು ಮಂಟಪವನ್ನು ಬರೆದು ಅದನ್ನು ವೀಳೆಯದೆಲೆ ಅಕ್ಷತೆಗಳಿಂದ ಅಲಂಕರಿಸಿದ. ಅದರ ಮಧ್ಯದಲ್ಲಿ ಆಂಜನೇಯನ ವಿಗ್ರಹವನ್ನು ಕುಳ್ಳಿರಿಸಿದ. ಮಂಟಪದ ನಾಲ್ಕು ಮೂಲೆಗಳಿಗೂ ನಿಂಬೆಹಣ್ಣುಗಳನ್ನು ಇಟ್ಟ. ಅಷ್ಟಾವಕ್ರನ ಕೋರೆದಾಡೆಗಳ ಮೇಲೂ ಒಂದು ಹಣ್ಣನ್ನು ಕುಳ್ಳಿರಿಸಿದ.

"ಗೌಡ್ರೆ ಈ ತಲೆಬುರುಡೆ ಇದೆಯಲ್ಲ ಇದೇ ಬೇತಾಳಮಂಟಪ. ಬೇತಾಳನ ಶಕ್ತಿಯನ್ನೆಲ್ಲಾ ಈ ಒಂದು ಚಿಕ್ಕ ತಲೆಬುರುಡೆಯಲ್ಲಿ ಅಡಕಮಾಡಿ ಅದರ ಈ ಕಣ್ಣುಗಳಿಂದ ಹೊರಸೂಸುವಂತೆ ಮಾಡಬೇಕು. ಹಾಗೇ ಈಕಡೆ ನಮ್ಮ ಮನೆದೇವರಾದ ಆಂಜನೇಯನನ್ನು ಆಹ್ವಾನಿಸಬೇಕು. ಇಬ್ಬರ ದೃಷ್ಟಿಗಳೂ ಸಂಧಿಸುವ ಈ ಸ್ಥಳದಲ್ಲಿಯೇ ಕಾಳಿಕಾದೇವಿಯ ಆಹ್ವಾನಮಾಡಬೇಕು" ಎಂದು ಆ ಎರಡು ದೃಷ್ಟಿಗಳು

ಸಂಧಿಸುವ ಸ್ಥಳದಲ್ಲಿ ಮತ್ತೊಂದು ಮಂಟಪವನ್ನು ಬರೆದು ಅದರಲ್ಲಿ ಹೆಣ್ಣು ದೇವತೆಯಂತೆ ಒಂದು ವಿಕಾರಾಕೃತಿಯನ್ನು ಚಿತ್ರಿಸಿದ. ಅದರ ಎದೆಯ ಮೇಲೆ ಹಣೆಯ ಮೇಲೆಲ್ಲ ಕುಂಕುಮವನ್ನು ಚೆಲ್ಲಿ ಅದರ ಮೇಲೆ ತಾನು ತಂದ ಕಪಾಲವನ್ನಿಟ್ಟು ಅದು ಉರುಳಿಬೀಳದಂತೆ ಮೂಲಿಕೆಗಳನ್ನು ಒತ್ತಿಗೆ ಕೊಟ್ಟು ನಿಲ್ಲಿಸಿದ.

"ಈ ಮೂರರ ದೃಷ್ಟಿ ಸಂಗಮವಾದರೆ ಹತ್ತಿರಿದ್ದವರು ಭಸ್ಮವಾಗಿ ಹೋದಾರು" ಎಂದ. ಎಲ್ಲರೂ ಭ್ರಾಂತರಾದವರಂತೆ ನಿಂತು ಅವನು ಮಾಡುವುದನ್ನೇ ನೋಡುತ್ತಿದ್ದರು. ತೋಳಿನ ಎಲುಬುಗಳನ್ನು ಕಪಾಲದ ಎರಡು ಪಕ್ಕಗಳಲ್ಲಿಟ್ಟ. ಕೆಂಪಾದ ಹೂಗಳನ್ನು ಮಂಟಪದ ಸುತ್ತಲೂ ಹರಡಿದ. ಮತ್ತೇನನ್ನೋ ಜ್ಞಾಪಿಸಿಕೊಂಡವನಂತೆ ಚೂರಿಯನ್ನು ಹೊರದೆಗೆದು, ಒರೆಗಳಚಿ, ಮಧ್ಯದಲ್ಲಿಟ್ಟ. ನಾಲ್ಕು "ಸಮೇವು" ಗಳನ್ನು ತರಿಸಿ ಒಂದೊಂದು ಮೂಲೆಗೂ ಒಂದೊಂದನ್ನು ಹೊಚ್ಚಿಟ್ಟದ್ದೂ ಆಯಿತು.

ಈ ವೇಳೆಗೆ ಅನ್ನವೂ ತಯಾರಾಗಿ ಬಂತು. ಅದಕ್ಕೆ ಕುಂಕುಮವನ್ನು ಚೆನ್ನಾಗಿ ಸೇರಿಸಿ ಅದು ರಕ್ತದಿಂದ ತೊಯ್ದಂತೆ ಮಾಡಿದ. ಅದನ್ನು ಎರಡು ಭಾಗಮಾಡಿ ಬಾಳೆ ಎಲೆಯಲ್ಲಿ ಹಾಕಿ ಒಂದನ್ನು ಬೇತಾಳ ಮಂಟಪದ ಹತ್ತಿರ ಇನ್ನೊಂದನ್ನು ಕಪಾಲದ ಹತ್ತಿರ ಇಟ್ಟ.

"ಅಬ್ಬಾ ; ಅರ್ಧ ಕೆಲಸವಾದಹಾಗಾಯಿತು" ಎಂದು ನೀಳವಾಗಿ ಉಸಿರೆಳೆದ.

ಅಷ್ಟರಲ್ಲಿ ಹುಡುಗಿ "ಅಯ್ಯೋ ಸಾಯ್ತೀನೆ. ಹೊಟ್ಟೆಯಲ್ಲಿ ಬೆಂಕಿ ಬಿದ್ದಿದೆ" ಎಂದು ಕೂಗತೊಡಗಿತು. ಅದಕ್ಕಾ ಪೂಜಾರಿ "ನೋಡೆದಿರೋ ಇನ್ನೂ ಸಿದ್ಧತೆ ನಡೆಯುತ್ತಿರುವಾಗಲೇ ಬೆಂಕಿ ಬೀಳ್ತಾಯಿದೆ. ಇನ್ನೇನು ಬೆಂಕಿಯಲ್ಲಿ ಬೀಳೋದೇ ಬಾಕಿ" ಎಂದು ಒಂದು ಬೇರನ್ನು ತೇದು ನೀರಿನಲ್ಲಿ ಸೇರಿಸಿ ಮತ್ತೆ ಆಕೆಗೆ ಕುಡಿಸುವುದಕ್ಕೆ ಕೊಟ್ಟ.

ರಕ್ತಕ್ಕಿಂತ ಕೆಂಪಾದ ಓಕುಳಿಯನ್ನು ಮಾಡಿ ಕಪಾಲಕ್ಕೆ ಹಾಕಿದ. ನಾಲ್ಕು ಹತ್ತಿಯ ಗೊಂಬೆಗಳನ್ನು ಮಾಡಿ ನಾಲ್ಕು ಮೂಲೆಗಳಲ್ಲಿಯೂ ದೀಪಗಳ ಹತ್ತಿರ ಇಟ್ಟ. ಈ ವೇಳೆಗಾಗಲೇ ಸೂರ್ಯ ಪಶ್ಚಿಮಾಭಿಮುಖನಾಗಿದ್ದ.

ಹುಡುಗಿಯನ್ನು ಹಿಡಿದುಕೊಂಡು ಬಂದರು. ಬೇತಾಳನ ಮತ್ತು ಹನುಮಂತನ ಮಂಟಪಗಳ ಮಧ್ಯದಲ್ಲಿ ಕಾಳಿಕಾಕಪಾಲದ ಎದುರುಗಡೆ ಕುಳ್ಳಿರಿಸಿದರು. ಹುಡುಗಿ ಮೊಟ್ಟಮೊದಲು ಜಗ್ಗಾಡುತ್ತಾ ಓಡಿಹೋಗುವುದಕ್ಕೆ ಪ್ರಯತ್ನಿಸಿತು. ಆಗ ಪೂಜಾರಿ ಒಮ್ಮೆ ಗರ್ಜಿಸಿ ಎರಡು ಎಲುಬುತುಂಡುಗಳನ್ನೂ ಒಂದರಿಂದ ಒಂದಕ್ಕೆ ಹೊಡೆದು ಶಬ್ದಮಾಡಿ ಪಿಟಪಿಡಿಮಾಡುತ್ತಾ ಆಕೆಗೆ ನಿವಾಳಿಸಿದ. ಹುಡುಗಿ ಮಂತ್ರಮುಗ್ಧವಾದಂತೆ ಸುಮ್ಮನೆ ಕುಳಿತಳು.

"ಗೌಡ್ರೇ ಇನ್ನು ಪ್ರಾರಂಭಮಾಡುತ್ತೇನೆ. ಮುಗಿಯುವ ವರೆಗೂ ಯಾರೊಡನೆಯೂ ಮಾತಾಡಕೂಡದು. ನೋಡಿ ಈ ಎರಡು ಎಲುಬುತುಂಡುಗಳನ್ನು ಈಗ ಹೊಡೆದಂತೆ ಒಂದರಿಂದ ಒಂದಕ್ಕೆ ಹೊಡೆದು 'ಹೂಂ' ಎಂದಕೂಡಲೇ ನೀವೆಲ್ಲಾ ಹೊರಟುಹೋಗಬೇಕು. ಬನ್ನಿ ಇಲ್ಲಿ" ಎಂದು ಹೊರಗೆ ಕರೆದುಕೊಂಡು ಬಂದು "ಅಲ್ಲಿ ಆ ಗಾಡಿಯಿದೆ ನೋಡಿ ಅದನ್ನು ದಾಟಿಹೋಗಬೇಕು. ಮತ್ತು ಅದರಿಂದ ಈಚೆಗೆ ಯಾರೂ ಬರದಂತೆ ನೋಡಿಕೊಳ್ಳಬೇಕು. ಹೋದನಂತರ ದಿಗ್ಬಂಧನ ಮಾಡಿಬಿಡುತ್ತೇನೆ. ನಾನು ಕರೆಯುವ ವರೆಗೂ ಒಳಗೆ ಯಾರೂ ಕಾಲಿಡಕೂಡದು. ಅದೇನೂ ಸುಲಭದಲ್ಲಿ ಹೋಗುವುದಲ್ಲ. ಒಳಗಿನಿಂದ ಕೂಗುವುದು ಗೀಗುವುದು ಕೇಳಿಬಂದರೆ ಗಾಬರಿಯಾಗಬೇಡಿ. ಸರಿ. ಇನ್ನು ಪ್ರಾರಂಭಿಸಲೆ?" ಎಂದು ಎಲ್ಲರನ್ನೂ ನೋಡಿದ. "ಆಗಲಿ" ಎಂದರು ಗೌಡರು. ಭರಮನು ತಲೆಹಾಕಿದ.

ಪೂಜಾರಿಯ ಕೆಲಸ ಪ್ರಾರಂಭವಾಯಿತು. ಬಾಯಿ ಬಿಡುವಿಲ್ಲದೆ ಮಂತ್ರಗಳನ್ನು ಉಚ್ಚರಿಸತೊಡಗಿತು. ಕೈ ಅದಕ್ಕೆ ಮೀರಿದ ವೇಗದಿಂದ ಕೆಲಸಮಾಡುತ್ತಿತ್ತು. ಎಲುಬುತುಂಡಿನಿಂದ ಎಲ್ಲವನ್ನೂ ನಾಲ್ಕಾರುಸಾರಿ ಮಂತ್ರಿಸಿದ 'ಓಂ ಫಟ್' ಎನ್ನುತ್ತಾ ನೆಲವನ್ನು ಕುಕ್ಕಿದ. ಚೂರಿಯನ್ನು ತೆಗೆದುಕೊಂಡು ಅದನ್ನು ಓಕುಳಿಯಲ್ಲಿ ಅದ್ದಿ ಬೇತಾಳನ ಮಂಟಪದ ಕುಬ್ಜರಕ್ಕಸನನ್ನು ನಾಲ್ಕಾರು ಬಾರಿ ಇರಿದ. ಕರಕ್ಕನೆ ಒಂದು ನಿಂಬೆಹಣ್ಣನ್ನು ಹೆಚ್ಚಿ ಒಂದು ಹೋಳನ್ನು ನೆಲಕ್ಕೆ ಹಾಕಿ ತಿಕ್ಕಿ ಅದರ ಕಪ್ಪು ಹುಳಿಯನ್ನು ರಕ್ಕಸನನ್ನು ಇರಿದ ತಾಣದಲ್ಲಿ ಹಿಂಡಿದ.

ಈ ಮಧ್ಯದಲ್ಲಿ ಬಾಯಿ ಒಂದೇಸಮನೆ ಕೆಲಸಮಾಡುವುದನ್ನು ನಿಲ್ಲಿಸಿರಲಿಲ್ಲ. ಮೆಲ್ಲನೆ ಗೊಣಗೊಣ ಎನ್ನುತ್ತಿದ್ದವನು; ಇದ್ದಕ್ಕಿದ್ದಂತೆಯೇ 'ಗಾಂಫಟ್' ಎಂದೋ, 'ಓಂಭುಕ್' ಎಂದೋ ಜೋರಾಗಿ ಕೂಗಿಬಿಡುತ್ತಿದ್ದ. ಚರಕ್ಕನೆ ಕತ್ತಿಯ ತುದಿಗೆ ನಿಂಬೆಹಣ್ಣನ್ನು ಚುಚ್ಚಿ ಅದನ್ನು ಹುಡುಗಿಯ ಮುಖಕ್ಕೆ ತಿವಿಯುವಂತೆ ತೆಗೆದುಕೊಂಡು ಹೋಗಿ ಹಿಂದಕ್ಕೆ ತರುತ್ತಿದ್ದ, ಅದರಿಂದ ಮಂಟಪದ ತಲೆಬುರುಡೆಯ ಮೇಲ್ಭಾಗವನ್ನು ಕುಟ್ಟುತ್ತಿದ್ದ.

ಹನುಮನ ಮಂಟಪವನ್ನು ಮೂರುಸಾರಿ ನಮಸ್ಕರಿಸಿದ. ಮಂತ್ರವನ್ನುಚ್ಚರಿಸುತ್ತಾ ಅಕ್ಷತೆಯನ್ನು ಅದರ ಮೇಲೆ ಹಾಕಿ ಇದ್ದಕ್ಕಿದ್ದಂತೆಯೇ ಬಾಗಿಲಿನಕಡೆ ನೋಡುತ್ತಾ ಸಂತೋಷಗೊಂಡವನಂತೆ "ಆಹಾಹಾ ಬರಬೇಕು ಬರಬೇಕು ನನ್ನಪ್ಪಾ, ಹೀಗೆ ಬರಬೇಕು" ಎಂದು ಬಾಗಿಲಿಗೆ ಹೋಗಿ ನಮಸ್ಕರಿಸಿ ಅಲ್ಲಿಂದ ಯಾರನ್ನೋ ಕರೆದುಕೊಂಡು ಬಂದಂತೆ ನಟಿಸಿದ.

ಮತ್ತೊಮ್ಮೆ ಬಾಗಿಲಿನ ಕಡೆಯಿಂದ ಏನೋ ಬರುತ್ತಿರುವುದನ್ನು ಕಂಡಂತೆ

ಸಿಟ್ಟಿನಿಂದ "ಹುಂ, ನಿಲ್ಲು, ನಿಲ್ಲು, ಸರಿ ಪಕ್ಕಕ್ಕೆ," ಎಂದು ಎದ್ದವನೇ ಮೂಲೆಮೂಲೆಗಳಿಗೆ ಹೋಗಿ ಅಲ್ಲಿಟ್ಟ ಹತ್ತಿಯ ಗೊಂಬೆಗಳಿಗೆ ಬೆಂಕಿ ಹಚ್ಚಿದ. ನಾಲ್ಕೂ ಧಗಧಗ ಉರಿಯತೊಡಗಿದುವು. ಕೋಣೆಯಲ್ಲಿ ಏನೋ ಗಂಭೀರತೆ ಸಂಚಾರವಾದಹಾಗಾಯಿತು. ಎಲ್ಲರೂ ಗಡಗಡನೆ ನಡುಗತೊಡಗಿದರು, ಪೂಜಾರಿ ಸದ್ಯ ನಮ್ಮನ್ನು ಹೊರಗೆ ಕಳುಹಿಸಿದರೆ ಸಾಕೆಂದೂ ಕೆಲವರು ಬಯಸದಿರಲಿಲ್ಲ.

ಇತ್ತ ಪೂಜಾರಿಯ ಆವೇಶವೇರುತ್ತಲೇ ಇತ್ತು. ಮತ್ತೆ ಬಾಗಿಲಿನ ಕಡೆಗೆ ನೋಡಿದವನೇ ಕೇಕೆ ಹಾಕಿ ಕೂಗಿಬಿಟ್ಟ. ಅಲ್ಲಿದ್ದವರಿಗೆಲ್ಲಾ ಪ್ರಜ್ಞೆಯೇ ತಪ್ಪಿದಂತಾಯಿತು. "ನೀನೂ ಬಂದೆಯ್ಯಾ? ಬಾಬಾ ಆ ಮೂಲೆಗೆ ನಡೀ" ಎಂದು ಕೂಗಿದ.

ಇದ್ದಕ್ಕಿದ್ದಂತೆಯೇ ಪೂಜಾರಿಯ ಬಾಯಿ ಸ್ತಬ್ಧವಾಯಿತು. ಮುಖ ಗಂಭೀರವಾಯಿತು. ಕೋಣೆಯ ಸುತ್ತಲೂ ನೋಡಿದ. ಅಲ್ಲಿ ಕುಳಿತವರನ್ನೆಲ್ಲಾ ತೀಕ್ಷ್ಣದೃಷ್ಟಿಯಿಂದ ತಿವಿದ. ಅತ್ತ ಇತ್ತ ಜೋಲಾಡತೊಡಗಿದ್ದ ಹುಡುಗಿಯನ್ನು ನೋಡಿದ. ಎಲುಬುತುಂಡುಗಳನ್ನು ತೆಗೆದುಕೊಂಡು ಎರಡನ್ನು ಬಲವಾಗಿ ಅಪ್ಪಳಿಸುತ್ತಾ "ಹೂಂ" ಎಂದು ಕೂಗಿದ. ಎಲ್ಲರೂ ಅಲ್ಲಿಂದ ಕಾಲ್ತೆಗೆದರು. ಅವರೊಡನೆ ತಾನೂ ಬಾಗಿಲಿನ ವರೆಗೂ ಹೋಗಿ ಅಂಗಳಕ್ಕೆ ಇಳಿದ. ಅವರು ಗಡಿಯನ್ನು ದಾಟಿ ಹೋಗುವವರೆಗೂ ನೋಡುತ್ತಾ ದಿಕ್ಕುಗಳನ್ನು ಮಂತ್ರಿಸಿದ. ಅನಂತರ ಒಳಗೆ ಬಂದು ಬಾಗಿಲನ್ನು ಹಾಕಿ ಅಗುಳಿಯನ್ನು ಭದ್ರಪಡಿಸಿದ. ಅಲ್ಲಿಂದ ಧೈರ್ಯವಾಗಿ ಬಂದು ಕೋಣೆಯನ್ನು ಸೇರುವ ವೇಳೆಗೆ ಹುಡುಗಿ ಜೋಲಿಹೊಡೆಯುತ್ತಾ ಮೂರ್ಛೆ ತಪ್ಪಿ ಬೀಳುವುದರಲ್ಲಿದ್ದಳು. ಎಲುಬುತುಂಡುಗಳನ್ನು ಅತ್ತ ಒಗೆದು ಓಡಿಹೋದವನೇ ತನ್ನ ತೊಡೆಯಮೇಲೆ ತಲೆಯನ್ನು ಹಾಕಿ ಮಲಗಿಸಿಕೊಂಡ. ಮುಖದಲ್ಲಿ ಮೊದಲಿನ ಉಗ್ರತೆಯಾಗಲೀ ಗಂಭೀರತೆಯಾಗಲೀ ಇರಲಿಲ್ಲ.

ಪೂಜಾರಿ ಮುಗುಳುನಗುತ್ತಾ ಆಕೆಯ ತಲೆಯನ್ನು ಮೆಲ್ಲನೆ ಒಂದೆರಡುಸಾರಿ ತಟ್ಟಿದ. ಮುಂಗುರುಗಳನ್ನು ಸರಿಪಡಿಸುತ್ತಾ ಮೃದುವಾದ ತುಂಬಿದ ಕಪೋಲಗಳನ್ನು ಮೆಲ್ಲನೆ ನೇವರಿಸಿದ. ಹುಡುಗಿ ನಿಧಾನವಾಗಿ ಕಣ್ತೆರೆದಳು, ಮೇಲೇಳಲು ಯತ್ನಿಸಿದಳು. ಪೂಜಾರಿ ಅಪ್ರತಿಭನಾದ. ಇಷ್ಟು ಜಾಗ್ರತೆ ಎಚ್ಚರಾಗುವಳೆಂದು ಆತ ಭಾವಿಸಿರಲ್ಲಿ, ಆದರೂ ಗಾಬರಿಯಾಗದೆ "ಸುದಾರಿಸಿಕೋ, ಸುಧಾರಿಸಿಕೋ ಹೆದರಬೇಡ" ಎಂದು ತನ್ನ ತೊಡೆಯಮೇಲೆ ಆಕೆಯನ್ನು ಮತ್ತೆ ಮಲಗಿಸಿಕೊಳ್ಳಲು ಪ್ರಯತ್ನಿಸಿದ. ಹುಡುಗಿ ಚಟ್ಟನೆ ಸಿಡಿದೆದ್ದು ಕುಳಿತಳು. ಸುತ್ತಲೂ ನೋಡಿದಳು. ತಾನೆಲ್ಲಿದ್ದೇನೆನ್ನುವುದೇ ತಿಳಿಯಲಾರದೆಹೋಯಿತು. ಭಯಭೀತವಾದ ಕಣ್ಣುಗಳಿಂದ ಪೂಜಾರಿಯನ್ನೂ ತನ್ನ ಸುತ್ತಮುತ್ತಲು ಇರುವ ಸಾಮಾನುಗಳನ್ನೂ ನೋಡುತ್ತಿದ್ದಳು.

ಪೂಜಾರಿ ಆಶೆಯ ಕಣ್ಣುಗಳಿಂದ ಆಕೆಯನ್ನೇ ನೋಡುತ್ತಿದ್ದ ಕುಡಿದುಬಿಡುವವ ನಂತೆ. ತಾನಾರು? ಎಲ್ಲಿದ್ದೇನೆ? ಎಂಬುದರ ಸ್ಮೃತಿ ಆಕೆಗೆ ಹಿಂದಿರುಗಿದಂತೆ ಕಾಣಿ ಸಿತು. ಯಾವುದೋ ಮಬ್ಬು ಬಿಟ್ಟುಹೋದಂತಾಯಿತು. ನಿನ್ನೆಯ ಘಟನೆಗಳೆಲ್ಲಾ ನೆನಪಿಗೆ ಬಂದವು. ಎದುರಿಗೆ ಕುಳಿತಿದ್ದವನನ್ನು ಗುರುತಿಸಿದಳು.

"ಪೂಜಾರಪ್ಪಾ, ಇದೇನಿದು? ನಮ್ಮ ಅಪ್ಪ ಅವ್ವ ಎಲ್ಲಿಹೋದರು? 'ಅವರು' ಎಲ್ಲಿದ್ದಾರೆ?" ಕಾತರಳಾಗಿ ಕೇಳಿದಳು.

"ಅವರಾರೂ ಈಗಲೇ ನಿನ್ನ ಬಳಿಗೆ ಬರುವಹಾಗಿಲ್ಲ" ಪೂಜಾರಿ ಹೇಳಿದ "ಈಗ ಇಲ್ಲಿ ನನ್ನ-ನಿನ್ನ ಹೊರತು ಒಂದು ನರಹುಳುವಿಗೂ ಪ್ರವೇಶವಿಲ್ಲ. ಆದ್ದ ರಿಂದ ಹೆದರಬೇಡ, ಬಾ. ಧೈರ್ಯವಾಗಿ ನನ್ನ ಮನೋರಥವನ್ನು ಈಡೇರಿಸಿಕೊಡು" ಎಂದು ಸ್ವಲ್ಪ ಮುಂದಕ್ಕೆ ಸರಿದ.

ಪೂಜಾರಪ್ಪನ ಮನಸ್ಸು ಹುಡುಗಿಗೆ ತಿಳಿಯಿತು. ಹಿಂದಕ್ಕೆ ಸರಿದಳು. ಕಪಾಲದಲ್ಲಿದ್ದ ಓಕುಳಿ ಬಿದ್ದು ಚಲ್ಲಿಹೋಯಿತು. ಅದರ ಪಕ್ಕದಲ್ಲೇ ಇದ್ದ ಕತ್ತಿ ಅದರಿಂದ ತೊಯ್ದು ಕೆಂಪಾಯಿತು. ಅದನ್ನು ಕರಿಯವ್ವ ನೋಡಿದಳು. ಮತ್ತೆ ತಲೆ ಎತ್ತಿ: "ಪೂಜಾರಪ್ಪ ನೀವು ಹೀಗೆ ಮಾಡಬಾರದು. ಇದು ನಿಮಗೆ ಸರಿಯಾದ ಕೆಲಸವಲ್ಲ. . . ."

"ಅದಕ್ಕೆಲ್ಲಾ ಈಗ ಸಮಯವಿಲ್ಲ" ಮಧ್ಯದಲ್ಲಿಯೇ ಪೂಜಾರಿ ಪ್ರಾರಂಭಿಸಿದ "ಬಾ ಮೊದಲು" ಎಂದು ದಾಹದಿಂದ ಕೈಚಾಚಿದ.

"ಥೂ ಪಿಶಾಚಿ" ಎಂದು ಅವನನ್ನು ತಡೆದಳು "ಅವ್ವಾ" ಎಂದು ಕೂಗಿ ಕೊಂಡಳು. ಆದರೆ ಪೂಜಾರಿ ಗಂಭೀರವಾಗಿ ನಗುತ್ತ "ಅದೆಲ್ಲಾ ನಡೆಯುವ ಹಾಗಿಲ್ಲ ಒಳಗೆ ಯಾರೂ ಬರುವಂತಿಲ್ಲ" ಎಂದು ಮುಂದುವರಿದ.

ಹುಡುಗಿಗೆ ಪರಿಸ್ಥಿತಿಯ ನಿಜವಾದ ಅರಿವಾಯಿತು. ಸಂಪೂರ್ಣವಾಗಿ ಎಚ್ಚತ್ತಳು. ಕೂಗಿಕೊಳ್ಳುವುದರಿಂದ ಪ್ರಯೋಜನವಿಲ್ಲವೆಂದು ಕಂಡುಬಂತು. "ಇವನಿಗೆ ನಾನು ಬಲಿಯಾಗಲೇಬೇಕೆ" ಎಂದು ಯೋಚಿಸಿದಳು. ಬುದ್ಧಿ ಮಿಂಚಿ ನಂತೆ ಓಡಿತು. ಏನನ್ನೋ ನಿರ್ಧರಿಸಿ ಮತ್ತೆ ಮಾತಿಗೆ ತೊಡಗುವುದರಲ್ಲಿದ್ದಳು. ಅಷ್ಟರಲ್ಲಿ ಪೂಜಾರಿ ಆಕೆಯ ತುಂಬಿದ ತೋಳನ್ನು ಹಿಡಿದುಕೊಂಡು ಅಪ್ಪುವುದಕ್ಕೆ ಮುಂದಾದ.

ಸರಕ್ಕನೆ ಹುಡುಗಿ ಕಾಳಸರ್ಪಿಣಿಯಂತೆ ಹಿಂದಕ್ಕೆ ಚಿಮ್ಮಿದಳು. ಓಕುಳಿಯಲ್ಲಿ ತೊಯ್ದ ಕತ್ತಿ ಕೈಯಲ್ಲಿ ಹೊಳೆಯುತ್ತಿತ್ತು.

ಕತ್ತಿಯನ್ನು ಪೂಜಾರಿಯ ಎದೆಗೆ ಸರಿಯಾಗಿ ಗುರಿಯಿಟ್ಟಳು. "ಏನು

ಹೇಳುತ್ತಿ ? ಬೊಗಳೋ ಈಗ ನಿನ್ನ ಆಶೆಯನ್ನು" ಎಂದು ಎತ್ತಿದ ಕೈಯಿಂದ ಎದೆಗೆ ಇರಿಯುವುದಕ್ಕೆ ಹೋದಳು. ತುಟಿಗಳು ಕೋಪದಿಂದ ನಡುಗುತ್ತಿದ್ದುವು.

ಪೂಜಾರಿಗೆ ಮನೆಯೇ ಗಿರಿಗಿರಿ ತಿರುಗಿ ತಲೆಕೆಳಗಾಗಿ ತಲೆಮೇಲೆ ಉರುಳಿದಂತಾಯಿತು. ತೀರಾ ಅನಿರೀಕ್ಷಿತವಾದ ಈ ಮಾರ್ಮಲೆತದಿಂದ ಜೀವ ಹಾರಿ ಹೋದಂತಾಯಿತು. ಗದಗದಗದ ನಡುಗತೊಡಗಿದ್ದ. ನೆಟ್ಟಕಟ್ಟುಗಳಿಂದ ನೋಡುತ್ತಿದ್ದ ಆಕೆಯ ದೃಷ್ಟಿಯನ್ನು ಸಹಿಸಲಾರದೆ ಕಣ್ಣು ಕತ್ತಲೆಗವಿದಂತಾದುವು. ಎದೆ ಹತ್ತಿರವೇ ಕತ್ತಿ ಕಾಯುತ್ತಿತ್ತು. ಪಿಟ್ಟೆಂದರೆ ಯಾವ ಗಳಿಗೆಯಲ್ಲಿ ಹೃದಯವನ್ನು ಹೊಗುತ್ತದೋ. ಪೂಜಾರಿಯ ಜೀವ ಟುಕುಟುಕು ಎನ್ನತೊಡಗಿತ್ತು. ಆರಡಿಯಿದ್ದ ಪೂಜಾರಿ ಉಡುಗಿ ಮೂರಡಿಯಾಗಿ ನೆಲದಲ್ಲಿ ಅಡಗಿಹೋಗಿದ್ದ. ಪ್ರಬಲಿಸಿ ಬಂದಿದ್ದ ಕಾಮದಾಹ ಹೇಳಹೆಸರಿಲ್ಲದಂತೆ ಅಡಗಿಹೋಗಿತ್ತು.

ಹೇಗಾದರೂ ಮಾಡಿ ಜೀವವನ್ನುಳಿಸಿಕೊಳ್ಳಬೇಕೆಂದು ಪೂಜಾರಿ ಆಕೆಯ ಕ್ಷಮಾಯಾಚನೆಗಾಗಿ ಬಾಯ್ದೆರೆಯಲು ಯತ್ನಿಸಿದರೆ ಉಸಿರೇ ಮೇಲಕ್ಕೆ ಏಳಲಿಲ್ಲ. ತುಟಿಯನ್ನು ಯಾರೋ ಹೊಲಿದಂತಾಗಿತ್ತು. ದೈನ್ಯದ ದೃಷ್ಟಿಯಿಂದ ಆಕೆಗೆ ನಮಸ್ಕರಿಸುವುದಕ್ಕಾಗಿ ಬಾಗಿದ. "ಏಏ" ಎಂದು ಕರಿಯವ್ವ ಕೂಗಿದಳು. ಪೂಜಾರಿ ಟಣಕ್ಕನೆ ಬೆಚ್ಚಿಬಿದ್ದ. ಈಗ ಆಕೆಗೆ ನಿಜವಾಗಿಯೂ ಕಾಳಿಯ ಆವೇಶ ಬಂದಂತಾಗಿತ್ತು. "ಒಂದು ಹೆಜ್ಜೆ ಮುಂದಕ್ಕೆ ಇಟ್ಟೀ. ನೋಡು ನಿನ್ನ ಪ್ರಾಣ ಈಗ ನನ್ನ ಕೈಲಿದೆ. ಘಾತಕ, ದ್ರೋಹಿ, ಪಾಪಿ, ಒಂದೇ ನಿಮಿಷದಲ್ಲಿ ನಿನ್ನ ರಕ್ತವನ್ನು ಹೀರಿಬಿಡಬಲ್ಲೆ. ಆ . . . ದರೆ" ಎಂದು ಒಂದು ಹೆಜ್ಜೆಯನ್ನು ಮುಂದಿಡುತ್ತ "ನಡಿ ಹಿಂದಕ್ಕೆ . . . ಹ್ಞೂಂ . . ." ಎಂದು ಒಂದೊಂದೇ ಹೆಜ್ಜೆ ಮುಂದಕ್ಕೆ ಇಡತೊಡಗಿದಳು. ಪೂಜಾರಿ ಮೆಲ್ಲಮೆಲ್ಲನೆ ಹಿಂದಕ್ಕೆ ಸರಿಯತೊಡಗಿದ. ಕತ್ತಿ ಎದೆಯ ಹತ್ತಿರವೇ ನಿಂತು ಒಳಗೆ ಪ್ರವೇಶಿಸಲು ಅವಕಾಶವನ್ನೇ ಕಾಯುವಂತೆ ಅಲುಗುತ್ತಿತ್ತು.

ಮೈವೆತ್ತ ಮೋಹರಕ್ಕಸನನ್ನು ಇನಿತಿನಿತೆ ಹಿಂದೆ ದೂಡುತ್ತಿರುವ ಆದಿಶಕ್ತಿಯಂತೆ ಕರಿಯವ್ವ ಕೆಚ್ಚಿನಿಂದ ಒಂದೊಂದೇ ಹೆಜ್ಜೆಯನ್ನು ಮುಂದಿಡುತ್ತಿದ್ದಳು. ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಪುಣ್ಯದ ಉದಯವನ್ನು ಕಂಡು ತಮಿಸ್ರ ಪಾಪದ ಉರುಳಿಯಂತೆ ಪೂಜಾರಿ ಹಿಂದುಹಿಂದಕ್ಕೆ ಸರಿಯುತ್ತಿದ್ದ. ಆ ಮುಗ್ಧ ಸಾಧ್ವಿಯ ರಜೋರೂಪವಾದ ಸತ್ತ್ವತೇಜಸ್ಸು, ತಮಸ್ಸಿನ ಚಿಟ್ಟೆಯನ್ನು ಸುಟ್ಟುಹಾಕಿ ಬಿಡುವಂತೆ ಮುಂದೆ ನುಗ್ಗುತ್ತಿತ್ತು.

ಹಿಂದೊಮ್ಮೆ ಮುಂದೊಮ್ಮೆ ನೋಡುತ್ತಾ ಪೂಜಾರಿ ಹೊರಬಾಗಿಲಿನ ವರೆಗೂ

ಮೃತ್ಯುವಿನ ದಾಡೆಯಮೇಲೆಯೇ ತೆವಳಿಕೊಂಡು ಬಂದ. ಆಗ ಕರಿಯವ್ವ "ಥೂ ಪಾಪಿ ನಿನ್ನನ್ನು ಕೊಲ್ಲುವುದಕ್ಕೂ ನನಗೆ ಮನಸ್ಸು ಬರಲೊಲ್ಲದು. ತೊಲಗಿಹೋಗು" ಎಂದು ಸ್ವಲ್ಪ ಹಿಂದಕ್ಕೆ ಸರಿದಳು.

ಬಾಗಿಲನ್ನು ತೆರೆದು ಪೂಜಾರಿ, ಬೋನಿನಿಂದ ಹೊರಬಿದ್ದ ಇಲಿಯಂತೆ ಟಣಕ್ಕನೆ ಹೊರಗೆ ನುಸುಳಿದ. ಹೋದಜೀವ ಬಂದಂತಾಯಿತು. "ಬರಬೇಡಿ ಹತ್ತಿರಕ್ಕೆ ಬರಬೇಡಿ" ಎಂದು ಕೂಗುತ್ತಾ ಮೃತ್ಯುಪಂಜರದಿಂದ ಹೊರಬಿದ್ದ ಹಕ್ಕಿಯಂತೆ ಒಂದೇ ಉಸುರಿಗೆ ಹಿತ್ತಲು ಬಾಗಿಲಿನ ಕಡೆ ಓಡಿ ಕಂಡಿಯಲ್ಲಿ ನುಸಿದು ನೆಗೆದು ಮರೆಯಾದ.

ಅಷ್ಟರಲ್ಲಿ ಕರಿಯವ್ವ ಕತ್ತಿಯನ್ನು ಹಿಡಿದುಕೊಂಡೇ ಹೊರಗೆ ಬಂದಿದ್ದಳು. ದೂರದಲ್ಲಿದ್ದ ಜನರ ಗುಂಪನ್ನು ನೋಡಿದಳು. ದುಃಖ ಒತ್ತರಿಸಿಬಂತು. "ಅವ್ವಾ ಅವ್ವಾ" ಎಂದು ಕೂಗುತ್ತಾ ಕತ್ತಿಯನ್ನು ಬಿಸಾಡಿ ದೊಪ್ಪನೆ ಬಿದ್ದುಬಿಟ್ಟಳು. ಅವರವ್ವ ಯಾವುದನ್ನೂ ಲೆಕ್ಕಿಸದೆ ಓಡಿಬಂದಳು. ಗೌಡರಾದಿಯಾಗಿ ಎಲ್ಲರೂ ಹಿಂಬಾಲಿಸಿದರು. ದೊಡ್ಡ ಗುಂಪೇ ಅವಳ ಸುತ್ತ ನೆರೆದುಹೋಯಿತು.

"ಹಾ. ಹೀ. ಹೂ. ಹೋ. . ."ಗಳಲ್ಲಿ ನಿಜವಾಗಿ ಆದದ್ದೇನು ಎಂದು ತಿಳಿಯಬೇಕಾದರೆ ಒಂದು ಗಂಟೆ ಹೊತ್ತಾದರೂ ಬೇಕಾಯಿತು.

ವಿಷಯ ಗೊತ್ತಾದೊಡನೆ ಗೌಡರ ರಕ್ತ ಕುದಿಯಿತು. ತಮ್ಮ ಹೆಡ್ಡತನಕ್ಕೆ ತಮ್ಮನ್ನೇ ಹಳಿದುಕೊಂಡರು. ಭರಮನಂತೂ ಅಂಗಿಯ ತೋಳನ್ನು ಆಗಲೇ ಏರಿಸಿ ಬಿಟ್ಟಿದ್ದ. "ಲೇ ಕೆಂಚ, ಕಾಳ, ಸಿದ್ದ, ಬರ್ರೊ ಬರ್ರೋ" ಎಂದು ಕೈಗೆ ಸಿಕ್ಕ ಕೋಲು ದೊಣ್ಣೆಗಳಿಂದ ಸಜ್ಜಿತವಾದ ಸೈನ್ಯದೊಡನೆ ಪೂಜಾರಿಯ ಮನೆಗೆ ಬಂದು ಮುತ್ತಿಗೆ ಹಾಕಿದ. ಅವಸರದಲ್ಲಿ ಮಚ್ಚು ಸಿಗಲಿಲ್ಲವೆಂದು ಕುಡುಗೋಲನ್ನೇ ಹಿಡಿದುಕೊಂಡು ಬಂದವರೂ ಇದ್ದರು ಅವನ ಸೈನ್ಯದಲ್ಲಿ. ಆದರೆ ಯಾವ ಆಯುಧಗಳೂ ಉಪಯೋಗಕ್ಕೆ ಬರಲಿಲ್ಲ. ಮನೆಯನ್ನು ನುಗ್ಗಿ ಹುಡುಕಿದರೂ ಪೂಜಾರಿ ಸಿಕ್ಕಲಿಲ್ಲ. ರಾತ್ರಿಯೆಲ್ಲಾ ಕಾದರು. ರಸ್ತೆಯಲ್ಲೆಲ್ಲಾ ಅವಿತು ಹುಡುಕಿದರು. ಆದರೂ ಪತ್ತೆ ಆಗಲಿಲ್ಲ. ಅಂದಿನಿಂದ ಆತನ ಪತ್ತೆಯೇ ಇಲ್ಲ.

ಕಥೆ ಹೇಳುವುದನ್ನು ನಿಲ್ಲಿಸಿದ. ನಾನು ಕ್ಷಣಕಾಲ ಮೌನವಾಗಿದ್ದೆ ಅನಂತರ "ಅಬ್ಬಾ ಹಳ್ಳಿಯ ಒರಟು ಜನಗಳಲ್ಲಿ ಇಂತಹ ಹುಡುಗಿಯರೂ ಇರುತ್ತಾರೆಯೊ? ಆ ಹುಡುಗಿ ನೋಡಬೇಕಾದವಳಪ್ಪ" ಎಂದೆ. ಅದೇ ವೇಳೆಗೆ ಸರಿಯಾಗಿ ತನ್ನ ತಾಯಿಯ ಮನೆಯಾದ ಈ ಹಳ್ಳಿಗೆ ಬಂದ ಆ ಹುಡುಗಿ ಅದೇ ಮಾರ್ಗವಾಗಿ ಬರಬೇಕೆ, ಕಾಕತಾಳನ್ಯಾಯದಂತೆ. ಒಳಗಡೆ ಕುಳಿತು ನಮ್ಮ ಸಂಭಾಷಣೆಯನ್ನು

ಕೇಳುತ್ತಿದ್ದ ನಮ್ಮ ಅಜ್ಜನವರು ಆ ಹುಡುಗಿಯನ್ನು ಕಂಡು ಕೂಗಿದರು. "ಏ ಕರಿಯವ್ವಾ ಬಾ ಇಲ್ಲಿ" ಆ ಬರುವಿಕೆಯನ್ನೇ ಕಣ್ಣುತುಂಬಾ ನೋಡಿದೆ. ಕಥೆ ಮನಸ್ಸಿನಲ್ಲಿ ತಿರುಗುತ್ತಿತ್ತು. "ಈ ನಮ್ಮ ತಮ್ಮ ನಿನ್ನ ಸಾಹಸದ ಕಥೆ ಕೇಳಿದ" ಅಜ್ಜನವರೆಂದರು. ಆ ಹುಡುಗಿ ನೋಡಲೇಬೇಕಾದವಳಪ್ಪ ಎಂದ ಅಷ್ಟುಹೊತ್ತಿಗೆ ನೀನೂ ಬಂದಿ" ಎಂದರು. ಸಗುತ್ತಾ. ಎಲ್ಲರೂ ನಕ್ಕೆವು.

"ಥೂ ಹೋಗಜ್ಜಾ ನೀನಂತೂ . . ." ಎಂದು ನಾಚಿಕೆಯಿಂದ ಗರಕ್ಕನೆ ತಿರುಗಿದಳು. ಕಾಲಲ್ಲಿ ಪಿಲ್ಲಿಯ ಶಬ್ದ, ಕೈಲಿ ಬಳೆಯ ಶಬ್ದ ಚಳ್, ಜಳಂ ಎನ್ನುತ್ತಿರಲು ದಿಟ್ಟವಾದ ಹೆಜ್ಜೆಗಳನ್ನಿಡುತ್ತಾ ನಡೆಯತೊಡಗಿದಳು.

ಅವಳನ್ನೇ ನೋಡತೊಡಗಿದೆ. ಏತಕ್ಕೋಸ್ಕರವೋ ನನ್ನ ಮನಸ್ಸಿನಲ್ಲಿ ಸೀತೆ, ಅನಸೂಯೆ, ಅರುಂಧತಿ ಮೊದಲಾಗಿ ಎಲ್ಲರೂ ಸುಳಿಸುಳಿದು ಮರೆಯಾದರು. ಅಷ್ಟರಲ್ಲಿ ಹುಡುಗಿಯೂ ಮರೆಯಾಗಿದ್ದಳು.

ಆಗಸ ಆಗಲೇ ಕೆಂಪೇರುತ್ತಿತ್ತು. ಕಥೆಯನ್ನೇ ಮೆಲುಕುಹಾಕುತ್ತಾ ಸಂಜೆಯ ಸಂಚಾರಕ್ಕೆ ನಡೆದೆ.

ಎಚ್. ತಿಪ್ಪೇರುದ್ರಸ್ವಾಮಿ

ತಂತಿಯ ಕಂಬದಲ್ಲಿ ಗಾಳೀಪಟ

ಕಂಡೆ ನಾನು, ಬೆಂತರನೊಲು ನಿಂತ ತಂತಿ ಕಂಬದಿ
ಸಿಕ್ಕಿ ರೆಕ್ಕೆ ಬಡಿವ ಗಾಳಿಪಟವೊಂದನು ಮರುಕದಿ !
ಆಷಾಢದ ಮೋಡದವೊಳಿ ಮೇಲೆ ಹರಿಯುತಿದ್ದಿತು
ಕೆಳಗೆ ಬಯಲಿನಲ್ಲಿ ಮಕ್ಕಳಾಟ ನಡೆಯುತಿದ್ದಿತು.
ಸಾಲು ಸಾಲು ತಂತಿಯೆನಿತೊ ಕಂಬದಿಂದ ಕಂಬಕೆ,—
ತುಡಿವಗಾಳಿ ಪಟದ ಸುಯ್ಲ ಗಮನಿಸದೊಲು ಮುಂದಕೆ
—ಹರಿಯುತಿರಲು, ಹುಚ್ಚುಗಾಳಿ ಮೊರೆದು ಪಟವ ಹೆದರಿಸಿ
ಕುಣಿಯುತಿತ್ತು ಮರಮರಗಳ ಮೆಯ್ಯನೆಲ್ಲ ನಡುಗಿಸಿ !

ಆಷಾಢದ ಗಾಳಿಗೆ ಪಟ ಸಿಕ್ಕು ಶೀರ್ಣವಾಗಿದೆ
ಬರಿಯ ಕಡ್ಡಿ ಎಲುಬಿನೊಡಲು ಸಾವಿನೊಡನೆ ಸೆಣಸಿದೆ !
ಏರಲಾರದಿಳಿಯಲಾರದಂಥ ಮುಷ್ಟಿಬಿಗಿತಕೆ
ಸಿಕ್ಕಿನರಳಿ ಕೊರಗಿರುವುದು ಜಿನುಗಿದಂಥ ಸೋನೆಗೆ !
ಒಮ್ಮೆ ಇದೂ ಆಕಾಶದ ಬಯಲಲಾಡುತಿದ್ದಿತು.
ಸುತ್ತಬಂದ ಹಕ್ಕಿಗಳನ್ನು ಹೆದರಿಸೋಡಿಸಿದ್ದಿತು.
ಕೆಳೆಯಪಟಗಳೆಲ್ಲ ಇಳಿದು ಮನೆಯ ಸೇರಿಕೊಂಡವು
ಆದರಯ್ಯೊ ದಾರ ಹರಿದು ಇಲ್ಲಿ ಬಂದುಬಿದ್ದಿತು !

ಈಗ ಹಲವು ಹಕ್ಕಿಗಳೂ ಇದರ ಪಾಡ ನೋಡುತ
ಅಣಕಿಸುತ್ತ ಹಾರುತಿಹವು ತಮ್ಮಗರಿಯ ಕೆದರುತ
ಮೇಲೆ ನಡೆವ ಕಪ್ಪುಮೋಡ ಮುಖಕೆ ನೀರನೆರಚಿದೆ
ನೊಂದವರನು ನೋಯಿಸುವುದೆ ಜಗದ ಲೀಲೆ ಎನಿಸಿದೆ !
ಕೆಳಗೆ ಪಟದ ಸೂತ್ರಧಾರನೊಬ್ಬನಿರುವನೆಂಬುದ
ಮರೆತು, ತಾನೆ ಬಾನೊಳಲೆವ ಶೂರನೆಂದು ಬೀಗಿದ
ಹಮ್ಮಿಗಿಂಥ ಪತನವಾಯ್ತೊ ? ಅಥವ ದುರದೃಷ್ಟವೊ,
ನೆನೆಯಬೇಡ ಹಿಂದನೆಲ್ಲ ಅದನು ನಾವು ಬಲ್ಲೆವೋ !

ಹೋಗೊ ಏನೊ ಇತ್ತಬಂದು ಪತಿತಯೋಗಿಯಂದದಿ
ಸಿಕ್ಕುದಾಯ್ತು ಕಂಬದಲ್ಲಿ ಮತ್ತೆ ಅಲುಗದಂದದಿ ;
ಯಾವ ಕೈಯಿ ಬಂದು ಇದರ ಬಂಧನವನು ಹರಿವುದೊ ;
ಬಿಡಿಸಿದರೂ ಹರಿದ ಪಟವದೆಂತು ಮೇಲಕೇರ್ವುದೋ !
ಕಂಬದಿಂದ ಕಂಬದೆಡೆಗೆ ತಂತಿಯೆನಿತೊ ಓಡಿವೆ.
ಬಾನಬಯಲಿನಲ್ಲಿ ಹಲವು ಗಾಳಿಪಟಗಳಾಡಿವೆ.
ಕೆಳಗೆ ಬಯಲಿನಲ್ಲಿ ಮಕ್ಕಳಾಟ ನಿಲದೆ ಸಾಗಿದೆ
ತಂತಿ ಕಂಬದಲ್ಲೀ ಪಟ ದೀನವಾಗಿ ನೋಡಿದೆ !

ಜಿ. ಎಸ್. ಶಿವರುದ್ರಪ್ಪ.

ಜೀವಜಗತ್ತಿನಲ್ಲಿ ಪ್ರಾಣಿಗಳ ವರ್ಗಪ್ರಭೇದ ನಿರ್ಣಯ

ಭಾಗ ೧

ಭೂಮಿ, ಭೂಮಿಯ ಮೇಲೆ ವಾಸಿಸುತ್ತಿರುವ ಪ್ರಾಣಿಗಳು, ಸಸ್ಯಗಳು, ಇವನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುವ ಮಾನವ—ಇವು ನಾವೆಲ್ಲರೂ ತಿಳಿದಿರುವಂತೆ 'ದೇವರು' ಎಂಬ ವ್ಯಕ್ತಿಯಿಂದ ಸೃಷ್ಟಿಸಲ್ಪಡಲಿಲ್ಲ: ಆದರೆ ಪ್ರಕೃತಿಯಲ್ಲಿ ಆದಿಯಿಂದ ನಡೆದುಬರುತ್ತಿರುವ ಜೀವ ವಿಕಾಸದ ಪರಿಣಾಮ ವಿದು. ಹೀಗೆಂಬುದು, ವಿಜ್ಞಾನದೃಷ್ಟಿಯಿಂದ ಜೀವಶಾಸ್ತ್ರವನ್ನು ಕೂಲಂಕಷವಾಗಿ ಅಳೆದು ನೋಡಿರುವ ಜೀವಶಾಸ್ತ್ರಜ್ಞರ ಅಭಿಪ್ರಾಯ.

ಹೀಗೆಂದ ಕೂಡಲೇ ಸದಾಚಾರ ಸಂಪನ್ನರಾದವರು ಜೀವಶಾಸ್ತ್ರಜ್ಞರನ್ನು ನಾಸ್ತಿಕರೆನ್ನಬಹುದು. ಆದರೆ ಇದು ಶುದ್ಧ ಮೂಢತನ. ಇಂದಿರುವ ಪ್ರಪಂಚವನ್ನು ನೋಡಿ, ಪ್ರಪಂಚ ಇಂದಿರುವಂತೆಯೇ 'ದೇವರು' ಎಂಬ ಅಮಾನುಷ ವ್ಯಕ್ತಿಯಿಂದ ಸೃಷ್ಟಿಸಲ್ಪಟ್ಟಿತು ಎಂದು ಹೇಳುವುದು—ತಾಜಮಹಲಿನ ಮುಂದೆ ನಿಂತು, ಅದರ ಸೌಂದರ್ಯದಲ್ಲಿ ತನ್ಮಯನಾಗಿ, ಅದರ ಬೆಡಗನ್ನು ಬಣ್ಣಿಸುತ್ತ, ಈ ಭವ್ಯಭವನವನ್ನು ಕಟ್ಟಿಸಿದ ಷಹಜಹಾನನನ್ನು ಹೊಗಳಿದಂತೆ! ತಾಜಮಹಲನ್ನು ರಚಿಸಲು ಷಹಜಹಾನನು ಕಾರಣನಾದ, ಅಷ್ಟೆ. ಅವನೆ ಮಾಯಾದಂಡವನ್ನು ಹಿಡಿದು, ಅದನ್ನು ಗಾಳಿಯಲ್ಲಿ ಆಡಿಸಿ ರಾತ್ರಿಯೊಂದರಲ್ಲಿಯೇ ತಾಜಮಹಲನ್ನು ಮಾಯದಿಂದ ರಚಿಸಲಿಲ್ಲ. ಅದನ್ನು ರಚಿಸಲು ಸಾವಿರಾರು ಶಿಲ್ಪಿಗಳು ಅಹೋರಾತ್ರಿ ಕಷ್ಟಪಟ್ಟು ದುಡಿದಿದ್ದಾರೆ, ತಮ್ಮ ಬಾಳನ್ನು ಸವೆಸಿದ್ದಾರೆ. ಆದರೂ ಈ ಭವನ ಒಮ್ಮೆಗೆ ಇದಿರುವಂತೆಯೇ ನಿರ್ಮಿತ ವಾಗಲಿಲ್ಲ. ಬೀಜವೊಂದು ಮೊಳೆತು ಗಿಡವಾಗಿ ಬೆಳೆದು ಮರವಾಗುವಂತೆ ; ತಳಹದಿ ಯಿಂದ ಮೊದಲ್ಗೊಂಡು ಗೋಡೆಗಳು ರಚಿತವಾಗಿ ಸಾರಣೆಯವರೆವಿಗೂ ಹಲವಾರು ರೂಪಾಂತರಗಳನ್ನು ಹೊಂದಿ, ಇಂದು ಶ್ಲಾಘನೀಯವಾದ ಈ ತಾಜಮಹಲಾಗಿದೆ. ಹೀಗೆಯೇ ಇಂದಿನ ಪ್ರಪಂಚವೂ, ಅದರಲ್ಲಿ ಅಡಕವಾಗಿರುವ ಜೀವಕೋಟಿಗಳೂ ಹಲವಾರು ಮಾರ್ಪಾಡುಗಳನ್ನು ಹೊಂದಿ, ಇಂದಿನ ಮಾದರಿಯನ್ನು ಮುಟ್ಟಿವೆ. ಈ ರೂಪಾಂತರ ಇಲ್ಲಿಗೆ ನಿಂತಿಲ್ಲ, ಇಂದಿಗೂ ಮುಂದುವರಿಯುತ್ತಿದೆ.

ಹಾಗಾದರೆ ಈ ರೂಪಾಂತರಗಳೇನು? ಆದ ಮಾರ್ಪಾಡುಗಳೇನು? ಇವೆಲ್ಲಕ್ಕೂ

ಕಾರಣಗಳೇನು ? ಆದ ಬಗೆ ಹೇಗೆ ? ಎಂಬ ನೂರಾರು ಸಮಸ್ಯೆಗಳೇಳುತ್ತವೆ. ಇವನ್ನು ಅರ್ಥಮಾಡಿಕೊಳ್ಳಬೇಕಾದರೆ ಜೀವರಾಶಿಯ ಹಿಂದಿನ ಚರಿತ್ರೆಯನ್ನು ತಿಳಿದುಕೊಳ್ಳ ಬೇಕು. ಹಾಗೆ ಜೀವಿಗಳಿಗೆ ಆಶ್ರಯವಾಗಿರುವ ಭೂಮಿಯ ಹಿಂದಿನ ಕಥೆಯನ್ನು ತಿಳಿದುಕೊಳ್ಳಬೇಕು.

ಇಂದಿನ ಸಂಶೋಧನೆಗಳಿಂದ ತಿಳಿದುಬಂದಿರುವಂತೆ, ನಮ್ಮ ಈ ಭೂಗ್ರಹ ಮೊದಲು ಸೂರ್ಯಗ್ರಹದ ಒಂದು ಅಂಶವಾಗಿತ್ತು. ಈಗ್ಗೆ ಸುಮಾರು ಇಪ್ಪತ್ತು ಮೂವತ್ತು ಕೋಟಿ ವರುಷಗಳ ಹಿಂದೆ ಸೂರ್ಯನಿಂದ ಬೇರೆಯಾಯಿತು. ಆಗ ಸೂರ್ಯನಂತೆ ಭೂಮಿಯೂ ಒಂದು ಉರಿಯ ಸಮೂಹವಾಗಿತ್ತು. ಸೂರ್ಯನಿಂದ ಬೇರೆಯಾದ ಬಳಿಕ ಅದು ವಿಶ್ವದಲ್ಲಿ ಕ್ರಮೇಣ ಆರತೊಡಗಿತು. ಆರತೊಡಗಿದ ಈ ಉರಿಯ ಸಮೂಹದಲ್ಲಿ ಮೊದಲು ಕಾಣಿಸಿಕೊಂಡ ವಸ್ತುಗಳೆಂದರೆ ಕಲ್ಲುಬಂಡೆಗಳು.

ಭೂಮಿಯು ಪೂರ್ತಿಯಾಗಿ ಆರುವ ಮೊದಲೇ, ಅದರ ತುಣುಕೊಂದು ಬೇರ್ಪಟ್ಟುಹೋಯ್ತು. ಆ ತುಣುಕೇ ಇಂದಿನ ಚಂದ್ರಗ್ರಹವಾಯ್ತು. ಭೂಮಿಯು ಒಳಭಾಗ ಆರುತ್ತಾ ಬಂದರೂ ಒಳಭಾಗದಲ್ಲಿ ಉಷ್ಣವಿದ್ದೇ ಇತ್ತು. ಆಗಂತು ಭೂಮಿಯು ಒಳಭಾಗ ಕುದಿಯುವ ಎಣ್ಣೆಯಂತಿತ್ತು. ಕುದಿಯುತ್ತಿದ್ದ ಈ ಭೂಗರ್ಭ ದಿಂದ ಆರಿ ಹಗುರಾದ ಭೂಮಿಯ ಮೇಲ್ಭಾಗಕ್ಕೆ ಆಗಾಗ ಭಾರವಾದ ಶಿಲಾರಸವನ್ನು ಹೊರದೂಡುತ್ತಿತ್ತು. ಹಗುರಾದ ಈ ಮೇಲ್ಭಾಗದಲ್ಲಿ ಕಲ್ಲುಬಂಡೆಗಳು ರಾಶಿಯಾಗಿ, ದಿಣ್ಣೆಯ ಪ್ರದೇಶವಾಗಿ, ಭೂಭಾಗಗಳಾದವು. ಆದರೆ ಕೆಲವೆಡೆಗಳಲ್ಲಿ ಭೂಮಿಯು ಮೇಲ್ಭಾಗದಲ್ಲಿ ಶಿಲಾರಸದ ಭಾರದಿಂದ ಹಳ್ಳಕೊಳ್ಳಗಳಾದವು. ಈ ಹಳ್ಳಗಳೇ ಭೂಮಿಯ ಮೇಲೆ ಮೊದಲು ಕಾಣಿಸಿಕೊಂಡ ಸಾಗರಗಳಿಗೆ ನೆಲೆಯಾದವು. ಭೂಮಿ ಆರುತ್ತಾ ಕುಗ್ಗುತ್ತಾ ಹೊರಟಂತೆ ಅದರ ಹೊರಭಾಗ ಮಡಿಕೆಮಡಿಕೆಗಳಾಗಿ ಇಂದಿನ ಪರ್ವತಶ್ರೇಣಿಗಳಿಗೂ ಮತ್ತು ಅವುಗಳ ಕಣಿವೆ ತಪ್ಪಲುಗಳಿಗೂ ಆಕರವಾಯಿತು.

ಭೂಗರ್ಭ ಆರುತ್ತಾ ಬಂದಂತೆ, ಭೂಗರ್ಭದಿಂದ ಹೊರಟ ಅನಿಲಗಳು ಭೂಮಿಯ ಸುತ್ತಲೂ ಉಷ್ಣವಾದ ಹಬೆಯ ಸಮೂಹವನ್ನು ರಚಿಸಿದವು. ಈ ಹಬೆಯ ಸಮೂಹವು ಆರಿದಾಗ ಅನಿಲಗಳು ಬೇರೆಬೇರೆಯಾಗಿ ಒಡಗೂಡಿ ನೀರು ಮುಂತಾದ ಸಂಯುಕ್ತ ಪದಾರ್ಥಗಳಾದವು. ನೀರೇ ಮುಂತಾದ ಈ ಸಂಯುಕ್ತ ಪದಾರ್ಥಗಳಿಗೆ ಭೂಗರ್ಭದಿಂದ ಹೊರಟ ಅನಿಲಗಳೇ ಮೂಲವಸ್ತುಗಳಾದವು. ನೀರು ಮೇಲೆ ಹೋಗಿ ಆರಿ ಹೆಪ್ಪುಗಟ್ಟಿ ಭೂಮಿಯ ಸುತ್ತಲೂ ದಪ್ಪನಾದ ಒಂದು ಮೇಘಮಂಡಲದ ಹೊದಿಕೆಯಾಯ್ತು. ಈ ಮೇಘಮಂಡಲ ಭೂಮಿಯಿಂದ ಹೊರಟ ಶಾಖದಿಂದಲೂ, ಸೂರ್ಯನ ಶಾಖದಿಂದಲೂ ಕರಗಿ ನೀರಾಗಿ, ಮಳೆಯಾಗಿ,

ಭೂಮಿಯ ಗುರುತ್ವದಿಂದ ಆಕರ್ಷಿಸಲ್ಪಟ್ಟು ಭೂಮಿಯ ಮೇಲೆ ಬೀಳುತ್ತಿತ್ತು. ಈ ಮಳೆಯ ನೀರು ಭೂಮಿಯನ್ನು ಮುಟ್ಟುವ ಮೊದಲೇ ಭೂಗರ್ಭದ ಶಾಖಕ್ಕೆ ಕಾದು ಆವಿಯಾಗಿ ಪುನಃ ಮೇಘಮಂಡಲವನ್ನು ಸೇರುತ್ತಿತ್ತು.

ಹೀಗೆ ಮಳೆ ಬೀಳುವುದು, ಪುನಃ ಆವಿಯಾಗಿ ಮೇಘಮಂಡಲವನ್ನು ಸೇರುವುದು ನಿರಂತರವಾಗಿ ಶತಮಾನಗಳಗಟ್ಟಲೆ ನಡೆಯಿತು. ಭೂಮಿ ಕ್ರಮೇಣ ಆರುತ್ತಲೇ ಹೊರಟಿತು. ಭೂಮಿ ಸಾಕಷ್ಟು ಆರಿದ ಮೇಲೆ ಮಳೆಯ ನೀರು ಭೂಮಿಯ ಮೇಲೆ ಬಿದ್ದು, ಹಳ್ಳಗಳಾಗಿ ಹರಿದು ತಗ್ಗಾದ ಪ್ರದೇಶಗಳಲ್ಲಿ ಸಂಗ್ರಹಿಸಿ ಮೊದಲ ಸಾಗರಗಳಾದವು. ಮೊದಲಿನ ಸಾಗರದ ನೀರು ನದಿಯ ನೀರಿನಂತೆಯೇ ಅಂದು ರುಚಿಯಿಲ್ಲದ್ದಾಗಿತ್ತು. ಸಾಗರಕ್ಕೆ ಬಂದ ನೀರು ಭೂಮಿಯ ಮೇಲಿದ್ದ ಲವಣಗಳನ್ನು ಜೊತೆಯಲ್ಲಿ ತರುತ್ತಿದ್ದುವು. ಸಾಗರದಲ್ಲಿ ಸೇರಿದ ನೀರು ಪುನಃ ಶಾಖಕ್ಕೆ ಕಾದು ಆವಿಯಾಗಿ ಮೇಘಮಂಡಲವನ್ನು ಸೇರುತ್ತಿತ್ತು. ಹೀಗೆ ಆವಿಯಾಗಿ ಹೋಗುತ್ತಿದ್ದುದು ನೀರು ಮಾತ್ರವೇ ಹೊರತು ನೀರಿನಲ್ಲಿ ಕರಗಿದ್ದ ಲವಣಗಳಲ್ಲ. ಮೇಘಮಂಡಲವನ್ನು ಸೇರಿದ ನೀರು ಮಳೆಯಾಗಿ ಪುನಃ ಭೂಪ್ರದೇಶಗಳ ಮೇಲೆ ಬೀಳುತ್ತಿತ್ತು. ಹೀಗೆ ಭೂಮಿಯ ಮೇಲೆ ಬಿದ್ದ ನೀರು, ಭೂಮಿಯ ಮೇಲಿದ್ದ ಲವಣಗಳನ್ನು ಸಂಗ್ರಹಿಸಿಕೊಂಡು ಪುನಃ ಸಾಗರವನ್ನು ಸೇರುತ್ತಿತ್ತು. ಈ ರೀತಿಯ ನಡತೆಯನ್ನು ನಾವು ಇಂದಿಗೂ ಕಾಣಬಹುದು. ಹೀಗೆ ದಿನೇದಿನೇ ಸಾಗರದ ನೀರಿನ ಉಪ್ಪಿನ ಅಂಶ ಹೆಚ್ಚುತ್ತ ಹೊರಟಿತು. ಸಾವಿರಾರು ಶತಮಾನಗಳಾದ ಬಳಿಕ ಇಂದು ಸಾಗರದ ನೀರು ಉಪ್ಪಾಗಿರುವುದು ಆಶ್ಚರ್ಯದ ಮಾತಲ್ಲ.

ಮಳೆ ಬಿದ್ದು, ಮಳೆಯ ನೀರು ಸಾಗರವನ್ನು ಸೇರಿ, ಮೇಘಮಂಡಲದಲ್ಲಿದ್ದ ನೀರು ಸಾಗರದಲ್ಲುಳಿದುದರಿಂದ ಮೇಘದ ಗಾತ್ರ, ವಿಸ್ತೀರ್ಣ ಕಡಿಮೆಯಾಗಿ, ಮೊದಲು ಭೂಮಿಯ ಸುತ್ತಲೂ ಒಂದೇ ಹೊದಿಕೆಯಾಗಿದ್ದ ಮೇಘಮಂಡಲ ಕರಗಿ, ತುಣುಕುಗಳಾದವು. ಇದುವರೆವಿಗೂ ಮೇಘಮಂಡಲದ ದಪ್ಪ ಹೊದಿಕೆಯನ್ನು ಬೇಧಿಸಿಕೊಂಡು ಬರಲಾಗದಿದ್ದ ಸೂರ್ಯನ ಕಿರಣಗಳು, ಮೇಘಮಂಡಲ ಕರಗಿ ಚೂರಾದ ಬಳಿಕ ಪ್ರಪ್ರಥಮವಾಗಿ ಭೂಮಿಯನ್ನು ಮುಟ್ಟಿದವು. ಕಗ್ಗತ್ತಲೆಯಮಯವಾಗಿದ್ದ ಅಂದಿನ ಭೂಮಿಯ ಮೇಲ್ಭಾಗ ಅಂದು ಸೂರ್ಯನ ಬೆಳಕನ್ನು ಕಂಡಿತು. ಸೂರ್ಯನ ಬೆಳಕು ಭೂಮಿಯ ಮೇಲೆ ಬಿದ್ದ ಬಳಿಕ ಭೂಮಿಯ ಮೇಲೆ ಜೀವಿಗಳಿಗೆ ಆಸ್ಪದ ಸಿಕ್ಕಿತು. ಏಕೆಂದರೆ ಸೂರ್ಯನ ಬೆಳಕಿಲ್ಲದೆ ಯಾವ ಜೀವಿಯೂ ಬದುಕಲಾರದು.

ಅಂದಿನ ಭೂಭಾಗ ಜಡವಾದ ಕಲ್ಲುಬಂಡೆಗಳು, ಅನಿಲಗಳು, ಅನೇಕ ಮೂಲ


ವಸ್ತುಗಳು ಹಾಗೂ ಸಂಯುಕ್ತ ಪದಾರ್ಥಗಳಿಂದ ತುಂಬಿತ್ತು. (ಭೂಮಿಯ ಮೇಲೆ ಮಣ್ಣು ಕಾಣಿಸಿಕೊಳ್ಳಬೇಕಾದರೆ ಬಹಳ ಕಾಲ ಬೇಕಾಯ್ತು. ಮಣ್ಣು ಉತ್ಪನ್ನವಾದುದು ಜೀವಿಗಳಿಂದ).

ಹೆಪ್ಪುಗಟ್ಟಿದ ಮೇಘಗಳು ವಾಯುಮಂಡಲದಲ್ಲಿ ಒಂದಕ್ಕೊಂದು ತಗುಲಿ ಹುಟ್ಟಿದ ಮಿಂಚಿನ ಶಕ್ತಿಯಿಂದ ಕೆಲವು ಮೂಲವಸ್ತುಗಳು ಒಡಗೂಡಿ ಒಂದು ಸಂಯುಕ್ತ ಪದಾರ್ಥವಾಗಿದ್ದಿರಬಹುದು. ಈ ಸಂಯುಕ್ತ ಪದಾರ್ಥದಲ್ಲಿ ಜೀವ ಲಕ್ಷಣಗಳು ಕಾಣಿಸಿಕೊಂಡಿರಬೇಕು. ಈ ಪದಾರ್ಥವೇ ಜೀವರಸವಾಗಿರಬೇಕು. ಈ ಜೀವರಸವೇ ಜೀವಿಗಳ ಮೂಲವಾಗಿರಬೇಕು. ಅದರ ರಚನೆ, ನೀರೂ ಅಲ್ಲ, ಘನಿಯೂ ಅಲ್ಲ, ಪಾದರಸದಂತಿರಬೇಕು. ಆ ಕಾಲದಲ್ಲಿನ್ನೂ ಭೂಭಾಗವನ್ನು ಭೂಗರ್ಭದಿಂದ ಹೊರಟ ಉಷ್ಣವಾಯುಗಳು ಆವರಿಸಿದ್ದುದರಿಂದ ಈ ಜೀವರಸ ತನ್ನ ನಿವಾಸಕ್ಕೆ ಸಾಗರವನ್ನೇ ಅವಲಂಬಿಸಿರಬೇಕು. ಈ ಜೀವರಸ ಹೊರಗಿನ ಸನ್ನಿವೇಶದ ಅತಿರೇಕವನ್ನು ತಡೆಯಲು ಒಂದು ಹೊರ ಅಂಗವನ್ನು ಬೆಳಸಿಕೊಂಡಿರ ಬೇಕು. ಬಳಿಕ ಈ ಜೀವರಸದ ಆಡಳಿತವನ್ನು ನಿರ್ವಹಿಸಲು ಕೇಂದ್ರವಸ್ತುವೊಂದನ್ನು ಬೆಳೆಸಿಕೊಂಡು, ಇಂದಿನ ಜೀವಕಣಗಳ ಮಟ್ಟವನ್ನು ಮುಟ್ಟಿರಬೇಕು. ಈ ಜೀವ ರಸದ ರಸಾಯನಿಕ ರಚನೆಯನ್ನು ಇದುವರೆವಿಗೂ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಇದರ ರಸಾಯನಿಕ ರಚನೆ ಕ್ಷಣಕ್ಷಣಕ್ಕೂ ಬದಲಾಗುತ್ತಿರುತ್ತದೆ. ಈ ಜೀವರಸ ಇಂದಿನ ಎಲ್ಲ ಜೀವಿಗಳಲ್ಲಿಯೂ ಉಂಟು. ಜೀವರಸವೇ ಜೀವಿಗಳ ಜೀವನದ ಆಧಾರ. ವಿಜ್ಞಾನಿಗಳಿಗೇನಾದರೂ ಜೀವರಸದ ರಸಾಯನಿಕ ರಚನೆ ತಿಳಿದುಹೋಯಿ ತೆಂದರೆ, ಗುಟ್ಟು ಬಯಲಾಯಿತೆಂದರೆ, ಮಾನವನೇ ಪ್ರಯೋಗಶಾಲೆಯಲ್ಲಿ ಜೀವರಸ ವನ್ನು ತಯಾರಿಸಬಲ್ಲವನಾದರೆ, ಶತಮಾನಗಳಿಂದ ಮಾನವನನ್ನು ಕೈಗಟ್ಟಿ ಕುಳಿತಿರು ವಂತೆ ಮಾಡಿರುವ ಹುಟ್ಟುಸಾವುಗಳ ಪ್ರಶ್ನೆಗೆ ಉತ್ತರ ಸಿಕ್ಕೀತು!!

"ಬಾಕ್ಟೀರಿಯಾ" ಎಂಬ ಜೀವಿಗಳನ್ನು ಬಿಟ್ಟರೆ ಬದುಕಿರುವ ಪ್ರತಿಯೊಂದು ಜೀವಿಯೂ, ಪ್ರಾಣಿಯಾಗಲೀ ಸಸ್ಯವಾಗಲೀ ಜೀವರಸದಿಂದ ಉತ್ಪತ್ತಿಯಾದ 'ಜೀವಕಣ'ಗಳಿಂದ ಮಾಡಲ್ಪಟ್ಟಿವೆ. ಅಂದಮೇಲೆ ಜೀವಕಣವೆಂದರೇನು ಎಂದು ತಬ್ಬಿಬ್ಬಾಗಬೇಕಾಗಿಲ್ಲ.

ಸಾಮಾನ್ಯವಾಗಿ ಒಂದು ಜೀವಕಣದಲ್ಲಿ ಜೀವರಸವೂ, ಜೀವರಸದ ಸುತ್ತಲೂ ಜೀವಕಣ ಕವಚವೂ, ನಡುವೆ ಜೀವಕಣ ಬೀಜವೂ ಇವೆ. ಈ ಬೀಜದಲ್ಲಿ, ತೆಳ್ಳಗೆ ಸುತ್ತಿಕೊಂಡಿರುವ ದಾರದಂತಿರುವ ವರ್ಣರೇಖೆಗಳಿವೆ. ಈ ವರ್ಣರೇಖೆಗಳಲ್ಲಿ ಆನು ವಂಶಿಕವಾಗಿ ಬರುವ ನಡತೆ ಮತ್ತು ನಡವಳಿಕೆಗಳನ್ನು ಹೊತ್ತು ತರುವ ಚುಕ್ಕಿ

ಗಳಂತಿರುವ 'ವಂಶಾಂಶ' (Gene) ಎಂಬ ವಸ್ತುಗಳಿವೆ. ಈ ವರ್ಣರೇಖೆಗಳೆಂಬ ದಾರದುಂಡೆಯ ಸುತ್ತಲೂ ಬೀಜಾಂಗ (Nuclear Membrane) ವೊಂದಿದೆ. (ಚಿತ್ರ ೧)



ಜೀವಕಣ

ಜೀವಕಣವನ್ನು ಒಂದು ರಾಜ್ಯಕ್ಕೆ ಹೋಲಿಸಿದರೆ, ಬೀಜವನ್ನು ರಾಜನಿಗೆ ಹೋಲಿಸಬಹುದು.

ಇಂದಿನ ಅಣುಯುಗದಲ್ಲಿ 'ಅಣು' ಎಂಬ ಪದವನ್ನು ಕೇಳದವರಿಲ್ಲ ಮತ್ತು ತಿಳಿಯದವರಿಲ್ಲ. ಅಣು ಹೇಗೆ ಪದಾರ್ಥಗಳ ಅಂದರೆ ಮೂಲವಸ್ತುಗಳ ಕನಿಷ್ಠ ಪ್ರಮಾಣವೋ ಹಾಗೆಯೇ ಜೀವಕಣವೂ ಜೀವಿಗಳ ಕನಿಷ್ಠಭಾಗ. ಅಣು ಹೇಗೆ ಭೌತಶಾಸ್ತ್ರ ಮತ್ತು ರಸಾಯನಿಕ ಶಾಸ್ತ್ರಗಳಲ್ಲಿ ಪ್ರಾಮುಖ್ಯಸ್ಥಾನವನ್ನು ಗಳಿಸಿದೆಯೋ 'ಜೀವಕಣವೂ ಜೀವಶಾಸ್ತ್ರದಲ್ಲಿ ಅದೇ ಸ್ಥಾನವನ್ನು ಪಡೆದಿದೆ.'

ಸಾಮಾನ್ಯವಾಗಿ ಜೀವಕಣಗಳು ನಮ್ಮ ಕಣ್ಣಿಗೆ ಕಾಣಲಾರವು. ಅವನ್ನು

ಸೂಕ್ಷ್ಮದರ್ಶಕ ಯಂತ್ರಗಳ ಸಹಾಯದಿಂದ ದೊಡ್ಡದು ಮಾಡಿಯೇ ನೋಡಬೇಕು. ಹಿಂದಿನ ಜೀವಶಾಸ್ತ್ರಜ್ಞರಿಗೆ ಈ ಜೀವಕಣಗಳ ವಿಷಯವೇ ತಿಳಿದಿರಲಿಲ್ಲ. ಸೂಕ್ಷ್ಮದರ್ಶಕ ಯಂತ್ರಗಳನ್ನು ಕಂಡುಹಿಡಿದ ಬಳಿಕ ಪ್ರತಿಯೊಂದು ಜೀವಿಯೂ ಜೀವಕಣಗಳು ಎಂಬ ಕನಿಷ್ಠ ಪ್ರಮಾಣಭಾಗಗಳಿಂದ ಮಾಡಲ್ಪಟ್ಟಿವೆ ಎಂಬುದು ತಿಳಿದುಬಂದಿತು.

ಹೀಗೆ ಸೂಕ್ಷ್ಮದರ್ಶಕ ಯಂತ್ರಗಳ ಸಹಾಯದಿಂದ ಜೀವಿಗಳನ್ನು ಪರೀಕ್ಷಿಸಿದವರಲ್ಲಿ 'ರಾಬರ್ಟ್‌ಹುಕ್' ಎಂಬ ಜೀವಶಾಸ್ತ್ರಜ್ಞನು ಅತಿ ಮುಖ್ಯವಾದವನು. ಈತನು ಸಸ್ಯಗಳ ಭಾಗಗಳನ್ನು ಪರೀಕ್ಷಿಸುತ್ತಿದ್ದಾಗ ಸಸ್ಯಗಳ ರಚನೆ ಜೇನುಗೂಡಿನಂತಿರುವುದನ್ನು ಕಂಡನು. ಈ ಒಂದೊಂದು ಗೂಡುಗಳನ್ನೇ ಆತನು ಅಂದು 'ಕಣ' ಎಂದು ನಾಮಕರಣಮಾಡಿದನು. ಈ ಕಣ ಜೀವಿಗಳಲ್ಲಿರುವುದರಿಂದ ಇದನ್ನು 'ಜೀವಕಣ' ಎಂದು ಕರೆದನು.

ದೊಡ್ಡದೊಡ್ಡ ಜೀವಿಗಳು ಇಂತಹ ಲಕ್ಷಾಂತರ ಜೀವಕಣಗಳಿಂದ ಮಾಡಲ್ಪಟ್ಟಿವೆ. ಈ ಜೀವಕಣಗಳು ಒಂದೇ ತರಹವಿರದೆ, ತಾವು ಮಾಡುವ ಕೆಲಸಗಳಿಗನುಗುಣವಾಗಿ ಮಾರ್ಪಟ್ಟಿರುತ್ತವೆ.

ಜೀವಿಯಲ್ಲಿ ಒಂದು ಕೆಲಸವನ್ನು ಒಂದು ಜೀವಕಣವೇ ಮಾಡಬಹುದು, ಅಥವಾ ಒಂದೇ ರೀತಿಯ ಹಲವಾರು ಜೀವಕಣಗಳು ಸೇರಿ ಮಾಡಬಹುದು ಅಥವಾ ಬೇರೆ ಬೇರೆ ರೀತಿಯ ಜೀವಕಣಗಳು ಸೇರಿ ಮಾಡಬಹುದು.

ಸೂಕ್ಷ್ಮವಾಗಿರುವ ಅನೇಕ ಜೀವಿಗಳು ಒಂದೇ ಒಂದು ಜೀವಕಣವನ್ನು ಹೊಂದಿವೆ. ಇವನ್ನು 'ಏಕಕಣಜೀವಿ'ಗಳೆನ್ನುತ್ತಾರೆ. ಒಂದಕ್ಕಿಂತ ಹೆಚ್ಚು ಜೀವಕಣಗಳಿರುವ ಜೀವಿಗಳನ್ನು 'ಬಹುಕಣಜೀವಿ'ಗಳೆನ್ನುತ್ತೇವೆ.

ಮೊಟ್ಟಮೊದಲು ಪ್ರಪಂಚದಲ್ಲಿ ಅವತರಿಸಿದ ಜೀವಿಗಳು, ಏಕಕಣಜೀವಿಗಳಿಗಿಂತಲೂ ಸಾಮಾನ್ಯವಾಗಿದ್ದಿರಬೇಕು. ಅಂದರೆ ಅವುಗಳಲ್ಲಿ ಜೀವಕಣಬೀಜವಿರುವುದಿಲ್ಲ. ಕ್ರಮೇಣ ಬೀಜವೊಂದನ್ನು ಬೆಳೆಸಿಕೊಂಡು ಏಕಕಣಜೀವಿಗಳಾಗಿರಬೇಕು. ಆ ಮೊದಲಿನ ಏಕಕಣಜೀವಿಗಳಿಂದಲೇ ಇಂದಿನ ಪ್ರಾಣಿವರ್ಗ ಮತ್ತು ಸಸ್ಯವರ್ಗಗಳು ವಿಕಾಸವಾದುವು.

ಪ್ರತಿಯೊಂದು ಜೀವಿಗೂ ಬಾಳಿನಲ್ಲಿ ನೂರಾರು ಸಮಸ್ಯೆಗಳೇಳುತ್ತವೆ. ಈ ಸಮಸ್ಯೆಗಳಿಗೆ ಉತ್ತರವನ್ನೋ, ಪರಿಹಾರವನ್ನೋ ಕಂಡುಹಿಡಿಯುವುದರಲ್ಲಿಯೇ ಜೀವಿಗಳ ರೂಪಾಂತರವಾಗಿದೆ. ಇಬ್ಬರ ವಾಸಕ್ಕೆ ಕಟ್ಟಿದ ಮನೆ, ಮಕ್ಕಳಾಗಿ, ಮಕ್ಕಳು ಬೆಳೆದಮೇಲೆ, ಅವರಿಗೂ ಪುನಃ ಮನೆಯನ್ನು ವಿಸ್ತರಿಸಬೇಕಾಗುತ್ತದೆ.

ಆಗ ಮೊದಲಿದ್ದ ಮನೆಗೂ, ವಿಸ್ತಾರವಾದ ಮನೆಗೂ ಇರುವ ವ್ಯತ್ಯಾಸವೇ ಇಂದು ಏಕಕಣಜೀವಿಗಳಿಗೂ ಬಹುಕಣಜೀವಿಗಳಿಗೂ ಇರುವ ವ್ಯತ್ಯಾಸ. ಹಾಗಾದರೆ ಈ ಸಮಸ್ಯೆಗಳೇನೆಂಬುದನ್ನು ತಿಳಿದುಕೊಳ್ಳೋಣ.

ಒಂದು ಜೀವಿ ಹುಟ್ಟಿದ ಮೇಲೆ ಬದುಕಬೇಕು. ಬದುಕಲು ಶಕ್ತಿಕೊಡುವ ಆಹಾರ ಬೇಕು. ಆಹಾರ ಜೀವಿ ಇದ್ದಲ್ಲಿಯೇ ಸಿಗುವುದಿಲ್ಲ. ಸಿಕ್ಕರೂ ಬಹಳ ದಿನಗಳ ವರೆಗೆ ತಡೆಯಲಾರದು. ಅಂದಮೇಲೆ ಆಹಾರಾನ್ವೇಷಣೆಗಾಗಿ ಸ್ಥಳದಿಂದ ಸ್ಥಳಕ್ಕೆ ಹೋಗಬೇಕು. ಹೀಗೆ ಹೋಗಲು ಚಲನಶಕ್ತಿ ಬೇಕು. ಆಹಾರವನ್ನು ಕಂಡುಹಿಡಿಯಲು ಇಂದ್ರಿಯಜ್ಞಾನ ಬೇಕು. ಆಹಾರವನ್ನು ತಲುಪಿದ ಕೂಡಲೇ ಅದನ್ನು ದೇಹದೊಳಕ್ಕೆ ತೆಗೆದುಕೊಳ್ಳಬೇಕು. ಅದನ್ನು ಅರಗಿಸಬೇಕು. ಅರಗಿದ ಆಹಾರವನ್ನು ದೇಹದೊಳಕ್ಕೆ ಸೇರಿಸಿಕೊಳ್ಳಬೇಕು. ದೇಹದ ಬೇರೆಬೇರೆ ಭಾಗಗಳಿಗೆ ಒದಗಿಸಬೇಕು. ದೇಹದ ಚಟುವಟಿಕೆಗಳಿಂದಾಗಿ ಹುಟ್ಟುವ ಮಲಿನ ವಸ್ತುಗಳನ್ನೂ ಇಂಗಾಲಾಮ್ಲವನ್ನೂ ದೇಹದಿಂದ ಹೊರಕ್ಕೆ ನೂಕಬೇಕು. ದೇಹದ ಚಟುವಟಿಕೆ ಗಳಿಗೆ ಬೇಕಾಗುವ ಕ್ರಿಯಾಶಕ್ತಿಯನ್ನು ನೀರಿನಲ್ಲಿಯೋ, ಗಾಳಿಯಲ್ಲಿಯೋ ಇರುವ ಆಮ್ಲಜನಕದಿಂದ ಪಡೆಯಬೇಕು. ಅಂದರೆ ಉಸಿರಾಡಬೇಕು. ತನ್ನ ಜಾತಿ ಬೆಳೆಯಲು ತನ್ನಂತಿರುವ ಜೀವಿಗಳಿಗೆ ಜನ್ಮವೀಯಬೇಕು.

ಬಹುಕಣಜೀವಿಗಳಲ್ಲಿಯಾದರೆ ಅವುಗಳ ಕೆಲಸಗಳಿಗನುಗುಣವಾಗಿ ಅಂಗಗಳಿರು ತ್ತವೆ. ಈ ಅಂಗಗಳು ಬೇರೆಬೇರೆ ಗುಂಪಿನ ನೂರಾರು ಜೀವಕಣಗಳಿಂದ ಮಾಡಲ್ಪಟ್ಟಿವೆ.

ಆದರೆ ಏಕಕಣಜೀವಿಗಳಲ್ಲಿ ಒಂದೇ ಒಂದು ಜೀವಕಣ ಎಲ್ಲಾ ಕೆಲಸಗಳನ್ನು ನಿರ್ವಹಿಸಬೇಕು. ಮೊದಲು ಹುಟ್ಟಿದ ಹಿಂದಿನ ಏಕಕಣಜೀವಿಗಳಲ್ಲಿಯೂ ಇಂದಿಗೂ ಅದೇ ಮಟ್ಟದಲ್ಲಿ ವಿಕಾಸದ ಪರಿಣಾಮಕ್ಕೂ ಗುರಿಯಾಗದೆ ಉಳಿದಿರುವ ಜೀವಿಗಳ ಲ್ಲಿಯೂ ಇದೇ ರೀತಿಯ ವರ್ತನೆಯನ್ನು ಕಾಣಬಹುದು.

ಒಬ್ಬರಿಗಿಂತ ಇಬ್ಬರು ಮೇಲು ಎಂಬುವ ಗಾದೆಯಂತೆ, ಒಂದೇ ಒಂದು ಜೀವಕಣ ಎಲ್ಲಾ ಕೆಲಸಗಳನ್ನು ನಿರ್ವಹಿಸುವುದಕ್ಕಿಂತ ಹಲವಾರು ಜೀವಕಣಗಳು ಸೇರಿ ಈ ಕೆಲಸಗಳನ್ನು ಹಂಚಿಕೊಂಡು ಮಾಡಿದರೆ ಉತ್ತಮ, ಹಾಗೂ ಸುಲಭ ಎಂಬುದನ್ನು ಕಾಲಕ್ರಮದಲ್ಲಿ ಅರಿತುಕೊಂಡು, ಅಂದಿನ ಏಕಕಣಜೀವಿಗಳು ಸಾಮೂಹಿಕ ಜೀವನಕ್ಕೆ ತೊಡಗಿ ಬಹುಕಣಜೀವಿಗಳಾಗಿರಬೇಕು. ಮೊದಲಿನ ಈ ಬಹುಕಣಜೀವಿಗಳಲ್ಲಿಯೂ, ಒಂದೊಂದು ಕೆಲಸಕ್ಕೂ ಒಂದೊಂದು ಅಂಗ ಗಳಿರಲಿಲ್ಲ. ಕ್ರಮೇಣ ಹೆಚ್ಚು ಸಮರ್ಥವಾದ ಅಂಗಗಳ ಅಗತ್ಯತೆ ಹೆಚ್ಚಾದಂತೆ ಅಂಗಗಳ ಬೆಳವಣಿಗೆಯಾಯ್ತು. ಹೆಚ್ಚು ಕೆಲಸವನ್ನು ಸ್ವಲ್ಪ ಕಾಲಾವಕಾಶದಲ್ಲಿ

ಕುಶಲತೆಯಿಂದ ಹಾಗೂ ಚಾಕಚಕ್ಯತೆಯಿಂದ ಮಾಡುವ ಸಾಮರ್ಥ್ಯ ಈ ಅಂಗಗಳಿಗಿದೆ. ಹೀಗೆ ಏಕಕಣಜೀವಿಗಳಿಂದ ಬಹುಕಣಜೀವಿಗಳು ಉತ್ಪತ್ತಿಯಾದನಂತರ, ಕಾಲ ಧರ್ಮ, ಸನ್ನಿವೇಶ ಮತ್ತು ವಾತಾವರಣವನ್ನನುಸರಿಸಿ ಇಂದಿನ ಜೀವಿಗಳ ವಿಕಾಸವಾಗಿದೆ.

ಮೊಟ್ಟಮೊದಲು ಹುಟ್ಟಿದ ಈ ಜೀವಿಗಳ ಆಹಾರವೇನಾಗಿತ್ತು ಮತ್ತು ಹೇಗೆ ಪಡೆಯುತ್ತಿದ್ದವು ಎಂದು ಹೇಳುವುದು ಕಷ್ಟ. ಪ್ರಾಯಶಃ ಅಂದಿನ ನಿರಿಂದ್ರಿಯ ಪದಾರ್ಥಗಳೇ ಅವುಗಳ ಆಹಾರವಾಗಿರಬೇಕು.

ಕೆಲವು ಏಕಕಣಜೀವಿಗಳು ಪ್ರಾಸಂಗಿಕವಾಗಿ ರಕ್ಷಾಕವಚ (Cellulose) ಎಂಬ ಪದಾರ್ಥವನ್ನು ತಮ್ಮ ಜೀವಕಣ ಕವಚದಲ್ಲಿ ಸೇರಿಸಿ ಭದ್ರಪಡಿಸಿಕೊಂಡು ಜೀವರಸದಲ್ಲಿ ಹರಿತ್ತು (Chlorophyl) ಎಂಬ ಪದಾರ್ಥವನ್ನು ಪಡೆದವು. ಈ ಹರಿತ್ತು ಹಸರುಬಣ್ಣದ್ದಾಗಿದ್ದು, ಸೂರ್ಯನ ಕಿರಣಗಳಲ್ಲಿರುವ ಕ್ರಿಯಾಶಕ್ತಿಯನ್ನು ಉಪಯೋಗಿಸಿಕೊಂಡು, ಗಾಳಿಯಲ್ಲಿರುವ ಇಂಗಾಲಾಮ್ಲ ಮತ್ತು ನೀರನ್ನು ಸೇರಿಸಿ ಆಹಾರವನ್ನು ತಯಾರಿಸಬಲ್ಲ ಶಕ್ತಿಯನ್ನು ಪಡೆದವು. ಹೀಗೆ ಹರಿತ್ತನ್ನೊಳಗೊಂಡು ಹಸುರಾದ ಈ ಏಕಕಣಜೀವಿಗಳು ಕ್ರಮೇಣ ಸಸ್ಯಗಳಾಗಿ ವಿಕಾಸ ಹೊಂದಿದವು.

ಹಲವು ಜೀವಕಣಗಳು ಹರಿತ್ತನ್ನು ಪಡೆಯದೆ, ತಮ್ಮ ಆಕಾರವನ್ನು ಕ್ಷಣ ಕ್ಷಣಕ್ಕೂ ಬದಲಾಯಿಸುವ ಚುರುಕುಪ್ರವೃತ್ತಿಯನ್ನು ಪಡೆದವು. ಈ ಜೀವಿಗಳು ಸ್ವತಃ ಆಹಾರವನ್ನು ತಯಾರಿಸಲಾರದೆ, ತಮ್ಮ ನೆರೆಯಲ್ಲಿದ್ದ ಹಸಿರುಜೀವಿಗಳನ್ನೇ ಆಹಾರವಾಗಿ ಉಪಯೋಗಿಸತೊಡಗಿದವು. ಈ ಜೀವಿಗಳೇ ಪ್ರಾಣಿಗಳಾಗಿ ವಿಕಾಸ ಹೊಂದಿದವು.

ಮೊದಲು ನಡೆದ ಈ ವಿಕಾಸದ ಮೊದಲ ಹಂತದಲ್ಲಿ ಯಾವ ಪರಿವರ್ತನೆಯನ್ನೂ ಹೊಂದದೆ ತಟಸ್ಥವಾಗಿ ನಿಂತ ಕೆಲವು ಜೀವಿಗಳು ಇಂದಿಗೂ ಅದೇ ರೀತಿಯ ಮಟ್ಟದಲ್ಲಿ ಉಳಿದಿವೆ.

ಜೀವಿಗಳು ಮೊಟ್ಟಮೊದಲು ಸಾಗರದಲ್ಲಿ ಹುಟ್ಟಿದವೆಂದು ಮೊದಲೇ ಹೇಳಿದೆ. ಹೀಗೆ ವಿಕಾಸಹೊಂದಿ ಪರಿವರ್ತಿಸಲ್ಪಟ್ಟ ಜೀವಿಗಳೆಲ್ಲಕ್ಕೂ ಸಾಗರವೇ ತೌರುಮನೆಯಾಯ್ತು. ಜೀವಿಗಳು ಅಂಗಾಂಗಗಳನ್ನು ಬೆಳೆಸಿಕೊಂಡು ಗಾತ್ರದಲ್ಲಿ ಬೆಳೆದವು. ಜೀವಿಗಳ ಸಂಖ್ಯೆಯೂ ಬೆಳೆಯಿತು. ಆಹಾರ, ಆಶ್ರಯುವನ್ನರಸುತ್ತ ಜೀವಿಗಳು ಸಾಗರದ ಮೂಲೆಮೂಲೆಗಳನ್ನು ಆಕ್ರಮಿಸಿದವು.

ಸಾಗರದಲ್ಲಿ ಹುಟ್ಟಿ ಬೆಳೆದ ಈ ಜೀವಿಗಳು ಹೊಳೆ ಹಾಗೂ ಕೆರೆಕಟ್ಟೆಗಳಿಗೂ

ಮತ್ತು ಭೂಮಿಯ ಮೇಲ್ಭಾಗಕ್ಕೂ ಹೇಗೆ ಹರಡಿದವೆಂಬುದನ್ನು ಮಧ್ಯವರ್ತಿಗಳಾಗಿ ವಿಕಾಸರೂಪದಲ್ಲಿಯೇ ಉಳಿದಿರುವ ಹಲವಾರು ಜೀವಿಗಳ ಸಹಾಯದಿಂದಲೂ ಮತ್ತು ಊಹೆಯಿಂದಲೂ ಹೇಳಬಹುದು.

ಎಲ್ಲರಿಗೂ ತಿಳಿದಿರುವಂತೆ ಸಾಗರದ ನೀರು ಉಪ್ಪು ; ನದಿಯ ನೀರು, ಕೆರೆ ಕಟ್ಟೆಗಳ ನೀರು ಸಿಹಿ ಅಥವಾ ರುಚಿಯಿಲ್ಲದ್ದು, ಒಟ್ಟಿನಲ್ಲಿ ಉಪ್ಪುನೀರಲ್ಲ. ಹೀಗಿರುವಾಗ ಉಪ್ಪುನೀರಿನಲ್ಲಿ ವಾಸಮಾಡುವ ಒಂದು ಜೀವಿ ಒಂದೇಸಾರಿಗೆ ಕೆರೆ ಕಟ್ಟೆಗಳ ಮತ್ತು ನದಿಗಳ ನೀರಿಗೆ ಹೊಂದಿಕೊಳ್ಳಲಾರದು. ಆದರೆ ಈ ರೀತಿಯ ರೂಪಾಂತರತೆ ಸ್ವಲ್ಪಸ್ವಲ್ಪವಾಗಿ ರೂಪಗೊಂಡಿದೆ. ಇದಕ್ಕೆ ಅವಕಾಶವಿತ್ತ ಸ್ಥಳಗಳೆಂದರೆ ನದೀಮುಖಜ ಭೂಮಿಗಳು. ಸಾಗರದಿಂದ ನದೀಮುಖಜ ಭೂಮಿಯ ಮುಖಾಂತರ ನಾವು ನದಿಯ ಭೂಭಾಗದ ಒಳಭಾಗಕ್ಕೆ ನಡೆದರೆ, ನದಿಯ ನೀರಿನಲ್ಲಿರುವ ಉಪ್ಪಿನ ಅಂಶ ಕಡಿಮೆಯಾಗುತ್ತಾ ಹೋಗುತ್ತದೆ. ಸಾಗರದ ಜೀವಿಗಳು ಈ ಮೂಲಕವಾಗಿ ನದಿಗಳನ್ನು ಕ್ರಮೇಣವಾಗಿ ಪ್ರವೇಶಿಸಿ, ಸಿಹಿನೀರಿನ ವಾತಾವರಣಕ್ಕೆ ಹೊಂದಿಕೊಂಡು, ನದಿಗಳು ಒಣಗಿಹೋದಾಗ ಕೆರೆಕಟ್ಟೆಗಳಿಗೆ ವಲಸೆ ಬಂದಿರಬೇಕು.

ಆದರೆ ಭೂಮಿಯ ಮೇಲಿನ ವಾಸಕ್ಕೆ ಜೀವಿಗಳು ಹೊಂದಿಕೊಳ್ಳಲು ತುಂಬಾ ಮಾರ್ಪಾಡುಗಳು ಬೇಕು. ಏಕೆಂದರೆ ಸಾಗರದಲ್ಲಿರುವುದೂ ನೀರು, ನದಿಯಲ್ಲಿರುವುದೂ ನೀರು, ಎರಡರಲ್ಲಿ ಇರುವುದೂ ನೀರು. ನೀರಿನಲ್ಲಿರುವ ಉಪ್ಪಿನ ಅಂಶ ಒಂದರಲ್ಲಿ ಹೆಚ್ಚು ಮತ್ತೊಂದರಲ್ಲಿ ಕಡಿಮೆ ಅಷ್ಟೆ. ಎರಡು ವಿಧವಾದ ನೀರಿನಲ್ಲಿಯೂ ಜೀವಿಗಳಿಗೆ ಆವಶ್ಯಕವಾದ ಆಮ್ಲಜನಕ ನೀರಿನಲ್ಲಿಯೇ ಸಿಕ್ಕುತ್ತದೆ. ಒಂದೇತರನಾದ ವಿವಿಧ ವಾತಾವರಣಗಳಿಗೆ ಹೊಂದಿಕೊಳ್ಳುವುದು ಸುಲಭ. ಮಾನವ ಭೂಮಿಯ ಮೇಲೆ ಯಾವ ಭಾಗದಲ್ಲಿಯಾದರೂ ಜೀವಿಸಿರಬಲ್ಲ. ಆದರೆ ನೀರಿನೊಳಗೆ ಜೀವಿಸಲಾರ. ಏಕೆ ? ಅವನು ಗಾಳಿಯಲ್ಲಿರುವ ಆಮ್ಲಜನಕವನ್ನು ಉಸಿರಾಡಲು ಮಾತ್ರ ಅಂಗ (ಶ್ವಾಸಕೋಶ) ಗಳನ್ನು ಹೊಂದಿದ್ದಾನೆ. ಆದುದರಿಂದ ನೀರಿನೊಳಗಿದ್ದು ನೀರಿನೊಳಗಿರುವ ಆಮ್ಲಜನಕವನ್ನು ಉಪಯೋಗಿಸಿಕೊಳ್ಳಲಾರ. ಅಂದರೆ ಉಸಿರಾಡಲಾರ. ಹೀಗಿರುವಾಗ ನೀರಿನೊಳಗಡೆ ಇದ್ದು, ನೀರನ್ನೇ ಉಸಿರಾಡುತ್ತಿದ್ದ ಜೀವಿಗಳು ನೀರಿನಿಂದ ಹೊರಬಂದು, ಭೂಮಿಯ ಮೇಲೆ ವಾಸಿಸಿ, ಗಾಳಿಯನ್ನೇ ಉಸಿರಾಡಲು ತೊಡಗಿದ ಬಗೆ ಹೇಗೆ ಎಂಬ ಸಮಸ್ಯೆ ತಲೆದೋರುತ್ತದೆ.

ಈ ರೀತಿಯಾಗಿ ರೂಪಾಂತರ ಹೊಂದಲು ಸಾಧ್ಯವಾದ ಎರಡು ದಾರಿಗಳಿವೆ :

ಮೊದಲನೆಯದಾಗಿ :—ಜೀವಿಗಳು ಸಾಗರದಿಂದ ನದಿಗೆ, ಕೆರೆಕಟ್ಟೆಗಳಿಗೆ ಬಂದವೆಂದು ಹೇಳಿದುದು ಸರಿಯಷ್ಟೆ. ಭೂಮಿಯ ಮೇಲೆ ಹರಿಯುತ್ತಿರುವ ಈ ನದಿ

ಗಳು ಆಗಾಗ ಮಳೆಯಿಲ್ಲದೆ, ಬೇಸಿಗೆಯಲ್ಲಿ ಒಣಗಿಹೋಗುವುದನ್ನು ಕೇಳಿದ್ದೇವೆ. ಈಗ ಕೆಲವು ಜೀವಿಗಳು ನದೀಮುಖಜಭೂಮಿಯ ಮುಖಾಂತರ ಸಾಗರದಿಂದ ನದಿಗೆ ಬಂದವೆಂದಂದುಕೊಳ್ಳೋಣ. ನದಿ ಒಣಗಿಹೋದಾಗ ನೀರಿಲ್ಲದೆ, ಉಸಿರಾಡಲಾರದೆ, ಅಳಿಯಬೇಕು, ಇಲ್ಲವೆ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಬೇಕು. ಹೀಗೆ ಈ ಹೊಂದುವಣಿ ಜೀವಿಗಳಲ್ಲಿ ಕೂಡಲೇ ಆಗಲಿಲ್ಲ. ನೀರಿನಲ್ಲಿ ಉಸಿರಾಡುತ್ತಿದ್ದ ಜೀವಿಗಳು ಗಾಳಿಯಲ್ಲಿ ಉಸಿರಾಡುವ ರೀತಿಯನ್ನೂ, ಅಂಗಮಾರ್ಪಾಡುಗಳನ್ನೂ, ನಿಧಾನವಾಗಿ ಹಲವಾರು ತಲೆಮಾರುಗಳನಂತರ ಸ್ವಲ್ಪಸ್ವಲ್ಪವಾಗಿ ರೂಪಾಂತರಹೊಂದಿ ಬೆಳೆಸಿಕೊಂಡಿವೆ.

ಎರಡನೆಯದಾಗಿ :—ಸಾಗರದಲ್ಲಿ ಉಬ್ಬರವಿಳಿತಗಳನ್ನು ಕೇಳಿದ್ದೇವೆ. ಅಂದರೆ ದಿನದಲ್ಲಿ ಅರ್ಧಕಾಲ ಸಾಗರದ ನೀರು ಉಕ್ಕಿಬಂದಿರುತ್ತದೆ. ಮತ್ತರ್ಧಕಾಲ ಇಳಿದು ಹೋಗಿರುತ್ತದೆ. ಹೀಗೆ ಉಕ್ಕಿಬಂದ ನೀರಿನ ಜೊತೆಯಲ್ಲಿ ಬಂದ ಒಂದು ಜೀವಿ ನೀರು ಇಳಿದು ಹೋಗುವಾಗ ಸಾಗರದ ದಂಡೆಯ ಮರಳಿನ ಮೇಲೆ, ಬಂಡೆಗಳ ನಡುವೆ ಸಿಕ್ಕಿ ಅಕಸ್ಮಾತ್ತಾಗಿ ಉಳಿಯಿತೆಂದಂದುಕೊಳ್ಳೋಣ. ಅಕಸ್ಮಾತ್ತೇಕೆ, ಅನುದಿನವೂ ನಡೆಯುತ್ತಿರುತ್ತದೆ. ಬಂಡೆಗಳ ಮಧ್ಯೆ ಬಹಳ ಪ್ರಾಣಿಗಳು ಉಳಿದುಹೋಗುತ್ತವೆ. ಹೀಗೆ ಮರಳಿನ ಮೇಲೆ ಉಳಿದ ಒಂದು ಜೀವಿ ಅರ್ಧದಿನ ಪೂರ್ತಿ, ಪುನಃ ನೀರು ಉಕ್ಕಿಬರುವುದನ್ನೇ ಕಾಯಬೇಕು. ಉಸಿರುಕಟ್ಟಿ ಒಂದು ನಿಮಿಷವಿರುವುದೂ ಕಷ್ಟ ಎಂಬುದು ವಾಸ್ತವ. ಹೀಗಿರುವಾಗ ಅರ್ಧದಿನ ಪೂರ್ತಿ ಉಸಿರುಕಟ್ಟಿ ಇರುವುದೆಂದರೆ ಆಗದ ಕೆಲಸ ಎಂದಮೇಲೆ, ಹೀಗೆ ಈ ಕಷ್ಟಕ್ಕೆ ಗುರಿಯಾದ ಒಂದು ಜೀವಿ, ನೈಜವಾಗಿ, ಉಸಿರು ಕಟ್ಟಬೇಕು, ಇಲ್ಲವೇ ಅರ್ಧದಿನಕ್ಕೆ ಸಾಕಾಗುವಷ್ಟು ನೀರನ್ನು ಉಸಿರಾಡಲು ಅನುಕೂಲವಾಗುವಂತೆ ಕೂಡಿಟ್ಟುಕೊಂಡು, ನೀರು ಪುನಃ ಉಕ್ಕಿಬರುವುದನ್ನು ಕಾಯಬೇಕು, ಇಲ್ಲವೇ ಗಾಳಿಯನ್ನು ಉಸಿರಾಡಲು ಪ್ರಯತ್ನಿಸಬೇಕು, ಇಲ್ಲವೇ ಅಳಿಯಬೇಕು. ಉಸಿರು ಕಟ್ಟಲು ಆಗದೆ, ಗಾಳಿಯಲ್ಲಿ ಉಸಿರಾಡಲಾರದೆ, ಎದುರಾದ ಕಷ್ಟದ ಅರಿವಿಲ್ಲದೆ ನೀರನ್ನೂ ಕೂಡಿಟ್ಟುಕೊಳ್ಳದೆ ಅಳಿದ ಜೀವಿಗಳದೆಷ್ಟೋ! ಈ ರೀತಿಯ ಸಾವು ಬದುಕುಗಳ ಹೋರಾಟ ನಿರಂತರವಾಗಿ ಸಾಗಿತು. ಕೊನೆಗೆ ಕೆಲವು ಜೀವಿಗಳು ನೀರನ್ನು ಕೂಡಿಟ್ಟುಕೊಳ್ಳುವುದನ್ನು ಕಲಿತವು. ಈ ತೆರನಾದ ಜೀವಿಗಳು ಇಂದಿಗೂ ಇವೆ. ಹಲವು ನಿಧಾನವಾಗಿ ಗಾಳಿಯನ್ನೇ ಉಸಿರಾಡಲು ತೊಡಗಿದವು.

ಹೀಗೆ ಸಾಗರದಲ್ಲಿ ಹುಟ್ಟಿ, ಬೆಳೆದು, ವಿಸ್ತರಿಸಿ, ಭೂಮಿಯ ಮೇಲೆ ಹರಡಿದ ಜೀವಿಗಳು ವಿಕಾಸಗೊಂಡು ರೂಪಾಂತರ ಹೊಂದುತ್ತ ಬಂದವು. ಇದೇ ವಿಕಾಸದ ಪರಿಣಾಮ ; ಇಂದಿನ ಜೀವಸಾಮ್ರಾಜ್ಯ. ಈ ಜೀವಸಾಮ್ರಾಜ್ಯದಲ್ಲಿ ಪ್ರಾಮುಖ್ಯ

ಸ್ಥಾನವನ್ನು ಪಡೆದಿರುವ ಮಾನವನು ಸಾಮ್ರಾಟನಾಗಲು ಸತತವಾಗಿ ಯತ್ನಿಸುತ್ತಿದ್ದಾನೆ.

ಜೀವಿಗಳಲ್ಲಿ ನಡೆದ ಈ ಕ್ರಾಂತಿಯಲ್ಲಿ ಎಲ್ಲ ಜೀವಿಗಳೂ ರೂಪಾಂತರ ಹೊಂದಲಿಲ್ಲ. ಕ್ರಾಂತಿಯು ಈ ರೈಲುಗಾಡಿಯಲ್ಲಿ ಹೊರಟ ಜಾಗದಿಂದ ಹತ್ತಿದ ಪ್ರಯಾಣಿಕರ ಸಂಖ್ಯೆ ಬಹಳ. ಎಲ್ಲವೂ ರೈಲುಗಾಡಿಯೊಡನೆ ಪೂರ್ತಿಯಾಗಿ ಪ್ರಯಾಣ ಬೆಳಸಲಿಲ್ಲ. ಕೆಲವು ಅಲ್ಲಲ್ಲಿಯೇ ಇಳಿದು ನಿಂತುವು. ಹೀಗೆ ಪೂರ್ತಿ ವಿಕಾಸ ಹೊಂದದೆ, ಅಲ್ಲಲ್ಲಿ ವಿಕಾಸದ ಹಾದಿಯಲ್ಲಿ ಮೈಲಿಗಲ್ಲುಗಳಂತೆ ಹಲವು ಜೀವಿಗಳು ನಿಂತಿವೆ. ಬದಲಾಗುತ್ತಿರುವ ಸನ್ನಿವೇಶಕ್ಕೆ ಹೊಂದಿಕೊಳ್ಳಲಾರದೆ ಅಳಿದುಹೋದ ಜೀವಿಗಳೂ ಉಂಟು. ಅಳಿದುಹೋದ ಈ ಜೀವಿಗಳ ವಿವರ ನಮಗೆ ಹೆಚ್ಚು ತಿಳಿದಿಲ್ಲ. ಆದರೂ ವಿಜ್ಞಾನಿಗಳು ಅಲ್ಲಲ್ಲಿ ಸಿಕ್ಕಿರುವ ಅಳಿದುಹೋದ ಜೀವಿಗಳ ಅವಶೇಷಗಳ ಸಹಾಯದಿಂದ, ಅಲ್ಪವಾದರೂ ಅವುಗಳ ರಚನೆಯನ್ನು ಹೇಳುತ್ತಾರೆ.

ಈ ರೀತಿ ಜೀವಿಗಳಲ್ಲಿ ಆದಿಯಿಂದ ನಡೆದುಬಂದಿರುವ ಈ ರೂಪಾಂತರತೆಯನ್ನೇ 'ಜೀವವಿಕಾಸ' ಎಂದೆನ್ನುವುದು.

ಈ ಜೀವವಿಕಾಸಕ್ಕೆ ನಿರ್ದಿಷ್ಟವಾದ ಕಾರಣಗಳನ್ನು ಕೊಡುವುದು ಕಷ್ಟ. ಊಹಿಸಿ ಹೇಳಬಹುದು. ವಿಕಾಸವು ಸರಳರೇಖೆಯಲ್ಲಿ ನಡೆದುಬಂದಿಲ್ಲ. ಮರದ ರೆಂಬೆಗಳಂತೆ ಕವಲೊಡೆದಿದೆ. ಒಂದೊಂದು ಕವಲೂ ತನ್ನದೇ ಆದ ಒಂದು ರೀತಿಯಲ್ಲಿ ಮಾರ್ಪಟ್ಟು, ರೂಪಾಂತರ ಹೊಂದಿವೆ. ಇಂದು ಈ ಕವಲುಗಳನ್ನು ಒಂದುಗೂಡಿಸುವುದು ಕಷ್ಟ. ವಿಕಾಸದ ಸರಪಳಿಯಲ್ಲಿ ಅಲ್ಲಲ್ಲಿ ಕೊಂಡಿಗಳು ಕಳಚಿಹೋಗಿವೆ. ಈ ಕೊಂಡಿಗಳನ್ನು ಅಳಿದ ಜೀವಿಗಳ ಅವಶೇಷಗಳ ಸಹಾಯದಿಂದ ಊಹಿಸಬೇಕು.

* * * * *

ಭಾಗ ೨

ಇಂದು ಅಳಿದುಳಿದಿರುವ ಜೀವಿಗಳ ರಚನೆ, ವಿಕಾಸದಲ್ಲಿ ಅವುಗಳ ಸ್ಥಾನ, ಈ ಜೀವರಾಜ್ಯವನ್ನು ಆಳುತ್ತಿರುವ ಮಾನವನ ವಿಕಾಸದ ವೈವಿಧ್ಯತೆ—ಇವನ್ನು ತಿಳಿದುಕೊಳ್ಳುವ ಮೊದಲು, ಜೀವಿಗಳ ಮುಖ್ಯ ಗುಣಗಳೇನು ? ಜಡವಸ್ತುವಿಗೂ ಜೀವಿಗೂ ಇರುವ ವ್ಯತ್ಯಾಸವೇನು ? ಪ್ರಾಣಿಗಳಿಗೂ ಸಸ್ಯಗಳಿಗೂ ಇರುವ ಭೇದವೇನು ? ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

'ಸಾಯದೆ ಬದುಕಿರುವುದೇ ಜೀವದ ಮುಖ್ಯ ಲಕ್ಷಣ' ಎಂದು ಆಕ್ಸಫರ್ಡ್ ನಿಘಂಟಿನಲ್ಲಿ ಹೇಳಿದೆ.

'ಆತ್ಮ ಮತ್ತು ದೇಹಗಳು ಐಕ್ಯಮತ್ಯ ಹಾಗೂ ಸಹಕಾರದಿಂದ ಕೆಲಸ

ಮಾಡುತ್ತ ಚೇತನ ಉತ್ಸಾಹಗಳಿಂದೊಡಗೂಡಿ, ಜಡವಾಗಿರದ ಪದಾರ್ಥವೇ ಜೀವಿ' ಎಂದು ಪ್ರಸಿದ್ಧ ಜೀವಶಾಸ್ತ್ರಜ್ಞರಾದ ಡಾ|| ಜಾನ್‌ಸರ್‌ರು ಅಭಿಪ್ರಾಯ ಪಟ್ಟಿದ್ದಾರೆ.

'ಸುತ್ತಲ ಸನ್ನಿವೇಶದ ಬದಲಾವಣೆಗಳಿಗೆ ನಿರಂತರವಾಗಿ ಹೊಂದಿಕೊಳ್ಳುವುದೇ ಜೀವಿಯ ಮುಖ್ಯಗುಣ' ಎಂದು ಈರ್ವ ಹೆರ್‌ಬರ್ಟ್ ಹೇಳಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ, ಜೀವಿಗಳಲ್ಲಿರುವ, ಜಡವಸ್ತುಗಳಲ್ಲಿಲ್ಲದಿರುವ ಗುಣಗಳನ್ನೇ ವರ್ಣಿಸಿ, ಈ ಗುಣಗಳನ್ನು ತೋರುವ ವಸ್ತುವೇ ಜೀವಿ ಎಂದು ನಾವು ಧಾರಾಳವಾಗಿ ಹೇಳಬಹುದು.

ಹಾಗಾದರೆ ಜೀವಿಗಳ ಮುಖ್ಯಗುಣಗಳೇನು?

೧. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸುವುದು. ಅಂದರೆ ಜಡವಸ್ತುಗಳಲ್ಲಿ ಚಲನೆ ಇಲ್ಲವೆಂದಲ್ಲ. ಇದೆ. ಆದರೆ ಜಡವಸ್ತುಗಳಾದ ಕಾರು, ರೈಲು, ವಿಮಾನಗಳ ಚಲನೆಗೂ, ಜೀವಿಗಳಾದ ಹಾವು, ಮೀನು, ಹಕ್ಕಿಗಳ ಚಲನೆಗೂ ವ್ಯತ್ಯಾಸವಿದೆ. ಜಡವಸ್ತುಗಳಲ್ಲಿ ಚಲನೆ ಸ್ವಯಂ ಜನಿತವಲ್ಲ. ಜೀವಿಗಳಲ್ಲಿ ಅದು ಸ್ವಯಂಜನಿತವಾದುದು.

೨. ಜೀವಿಗಳು ತಮ್ಮ ಹೊರ ಆವರಣದಲ್ಲಿ ಹುಟ್ಟುವ ಕ್ರಿಯೆಗಳಿಗೆ ಪ್ರತಿ ಕ್ರಿಯೆಗಳನ್ನು ಸುಲಭದಲ್ಲಿ ರಚಿಸುವ ಸ್ವಯಂಚಾಲಕ ಶಕ್ತಿಯನ್ನು ಹೊಂದಿರುತ್ತವೆ. ಉದಾಹರಣೆಗೆ ನಮ್ಮ ದೇಹ ಬಿಸಿಯಾದ ಪದಾರ್ಥವನ್ನು ಮುಟ್ಟುತ್ತಲೇ ತಕ್ಷಣ ದೂರ ಸರಿಯುವುದೇ ಇಲ್ಲಿ ಕ್ರಿಯೆ ಪ್ರತಿಕ್ರಿಯೆಗಳು.

೩. ಹಿಂದೆಯೇ ಹೇಳಿರುವಂತೆ ಆಹಾರವನ್ನು ನುಂಗುವುದು, ಅರಗಿಸುವುದು, ಉಸಿರಾಡುವುದು, ಮಲಿನ ವಸ್ತುಗಳನ್ನು ಹೊರದೂಡುವುದೇ ಮೊದಲಾದ ಕ್ರಿಯೆಗಳು ಸದಾಕಾಲವೂ ನಡೆಯುತ್ತಿರುತ್ತವೆ.

೪. ಅನುದಿನವೂ ಆಹಾರವನ್ನು ಹೊಸಹೊಸ ಜೀವರಸವನ್ನಾಗಿ ಮಾಡಿ, ಹೆಚ್ಚು ಹೆಚ್ಚು ಜೀವಕಣಗಳನ್ನು ರಚಿಸಿ ಗಾತ್ರದಲ್ಲಿ ಬೆಳೆಯುತ್ತವೆ.

೫. ತನ್ನ ವಂಶಾಭಿವೃದ್ಧಿಗಾಗಿ ಪ್ರಜನಕ್ರಿಯೆಯನ್ನು (Reproduction) ಹೊಂದಿರುತ್ತದೆ.

ಈ ಎಲ್ಲ ಗುಣಗಳನ್ನು ಹೊಂದಿರುವ ವಸ್ತುವನ್ನು ಒಂದು 'ಜೀವಿ' ಎಂದು ಧೈರ್ಯವಾಗಿ ಹೇಳಬಹುದು.

ಸ್ಥಾನವನ್ನು ಪಡೆದಿರುವ ಮಾನವನು ಸಾಮ್ರಾಟನಾಗಲು ಸತತವಾಗಿ ಯತ್ನಿಸುತ್ತಿದ್ದಾನೆ.

ಜೀವಿಗಳಲ್ಲಿ ನಡೆದ ಈ ಕ್ರಾಂತಿಯಲ್ಲಿ ಎಲ್ಲ ಜೀವಿಗಳೂ ರೂಪಾಂತರ ಹೊಂದಲಿಲ್ಲ. ಕ್ರಾಂತಿಯು ಈ ರೈಲುಗಾಡಿಯಲ್ಲಿ ಹೊರಟ ಜಾಗದಿಂದ ಹತ್ತಿದ ಪ್ರಯಾಣಿಕರ ಸಂಖ್ಯೆ ಬಹಳ. ಎಲ್ಲವೂ ರೈಲುಗಾಡಿಯೊಡನೆ ಪೂರ್ತಿಯಾಗಿ ಪ್ರಯಾಣ ಬೆಳಸಲಿಲ್ಲ. ಕೆಲವು ಅಲ್ಲಲ್ಲಿಯೇ ಇಳಿದು ನಿಂತುವು. ಹೀಗೆ ಪೂರ್ತಿ ವಿಕಾಸ ಹೊಂದದೆ, ಅಲ್ಲಲ್ಲಿ ವಿಕಾಸದ ಹಾದಿಯಲ್ಲಿ ಮೈಲಿಗಲ್ಲುಗಳಂತೆ ಹಲವು ಜೀವಿಗಳು ನಿಂತಿವೆ. ಬದಲಾಗುತ್ತಿರುವ ಸನ್ನಿವೇಶಕ್ಕೆ ಹೊಂದಿಕೊಳ್ಳಲಾರದೆ ಅಳಿದುಹೋದ ಜೀವಿಗಳೂ ಉಂಟು. ಅಳಿದುಹೋದ ಈ ಜೀವಿಗಳ ವಿವರ ನಮಗೆ ಹೆಚ್ಚು ತಿಳಿದಿಲ್ಲ. ಆದರೂ ವಿಜ್ಞಾನಿಗಳು ಅಲ್ಲಲ್ಲಿ ಸಿಕ್ಕಿರುವ ಅಳಿದುಹೋದ ಜೀವಿಗಳ ಅವಶೇಷಗಳ ಸಹಾಯದಿಂದ, ಅಲ್ಪವಾದರೂ ಅವುಗಳ ರಚನೆಯನ್ನು ಹೇಳುತ್ತಾರೆ.

ಈ ರೀತಿ ಜೀವಿಗಳಲ್ಲಿ ಆದಿಯಿಂದ ನಡೆದುಬಂದಿರುವ ಈ ರೂಪಾಂತರತೆಯನ್ನೇ 'ಜೀವವಿಕಾಸ' ಎಂದೆನ್ನುವುದು.

ಈ ಜೀವವಿಕಾಸಕ್ಕೆ ನಿರ್ದಿಷ್ಟವಾದ ಕಾರಣಗಳನ್ನು ಕೊಡುವುದು ಕಷ್ಟ. ಊಹಿಸಿ ಹೇಳಬಹುದು. ವಿಕಾಸವು ಸರಳರೇಖೆಯಲ್ಲಿ ನಡೆದುಬಂದಿಲ್ಲ. ಮರದ ರೆಂಬೆಗಳಂತೆ ಕವಲೊಡೆದಿದೆ. ಒಂದೊಂದು ಕವಲೂ ತನ್ನದೇ ಆದ ಒಂದು ರೀತಿಯಲ್ಲಿ ಮಾರ್ಪಟ್ಟು, ರೂಪಾಂತರ ಹೊಂದಿವೆ. ಇಂದು ಈ ಕವಲುಗಳನ್ನು ಒಂದುಗೂಡಿಸುವುದು ಕಷ್ಟ. ವಿಕಾಸದ ಸರಪಳಿಯಲ್ಲಿ ಅಲ್ಲಲ್ಲಿ ಕೊಂಡಿಗಳು ಕಳಚಿಹೋಗಿವೆ. ಈ ಕೊಂಡಿಗಳನ್ನು ಅಳಿದ ಜೀವಿಗಳ ಅವಶೇಷಗಳ ಸಹಾಯದಿಂದ ಊಹಿಸಬೇಕು.

* * * * *

ಭಾಗ ೨

ಇಂದು ಅಳಿದುಳಿದಿರುವ ಜೀವಿಗಳ ರಚನೆ, ವಿಕಾಸದಲ್ಲಿ ಅವುಗಳ ಸ್ಥಾನ, ಈ ಜೀವರಾಜ್ಯವನ್ನು ಆಳುತ್ತಿರುವ ಮಾನವನ ವಿಕಾಸದ ವೈವಿಧ್ಯತೆ—ಇವನ್ನು ತಿಳಿದುಕೊಳ್ಳುವ ಮೊದಲು, ಜೀವಿಗಳ ಮುಖ್ಯ ಗುಣಗಳೇನು? ಜಡವಸ್ತುವಿಗೂ ಜೀವಿಗೂ ಇರುವ ವ್ಯತ್ಯಾಸವೇನು? ಪ್ರಾಣಿಗಳಿಗೂ ಸಸ್ಯಗಳಿಗೂ ಇರುವ ಭೇದವೇನು? ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ.

'ಸಾಯದೆ ಬದುಕಿರುವುದೇ ಜೀವದ ಮುಖ್ಯ ಲಕ್ಷಣ' ಎಂದು ಆಕ್ಸಫರ್ಡ್ ನಿಘಂಟಿನಲ್ಲಿ ಹೇಳಿದೆ.

'ಆತ್ಮ ಮತ್ತು ದೇಹಗಳು ಐಕ್ಯಮತ್ಯ ಹಾಗೂ ಸಹಕಾರದಿಂದ ಕೆಲಸ

ವಿಕಾಸದಲ್ಲಿ ಬಹಳ ಮೊದಲೇ, ಅಂದರೆ ಏಕಕಣಜೀವಿಗಳ ಮಟ್ಟದಲ್ಲಿರುವಾಗಲೇ ಪ್ರಾಣಿಗಳು ಸಸ್ಯಗಳೆಂಬ ಬದಲಾವಣೆಯಾಗಿದೆ. ಆದರೂ ಯಾವ ನಿರ್ದಿಷ್ಟಗುಣ ಗಳನ್ನೂ ತೋರಿಸದ ಕೆಲವು ಜೀವಿಗಳಿವೆ. ಅವನ್ನು ಪ್ರಾಣಿಗಳೇ ಅಥವಾ ಸಸ್ಯಗಳೇ ಎಂದು ಹೇಳಲು ಬರುವುದಿಲ್ಲ.

ಈ ರೀತಿಯ ಕೆಲವು ಜೀವಿಗಳನ್ನು ಬಿಟ್ಟರೆ, ಸಸ್ಯಗಳಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವನ್ನು ನಾವು ಸುಲಭವಾಗಿ ಕಾಣಬಹುದು.

ಉದಾಹರಣೆಗೆ ಒಂದು ಪ್ರಾಣಿಯನ್ನೂ ಒಂದು ಸಸ್ಯವನ್ನೂ ಹೋಲಿಸಿ ನೋಡೋಣ. ಪ್ರಾಣಿಗೆ ಸ್ಥಳದಿಂದ ಸ್ಥಳಕ್ಕೆ ಚಲಿಸಬಲ್ಲ ಶಕ್ತಿಯಿದೆ, ಸಸ್ಯಕ್ಕೆ ಇಲ್ಲ. ಅಂದಮಾತ್ರಕ್ಕೆ ಚಲಿಸುವ ಜೀವಿಗಳು ಪ್ರಾಣಿಗಳೆಂತಲೂ, ಚಲಿಸದ ಜೀವಿಗಳು ಸಸ್ಯ ಗಳೆಂತಲೂ ಹೇಳಲು ಬರುವುದಿಲ್ಲ. ಏಕೆಂದರೆ, ನೀರಿನಲ್ಲಿ ವಾಸಿಸುವ ಕೆಲವು ಸಣ್ಣ ಗಿಡಗಳೂ ಕೂಡ ಚಲಿಸುತ್ತವೆ. ದೊಡ್ಡದೊಡ್ಡ ಮರಗಿಡಗಳಲ್ಲಿಯೂ ಒಂದಿಲ್ಲೊಂದು ತರಹೆಯ ಚಲನಶಕ್ತಿ ಇದೆ. ಸೂರ್ಯಕಾಂತಿಯ ಹೂ ಮುಂಜಾನೆ ಪೂರ್ವದಿಕ್ಕಿಗೆ ತಿರುಗಿದ್ದು ಸೂರ್ಯನ ಚಲನೆಯನ್ನನುಸರಿಸಿ ಸಂಜೆಗೆ ಪಶ್ಚಿಮಕ್ಕೆ ತಿರುಗುವುದನ್ನು ನೋಡಿದ್ದೇವೆ. ಮುಟ್ಟಿದರೆ ಮುನಿ ಗಿಡದ ಎಲೆಗಳು ಮುಟ್ಟಿದ ಕೂಡಲೇ ಮುದುಡಿ ಕೊಳ್ಳುವುದನ್ನು ನೋಡಿದ್ದೇವೆ. ಚಲಿಸದೆ ಒಂದೇ ಸ್ಥಳಕ್ಕೆ ಅಂಟಿಕೊಂಡಿರುವ ಸಸ್ಯ ಗಳಂತಹ ಪ್ರಾಣಿಗಳೂ ಉಂಟು. ಸ್ಪಂಜುಪ್ರಾಣಿ, ಹವಳದ ಹುಳು, ಸಾಗರದ ಕುಸುಮ, ಸಾಗರದ ಕಮಲ, ಮುಂತಾದ ನಿದರ್ಶನಗಳಿವೆ.

ಹಾಗಾದರೆ ಪ್ರಾಣಿಗಳಿಗೂ ಸಸ್ಯಗಳಿಗೂ ಇರುವ ಶಾಸ್ತ್ರೀಯವಾದ ವ್ಯತ್ಯಾಸ ಗಳೇನು ?—

ಹಿಂದೆಯೇ ಹೇಳಿರುವಂತೆ ಸಸ್ಯವೆಂದೆನ್ನಿಸಿಕೊಳ್ಳುವ ಪ್ರತಿಯೊಂದು ಜೀವಿಯೂ, ತನ್ನ ಜೀವಕಣಕವಚವನ್ನು ರಕ್ಷಾಕವಚದಿಂದ ಭದ್ರಪಡಿಸಿಕೊಂಡಿರುತ್ತವೆ. ಮತ್ತು ಹರಿತ್ತನ್ನು ಹೊಂದಿರುತ್ತವೆ. ಹರಿತ್ತು ಇರುವುದರಿಂದ ಸಸ್ಯಗಳು ತಮ್ಮ ಆಹಾರವನ್ನು ತಯಾರಿಸಬಲ್ಲವು. ಆದರೆ ಪ್ರಾಣಿಗಳಂತೆ ಇತರ ಕೀಟಗಳನ್ನು ತಿಂದು ಜೀವಿಸುವ ಮಾಂಸಾಹಾರಿ ಸಸ್ಯಗಳೂ ಉಂಟು.

ಪ್ರಾಣಿಗಳಾದರೋ ತಮ್ಮ ಆಹಾರವನ್ನು ತಯಾರಿಸಲಾರದೆ ಮತ್ತೊಂದು ಪ್ರಾಣಿಯನ್ನೋ, ಸಸ್ಯವನ್ನೋ ಆಹಾರವಾಗಿ ಉಪಯೋಗಿಸುತ್ತವೆ.

* * * * *

ಈ ರೀತಿಯಾಗಿ ಜೀವರಾಶಿಯನ್ನು ಪ್ರಾಣಿಗಳು ಮತ್ತು ಸಸ್ಯಗಳು ಎಂದು ಪ್ರತ್ಯೇಕಿಸಿದ ಬಳಿಕ, ಪ್ರಾಣಿಗಳಲ್ಲಿ ಮಾನವನ ಸ್ಥಾನವನ್ನು ಅರ್ಥಮಾಡಿಕೊಳ್ಳ

ಬೇಕಾದರೆ, ಇಂದು ಅಳಿದು ಉಳಿದಿರುವ ಪ್ರಾಣಿಗಳ ರಚನೆಯನ್ನು, ವಿಕಾಸದ ಹಾದಿಯಲ್ಲಿ ಅವುಗಳ ಸ್ಥಾನವನ್ನೂ ನಾವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ನಾವು ನಮ್ಮ ಅಭ್ಯಾಸವನ್ನು ಏಕಕಣ ಜೀವಿಗಳಿಂದ ಆರಂಭಿಸಬೇಕು.

ಈಗ ಮನದಲ್ಲೊಂದು ಸಮಸ್ಯೆ ಏಳುವುದು ಸಹಜ. ಸಮಸ್ಯೆ ಎನ್ನುವುದಕ್ಕಿಂತ ಸಂಶಯವೆಂದರೆ ವಾಸ್ತವವಾದೀತು : ಏಕಕಣಜೀವಿಗಳೇ ಮೊದಲು ಕಾಣಿಸಿಕೊಂಡು ಅವುಗಳಿಂದ ಬಹುಕಣಜೀವಿಗಳಾದವೇ ಅಥವಾ ಬಹುಕಣಜೀವಿಗಳೇ ಮೊದಲು ಕಾಣಿಸಿಕೊಂಡು ಇವುಗಳೇ ಚೂರುಗಳಾಗಿ ಏಕಕಣಜೀವಿಗಳಾಗಿರಬಾರದೇಕೆ ? ಎಂಬುದೇ ಸಹಜವಾಗಿ ಮೂಡುವ ಸಂಶಯ.

ಈ ಸಂಶಯವನ್ನು ಬಗೆಹರಿಸಲು ಇಂದಿನ ಸೂಕ್ಷ್ಮದರ್ಶಕ ಯಂತ್ರಗಳು ಬಹಳ ಉಪಕಾರಿಯಾಗಿವೆ. ಅವುಗಳ ಸಹಾಯದಿಂದ ಇಂದು ಪ್ರಾಣಿಗಳ ಭ್ರೂಣಶಾಸ್ತ್ರವನ್ನು (Embryology) ಅಭ್ಯಾಸಮಾಡಬಹುದು. ಇದರಿಂದ ತಿಳಿದುಬರುವುದೇನೆಂದರೆ—"ಪ್ರತಿಯೊಂದು ಜೀವಿಯೂ, ತನ್ನ ಬೆಳವಣಿಗೆಯಲ್ಲಿ, ಹಿಂದಿನ ವಿಕಾಸರೂಪಗಳನ್ನು ಹೊಂದಿ ಇಂದು ಅದೇ ರೂಪಗಳಲ್ಲಿ ಪರಿವರ್ತನೆಯಾಗದಿರುವ ಪ್ರಾಣಿಗಳನ್ನು ಹೋಲುತ್ತ, ಆ ಪ್ರಾಣಿಯ ಹಿಂದಿನ ವಿಕಾಸದ ರೂಪಾಂತರತೆಯ ಹಂತಗಳನ್ನು ನಿರೂಪಿಸುತ್ತದೆ."—(Ontogeny Reveals Phylogeny) ಪ್ರತಿಯೊಂದು ಜೀವಿಯೂ ತನ್ನ ಜೀವನಚರಿತ್ರೆಯನ್ನು ಏಕಕಣಜೀವಿಗಿಂತಲೂ ಸಾಮಾನ್ಯವಾದ ಜೀವಕಣದಿಂದಲೇ ಆರಂಭಿಸುತ್ತವೆಯೆಂದಮೇಲೆ ಏಕಕಣ ಜೀವಿಗಳೇ ಮೊದಲು ಕಾಣಿಸಿಕೊಂಡವೆಂಬುದರಲ್ಲಿ ಸಂಶಯವೇ ಇಲ್ಲ.

ಜೀವಿಗಳೆಲ್ಲವನ್ನೂ ನಾವು ಅರಿತುಕೊಳ್ಳಬೇಕಾದರೆ ಜೀವಕೋಟಿಯನ್ನು, ಅವುಗಳ ರಚನೆ, ನಡತೆಯಿಂದ ವಿಭಾಗಿಸಬೇಕಾಗುತ್ತದೆ. ವಿಭಾಗವೆಂದರೇನೆಂದು ಆಶ್ಚರ್ಯಪಡಬೇಕಾಗಿಲ್ಲ. ರಾಜ್ಯಾಡಳಿತದಲ್ಲಿ, ಸರ್ಕಾರದ ಆಡಳಿತವನ್ನು, ಕಾರ್ಯಾನುಕೂಲಕ್ಕಾಗಿಯೂ ಅವುಗಳ ಕೆಲಸಗಳಿಗನುಗುಣವಾಗಿಯೂ ವಿವಿಧ ಆಡಳಿತಶಾಖೆಗಳಾಗಿ ವಿಂಗಡಿಸುವಂತೆ, ಪ್ರಾಣಿಗಳನ್ನೂ ನಾವು ಅವುಗಳ ಸ್ಥಾನಮಾನಗಳಿಗನುಗುಣವಾಗಿ ವಿಭಾಗಿಸುತ್ತೇವೆ. ಏಕೆಂದರೆ ಮಾನವನನ್ನೂ ಒಂದು ಏಡಿಯನ್ನೂ ಒಂದೇ ಗುಂಪಿಗೆ ಸೇರಿದ ಪ್ರಾಣಿಗಳೆಂದು ಹೇಳಲಾಗುವುದಿಲ್ಲ. ಏಕೆ ? ಕಾರಣವಿಷ್ಟೆ ; ಮಾನವನಲ್ಲಿ ಅಸ್ಥಿಪಂಜರ ದೇಹದ ಒಳಗಿದೆ, ಏಡಿಯಲ್ಲಿ ಹೊರಗಿದೆ. ಮಾನವನಿಗೆ ಬೆನ್ನೆಲುಬಿದೆ, ಏಡಿಗೆ ಇಲ್ಲ. ಹೀಗೆ ಇನ್ನೂ ಹಲವಾರು ಭೇದಗಳಿವೆ. ಈ ಭೇದಭಾವಗಳನ್ನನುಸರಿಸಿ ನಾವು ಪ್ರಾಣಿರಾಜ್ಯವನ್ನು ವಿಂಗಡಿಸುತ್ತೇವೆ.

ಈ ರೀತಿ ಪ್ರಾಣಿಗಳನ್ನು ವಿಂಗಡಿಸುವ ಕ್ರಮ ಇತ್ತೀಚಿನದೇನಲ್ಲ. 'ವಿಜ್ಞಾನದ ಪಿತಾಮಹ'ನೆಂದು ಹೆಸರಾದ ಅರಿಸ್ಟಾಟಲ್ (Aristotle)ನ ಕಾಲದಿಂದಲೂ ರೂಢಿಯಲ್ಲಿದೆ. ಆದರೆ ಈ ಕ್ರಮ ಸರಿಯಾಗಿ ರೂಪಗೊಂಡು ರೂಢಿಗೆ ಬಂದುದು ಇತ್ತೀಚೆಗೆ, ಸೂಕ್ಷ್ಮದರ್ಶಕ ಯಂತ್ರಗಳನ್ನು ಕಂಡುಹಿಡಿದ ಬಳಿಕ. ಈ ಯಂತ್ರದ ಸಹಾಯದಿಂದ ಪ್ರಾಣಿಗಳಲ್ಲಿ ಕಾಣುವ ಸೂಕ್ಷ್ಮವಾದ ವ್ಯತ್ಯಾಸಗಳನ್ನು ಕಂಡುಹಿಡಿದು ಹೆಚ್ಚುಕಡಿಮೆ ಅದೇ ರೀತಿಯಲ್ಲಿರುವ ಬೇರೆಬೇರೆ ಪ್ರಾಣಿಗಳ ಜೊತೆಯಲ್ಲಿ ಸೇರಿಸಬಹುದು.

ರೆಕ್ಕೆಗಳಿದ್ದು ಹಾರುವ ಪ್ರಾಣಿಗಳನ್ನೆಲ್ಲ ನಾವು ಪಕ್ಷಿಗಳ ಗುಂಪಿಗೆ ಸೇರಿಸುತ್ತೇವೆ. ಆದರೆ ರೆಕ್ಕೆ ಇದ್ದೂ ಹಾರುವ ಬಾವುಲಿ (Bat)ಯನ್ನು ಪಕ್ಷಿಗಳ ಗುಂಪಿಗೆ ಸೇರಿಸುವುದಿಲ್ಲ. ಕಾರಣವಿಷ್ಟೆ: ಪಕ್ಷಿಗಳ ಗುಂಪಿಗೆ ಸೇರುವ ಪ್ರಾಣಿಗಳಿಗೆ ಪುಕ್ಕಗಳುಂಟು. ಬಾವುಲಿಯಲ್ಲಿ ರೆಕ್ಕೆಗಳಿದ್ದರೂ ಪುಕ್ಕಗಳಿಂದ ಮಾಡಲ್ಪಟ್ಟಿಲ್ಲ. ಆದುದರಿಂದ ರೆಕ್ಕೆಗಳಿದ್ದು ಹಾರುವ ಪ್ರಾಣಿಗಳನ್ನೆಲ್ಲ ಪಕ್ಷಿಗಳೆನ್ನಲಾಗುವುದಿಲ್ಲ. ಏಕೆಂದರೆ ಹಾರುವ ಮೀನುಗಳಿವೆ, ಹಾರುವ ಕಪ್ಪೆಗಳಿವೆ, ಹಾರುವ ಹಲ್ಲಿಗಳಿವೆ, ಹಾರುವ ಅಳಿಲುಗಳಿವೆ, ಬಾವುಲಿಗಳಿವೆ, ಹಾರಬಲ್ಲ ಕೀಟಕಗಳಿವೆ. ಇವೆಲ್ಲವೂ ಹಾರುವ ಗುಣವೊಂದರಿಂದಲೇ ಪಕ್ಷಿಗಳ ಗುಂಪಿಗೆ ಸೇರಲಾರವು. ಹೀಗೆಂದಮಾತ್ರಕ್ಕೆ ಹಾರದ ಪ್ರಾಣಿಗಳು ಹಕ್ಕಿಗಳಲ್ಲವೆಂದಲ್ಲ. ಮರಳುಕಾಡಿನ ಉಷ್ಟ್ರಪಕ್ಷಿ (Ostrich), ಎಮು (Emu), ಕಿವಿ (Kiwi) ಮುಂತಾದ ಹಾರದ ಪಕ್ಷಿಗಳಿವೆ. ಅಷ್ಟೇಕೆ? ಅನುದಿನವೂ ಕಾಣುವ ಕೋಳಿ, ಬಾತು, ನವಿಲುಗಳು ಮಿಕ್ಕ ಪಕ್ಷಿಗಳಂತೆ ಹಾರಲಾರವು. ಆದರೂ ಪಕ್ಷಿಜಾತಿಗೆ ಸೇರುತ್ತವೆ. ಹೀಗೆ ಪೆಂಗ್ವಿನ್ (Penguin) ಪಕ್ಷಿಗಳಲ್ಲಿಯೂ ಹಾರಲು ಅನುಕೂಲವಾಗಿರುವ ರೆಕ್ಕೆಗಳಿಲ್ಲ. ಆದರೆ ಈಜಲು ಅನುಕೂಲವಾಗಿದೆ. ಈ ಎಲ್ಲವುಗಳಲ್ಲಿಯೂ ಪಕ್ಷಿಗಳಿಗಿರಬೇಕಾದ ಪುಕ್ಕಗಳಿವೆ. ಇವು ಎಲ್ಲಾ ಪಕ್ಷಿಗಳಂತೆ ಮೊಟ್ಟೆ ಇಡುತ್ತವೆ. ಮತ್ತು ಮರಿಗಳ ಬೆಳವಣಿಗೆಯಲ್ಲಿಯೂ ಮಿಕ್ಕ ಪಕ್ಷಿಗಳಲ್ಲಿರುವ ಲಕ್ಷಣಗಳೇ ಕಾಣಬರುತ್ತವೆ. ಹೀಗೆ ಮರಿಗಳ ಬೆಳವಣಿಗೆಯಿಂದಲೂ, ದೇಹದ ಹೊರ ಒಳ ಆವರಣದ ಕೆಲವು ಮುಖ್ಯ ಗುಣಗಳಿಂದಲೂ, ನಾವು ಪ್ರತಿಯೊಂದು ಪ್ರಾಣಿಯನ್ನೂ ಪರೀಕ್ಷಿಸಿ ವಿಂಗಡಿಸುತ್ತೇವೆ.

ಹಿಂದೆಯೇ ಹೇಳಿದಂತೆ ಪ್ರಾಣಿಗಳನ್ನು ಅವುಗಳ ಹೊರರಚನೆಯಿಂದಲೇ ವಿಭಾಗಿಸುವ ಕ್ರಮ ಬಲು ಹಿಂದಿನಿಂದಲೂ ರೂಢಿಗೆ ಬಂದಿದೆ. ಆದರೀಗ ಹೊರರಚನೆಯೊಂದೆ ಅಲ್ಲದೆ ಒಳರಚನೆ, ಅವುಗಳ ರೀತಿನೀತಿಗಳನ್ನನುಸರಿಸಿ ವಿಂಗಡಿಸುವ ಕ್ರಮ ಇತ್ತೀಚೆಗೆ ಬಂದಿದೆ.

ಪ್ರಾಣಿಗಳನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು :

ಬೇರೆಬೇರೆ ಪಂಗಡದ ಎರಡು ಪ್ರಾಣಿಗಳು ಒಂದೇ ಸನ್ನಿವೇಶದಲ್ಲಿದ್ದರೆ, ಸನ್ನಿವೇಶಕ್ಕೆ ಹೊಂದಿಕೊಳ್ಳಲು ಒಂದೇ ರೀತಿಯಲ್ಲಿ ರೂಪಾಂತರ ಹೊಂದಿ, ಒಂದೇ ಗುಂಪಿಗೆ ಸೇರಿದವುಗಳೆಂಬ ಭಾವನೆಯನ್ನು ಕೊಡಬಹುದು. ಉದಾಹರಣೆಗೆ: ಮೀನಿಗೂ ತಿಮಿಂಗಿಲಕ್ಕೂ ಇರುವ ಹೋಲಿಕೆಯಿಂದ ತಿಮಿಂಗಿಲವನ್ನು ಒಂದು ದೊಡ್ಡ ಮೀನೆನ್ನಬಹುದು. ಆದರೆ ಶಾಸ್ತ್ರೀಯ ದೃಷ್ಟಿಯಿಂದ ನೋಡಿದರೆ ಎರಡು ಬೇರೆಬೇರೆ ಪಂಗಡಗಳಿಗೆ ಸೇರಿದ ಪ್ರಾಣಿಗಳು. ಮೊದಲು ಕೈಕಾಲುಗಳಿದ್ದು, ಸನ್ನಿವೇಶದ ಪರಿಣಾಮದಿಂದ ನೀರಿನೊಳಗಣ ಜೀವನಕ್ಕೆ ಅನುಕೂಲವಾದ ದೇಹವನ್ನು ಹೊಂದಲು ರೂಪಾಂತರ ಹೊಂದಿದ ತಿಮಿಂಗಿಲದ ಈಜುರೆಕ್ಕೆಗಳಿಗೂ ಮೀನಿನ ಈಜುರೆಕ್ಕೆಗಳಿಗೂ ವ್ಯತ್ಯಾಸವಿದೆ. ಸಸ್ತನಿ (Mammal) ಗುಂಪಿನ ಪ್ರಾಣಿಗಳ ಮುಖ್ಯ ಗುಣವಾದ ರೋಮ ತಿಮಿಂಗಿಲದಲ್ಲಿ, ನೀರಿನಲ್ಲಿ ಸುಲಭವಾದ ಓಡಾಟಕ್ಕೆ ನಯವಾದ ದೇಹ ಬೇಕಾದುದರಿಂದ, ಮಾಯವಾಗಿವೆ. ಮೀನುಗಳು ನೀರಿನಲ್ಲಿ ಉಸಿರಾಡುವ ಪ್ರಾಣಿಗಳು. ತಿಮಿಂಗಿಲಗಳಾದರೋ ನೀರಿನೊಳಗಿದ್ದರೂ ಗಾಳಿಯನ್ನೇ ಉಸಿರಾಡುವ ಪ್ರಾಣಿಗಳು. ಆದುದರಿಂದ ಬೇರೆಬೇರೆ ಗುಂಪುಗಳಿಗೆ ಸೇರಿದ ಪ್ರಾಣಿಗಳೂ ಸಹ ಒಂದೇ ಸನ್ನಿವೇಶಕ್ಕೆ ಹೊಂದಿಕೊಂಡು, ದೇಹದ ಮಾರ್ಪಾಟು ಎರಡು ಪ್ರಾಣಿಗಳಲ್ಲಿಯೂ ಒಂದೇ ತೆರನಾಗಿದ್ದುದರಿಂದ, ಹಿಂದಿನ ಜೀವ ವಿಭಾಗ ವಿಜ್ಞಾನಿಗಳು ಬಹಳ ಸಾರಿ ತಮ್ಮ ವಿಭಾಗ ಕಾರ್ಯದಲ್ಲಿ ಎಡವಿದ್ದಾರೆ.

ಕೆಲವು ಸಾರಿ ಒಂದೇ ಗುಂಪಿಗೆ ಸೇರಿದ ಪ್ರಾಣಿಗಳು ಬೇರೆಬೇರೆ ಸನ್ನಿವೇಶಗಳಲ್ಲಿ ಉಳಿದು, ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಾಡು ಹೊಂದಿ, ಬದಲಾಯಿಸಿ, ಎರಡೂ ಒಂದೇ ಗುಂಪಿಗೆ ಸೇರಿದ ಪ್ರಾಣಿಗಳೆನ್ನಲು ತುಂಬಾ ಕಷ್ಟವಾಗುತ್ತದೆ. ಉದಾಹರಣೆಗೆ: ನಾಯಿಯನ್ನೂ, ನೀರುನಾಯಿ (Seal)ಯನ್ನೂ ತೆಗೆದುಕೊಳ್ಳೋಣ. ಎರಡೂ ಒಂದೇ ಗುಂಪಿಗೆ ಸೇರಿದ್ದರೂ, ಜೀವನದಲ್ಲಿ ಬೇರೆಬೇರೆ ಸನ್ನಿವೇಶಗಳಲ್ಲುಳಿದು, ತಕ್ಕಂತೆ ಮಾರ್ಪಟ್ಟು, ಒಂದಕ್ಕೊಂದು ಸಂಬಂಧವಿಲ್ಲದ ರೀತಿಯಲ್ಲಿ ಕಾಣಿಸುತ್ತವೆ. ನಾಯಿಯಲ್ಲಿ ಸಸ್ತನಿಗಳಂತೆ ನಾಲ್ಕು ಕಾಲುಗಳು ಮತ್ತು ಬಾಲ ಇವೆ. ಆದರೆ ನೀರುನಾಯಿಯಲ್ಲಿ ಈಜಲು ಸಹಕಾರಿಯಾಗಲು ಕಾಲು ಬಾಲಗಳೆರಡೂ ಈಜುರೆಕ್ಕೆಗಳಾಗಿ ಮಾರ್ಪಟ್ಟಿವೆ.

ಆದುದರಿಂದ ಈ ರೀತಿ ಒಂದೇ ಗುಂಪಿಗೆ ಸೇರಿದ ಪ್ರಾಣಿಗಳನ್ನು ಹೊರರಚನೆಯಿಂದಲೇ ಪ್ರತ್ಯೇಕಿಸಲೂ ಆಗುವುದಿಲ್ಲ. ಹಾಗೆ ಬೇರೆಬೇರೆ ಗುಂಪಿನ ಪ್ರಾಣಿಗಳನ್ನು ಒಂದುಗೂಡಿಸಲೂ ಸಾಧ್ಯವಿಲ್ಲ.

ಪ್ರಾಣಿಗಳೆಲ್ಲವನ್ನೂ ವಿಂಗಡಿಸುವಾಗ, ಭೂಮಿಯ ಮೇಲಿನಿಂದ ಮರೆಯಾದ ಪ್ರಾಣಿಗಳನ್ನೂ, ಇಂದು ಸಿಕ್ಕಿರುವ ಅವುಗಳ ಅವಶೇಷಗಳ ಸಹಾಯವನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಹೀಗೆ ಮಾಡುವುದರಿಂದ ಇಂದು ಭೂಮಿಯ ಮೇಲೆ ಬೇರೆಬೇರೆ ಭಾಗಗಳಲ್ಲುಳಿದು, ಒಂದಕ್ಕೊಂದಕ್ಕೆ ಸಂಬಂಧವೇ ಉಳಿಯದೆ, ಸನ್ನಿವೇಶದ ಪರಿಣಾಮಕ್ಕೆ ಸಿಕ್ಕು ಮಾರ್ಪಟ್ಟಿರುವ ಒಂದೇ ಜಾತಿಯ ಪ್ರಾಣಿಗಳನ್ನು ಒಂದುಗೂಡಿಸಲು ಸಹಾಯವಾಗುತ್ತದೆ.

ಆಡಳಿತದ ಸುಲಭೋಪಾಯಕ್ಕಾಗಿ ದೇಶವನ್ನು ಹೇಗೆ ಪ್ರಾಂತ್ಯ, ಜಿಲ್ಲೆ, ತಾಲ್ಲೋಕು, ಹೋಬಳಿ, ಪಂಚಾಯಿತಿಗಳಾಗಿ ವಿಂಗಡಿಸುತ್ತೇವೆಯೋ ಹಾಗೆಯೇ ಜೀವಿಗಳನ್ನು ಸುಲಭವಾಗಿ ಅರಿತುಕೊಳ್ಳಲು, ಅಭ್ಯಾಸದ ಸಲುವಾಗಿ ಅವನ್ನು ವಿಂಗಡಿಸುತ್ತೇವೆ.

ಜೀವರಾಶಿಯನ್ನು ಮುಖ್ಯವಾಗಿ ಪ್ರಾಣಿರಾಜ್ಯ, ಸಸ್ಯರಾಜ್ಯಗಳಾಗಿ ವಿಂಗಡಿಸಬಹುದು. ಈ ರಾಜ್ಯಗಳನ್ನು ಉಪರಾಜ್ಯಗಳಾಗಿ ವಿಂಗಡಿಸುತ್ತೇವೆ. ಪ್ರಾಣಿರಾಜ್ಯದಲ್ಲಿ ಎರಡು ಉಪರಾಜ್ಯಗಳಿವೆ. ಅವನ್ನು ಆದಿಜೀವಿಗಳ ಉಪರಾಜ್ಯ ಮತ್ತು ತದ್ಭವಜೀವಿಗಳ ಉಪರಾಜ್ಯಗಳೆಂದು ಕರೆಯುತ್ತೇವೆ. ಆದಿಜೀವಿಗಳ ಉಪರಾಜ್ಯಕ್ಕೆ ಏಕಕಣಜೀವಿಗಳೆಲ್ಲವೂ ಸೇರುತ್ತವೆ. ಮಿಕ್ಕ ಬಹುಕಣಜೀವಿಗಳೆಲ್ಲವೂ ತದ್ಭವಜೀವಿಗಳ ಉಪರಾಜ್ಯಕ್ಕೆ ಸೇರುತ್ತವೆ.

ಈ ಉಪರಾಜ್ಯಗಳನ್ನು ವಿವಿಧ ವಂಶಗಳಾಗಿ ವಿಂಗಡಿಸಬಹುದು. ಆದಿಜೀವಿಗಳ ಉಪರಾಜ್ಯದಲ್ಲಿ ಆದಿಜೀವಿಗಳ ವಂಶವೊಂದಿದೆ. ತದ್ಭವಜೀವಿಗಳ ಉಪರಾಜ್ಯದಲ್ಲಿ ಹನ್ನೊಂದು ವಂಶಗಳಿವೆ. ಉದಾಹರಣೆಗೆ: ಮೃದ್ವಂಗಿಗಳು (Mollusca), ಸಂಧಿಪಾಥಿಗಳು (Arthropoda), ಕಶೇರುಕಗಳು (Vertebrates) ಮುಂತಾದುವು. ಎಲ್ಲವನ್ನೂ ಅವುಗಳ ಗುಣವಿಶೇಷಗಳಿಂದ ವಿಂಗಡಿಸಲಾಗಿದೆ. ಮೃದ್ವಂಗಿಗಳಲ್ಲಿ, ಅವುಗಳ ಹೆಸರೇ ಸೂಚಿಸುವಂತೆ, ದೇಹ ಮೃದುವಾಗಿ ವಿಭಾಗವಾಗಿರದೆ, ಚಲಿಸಲು ಅನುಕೂಲವಾದ ಅಸ್ಥಿಪಂಜರವಿಲ್ಲದ ಪ್ರಾಣಿಗಳು ಸೇರಿವೆ. ಆದರೆ ಸಂಧಿಪಾಥಿ (ಕೀಲುಕಾಲು) ಗಳಲ್ಲಿಯೂ, ಕಶೇರುಕಗಳಲ್ಲಿಯೂ ದೇಹವು ಹಲವಾರು ಭಾಗಗಳಾಗಿ ವಿಭಾಗಿಸಲ್ಪಟ್ಟು ಚಲನೆಗೆ ಅನುಕೂಲವಾಗಿ ಹೆಚ್ಚು ಸಹಾಯವಾಗುವ ಗಟ್ಟಿಯಾದ ಮೂಳೆ ನಿಂತಿರುವ ಅಸ್ಥಿಪಂಜರವಿದೆ. ಆದರೆ ಸಂಧಿಪಾಥಿಗಳಲ್ಲಿ ಈ ಅಸ್ತಿಪಂಜರ ದೇಹದ ಹೊರಗಿದೆ, ಕಶೇರುಕಗಳಲ್ಲಿ ದೇಹದ ಒಳಗಿದೆ. ಎರಡರಲ್ಲಿಯೂ ದೇಹವು ಕಠಿನವಾಗಿದೆ.

ಈ ವಂಶಗಳನ್ನು ವರ್ಗಗಳಾಗಿ ವಿಂಗಡಿಸುತ್ತೇವೆ. ಉದಾಹರಣೆಗೆ: ಕಶೇರುಕ

ಗಳಲ್ಲಿ ಮೀನುಗಳ ವರ್ಗ, ಕಪ್ಪೆಗಳವರ್ಗ, ಸರೀಸೃಪಗಳ (Reptiles) ವರ್ಗ, ಪಕ್ಷಿಗಳ ವರ್ಗ ಮತ್ತು ಸಸ್ತನಿಗಳ ವರ್ಗಗಳೆಂಬ ಐದು ವರ್ಗಗಳಿವೆ. ಈ ವರ್ಗಗಳನ್ನು ಉಪ ವರ್ಗ ಕುಟುಂಬ, ಜಾತಿ, ಪ್ರಭೇದಗಳೆಂದೂ ವಿಂಗಡಿಸಲಾಗಿದೆ.

ಒಂದು ಪ್ರಭೇದವನ್ನು ಗೊತ್ತುಮಾಡುವುದು ಹೇಗೆ ಎನ್ನಬಹುದು. ಇದಕ್ಕೆ ನಿಜವಾದ ವರ್ಣನೆಯನ್ನು ಕೊಡಲು ಜೀವಶಾಸ್ತ್ರಜ್ಞರಿನ್ನೂ ಸಮರ್ಥರಾಗಿಲ್ಲ. ಒಂದು ಪ್ರಾಣಿಯ ಹೆಸರು ಆ ಪ್ರಭೇದದ ಹೆಸರನ್ನು ಸೂಚಿಸುತ್ತದೆ. ಹುಲಿ, ನಾಯಿ, ಸಿಂಹ, ಚಿರತೆ, ಬೆಕ್ಕು, ಆನೆ ಎಂದರೆ ಆಯಾ ಹೆಸರು ಆಯಾ ಪ್ರಾಣಿಗಳನ್ನು ಸೂಚಿಸುವುದೇ ಹೊರತು ಬೇರೆಯ ಪ್ರಾಣಿಗಳನ್ನಲ್ಲ. ನಾಯಿಯನ್ನು ಆನೆಯೆಂದು ಯಾರೂ ಹೇಳು ವುದಿಲ್ಲ. ಆದುದರಿಂದ ದೇಹದ ಹೊರ ಒಳರಚನೆಯಲ್ಲಿ ಒಂದೇ ರೀತಿಯಿರುವ ಪ್ರಾಣಿಗಳ ಗುಂಪಿಗೆ ಪ್ರಭೇದ ಎನ್ನುತ್ತೇವೆ. ಆ ಗುಂಪಿನ ಪ್ರಾಣಿಗಳು ಒಂದರೊಡ ನೊಂದು ಸಂಪರ್ಕ ಬೆಳೆಸಿ ತಮ್ಮ ಗುಂಪಿಗನುಗುಣವಾದ ಮರಿಗಳನ್ನು ಹಾಕುತ್ತವೆ. ಹೀಗೆ ಸಂಪರ್ಕ ಮತ್ತು ಸಂತಾನೋತ್ಪತ್ತಿ—ಈ ಎರಡು ವಿಧಾನಗಳ ಪ್ರಯೋಗ ಪರೀಕ್ಷೆಯಿಂದ ಹಕ್ಸ್ಲ್ ಎಂಬ ಜೀವಶಾಸ್ತ್ರಜ್ಞನು ಪ್ರಯೋಗಿಸಿದ ಪ್ರಾಣಿಗಳ ವರ್ಗಪ್ರಭೇದಗಳನ್ನು ನಿರ್ಣಯಿಸಿದನು. ಆದರೆ ಈ ಪರೀಕ್ಷೆ ಇತ್ತೀಚಿನ ಅನುಭವ ದಿಂದ ಸರಿತೋರಲಿಲ್ಲ. ಏಕೆಂದರೆ ಒಂಟೆಗಳಲ್ಲಿ ಎರಡು ಪ್ರಭೇದಗಳಿವೆ. ಒಂದರಲ್ಲಿ ಒಂದು ಡುಬ್ಬ ಇದೆ, ಇನ್ನೊಂದರಲ್ಲಿ ಎರಡು ಡುಬ್ಬಗಳಿವೆ. ಒಂದೇ ಡುಬ್ಬದ ಒಂದು ಒಂಟೆ ಎರಡು ಡುಬ್ಬದ ಇನ್ನೊಂದು ಲಿಂಗದ ಒಂಟೆಯೊಡನೆ ಸಂಪರ್ಕ ಬೆಳೆಸಿ, ಆನುವಂಶಿಕತೆಯ ನೀತಿಗನುಗುಣವಾಗಿ ಮರಿಗಳನ್ನು ಹಾಕುತ್ತದೆ. ಆ ಮರಿಗಳಲ್ಲಿಯೂ ಲಿಂಗದ ಬೆಳವಣಿಗೆಯಾಗುತ್ತದೆ. ಹೀಗೆ ಇತ್ತೀಚೆಗೆ, ಬೇರೆಬೇರೆ ಪ್ರಭೇದಗಳೇ ಅಲ್ಲದೆ, ಬೇರೆಬೇರೆ ಜಾತಿಗೆ ಸೇರಿದ ಪ್ರಾಣಿಗಳ ಅಂತರಸಂಪರ್ಕವೂ ಜಯಪ್ರದವಾಗಿ ನಡೆದಿದೆ.

ಈ ರೀತಿಯಾಗಿ ಪ್ರಭೇದ, ಜಾತಿ ಮುಂತಾಗಿ ವಿಂಗಡಿಸುವ ಕ್ರಮವನ್ನು ಸರಿಯಾಗಿ ವಿಶದವಾಗಿ ವಿವರವಾಗಿ ಹೇಳಿದವನೆಂದರೆ ಲಿನ್ನೆಯಸ್ (Linneus) ಎಂಬ ಜೀವಶಾಸ್ತ್ರಜ್ಞ. ಇವನ ರೀತಿಯಿಂದ ಪ್ರತಿಯೊಂದು ಪ್ರಾಣಿಯನ್ನು ಎರಡು ಹೆಸರುಗಳಿಂದ ಕರೆಯುತ್ತೇವೆ. ಈ ಹೆಸರುಗಳು ಯೂರೋಪಿನ ಲ್ಯಾಟಿನ್ (Latin) ಭಾಷೆಗೆ ಸೇರಿದವುಗಳು. ಪ್ರಾಣಿಗಳನ್ನು ಮೊದಲು ಅದರ ಜಾತಿಯ ಹೆಸರಿನಿಂದಲೂ, ಎರಡನೆಯದಾಗಿ ಪ್ರಭೇದದ ಹೆಸರಿನಿಂದಲೂ ಕರೆಯುತ್ತೇವೆ.

ಉದಾಹರಣೆಗೆ: ಬೆಕ್ಕು, ಹುಲಿ, ಸಿಂಹ, ಚಿರತೆ, ಇವೆಲ್ಲವೂ ಒಂದೇ ಜಾತಿಗೆ ಸೇರಿದ, ಆದರೆ ಬೇರೆಬೇರೆ ಪ್ರಭೇದಗಳಿಗೆ ಸೇರಿದ ಪ್ರಾಣಿಗಳು. ಇವನ್ನು 'ಫೀಲಿಸ್'

(Felis) ಎಂಬ ಜಾತಿಯ ಹೆಸರಿನಿಂದಲೂ, ಅವುಗಳ ವಾಸಸ್ಥಳ ರೀತಿನೀತಿಗನುಗುಣವಾದ ಪ್ರಭೇದನಾಮದಿಂದಲೂ ಕರೆಯುತ್ತೇವೆ. ಇದರಂತೆ ಬೆಕ್ಕನ್ನು 'ಫೀಲಿಸ್ ಡೊಮೆಸ್ಟಿಕ್' (Felis Domestica) ಎಂದೂ, ಹುಲಿಯನ್ನು 'ಫೀಲಿಸ್ ಟೈಗ್ರಿಸ್' (Felis Tigris) ಎಂದೂ, ಸಿಂಹವನ್ನು 'ಫೀಲಿಸ್ ಲಿಯೋ' (Felis Leo) ಎಂದೂ ಚಿರತೆಯನ್ನು 'ಫೀಲಿಸ್ ಪಾರ್ಡ್ಸ್' (Felis Pardos) ಎಂಧು ದ್ವಿನಾಮದಿಂದ ಕರೆಯುವುದು ರೂಢಿಗೆ ಬಂದಿದೆ.

ಈ ಪ್ರಾಣಿಗಳು ವರ್ಗೀಕರಣ ರೀತಿಯಿಂದ 'ಫೀಲಿಸ್' ಎಂಬ ಜಾತಿಗೂ, (Genus : Felis), 'ಫೀಲಡೆ' ಎಂಬ ಕುಟುಂಬಕ್ಕೂ (Family : Felidre), 'ಮಾಂಸಹಾರಿ' ಎಂಬ ಉಪವರ್ಗಕ್ಕೂ (Order : Carnivora) 'ಸಸ್ತನಿಗಳು' ಎಂಬ ವರ್ಗಕ್ಕೂ (Class : Mammals) 'ಕಶೇರುಕಗಳು' ಎಂಬ ವಂಶಕ್ಕೂ (Phylum: Vertebrata), 'ತದ್ಭವಜೀವಿ' ಎಂಬ ಉಪರಾಜ್ಯಕ್ಕೂ (Subkingdom: Metazoa), ಪ್ರಾಣಿರಾಜ್ಯಕ್ಕೂ (Animal Kingdom) ಸೇರುತ್ತವೆ.

ಒಂದೊಂದು ಪ್ರಭೇದದ ಸ್ಥಾನವೂ ರಾಜ್ಯದಲ್ಲಿ ಪ್ರಜೆಗಳಿರುವಂತೆ. ಒಂದೊಂದು ಪ್ರಭೇದವೂ ಮಾನವನ ವಿಕಾಸದೆಡೆಗೆ ಒಂದೊಂದು ಮೆಟ್ಟಲುಗಳೆನ್ನಬಹುದು. ಪ್ರಾಣಿರಾಜ್ಯದಲ್ಲಿ ಒಂದುವರೆ ಲಕ್ಷಕ್ಕೂ ಮೀರಿದಷ್ಟು ಪ್ರಭೇದಗಳಿವೆ.

ವಿಭಜನೆ

ಪ್ರಾಣಿ ರಾಜ್ಯ (Animal Kingdom).

೧. **ಉಪರಾಜ್ಯ :** ಆದಿಜೀವಿಗಳು.

ಅ. ವಂಶ : ಆದಿಜೀವಿ.

ಈ ವಂಶಕ್ಕೆ ಸೇರಿದ ಪ್ರಾಣಿಗಳೆಲ್ಲವೂ ಏಕಕಣಜೀವಿಗಳು. ಇದರಲ್ಲಿ ನಾಲ್ಕು ವರ್ಗಗಳಿವೆ. ಈ ವರ್ಗೀಕರಣ ಚಲನಾಂಗಗಳನ್ನನುಸರಿಸಿದೆ.

ವರ್ಗ ೧. ಮಿಥ್ಯಪಾದಿಗಳು (Rhizopoda)

ಈ ಪ್ರಾಣಿಗಳಲ್ಲಿ ಚಲನಾಂಗಗಳು ಮಿಥ್ಯಪಾದಿಗಳು. ದೇಹವೇ ಪೂರ್ತಿಯಾಗಿ ಚಲನೆಗೆ ಸಹಾಯವಾಗುತ್ತದೆ. ನಿರ್ದಿಷ್ಟವಾದ ಚಲನಾಂಗಗಳಿಲ್ಲ.

ಉದಾ : ಅಮೀಬಾ (Amoeba)

ವರ್ಗ ೨. ಚಾಟಿಚಲಾಂಗಿಗಳು (Flagellates)

ಈ ಪ್ರಾಣಿಗಳಲ್ಲಿ ಚಲನಾಂಗವು ಚಾಟಿಯಂತಿರುತ್ತದೆ.

ಉದಾ : ಯುಗ್ಲೀನಾ (Euglena)

ವರ್ಗ ೩. ರೋಮಚಲಾಂಗಿಗಳು (Ciliata)

ಈ ವರ್ಗದ ಪ್ರಾಣಿಗಳಲ್ಲಿ ಚಲನಾಂಗಗಳು ರೋಮಗಳಂತಿವೆ. ಇವು ಒಂದಿರದೆ ದೇಹದ ಮೇಲೆಲ್ಲಾ ಇವೆ.

ಉದಾ : ಪಾರಾಮಿಸಿಯಮ್ (Paramecium)

ವರ್ಗ ೪. ಸ್ಪೋರೋಜೋವ (Sporozoa)

ಈ ವರ್ಗಕ್ಕೆ ಸೇರಿದ ಪ್ರಾಣಿಗಳೆಲ್ಲವೂ ಪರತಂತ್ರಜೀವಿಗಳು. ಅಂದರೆ ಸ್ವತಂತ್ರವಾಗಿ ಜೀವಿಸಲಾರದೆ ಮಿಕ್ಕ ಪ್ರಾಣಿಗಳ ದೇಹದ ಒಳಗೆ ಬದುಕುತ್ತವೆ.

ಈ ವರ್ಗಕ್ಕೆ ಚಳಿಜ್ವರವನ್ನು ತರುವ ಪ್ಲಾಸ್ಮೋಡಿಯಂ (Plasmodium) ಮುಂತಾದುವು.

೨. **ಉಪರಾಜ್ಯ** : ತದ್ಭವಜೀವಿ (Metazoa).

ಒಂದಕ್ಕಿಂತ ಹೆಚ್ಚು ಜೀವಕಣಗಳುಳ್ಳ ಬಹುಕಣಜೀವಿಗಳೆಲ್ಲವೂ ಈ ಉಪರಾಜ್ಯಕ್ಕೆ ಸೇರುತ್ತವೆ. ಈ ಉಪರಾಜ್ಯವನ್ನು ವಿಶಾಲವಾಗಿ ಬೆನ್ನೆಲುಬುಳ್ಳ ಪ್ರಾಣಿಗಳು, ಬೆನ್ನೆಲುಬಿಲ್ಲದ ಪ್ರಾಣಿಗಳೆಂದು ವಿಭಾಗಿಸಬಹುದು.

(೧) **ಕಶೇರುಕಗಳು** (Chordates): ಈ ವಂಶದ ಪ್ರಾಣಿಗಳಿಗೆ ಬೆನ್ನೆಲುಬಿದೆ.

ವರ್ಗ ೧. ಮೀನುಗಳು (Fishes)

ವರ್ಗ ೨. ದ್ವಿಚರಪ್ರಾಣಿಗಳು (Amphibians)

ಉದಾ : ಕಪ್ಪೆಗಳು

ವರ್ಗ ೩. ಸರಿಸೃಪಗಳು (Reptiles)

ಉದಾ: ಹಲ್ಲಿ, ಹಾವು, ಮೊಸಳೆ, ಆಮೆ ಮುಂತಾದವು.

ವರ್ಗ ೪. ಪಕ್ಷಿಗಳು (Birds)

ವರ್ಗ ೫. ಸಸ್ತನಿಗಳು (Mammals)

ಕಾಂಗ್ರೋ, ದನ, ಕುರಿ, ಆಡು, ಅಳಿಲು, ಇಲಿ, ಮೊಲ, ಕಪಿ, ಮನುಷ್ಯ ಮುಂತಾದುವು.

(೨) **ಅಕಶೇರುಕಗಳು** (Invertebrates) : ಬೆನ್ನೆಲುಬಿಲ್ಲದ ಪ್ರಾಣಿಗಳು.

ವಂಶ ೧. ಸ್ಪಂಜು ಪ್ರಾಣಿಗಳು (Sponges)
ಉದಾ : ಸ್ಪಂಜುಗಳು.

ವಂಶ ೨. ಜಠರಾಂಶಜೀವಿಗಳು (Coelenterates)
ಉದಾ : ಜಲವ್ಯಾಲ (Hydra) ಸಾಗರದ ಕುಸುಮಗಳು (Sea Anemones) ಹವಳಗಳು (Corals) ಜೊಲ್ಲು ಮೀನುಗಳು (Jelly Fishes)

ವಂಶ ೩. ಚಪ್ಪಟೆ ಜಂತುಗಳು (Flat Worms or Platy Helmenthes)
ಉದಾ : ಕಾರಲು ಹುಳುಗಳು (Flukes) ಲಾಡಿಹುಳುಗಳು (Tape Worms).

ವಂಶ ೪. ದುಂಡು ಜಂತುಗಳು (Round Worms or Nemato Helmenthes).
ಉದಾ : ಜಂತುಹುಳು (Round Worm) ಕೊಕ್ಕೆ ಹುಳು (Hook Worm).

ವರ್ಗ ೫. ವಲಯುವಂತಗಳು (Annelida)
ಉದಾ : ಎರೆಹುಳು (Earth Worm) ಬೊಂತೆಹುಳು (Nerles) ಜಿಗಣೆ (Leech).

ವಂಶ ೬. ಕೀಲುಕಾಲುಗಳು (Arthropoda)
ಉದಾ : ನಳ್ಳಿ, ಏಡಿ, ಸೀಗಡಿ, ಕೀಟಕಗಳು, ಚೇಳು ಇತ್ಯಾದಿ.

ವಂಶ ೭. ಮೃದ್ವಂಗಿಗಳು (Mollusca)
ಉದಾ : ನಕ್ಷತ್ರ ಮೀನುಗಳು, ಪೆಡಸು ನಕ್ಷತ್ರಗಳು, ಸಾಗರದ ಬಾಲಕ, ಸಾಗರದ ಸೌತೆಕಾಯಿ, ಸಾಗರದ ಕಮಲಗಳು.

ಇದಿಷ್ಟೇ ಅಲ್ಲದೆ ಇವನ್ನು ಮತ್ತೂ ವಿಭಾಗಿಸಬಹುದು. ಇದಿಷ್ಟು ಪ್ರಾಣಿ ರಾಜ್ಯದ ವಿಶಾಲ ವಿಭಜನೆ.

(ಮುಂದುವರಿಯುವುದು)

ಪಾರಿಭಾಷಿಕ ಕೋಶ (Glossary)

೧. ಅನಿಲ Gas.
೨. ಅಂಗ Organ.
೩. ಅವಶೇಷ Fossil.
೪. ಆಮ್ಲಜನಕ Oxygen.
೫. ಇಂಗಾಲಾಮ್ಲ Carbon Dioxide.
೬. ಇಂದ್ರಿಯ ಜ್ಞಾನ Sense.
೭. ಉಬ್ಬರವಿಳಿತಗಳು Tides.
೮. ಉಪವರ್ಗ Order.
೯. ಉಷ್ಟ್ರಪಕ್ಷಿ Ostrich Bird.
೧೦. ಏಕಕಣಜೀವಿ Unicellular Organism.
೧೧. ಕುಟುಂಬ Family.
೧೨. ಗುರುತ್ವ Gravity.
೧೩. ಜೀವವಿಕಾಸ Organic Evolution.
೧೪. ಜೀವರಸ Protoplasm.
೧೫. ಜಾತಿ Genus.
೧೬. ಜೀವಕಣ Cell.
೧೭. ಜೀವಕಣ ಕವಚ Cell Wall.
೧೮. ಜೀವಕಣಬೀಜ Cell Nucleus.
೧೯. ಜೀವಶಾಸ್ತ್ರ Biology.
೨೦. ಜೀವಶಾಸ್ತ್ರಜ್ಞ Biologist.
೨೧. ನದೀ ಮುಖಜಭೂಮಿ Estuary.
೨೨. ಪ್ರಭೇದ Species.
೨೩. ಬಹುಕಣಜೀವಿ Multicellular Organism.
೨೪. ಬೀಜಾಂಗ Nuclear Membrane.
೨೫. ಮೂಲವಸ್ತು Element.
೨೬. ಮಲಿನವಸ್ತು Excretary Material.
೨೭. ಮಧ್ಯವರ್ತಿ Evolutionary Stage.
೨೮. ರಸಾಯನಿಕ ರಚನೆ Chemical Composition.
೨೯. ರಕ್ಷಾಕವಚ Cellulose.
೩೦. ವಿಕಾಸ Evolution.
೩೧. ವರ್ಣರೇಖೆ Chromosome.
೩೨. ವಂಶಾಂಶ Gene.
೩೩. ವಂಶ Phylum.
೩೪. ವರ್ಗ Class.
೩೫. ಶಿಲಾರಸ Lava.
೩೬. ಸಂಯುಕ್ತಪದಾರ್ಥ Compound.
೩೭. ಸೂಕ್ಷ್ಮದರ್ಶಕಯಂತ್ರ Microscope.
೩೮. ಹರಿತ್ತು Chlorophyll.
೩೯. ಕೇಂದ್ರೀಕರಣವಸ್ತು Centrosome.

ಎಚ್. ಬಿ. ದೇವರಾಜ ಸರ್ಕಾರ್

ಬಾಡಿಗೆಗೆ ದೊರೆಯುತ್ತೆ

ನನ್ನ ಭಾವನವರಿಗೆ ಈ ಊರಿಗೇ ವರ್ಗವಾದುದರ ಸಲುವಾಗಿ, ಅವರ ವಾಸಕ್ಕೆ ಒಂದು ಮನೆಯನ್ನು ಬಾಡಿಗೆಗೆ ಗೊತ್ತುಮಾಡಲು ಹೊರಟೆ. ಬೆಂಗಳೂರು ಬೀದಿಗಳಲ್ಲಿ ಎಷ್ಟು ಅಲೆದರೂ ಬಾಡಿಗೆಗೆ ಒಂದು ಮನೆಯೂ ದೊರೆಯುವ ಹಾಗಿರಲಿಲ್ಲ. ನಾಲ್ಕು ದಿನ ನಿಷ್ಫಲವಾಗಿ ಅಲೆದಿದ್ದೆ. ಐದನೆಯ ದಿನ ಬೆಳಿಗ್ಗೆ ಮನೆಯಿಂದ ಹೊರಟಾಗ ಜಯಶೀಲನಾಗಿಯೇ ವಾಪಸ್ಸು ಬರಬೇಕೆಂದು ಸಂಕಲ್ಪಮಾಡಿ ಹೊರಟೆ. ತಿರುಗಾಡುವ ಶಕ್ತಿಸ್ವಾತಂತ್ರ್ಯಗಳು ನನ್ನವು. ಆದಮಾತ್ರಕ್ಕೆ ಜಯ ದೊರೆಯಬೇಕೇನು? ನಾನು ಅಲ್ಪಪ್ರಯತ್ನಮಾಡಿ ಸೋಲನ್ನು ಒಪ್ಪಿಕೊಳ್ಳುವ ಸ್ವಭಾವದವನಲ್ಲ. ಈ ಹಠದ ಫಲವೊ ನನ್ನ ಸುಯೋಗವೊ ಮಧ್ಯಾಹ್ನ ನಾಲ್ಕೂಮುಕ್ಕಾಲು ಗಂಟೆಯ ವೇಳೆಗೆ ನನ್ನ ದೃಷ್ಟಿಗೆ ಗೋಚರವಾಯಿತು ಒಂದು ಮನೆಯ ಮುಂಭಾಗದಲ್ಲಿ ಬರೆದಿದ್ದ ಈ ಮಾತುಗಳು: "ಬಾಡಿಗೆಗೆ ದೊರೆಯುತ್ತೆ"; ಅದರ ಕೆಳಗೆ: "ಮಾರಾಟಕ್ಕೂ ಸಹ." ನನ್ನ ಸಂತೋಷಕ್ಕೆ ಪಾರವೇ ಇಲ್ಲ. ಭ್ರಾಂತಿಯೊ, ಕನಸೊ, ವಾಸ್ತವವೊ ಎಂದು ನಿಶ್ಚಯಮಾಡಿಕೊಳ್ಳಲು ಪುನಃ ಕಣ್ಣು ತೆರೆದು ನೋಡಿದೆ. ಆ ಮಾತುಗಳು ಅಲ್ಲಿದ್ದುವು. ಮನೆಯನ್ನು ಪರೀಕ್ಷಿಸಿದೆ; ರಮ್ಯವಾದ ಕೈತೋಟದ ಮಧ್ಯೆ ಕಂಗೊಳಿಸುತ್ತಿರುವ ದಿವ್ಯವಾದ ಮಹಲು. ಆ ಕ್ಷಣದಲ್ಲಿ ನನ್ನ ಭಾವನೆಯಲ್ಲಿ ಆ ಮನೆ ಅಲ್ಲಾವುದ್ದೀನನ ಅದ್ಭುತ ದೀಪವು ನಿರ್ಮಿಸಿದ ರತ್ನಖಚಿತವಾದ ಅರಮನೆಯಂತೆ ಭಾಸವಾಯಿತು. ಮೆಟ್ಟಲನ್ನು ಹತ್ತಿ ಗುಲಾಬಿ, ಮಲ್ಲಿಗೆಗಳ ಪರಿಮಳವನ್ನು ಸೇವಿಸುತ್ತ ಮನೆಯ ಬಾಗಿಲನ್ನು ಸಮೀಪಿಸಲು ಮನೋಹರವಾದ ಸಂಗೀತ ಸುಸ್ವಾಗತವನ್ನು ಬಯಸಲು ಬಂದಿತು.

ಮುಂಭಾಗದಲ್ಲಿದ್ದ ಕೊಠಡಿಯೊಳಗೆ ಕಾಲಿಡುವುದರೊಳಗೇ ಅಲ್ಲಿ ಕೂತಿದ್ದ ಮಧ್ಯವಯಸ್ಸಿನ ಸಂಭಾವಿತರೊಬ್ಬರು ಮೃದು ಮಧುರವಾಣಿಯಿಂದ ಬರಮಾಡಿಕೊಂಡು ಆರಾಮ ಕುರ್ಚಿಯಲ್ಲಿ ಕುಳಿತುಕೊಳ್ಳುವಂತೆ ಪ್ರಾರ್ಥಿಸಿದರು. ಅವರ ಆದರಕ್ಕಾಗಿ ಅವರನ್ನು ವಂದಿಸಿ ಕುಳಿತೆ. ಇಂಗ್ಲಿಷ್ ಹಾಡೊಂದರ ಕಡೆಯ ನುಡಿ ಆಗ ನಡೆಯುತ್ತಿದ್ದಿತು. ವಾಣಿಯ ಇಂಪು, ಹಿನ್ನೆಲೆಯ ವಾದ್ಯಗಳಿಂದ ಸೃಷ್ಟಿಯಾಗಿದ್ದ ವಾತಾವರಣ, ಸಂಗೀತದ ಚಲನದ ಪ್ರತಿಭೆ ನಮ್ಮ ಹೃದಯಗಳನ್ನು ಅಪಹರಿಸಿದುವು. ಅದು ಮುಗಿದು ಐದುಗಂಟೆ ಹೊಡೆಯಲು ಇಬ್ಬರೂ ವಾಸ್ತವಿಕ ಪ್ರಪಂಚಕ್ಕೆ ಹಿಂದಿರುಗಿದೆವು. ಮಾತಿಗೆ ಆರಂಭವಾಗುವುದಕ್ಕೆ ಮುಂಚೆ ನನ್ನ

ದೃಷ್ಟಿ ಆ ಕೊಠಡಿಯನ್ನು ಪರೀಕ್ಷಿಸಿತು. ಒಂದು ಕಡೆ ಸಂಗೀತವನ್ನು ಒದಗಿಸುತ್ತಿದ್ದ ರೇಡಿಯೊ. ಅದರ ಎದುರು ಪುಸ್ತಕಗಳಿಂದ ತುಂಬಿರುವ ಗಾಜಿನ ಬೀರು. ಅದರ ಪಕ್ಕದಲ್ಲಿ ಸಣ್ಣ ಮೇಜು; ಅಲ್ಲಿಯೂ ನಾಲ್ಕಾರು ಸಣ್ಣ ದೊಡ್ಡ ಪುಸ್ತಕಗಳು. ಗಾಜಿನ ಬೀರುವಿಗೆ ಎದುರುಮೂಲೆಯಲ್ಲಿ ಇನ್ನೊಂದು ಪುಸ್ತಕದ ಬೀರು. ಗೋಡೆಯ ಪಕ್ಕಗಳಲ್ಲಿ ಇಲ್ಲೆರಡು, ಅಲ್ಲೆರಡು ಕುರ್ಚಿಗಳು. ರೇಡಿಯೋ ಮೇಲ್ಭಾಗದ ಗೋಡೆಯಲ್ಲಿ ಪ್ರಪಂಚದ ಭೂಪಟ, ಪಕ್ಕದ ಗೋಡೆಯಲ್ಲಿ ಯೂರೋಪಿನ ಭೂಪಟ ಮತ್ತು ಇಂಡಿಯ. ನಾನು ಕೂತೆಡೆಯಿಂದ ಒಳಗಿನ ಕೋಣೆಯ ಒಂದು ಭಾಗ ನನ್ನ ದೃಷ್ಟಿಗೆ ಗೋಚರವಾಯಿತು. ಅಲ್ಲಿ ದೊಡ್ಡ ಕಬ್ಬಿಣದ ಪೆಟ್ಟಿಗೆ ಒಂದು ಇದೆಲ್ಲವನ್ನು ನೋಡಿ ನನಗೆ ಸಂಶಯ ತಲೆದೋರಿತು: ಈ ಮನೆ ಖಂಡಿತ ಬಾಡಿಗೆಗೆ ದೊರೆಯಲಾರದು ಎನ್ನಿಸಿತು.

ನನ್ನನ್ನು ಬರಮಾಡಿಕೊಂಡವರನ್ನು ನೋಡಿದೆ. ಊಟ ಉಪಚಾರಗಳಲ್ಲಿ ಯಾವ ಕೊರತೆಯೂ ಇಲ್ಲದೆ ಬೆಳೆದ ದೇಹ. ಮುಖದಲ್ಲಿ ಮೈಯಲ್ಲಿ ಯಾವ ಸುಕ್ಕೂ ಇಲ್ಲ. ಸ್ವಾಭಾವಿಕವಾದ ಕಿರುನಗೆಯಿಂದ ಬೆಳಗುತ್ತಿದ್ದ ಮುಖ, ನಗೆಯಿಂದ ಹೊಳೆಯುತ್ತಿದ್ದ ಕಣ್ಣುಗಳು. ಶಾಂತಿಮೂಲವಾದ ಆನಂದ ಹೊರಹೊಮ್ಮುತ್ತಿದ್ದಿತು ಆ ಮುಖದಿಂದ. "**ಬಾಡಿಗೆಗೆ ದೊರೆಯುತ್ತೆ**" ಎನ್ನುವುದನ್ನು ನೋಡಿ ಒಳಗೆ ಬಂದೆ. "ಔಟ್ ಹೌಸ್ ಬಾಡಿಗೆಗೆ ಇದೆಯೆ?" ಎಂದು ಕೇಳಿದೆ. ಈ ಮನೆಗೆ ಔಟ್ ಹೌಸೇ ಇಲ್ಲ ಎಂದು ಅವರು ಹೇಳಿದರು. ಹಾಗಾದರೆ ನಿಮಗೆ ಸೇರಿದ ಬೇರೆ ಮನೆ, ಬಂಗಲೆ ಬಾಡಿಗೆಗೆ ಉಂಟೊ ಎಂದೆ. ಇಲ್ಲ, ಅಂಗಡಿಮುಂಗಟ್ಟು? ಇಲ್ಲ. ಟ್ಯಾಕ್ಸಿ? ಇಲ್ಲ. ನನ್ನ ಮನಸ್ಸಿನಲ್ಲಿದ್ದ ಸಂಶಯ ಹೆಚ್ಚಿ, ಆಶ್ಚರ್ಯ ಬೇರೂರಿತು. ಮುಂದೆ ಏನು ಕೇಳಬೇಕು? ನಾಚಿಕೆಗೆ ಈಡಾಗದೆ, ಅವರು ಮನಸ್ಸನ್ನೂ ನೋಯಿಸದೆ ಅಲ್ಲಿಂದ ಹೊರಕ್ಕೆ ಬರುವುದು ಹೇಗೆ ಸಾಧ್ಯವೆಂದು ನನ್ನ ಮನಸ್ಸು ತಲ್ಲಣಿಸುತ್ತಿದ್ದಿತು. ಆ ವೇಳೆಗೆ ಸರಿಯಾಗಿ ಎರಡು ಬೆಳ್ಳಿಯ ತಟ್ಟೆಗಳಲ್ಲಿ ಉಪಹಾರ ಬಂದು ನಾನು ಕಷ್ಟದಿಂದ ಪಾರಾಗುವಂತಾಯಿತು.

ಈ ನನ್ನ ಅವಸ್ಥೆಯನ್ನು ನೋಡಿದ ಅವರು ಉಪಹಾರವನ್ನು ಸೇವಿಸುತ್ತಾ ಹೇಳಿದರು: "ಸ್ವಾಮಿ, ನನ್ನ ಮಾತು ಕೇಳಿ ನಿಮಗೆ ಸ್ವಲ್ಪ ಆಶ್ಚರ್ಯವಾಗಬಹುದು. ಆದರೆ ನಾನು ಹೇಳುವುದು ಸತ್ಯ, ನೀವು ನಂಬಬೇಕು. ಬಾಡಿಗೆಗೂ ಮಾರಾಟಕ್ಕೂ ಇರುವ ವಸ್ತು ನಾನೇ . . ." ಅವರ ಕತೆಯನ್ನು ಅವರ ಮಾತಿನಲ್ಲಿಯೆ ಹೇಳುವುದು ನನಗೆ ಸಾಧ್ಯವಿಲ್ಲ. ಅವರಿದ್ದ ಮನೆ ಅವರಿಗೆ ಪಿತ್ರಾರ್ಜಿತವಾಗಿ ಬಂದದ್ದು. ನಾನು ಆ ದಿನ ಸೇವಿಸಿದ ಮಾವಿನ ಹಣ್ಣು ಚನ್ನಪಟ್ಟಣದ ಬಳಿ ಇರುವ ಅವರ ತೋಟದ್ದು.

ಹುರಿಗಾಳಿನಲ್ಲಿದ್ದ ಹೆಸರು, ಕಡಲೆ, ಕಡಲೆಕಾಯಿ, ಕೊಬ್ಬರಿ ಅವರ ಹೊಲದಲ್ಲಿ ತೋಟ ದಲ್ಲಿ ಬೆಳೆದದ್ದು. ಅವರು ವಿಶ್ವವಿದ್ಯಾನಿಲಯದ ದೊಡ್ಡ ಪರೀಕ್ಷೆಯನ್ನು ಇಪ್ಪತ್ತ ಮೂರು ವಯಸ್ಸಿಗೇ ಮುಗಿಸಿ, ಕೂಡಲೆ ಗೌರವಯುತವಾದ ಕೆಲಸದಲ್ಲಿ ಸೇರಿದರು. ದಕ್ಷತೆಯಿಂದ ಕೆಲಸಮಾಡಿ, ಸಹೋದ್ಯೋಗಿಗಳಲ್ಲಿ ಮರ್ಯಾದೆ ಪ್ರೇಮ ವಿಶ್ವಾಸ ಗಳನ್ನು ಪಡೆದು ಮಿತ್ರವೃಂದವನ್ನು ಸಂಪಾದಿಸಿದರು. ಅವರಿಗೆ ಯಾವ ಕೊರತೆಯೂ ಇಲ್ಲವೆಂದೇ ಹೇಳಬೇಕು. ಆದರೆ ಹದಿನೈದು ಸಂವತ್ಸರಗಳಿಂದಲೂ ಒಂದೇ ಸಂಬಳ ವನ್ನು ತೆಗೆದುಕೊಂಡು ಬೇಸರವಾಗಿದೆ. ಆದುದರಿಂದ ಗೂಢವಾಗಿ "ಬಾಡಿಗೆಗೆ ದೊರೆಯುತ್ತೆ" ಎಂದು ಬರೆಸಿ, ಚಮತ್ಕಾರದ ಈ ಮಾತುಗಳ ಸೆಳೆತಕ್ಕೆ ಸಿಕ್ಕಿ, ಭಾವನಾಪ್ರಪಂಚದಲ್ಲಿ ಸೃಷ್ಟಿಯಾಗುವ ಸಂಘಟನೆಗಳನ್ನು ಸವಿದು, ಮನಸ್ಸಿನ ಒಂದು ಮೂಲೆಯಲ್ಲಿ ಉತ್ಪನ್ನವಾಗುವ ಬೇಸರವನ್ನು ಹೊರದೂಡುತ್ತಿದ್ದಾರೆ ಎನ್ನುವ ಅಂಶ ತಿಳಿದುಬಂದಿತು.

ಈ ವಿಚಿತ್ರ ಮಾನವಹೃದಯದ ಸಂಕಟವನ್ನು, ಅದರ ನಿವಾರಣೆಗೆ ಹೂಡಿದ್ದ ವಿಚಿತ್ರಪರ ಉಪಾಯವನ್ನು ಮನಸ್ಸಿನಲ್ಲಿ ಮೆಲುಕುವುದರಲ್ಲಿ ಮನೆ ಸಿಗದ ನನ್ನ ಸಂಕಟ ಮಾಯವಾಯಿತು. ಅವರ ಅಪೂರ್ವ ಪರಿಚಯ ದೊರೆತದ್ದಕ್ಕಾಗಿ ಅವರನ್ನು ವಂದಿಸಿ, ಮಾನವಜೀವನದ ಬಹುಬಗೆಯ ವೈಚಿತ್ರ್ಯದಿಂದ ಚಕಿತನಾಗಿ ಬಸ್ಸು ನಿಲ್ದಾಣವನ್ನು ಸೇರಿದೆ.

ಮಂ.

ಇವನು

ತಲೆಯತಪ್ಪಲೆಯಲ್ಲಿ
ವಿಚಾರಗಳ ಕುದಿತ !
ಎದೆಯಗೂಡೊಳಗೆನಿತೊ
ಮುರಿದ ಗಡಿಯಾರಗಳ ತುಡಿತ
ಹಗಲು ಇರುಳು.
ಮನದ ಕಂಬಿಯಮೇಲೆ
ನೂರು ರೈಲಿನ ಉರುಳು ;
ಇನಿತೆ ಸ್ಪಂದನ, ಮತ್ತೆ
ಮೌನ ಮೌನ !

ಹಗಲೊ ರಾತ್ರಿಯೊ ಏನೊ ಎಲ್ಲವೂ ಇವನ
ಬಾಳ ತಿವಿಯುತ ಮುಂದೆ ಹೋಗಿರುವುವು.
ಬೆಂಕಿ ಬಾಯನು ತೆರೆದು ನಗುವ ಮೂಡಲ ಬಾನು,
ನೂರು ತೂತಿನ ಛತ್ರಿ ಬಿಚ್ಚುವಿರುಳಿನ ಬಾನು
ನಿಡುಸುಯ್ಯಿಸೊಲು ನಡೆವ ಗಾಳಿಗಳ ಹೊನಲು—
ಎಲ್ಲವೂ ಇವನನ್ನು ಅರೆಯುತಿಹವು.

ಸಿನಿಮ—ಹೋಟೆಲ್—ಸರ್ಕಸ್ಸು—ಆ ದೊಂಬರಾಟ,
ಇಸ್ಪೀಟು—ಸಿಗರೇಟು—ಹಾವಾಡಿಗನ ಮಾಟ
ಕಾವ್ಯಪಾರಾಯಣ—ಭಾಷಣ—ಹರಿಕತೆಯ ಸವಿಯೂಟ
ಓ ಎಷ್ಟೊಂದು,—ನೋವ ಮರೆಯಲು ಮಾನವನು
ಮಾಡಿರುವ ಹೂಟ !

ಮುರುಕು ಜೋಪಡಿಯೊಳಗೆ
ಮಳೆಯ ನೀರಿಳಿವಂತೆ
ಇಳಿಯುತಿವೆ ತಲೆಯೊಳಗೆ ನೂರು ಚಿಂತೆ !
ಒಳಗೆಲ್ಲ ಕೆಸರು, ಬರಿಕೆಸರು ; ಅದರೊಳಗು
ಮೊಳೆಯುತಿವೆ ಆಸೆಗಳು ಹಸುರಿನಂತೆ ?
. . . ಆದರೂ ಆದರೂ ನಿರಾಸೆಯಲಿ ಮುಳುಗಿ
ನೋಯನಿವನು.
ಕೋಪದಲಿ ದೈವವನು ಶಪಿಸನಿವನು.
ಬೆಳಕ ಮುಡಿಯಲಿ ಹೊತ್ತು ನಿಂತ ಲಾಂದ್ರದ ಹಾಗೆ
ನಿಂತಿರುವನು.
ಸುತ್ತ ಅನ್ಯಾಯಗಳ ಸಂತೆ ಸಾಗಿರಲಾಗಿ
ವಿಲಯಮೌನದೊಳಿವನು ದಿಟ್ಟಿಸುವನು !

ಜಿ. ಎಸ್. ಶಿವರುದ್ರಪ್ಪ.

ಸ್ವಭಾವೋಕ್ತಿ

ಸಾಮಾನ್ಯನ ಉಕ್ತಿಗೂ ಕವಿಯ ಉಕ್ತಿಗೂ ವ್ಯತ್ಯಾಸವಿದೆ. ಆದುದರಿಂದಲೇ ಕಾವ್ಯಭಾಷೆಯನ್ನು ಅತಿಶಯ ಎಂದು ಕರೆಯುವುದು. ಏಕೆಂದರೆ ಕವಿಯ ಅನುಭವದಲ್ಲೇ ಒಂದು ಅತಿಶಯತೆ ಇದೆ; ವಕ್ರತೆ ಇದೆ. ಕವಿಯು ತನ್ನ ಸಹಜಾನುಭವದ ವಕ್ರತೆ ಅಥವಾ ಸೌಂದರ್ಯವನ್ನು ಒಂದು ಸುಂದರವಾದ ರೀತಿಯಲ್ಲಿ ಹೇಳುತ್ತಾನೆ. ಕವಿಯು ಸ್ವಾಭಾವಿಕವಾಗಿ ಹೇಳಿದ ಆ ಉಕ್ತಿವಕ್ರತೆ ಉಳಿದವರ ಕಣ್ಣಿಗೆ ವಕ್ರೋಕ್ತಿಯಾಗಿ ಕಾಣುತ್ತದೆ. ಒಬ್ಬ ಕವಿ ಸಂಧ್ಯೆಯ ವರ್ಣನೆಯನ್ನು ಮಾಡುತ್ತಾ "ಅನುರಾಗವತೀ ಸಂಧ್ಯಾ" ಎಂದು ಹೇಳುತ್ತಾನೆಂದು ಇಟ್ಟುಕೊಳ್ಳೋಣ. ಕವಿಯ ಕಣ್ಣಿಗೆ ರಾಗದಿಂದ ಕೆಂಪಾದ ಸಂಜೆ 'ಅನುರಾಗವತಿ'ಯಾದ ಹೆಣ್ಣಿನಂತೆ ತೋರಿತು. ಕವಿ ಬೇಕೆಂದೇ ಸಂಜೆಯನ್ನು ಹೆಣ್ಣಿಗೆ ಹೋಲಿಸಬೇಕೆಂದು ಆ ಮಾತನ್ನು ಹೇಳಲಿಲ್ಲ. ಯಾವಾಗಲೂ ಚೆಲುವನ್ನು ಕಾಣುವ ಕವಿಯ ಕಣ್ಣು ಸಂಜೆಯನ್ನು ನೋಡಿದಾಗ ಹಾಗೆ ಹೇಳಿದ್ದು ಆತನ ದೃಷ್ಟಿಯ ಸ್ವಭಾವದ ಉಕ್ತಿ; ಕವಿಸ್ವಭಾವ ಇದ್ದುದನ್ನೂ ಇದ್ದಹಾಗೆಯೇ ಹೇಳಲು—ನಿರ್ಭಾವವಾಗಿ ನುಡಿಯಲು ಸಾಧ್ಯವೇ ಇಲ್ಲ. ಆದುದರಿಂದ ನಾವು ಯಾವುದನ್ನು ಸುಂದರವಾದ ಉಕ್ತಿ ಅಥವಾ ವಕ್ರೋಕ್ತಿ ಎಂದು ಕರೆಯುತ್ತೇವೆಯೋ ಅದು ನಿಜವಾಗಿಯೂ ಕವಿಸ್ವಭಾವದ ಉಕ್ತಿ; ಕವಿದೃಷ್ಟಿಯಲ್ಲಿ ಸ್ವಭಾವೋಕ್ತಿ. ಆದುದರಿಂದ ವಕ್ರೋಕ್ತಿ ಎಂದರೂ ಒಂದೇ, ಸ್ವಭಾವೋಕ್ತಿ ಎಂದರೂ ಒಂದೆ. ಆದರೆ ಯಾವ ಒಬ್ಬ ಕವಿ ಸಂಜೆಯನ್ನು ಸಹಜವಾಗಿಯೇ 'ಅನುರಾಗವತಿ' ಎಂದು ಕರೆದನೋ, ಆ ಮಾತಿನ ಚಾರುತ್ವಕ್ಕಾಗಿ ಹಲವಾರು ಜನ ಆ ಅನುಭವವನ್ನು ಪಡೆಯದ ಕವಿಗಳು 'ಅನುರಾಗವತಿ' ಎಂಬುದನ್ನು ಬಳಸಿ ಅದರ ಅರ್ಥವನ್ನು ಕಳೆಯುತ್ತಾರೆ. ಆಗ ಆ ಒಂದು ಮಾತು ಕಾವ್ಯದ ಒಂದು ಅಲಂಕಾರಗಳ ಪಟ್ಟಿಯಲ್ಲಿ ಸೇರಿತು. ಹೀಗಾಗಿ 'ವಕ್ರೋಕ್ತಿ' ಎಂಬುದು ಒಂದು ಅಲಂಕಾರವೆಂದೂ, ವಕ್ರೋಕ್ತಿಗೂ ಸ್ವಭಾವೋಕ್ತಿಗೂ ವ್ಯತ್ಯಾಸವಿದೆ ಎಂದೂ ಚರ್ಚೆಗಳಿಗೆ ಆರಂಭವಾಯಿತು. ಸ್ವಭಾವೋಕ್ತಿ ಎಂಬುದು ನೀರಸವಾದ ಹೇಳಿಕೆ ಎಂಬ ಅರ್ಥಕ್ಕೆ ಇಳಿದು, ಆ ನಷ್ಟವನ್ನು ತುಂಬಲು 'ರಸೋಕ್ತಿ' ಎಂಬ ಪದವು ಬಂದಿತು. ಮತ್ತು ಸ್ವಭಾವೋಕ್ತಿಗೆ 'ಜಾತಿ' ಎಂಬ ಇನ್ನೊಂದು ಪದವೂ ಸೇರಿಕೊಂಡಿತು. ಹೀಗೆ ವಾರ್ತೆ-ಸ್ವಭಾವೋಕ್ತಿ-

ರಸೋಕ್ತಿ-ವಕ್ರೋಕ್ತಿ ಎಂಬ ಮಾತುಗಳು ಉಂಟಾದುವು. ಇವುಗಳನ್ನು ಸಾಹಿತ್ಯ ವಿಮರ್ಶೆಯಲ್ಲಿ ಸಮಯೋಚಿತವಾಗಿ ಉಪಯೋಗಿಸಿಕೊಳ್ಳಬಹುದು.

'ಸ್ವಭಾವೋಕ್ತಿ'ಯ ವಿಷಯ ಮೊಟ್ಟಮೊದಲು 'ಬಾಣ'ನಲ್ಲಿ ಸಿಕ್ಕುತ್ತದೆ. ಆತ ಅದನ್ನು ಜಾತಿ ಎಂದು ಕರೆಯುತ್ತಾನೆ. 'ಜಾತಿ' ಎಂಬುದು ಸ್ವಭಾವೋಕ್ತಿಗೆ ಇದ್ದ ಹಳೆಯ ಹೆಸರು. ಬಾಣನು ಜಾತಿಯನ್ನು 'ಅಗ್ರಾಮ್ಯವಾಗಿರಬೇಕು, ಅಕ್ಲಿಷ್ಟವಾಗಿರಬೇಕು, ರಸಸ್ಫುಟವಾಗಿರಬೇಕು' ಎನ್ನುತ್ತಾನೆ.

ದಂಡಿ ಸ್ವಭಾವೋಕ್ತಿಯಲ್ಲಿ—ಜಾತಿ-ದ್ರವ್ಯ-ಗುಣ-ಕ್ರಿಯೆ-ಎಂದು ನಾಲ್ಕು ರೀತಿಗಳನ್ನು ಹೇಳುತ್ತಾನೆ. ಭಾಹಮನಲ್ಲಿ 'ಜಾತಿ' ಎಂಬ ಮಾತು ಇಲ್ಲದಿದ್ದರೂ 'ಸಹಜವರ್ಣನೆ' ಎಂಬ ಮಾತು ಇದೆ. ವಕ್ರತೆಯಿಲ್ಲದಿದ್ದರೆ ಅದು ಬರಿಯ ವಾರ್ತೆ. ಎನ್ನಿಸಿಕೊಳ್ಳುತ್ತದೆ ಎನ್ನುತ್ತಾನೆ. ಆತ *"ಗತೋಽಸ್ತಮರ್ಕೋ ಭಾತೀಂದುಃ ಯಾಂತಿ ವಾಸಾಯಪಕ್ಷಿಣಃ" ಎಂಬ ಉದಾಹರಣೆ ಕೊಟ್ಟು ಇದು ಬರಿಯ ವಾರ್ತೆ ಎನ್ನುತ್ತಾನೆ. ವಾರ್ತಾ ಎಂಬುದನ್ನು "ಯಥಾಸ್ವರೂಪಕಥನಂ ವಾರ್ತೇತಿಪರಿಕೀರ್ತಿತಮ್" ಎನ್ನುತ್ತಾನೆ. ಅದೂ ಅಲ್ಲದೆ ವಾರ್ತೆಯನ್ನು ಲೋಕವಾರ್ತಾ, ಶಾಸ್ತ್ರವಾರ್ತಾ ಎಂದು ವಿಭಾಗಿಸುತ್ತಾನೆ. ಅಂತೂ ಭಾಹಮನು 'ವಾರ್ತಾ' ಮತ್ತು ಸ್ವಭಾವೋಕ್ತಿಗಳು ಬೇರೆಬೇರೆ ಎಂದು ಹೇಳಿದ್ದಾನೆ. ಆತ ಸ್ವಭಾವೋಕ್ತಿಯನ್ನು ಒಂದು ಅಲಂಕಾರವೆಂದು ಕರೆದಿದ್ದಾನೆಯೇ ಇಲ್ಲವೇ ಎಂಬುದರ ಮೇಲೆ ಲಾಕ್ಷಣಿಕರಲ್ಲಿ ಸಾಕಷ್ಟು ಚರ್ಚೆ ನಡೆದಿದೆ.

ಜಯಮಂಗಲನೆಂಬ ಲಾಕ್ಷಣಿಕ 'ವಾರ್ತೆ' ಮತ್ತು ಸ್ವಭಾವೋಕ್ತಿಗಳ ವ್ಯತ್ಯಾಸವನ್ನು ಹೇಳುತ್ತಾ ವಾರ್ತೆಯನ್ನು 'ವಿಶಿಷ್ಟವಾರ್ತಾ, ನಿರ್ವಿಶಿಷ್ಟವಾರ್ತಾ' ಎಂದು ವಿಭಾಗಿಸಿ, ವಿಶಿಷ್ಟವಾರ್ತಾ ಎಂಬುದು 'ಸ್ವಭಾವೋಕ್ತಿ' ಎಂದೂ, ನಿರ್ವಿಶಿಷ್ಟವಾರ್ತೆ ಬರಿಯ 'ವಾರ್ತೆ' (News) ಎಂದೂ ಹೇಳುತ್ತಾನೆ. ರುದ್ರಟನು ಅರ್ಥಾಲಂಕಾರಗಳನ್ನು ವಾಸ್ತವ-ಔಪಮ್ಯ-ಅತಿಶಯ-ಶ್ಲೇಷ, ಎಂದು ಹೇಳಿ ಈ 'ವಾಸ್ತವ' ಎಂಬುದು 'ವಸ್ತುಸ್ವರೂಪ ಕಥನ' ಎನ್ನುತ್ತಾನೆ. ಭಾಮಹನು ವಾರ್ತೆಯನ್ನು 'ಯಥಾಸ್ವರೂಪ ಕಥನ' ಎಂದು ಕರೆದಿರುವ ಮಾತಿನಲ್ಲಿ ಈ 'ವಾಸ್ತವ'ದ ಅಭಿಪ್ರಾಯವೂ ಹೊಂದುತ್ತದೆ. ರುದ್ರಟನು 'ಜಾತಿ'ಯನ್ನು 'ವಾಸ್ತವ' ಎಂಬುದರಲ್ಲೇ ಸಮಾವೇಶಗೊಳಿಸುತ್ತಾನೆ, ನೇಮಿಸಾಧು ಎನ್ನುವವನು ಈ 'ವಾಸ್ತವ' ಎಂಬುದು ಇದ್ದುದನ್ನು ಇದ್ದಹಾಗೆ ಹೇಳುವುದು ಎಂಬ ಅರ್ಥದಲ್ಲಿ ಬಳಸಿ 'ಜಾತಿ ಎಂದರೆ ವಸ್ತು ಪ್ರಚೋದಿಸಿದ ಅನುಭವವನ್ನು ಮನಸ್ಸಿನಲ್ಲಿ

* *Some Concepts of Alankara Sastra,* V. RAGHAVAN, p. 96.

ಉದ್ಬೋಧಿಸುವ ಸ್ಪಷ್ಟವಾದ ಚಿತ್ರ' ಎನ್ನುತ್ತಾನೆ. ಉದ್ಭಟನೂ ಸ್ವಭಾವೋಕ್ತಿ ಎಂಬುದು ಇದೆ ಎಂದು ಒಪ್ಪಿಕೊಂಡ. ಅಗ್ನಿಪುರಾಣ 'ಸ್ವಭಾವೋಕ್ತಿಯನ್ನು 'ರೂಪಕಾಲಂಕಾರ' ಎನ್ನುತ್ತದೆ. ಭೋಜನು, ಸ್ವಭಾವೋಕ್ತಿ-ರಸೋಕ್ತಿ-ವಕ್ರೋಕ್ತಿ ಎಂದು ಹೇಳುತ್ತಾನೆ.

ಕುಂತಕ ಮತ್ತು ಮಹಿಮಭಟ್ಟರ ಹೆಸರುಗಳು—'ಸ್ವಭಾವೋಕ್ತಿ'ಯ ಇತಿಹಾಸದಲ್ಲಿ ಮುಖ್ಯವಾದುವು. ಕುಂತಕನು ಸ್ವಭಾವೋಕ್ತಿ ಅಲಂಕಾರವಲ್ಲವೆಂದೂ ಮಹಿಮಭಟ್ಟನು ಅದು ಅಲಂಕಾರವೆಂದೂ ಒತ್ತಿ ಹೇಳುತ್ತಾರೆ.

ಕುಂತಕನ ಪ್ರಕಾರ ಸ್ವಭಾವೋಕ್ತಿ ಅಲಂಕಾರವಲ್ಲ; ಅದೇ ಅಲಂಕಾರ್ಯ, ಎಂದರೆ ಕಾವ್ಯಶರೀರ. ಅದು ಅಲಂಕಾರ ಎಂದರೆ ಅಲಂಕಾರ್ಯವನ್ನೇ ಅಲಂಕರಿಸಿದಂತೆ ಹಾಸ್ಯಾಸ್ಪದವಾಗುತ್ತದೆ. ಇತರರು ಯಾವುದನ್ನು ಸ್ವಭಾವೋಕ್ತಿ ಎನ್ನುವರೋ ಅದನ್ನೇ ಈತ 'ವಸ್ತುವಕ್ರತೆ' ಎಂದು ಕರೆಯುತ್ತಾನೆ. ಲೋಕವಸ್ತುವನ್ನು ಕಾವ್ಯವಸ್ತುವನ್ನಾಗಿ ಮಾಡುವ ಈ ವಕ್ರತೆಯೇ ಅಲಂಕಾರವಲ್ಲವೆ ಎಂದರೆ ಆತ ಜಗ್ಗದೆ, ಕಾವ್ಯಕ್ಕೆ ಯೋಗ್ಯವಾದ ವಸ್ತುಗಳು ಸಹಜ ವಕ್ರತೆಯಿಂದಲೇ ಕೂಡಿರುತ್ತವೆ ಉಳಿದವು ಅಲ್ಲ—ಎನ್ನುತ್ತಾನೆ. ಕಾವ್ಯವಸ್ತುವಿನ ಸ್ವಭಾವ ವ್ಯಾಖ್ಯಾನವನ್ನೇ ಸ್ವಭಾವೋಕ್ತಿ ಎಂದು ಕರೆಯಬಹುದಲ್ಲ ಎಂದರೆ ಅದಕ್ಕೆ ನನ್ನದೇನೂ ಅಡ್ಡಿ ಇಲ್ಲ, ಎನ್ನುತ್ತಾನೆ.

ಮಹಿಮಭಟ್ಟನು ವಾಚ್ಯ ಅವಚನ, ಅವಾಚ್ಯವಚನ ಎಂಬ ದೋಷಗಳನ್ನು ಹೇಳಿ ಅವುಗಳನ್ನು 'ಅಪ್ರತಿಭೋದ್ಭವ' ಎನ್ನುತ್ತಾನೆ. ಈ ವಿಷಯ ಮಹಿಮಭಟ್ಟನನ್ನು ಸ್ವಭಾವೋಕ್ತಿಯ ಜಿಜ್ಞಾಸೆಗೆ ತೊಡಗಿಸಿದೆ. ಕವಿ ಒಂದು ವಿಷಯವನ್ನು ವರ್ಣಿಸುವಾಗ ಆ ವಸ್ತುವಿನ ಸಂಪೂರ್ಣ ಚಿತ್ರವನ್ನೆ ಬಗೆಗಣ್ಣಿಗೆ ತರಲು ಸಾಧ್ಯವಾಗದೇ ಇರುವಂತಹ ವರ್ಣನೆ ವಿವರಗಳನ್ನು ಕೊಡಬಾರದು. ಆದುದರಿಂದಲೇ ಬಾಣನು ಸ್ವಭಾವೋಕ್ತಿ ಅಗ್ರಾಮ್ಯವಾಗಿ ಅಕ್ಲಿಷ್ಟವಾಗಿರಬೇಕೆಂದು ಹೇಳಿದ್ದು. ಪ್ರತಿಭಾಸ್ಫೂರ್ತನಾದ ಕವಿ ಸ್ವಭಾವೋಕ್ತಿಯನ್ನು ಚೆನ್ನಾಗಿ ತರಬಲ್ಲ. ವಸ್ತುವಿನ ವಿಶಿಷ್ಟ ಸ್ವಭಾವವು ಸಿದ್ಧವಾದುದಲ್ಲ, ಕವಿಪ್ರತಿಭೆಯಿಂದ ಸಾಧ್ಯವಾದದ್ದು. ಅದೊಂದು ಅಲಂಕಾರ ಎಂದು ಮಹಿಮಭಟ್ಟನ ಮತ.*

ಇದನ್ನೆಲ್ಲಾ ನೋಡಿದರೆ 'ಸ್ವಭಾವೋಕ್ತಿ'ಯನ್ನು ಸಾಮಾನ್ಯವಾಗಿ ಎಲ್ಲ ಲಾಕ್ಷಣಿಕರು ಒಪ್ಪಿಕೊಂಡರೂ, ಬಹುಮಂದಿ ಅದೊಂದು ಕವಿಸೃಷ್ಟಿ ಎಂಬುದನ್ನು

* V. Raghavan *The Concepts of Alankara* ಎಂಬ ಗ್ರಂಥದಲ್ಲಿ 'ಸ್ವಭಾವೋಕ್ತಿ' ಎಂಬ ಅಧ್ಯಾಯದಲ್ಲಿ, p. 96-116.

ಮರೆತಂತೆ ತೋರುತ್ತದೆ. ಕಾವ್ಯಮೀಮಾಂಸೆಯ ಮಟ್ಟದಲ್ಲಿ ಮಾತನಾಡುವಾಗ 'ಸ್ವಭಾವೋಕ್ತಿ' ಎಂಬ ವಿಷಯವನ್ನು 'ಕವಿಯ ಉಕ್ತಿ' ಎಂಬ ದೃಷ್ಟಿಯಿಂದ ನೋಡಿದ್ದರೆ ಈ ಚರ್ಚೆಗಳು ಬಹುಮಟ್ಟಿಗೆ ಕಡಮೆಯಾಗುತ್ತಿದ್ದುವು.

ಇದುವರೆಗೂ ಪರಿಶೀಲಿಸಿದ ಹಲವು ಹೇಳಿಕೆಗಳನ್ನೂ ಒಂದೊಂದಾಗಿ ಗಮನಿಸಿದರೆ, ಹೇಗೆ ಆ ವಿಷಯ ಕುಂತಕನ ವರೆಗೂ ಬರುವ ಹೊತ್ತಿಗೆ ಕೊಂಚ ಕೊಂಚ ಸ್ಪಷ್ಟವಾಗಿದೆ ಎಂಬುದು ಗೊತ್ತಾಗುತ್ತದೆ.

ಭಾಮಹನು 'ಯಥಾಸ್ವರೂಪಕಥನಂ' ಎಂದು ವಾರ್ತೆಗೆ ಹೇಳಿ ಅವನು ಕೊಡುವ "ಗತೋಽಸ್ತಮರ್ಕಃ" ಎಂಬುದನ್ನು ಗಮನಿಸಬಹುದು. 'ಗತೋಽಸ್ತಮರ್ಕಃ' ಎಂಬುದು ಬರಿಯ 'ವಾರ್ತೆ' ಎಂದು ಅವನ ಮತ. ಇದು 'ವಾರ್ತೆ'ಯಾಗುವುದು ಸಾಮಾನ್ಯಜನರ ಔಪಯೋಗಿಕ ಜಗತ್ತಿನಲ್ಲಿ ಮಾತ್ರ. ಕಾವ್ಯದಲ್ಲಿ ಬಂದಾಗ ಇದು 'ವಾರ್ತೆ'ಯಾಗುವುದಿಲ್ಲ. ಈ ವಾರ್ತೆಯೂ ಸಹ ಸಂದರ್ಭಾನುಸಾರ ಧ್ವನಿಪೂರ್ಣವಾಗುತ್ತದೆ. ವರ್ಡ್ಸ್‌ವರ್ತನ Michael ಎಂಬ ಕವಿತೆಯಲ್ಲಿ 'He never lifted up a single stone' ಎಂಬುದು ಸಾಮಾನ್ಯ ದೃಷ್ಟಿಗೆ ಬರಿಯ 'ವಾರ್ತೆ'ಯಾಗಿ ತೋರಬಹುದು. ಆದರೆ ಮೊದಲಿನಿಂದಲೂ ಆ ಪದ್ಯವನ್ನು ಓದಿಕೊಂಡುಬಂದಾಗ, ಈ ಮಾತು ಬಂದ ಸಂದರ್ಭದ ಔಚಿತ್ಯವನ್ನು ಗಮನಿಸಿದರೆ ಅದರ 'ಧ್ವನಿ' ತಿಳಿಯುತ್ತದೆ. 'ಗತೋಽಸ್ತಮರ್ಕಃ' ಎಂಬ ವಾರ್ತೆಯೇ, ಅರ್ಜುನ ಸೈಂಧವನನ್ನು ಸಂಜೆಯೊಳಗಾಗಿ ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿರುವ ಸಂದರ್ಭದಲ್ಲಿ ಉಕ್ತವಾದರೆ ಅಲ್ಲಿ ಅದರ ಧ್ವನಿಯೇ ಬೇರೆ: 'ಯಮನ ಸೋಲು' ನಾಟಕದಲ್ಲಿ, ಸತ್ಯವಾನನು ಸಾಯುವ ದಿನ, ಗತೋಽಸ್ತಮರ್ಕಃ ಎಂಬಂತೆಯೆ ಇರುವ "ಬೈಗಾಯ್ತು, ಯಕ್ಷ" ಎಂಬ ಯಮದೂತನ ಮಾತಿನಲ್ಲಿ ಎಂತಹ ಧ್ವನಿ ಮಿಡಿಯುತ್ತದೆ! ಶ್ರೀರಾಮಾಯಣ ದರ್ಶನದಲ್ಲಿ ವಜ್ರರೋಮ ಋಷಿಯ ಆಶ್ರಮದಲ್ಲಿ ಸಂಜೆಯಾದದ್ದನ್ನು ವರ್ಣಿಸುವ "ಗೂಡಿಗೋಡಿತು ಹಕ್ಕಿ, ಹಕ್ಕಿಗೋಡಿತು ಮಿಗಂ ಮೌನವಾಂತುದು ನಗಂ" ಎಂಬ ಮಾತಷ್ಟನ್ನೇ ಗಮನಿಸಿ 'ವಜ್ರರೋಮ ಮಹರ್ಷಿ ಯಾಧ್ಯಾನಗೌರವಕೆನಲ್!' ಎಂಬ ಸಂದರ್ಭವನ್ನು ಬಿಟ್ಟರೆ ಅದು ಬರಿಯ ವಾರ್ತೆಯಾದೀತು. ಹೀಗೆ ಕಾವ್ಯದ ಸಮಯ ಸಂದರ್ಭ ಸನ್ನಿವೇಶಗಳ ಪರಿವೇಷದಲ್ಲಿಟ್ಟು ನೋಡಿದಾಗ ಈ 'ವಾರ್ತೆ'ಯೂ ಧ್ವನಿಯ ಮಟ್ಟಕ್ಕೆ ಏರುತ್ತದೆ. ಮಹಾ ಕವಿಯ ಕಾವ್ಯದ ಪ್ರತಿಯೊಂದು ಪದವೂ ಪಂಕ್ತಿಯೂ ಕವಿಯ ಅಖಂಡಾನುಭವದ ರಸದಿಂದ ದೀಪ್ತವಾಗಿರುತ್ತವೆ. ಈ ದೃಷ್ಟಿಯಿಂದ ಕಾವ್ಯದಲ್ಲಿ 'ವಾರ್ತೆ'ಯೇ ಇಲ್ಲ.

ಜಯಮಂಗಲನ 'ವಿಶಿಷ್ಟವಾರ್ತಾ' 'ನಿರ್ವಿಶಿಷ್ಟವಾರ್ತಾ' ಎಂಬ ಮಾತು

ಗಳನ್ನು ಗಮನಿಸಬಹುದು. ಆತ 'ವಿಶಿಷ್ಟವಾರ್ತೆ'ಯನ್ನು 'ಸ್ವಭಾವೋಕ್ತಿ' ಎಂದು ಕರೆದಿರುವುದು ಉಚಿತವೆನಿಸುತ್ತದೆ. ಕಾವ್ಯದಲ್ಲಿ 'ವಾರ್ತೆ' ಇದ್ದರೂ ಅದು 'ವಿಶಿಷ್ಟ.' ಕವಿಯ ವಿಶಿಷ್ಟಾನುಭವದ ಅಭಿವ್ಯಕ್ತಿ (' Art is individual '-Croce) ಯಾದ ಕಲಾ ಉಕ್ತಿ. ಇಲ್ಲಿ 'ವಿಶಿಷ್ಟ' ಎಂಬ ಮಾತು ಬಂದಿದ್ದರೂ 'ವಾರ್ತೆ' ಎಂಬ ಮಾತು ಹಾಗೆಯೇ ಉಳಿದುಕೊಂಡಿದೆ. ಅದರ ಬದಲು 'ವಿಶಿಷ್ಟ ಅನುಭವದ ಉಕ್ತಿ' ಎಂದು ಇದ್ದಿದ್ದರೆ ಕುಂತಕನ ಅಭಿಪ್ರಾಯದ ಹತ್ತಿರ ಬರುತ್ತಿತ್ತು. ಇಲ್ಲಿ ಇನ್ನೊಂದು ಮಾತು: ಈ ವಿಚಾರವನ್ನು, 'ಕವಿ-ಕಾವ್ಯ'ಗಳ ದೃಷ್ಟಿಯಲ್ಲಿ ಮಾತನಾಡುವಾಗ 'ನಿರ್ವಿಶಿಷ್ಟತೆ' ಇರಲು ಸಾಧ್ಯವೇ ಇಲ್ಲ. ಕಾವ್ಯದಲ್ಲಿ ವಿಶಿಷ್ಟವೇ ಲಕ್ಷಣ. 'ನಿರ್ವಿಶಿಷ್ಟ' ಎಂಬ ಮಾತನ್ನು 'ಕವಿ-ಕಾವ್ಯ' ವಿಚಾರದಲ್ಲಿ ಬಳಸಬಹುದಾದುದಲ್ಲ. ನೇಮಿಸಾಧುವಿನ 'ಜಾತಿ' ಎಂದರೆ ವಸ್ತು ಪ್ರಚೋದಿಸುವ ಅನುಭವವನ್ನೆ ಮನಸ್ಸಿನಲ್ಲಿ ಉದ್ಬೋಧಿಸುವ ಚಿತ್ರ'-ಎಂಬ ಹೇಳಿಕೆಯೂ ಜಯಮಂಗಲನ 'ನಿರ್ವಿಶಿಷ್ಟ ವಾರ್ತೆ'ಯೇ 'ಸ್ವಭಾವೋಕ್ತಿ' ಎಂಬ ಸೂತ್ರವನ್ನು ಸಮರ್ಥಿಸುತ್ತದೆ.

ಕುಂತಕನ ಅಭಿಪ್ರಾಯ ಉತ್ತಮವಾಗಿದೆ. ಆತ 'ಸ್ವಭಾವೋಕ್ತಿ'ಯ ವಿಷಯವನ್ನು 'ಕಾವ್ಯಮೀಮಾಂಸೆ'ಯ ದೃಷ್ಟಿಯಿಂದ ನೋಡಿದ್ದಾನೆ. ಆತನ ಪ್ರಕಾರ ಸ್ವಭಾವೋಕ್ತಿಯೇ ಆದ್ಯಲಂಕೃತಿ; ಅದೇ ಕಾವ್ಯಶರೀರ. ಏಕೆಂದರೆ ಅವನು ಹೇಳುವಂತೆ 'ವಸ್ತು' ಎಂದರೆ 'ಕಾವ್ಯವಸ್ತು'ವಿಗೇ ಒಂದು ರೀತಿಯ ವಕ್ರತೆ ಇದೆ. Bradley ಹೇಳುವಂತೆ "ವಸ್ತುವಿನ ವಿಶಿಷ್ಟ ಸ್ವಭಾವವು ಸಿದ್ಧವಾದುದಲ್ಲ, ಕವಿಪ್ರತಿಭೆಯಿಂದ ಸಾಧ್ಯವಾದದ್ದು" ಎಂದು ಮಹಿಮಭಟ್ಟನು ಹೇಳಿದಾಗ, ಕವಿ ವಸ್ತುವಿಗೆ ಚೆಲುವನ್ನು ಆರೋಪಿಸುತ್ತಾನೆ ಎಂದಂತಾಯಿತು. ಆದರೆ ನಿಜವಾಗಿಯೂ ಕವಿ, ವಸ್ತುವಿನಲ್ಲಿ ಚೆಲುವಿದೆ ಅದನ್ನು ಕಾಣುತ್ತಾನೆ. ವಸ್ತುವಿನಲ್ಲಿ ಕುಂತಕನು ಹೇಳುವಂತೆ ಸಹಜ ವಕ್ರತೆ ಇದೆ. ಕವಿ ಅದನ್ನು ಕಾಣುವ ಶಕ್ತಿಯನ್ನು ಪಡೆದಿದ್ದಾನೆ. ವಸ್ತುವಿನಲ್ಲಿ ಕವಿ ಕಂಡುದನ್ನು ಆತ ವರ್ಣಿಸುತ್ತಾನೆ. ಕವಿ ವಕ್ರತೆಯನ್ನು ಕಾಣುವುದು ಆತನ 'ಸ್ವಭಾವ.' ಆದುದರಿಂದ ಆತನ ಉಕ್ತಿ ಸ್ವಭಾವೋಕ್ತಿ. 'ಸ್ವಭಾವೋಕ್ತಿ' ಕವಿಸ್ವಭಾವವನ್ನೂ ತಿಳಿಸುತ್ತದೆ. ಪ್ರತಿಭಾಸ್ಫೂರ್ತನಾದ ಕವಿ 'ಸ್ವಭಾವೋಕ್ತಿ'ಯನ್ನು ಚೆನ್ನಾಗಿ ತರಬಲ್ಲ ಎಂದು ಮಹಿಮಭಟ್ಟರು ಹೇಳುವುದನ್ನು ನಾವು ಒಪ್ಪಬಹುದು. ಕುಂತಕನು ಅದು ಅಲಂಕಾರ್ಯವೆಂದೂ ಮಹಿಮಭಟ್ಟನು ಅದು ಅಲಂಕಾರವೆಂದೂ ಹೇಳುವ ಮಾತುಗಳು, ಎರಡೂ ಸತ್ಯ. ನಾರಣಪ್ಪನು ಭೀಷ್ಮರ ಅವಸಾನದ ಸಮಯದಲ್ಲಿ "ಪಡುವಣ ಶೈಲ ವಿಪುಲಸ್ತಂಭ ದೀಪಿಕೆಯಂತೆ ರವಿ ಮೆರೆದ" ಎಂದು ಹೇಳುತ್ತಾನೆ. ಅಲ್ಲಿ 'ಭೀಷ್ಮರಂತಹ ಮಹಾ

ಪುರುಷರ ಅವಸಾನಕಾಲದಲ್ಲಿ ಪ್ರಕೃತಿ ತಟಸ್ಥವಾಗಿರಲಿಲ್ಲ, ಅದೂ ಗೌರವವನ್ನೇ ನಿವೇದಿಸಿತು; ಸೂರ್ಯನೇ ಒಂದು ಹಣತೆಯಾದ' ಎಂಬ ಲೋಕಾತಿಕ್ರಾಂತ ಸತ್ಯವೊಂದನ್ನು ಪ್ರತಿಮಿಸಿದ್ದಾನೆ ಎಂದು ಒಬ್ಬನಿಗೆ ಎನಿಸಿದರೆ, ಇನ್ನೊಬ್ಬನಿಗೆ ನಾರಣಪ್ಪ ಸೂರ್ಯಾಸ್ತಮಯವನ್ನು ಬಹು ಅಲಂಕಾರಿಕವಾಗಿ, ವಕ್ರೋಕ್ತಿಯಿಂದ ಹೇಳಿದ್ದಾನೆ ಎನಿಸಿದರೆ, ಮತ್ತೊಬ್ಬನಿಗೆ ಅದು 'ಹೊತ್ತು ಮುಳುಗಿತು.' ಎಂದಷ್ಟೇ ಅರ್ಥವಾಗಬಹುದು. ಆದರೆ ಕವಿಯ ದೃಷ್ಟಿಗಂತೂ ಅದು ಸಂಪೂರ್ಣವಾಗಿ ವಾಸ್ತವ; ಕವಿಯ ಉಕ್ತಿ ಸ್ವತಸ್ಸಹಜವಾಗಿ ಆ ಪ್ರತಿಮೆಯಲ್ಲಿ ಮೂರ್ತಗೊಂಡಿದೆ. ಆದುದರಿಂದ ಅವರವರ ಸಂಸ್ಕಾರಕ್ಕೆ ಅನುಗುಣವಾಗಿ ಒಂದೇ ವಸ್ತು ವಾರ್ತೆಯಾಗಿ, ಸ್ವಭಾವೋಕ್ತಿಯಾಗಿ, ರಸೋಕ್ತಿಯಾಗಿ, ವಕ್ರೋಕ್ತಿಯಾಗಿ ತೋರಬಹುದು. ವಾಸ್ತವವಾಗಿ ಅದರ ಮೂಲ ರಸಾನುಭವ. ಮುಂದೆ ಬಂದ ಧ್ವನಿ ಸಿದ್ಧಾಂತಕಾರರು ಈ ಸಮಸ್ಯೆಗಳನ್ನೆಲ್ಲಾ ಪರಿಹರಿಸಿದರು. ಅದು ವಕ್ರೋಕ್ತಿಯೋ, ಸ್ವಭಾವೋಕ್ತಿಯೋ, ಈ ಚರ್ಚೆ ಎಲ್ಲಾ ಅನವಶ್ಯಕ; ಅದು ಏನಾದರೂ ಆಗಲಿ, ರಸಭಾವಪರವಾಗಿ ಅಲ್ಲದಿದ್ದರೆ, ವ್ಯಂಗ್ಯಾರ್ಥವನ್ನೇ ಉದ್ಬೋಧಿಸದಿದ್ದರೆ ಬರಿಯ ಉಕ್ತಿ ಚಮತ್ಕಾರ. ಧ್ವನಿಪ್ರಧಾನವಾದುದು—ಅದರಲ್ಲೂ ರಸಧ್ವನಿಯಿಂದ ಕೂಡಿದ ವಕ್ರೋಕ್ತಿ ಉತ್ತಮ ಕಾವ್ಯವಾಗುತ್ತದೆ. ಉಕ್ತಿವಕ್ರತೆ ಮಾತ್ರ ಇದ್ದು ಯಾವ ವಿಧವಾದ ಧ್ವನಿಯೂ ಇರದಿದ್ದರೆ ಅದು ಕಾವ್ಯವಲ್ಲ; ಅತ್ಯಂತ ಸರಳವಾಗಿದ್ದು ಅಲ್ಲಿ 'ಧ್ವನಿ' ಇದ್ದರೆ ಅದು ಕಾವ್ಯ. ನಿಜವಾಗಿಯೂ ಕಾವ್ಯವಿರುವುದು ಅಲಂಕಾರ, ವಸ್ತು, ರಸಗಳಲ್ಲಿ ಪರ್ಯವಸಾಯಿಯಾಗುವ ಧ್ವನಿಯಲ್ಲಿ. ಆದುದರಿಂದ ಸ್ವಭಾವೋಕ್ತಿಯಲ್ಲಿ ನಾವು ಗಮನಿಸಬೇಕಾದುದು ಕವಿಪ್ರತಿಭೆ, ರಸ, ಧ್ವನಿ, ಔಚಿತ್ಯ. ಸ್ವಭಾವೋಕ್ತಿಯನ್ನು ಕುರಿತ ಚರ್ಚೆಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ವಿಷಯದ ಸತ್ಯದಲ್ಲಿ ನಿಜವಾಗಿಯೂ ಭಿನ್ನಾಭಿಪ್ರಾಯವಿಲ್ಲ.

ಜಿ. ಎಸ್. ಶಿವರುದ್ರಪ್ಪ

ಸಿರಿಯಾಳ ಸೆಟ್ಟಿ

ಸಿರಿಯಾಳ ಸೆಟ್ಟಿ ಒಬ್ಬ ನಿಷ್ಠಾವಂತ ಶಿವಭಕ್ತ. ಈತನ ಕತೆ ತಮಿಳು, ತೆಲುಗು ಮತ್ತು ಕನ್ನಡ ನಾಡಿನ ಶೈವ-ವೀರಶೈವ ವಾಙ್ಮಯದಲ್ಲಿ ಬಹುಮುಖವಾಗಿ ಗೋಚರಿಸುತ್ತದೆ. ಈತನು ಮಹಾರಾಷ್ಟ್ರದಲ್ಲಿಯೂ ಕಾಣಿಸಿಕೊಳ್ಳುತ್ತಾನೆ. ಈತನ ಮೂಲಸ್ವರೂಪವನ್ನು ಮತ್ತು ದೇಶಕಾಲಾನುಸಾರವಾಗಿ ಈತನ ವೃತ್ತಾಂತ ದಲ್ಲಿ ಉಂಟಾದ ಪರಿವರ್ತನಗಳನ್ನು ಪರಿಶೀಲಿಸುವುದು ಕುತೂಹಲಕರವಾಗಿದೆ. ಅದು ಹೇಗೆ ಎಂಬುದನ್ನು ಇಲ್ಲಿ ಸಂಕ್ಷೇಪವಾಗಿ ತೋರಿಸುತ್ತೇನೆ.

ಸಿರಿಯಾಳನಂತೆ ಸಿರಿಯಾಳ ಸತಿಯೂ ಶಿವಭಕ್ತೆ. ಈ ದಂಪತಿಗಳ ಭಕ್ತಿಯನ್ನು ಪರೀಕ್ಷಿಸಲು ಶಿವನು ಶೈವ ಭಿಕ್ಷುವಿನ ವೇಷವನ್ನು ಧರಿಸಿ ಅವರ ಮನೆಗೆ ಹೋಗು ತ್ತಾನೆ. ತಮ್ಮ ಮಗನನ್ನು ಕೊಂದು ಆತನ ಮಾಂಸವನ್ನು ತನಗೆ ಉಣಬಡಿಸು ವಂತೆ ಹೇಳಿ ಕಾಡುತ್ತಾನೆ. ಭಿಕ್ಷುವಿನ ತೃಪ್ತಿಗಾಗಿ ಆ ದಂಪತಿಗಳು ಆತನು ಹೇಳಿದಂತೆ ಮಾಡುತ್ತಾರೆ. ಅವರ ಭಕ್ತಿಯಿಂದ ಶಿವನು ಸಂತುಷ್ಟನಾಗುತ್ತಾನೆ. ಇದು ಸಿರಿಯಾಳ ಕತೆಯ ತಿರುಳು. ಬಸವಣ್ಣನವರ ವಚನಗಳಲ್ಲಿ[1] ಈ ಕತೆಯನ್ನು ಹಲವು ಬಾರಿ ಸಂದರ್ಭಿಸಿದೆ. ಇಂತಹ ಮೂರು ವಚನಭಾಗಗಳನ್ನು ಇಲ್ಲಿ ಉದ್ಧರಿಸುತ್ತೇನೆ.

೧. ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ !
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ !
ಕೂಡಲ ಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ || ೧೪೭ ||

೨. ನೆಱೆ ನಂಬೊ ನೆಱೆ ನಂಬೊ ಧರಧುರವಿಲ್ಲದೆ ಸಾಮವೇದಿಗಳಂತೆ ;
ನೆಱೆ ನಂಬೊ ನೆಱೆ ನಂಬೊ ಸಿರಿಯಾಳಚೆಂಗಳೆಯರಂತೆ ;
ನಂಬಿದೆಯಾದಡೆ ತನ್ನ ನೀವ ಕೂಡಲ ಸಂಗಮದೇವ || ೧೪೯ ||

೩. ಪರುಷದ ಹೊರೆಯಲ್ಲಿ ಕಬ್ಬುನವಿರ್ದು ಹೊನ್ನಾಯಿತ್ತು, ನೋಡಿರೇ :
ಅವ್ವಾ ಚೆಂಗಳೇ, ನೀನಿದ್ದೇಳು ಕೇರಿಯವರು
ಲಿಂಗದ ಸೋಂಪಿಯ ನೋಂತರೆ ? ಹೇಳಾ
ಕೂಡಲ ಸಂಗಮದೇವಂಗೆ
ಚೀಲಾಳನೆಂಬ ಬಾಯಿನವನಿಕ್ಕಿದರೆ ? ಹೇಳಾ || ೧೫೨ ||

---

[1] ಈ ಲೇಖನದಲ್ಲಿ ಸಂದರ್ಭಿಸಿದ ವಚನಗಳ ಪಾಠ ಮತ್ತು ಸಂಖ್ಯೆ ದಿವಂಗತ ಬಸವನಾಳ ರಿಂದ ಸಂಪಾದಿತ ವಚನಗ್ರಂಥವನ್ನು ಅನುಸರಿಸುತ್ತವೆ.

ಈ ವಚನಭಾಗಗಳಿಂದ ಈ ದಂಪತಿಗಳ ಹೆಸರುಗಳು ಸಿರಿಯಾಳ ಮತ್ತು ಚೆಂಗಳೆ ಎಂಬುದಾಗಿ ಮತ್ತು ಅವರ ಮಗನ ಹೆಸರು ಚೀಲಾಳ ಎಂಬುದಾಗಿ ಇದ್ದಂತೆ ವ್ಯಕ್ತವಾಗುತ್ತದೆ. ಚೀಲಾಳ ಎನ್ನುವುದಕ್ಕೆ **ಚಿಲ್ಲಾಳ** ಎಂಬ ಪಾಠಾಂತರ ವಿದೆ. ಸಿರಿಯಾಳನು ಒಬ್ಬ ಸೆಟ್ಟಿ ಎಂಬ ತಿಳಿವಳಿಕೆ ಬಸವಣ್ಣನವರ ಕಾಲದಲ್ಲಿ ಪ್ರಚುರವಾಗಿರಬೇಕು. ಈ ಮಾತಿಗೂ ಬಸವಣ್ಣನವರ

ಸೆಟ್ಟಿಯೆಂದೆಂಬೆನೆ ಸಿರಿಯಾಳನ?
ಮಡಿವಾಳನೆಂದೆಂಬೆನೆ ಮಾಚಯ್ಯನ? (೩೪೪)

ಎಂಬ ವಚನವು ಆಧಾರವಾಗಿದೆ.

ಈ ವಚನವಾಙ್ಮಯದಲ್ಲಿ ಮಾತ್ರವಲ್ಲ, ಸಿರಿಯಾಳನ ಸನ್ನಿವೇಶವು ಶಿಲ್ಪಕಲೆ ಯಲ್ಲಿಯೂ ಕೀರ್ತಿತವಾಗಿದೆ. ಧಾರವಾಡ ಜಿಲ್ಲೆಯ, ಕೋಡ ಅಥವಾ ಹಿರೆಕೆರೂರು ತಾಲ್ಲೂಕಿನ ಅಬ್ಲೂರು ಗ್ರಾಮದಲ್ಲಿ ಸೋಮೇಶ್ವರ ದೇವಾಲಯವಿದೆ. ಈ ದೇವಾ ಲಯದಲ್ಲಿ ಉದ್ದಂಡ ಶಿವಭಕ್ತನಾದ ಏಕಾಂತದ ರಾಮಯ್ಯನಿಗೆ ಸಂಬಂಧಿಸಿದ ಶಾಸನವೇ ಮೊದಲಾದ ಅವಶೇಷಗಳು ದೊರೆಯುತ್ತವೆ. ಒಂದು ಶಿಲ್ಪ ಪಟ್ಟಿಕೆಯಲ್ಲಿ ಏಕಾಂತದ ರಾಮಯ್ಯನು ಜೈನರನ್ನು ಖಂಡಿಸಿ ಶಿವಲಿಂಗವನ್ನು ಪ್ರತಿಷ್ಠೆಮಾಡಿದ ಘಟನೆ ಚಿತ್ರಿತವಾಗಿದೆ. ಇನ್ನೊಂದೆಡೆ ಮೂವರು ಶಿವಭಕ್ತರ ಜೀವನದ ಮುಖ್ಯ ಕಥಾ ಭಾಗವನ್ನು ರೂಪಿಸಲಾಗಿದೆ. ಇವುಗಳಲ್ಲಿ ಒಂದನೆಯದು ಜೇಡರ ದಾಸಿಮಯ್ಯನು ಶಿವನಿಗೆ ವಸ್ತ್ರವನ್ನು ಕೊಡುವ ಸನ್ನಿವೇಶ. ಎರಡನೆಯದರಲ್ಲಿ ಸಿರಿಯಾಳಸೆಟ್ಟಿ ಮತ್ತು ಚೆಂಗಳವ್ವೆ ಶೈವ ಭಿಕ್ಷುವಿಗೆ ತಮ್ಮ ಮಗನನ್ನು ಅರ್ಪಿಸಲು ಹೊರಟಿದ್ದಾರೆ. ಮೂರನೆಯ ಸ್ಥಳದಲ್ಲಿ ಕುಂಬಾರ ಗುಂಡನು ತಲ್ಲೀನನಾಗಿ ಕುಣಿತಿದ್ದಾನೆ. ಕಲ್ಲಿನಲ್ಲಿ ಕಂಡರಿಸಿದ ಈ ಚಿತ್ರಗಳ ಮೇಲ್ಬದಿಗೆ ಸುಮಾರು ಹನ್ನೆರಡನೆಯ ಶತಮಾನದ ಹಳ ಗನ್ನಡ ಅಕ್ಷರದಲ್ಲಿ ಕೆತ್ತಿದ ಶಾಸನಗಳಿದ್ದು, ಅವು ಆ ಸನ್ನಿವೇಶವನ್ನು ಸ್ಪಷ್ಟೀಕರಿಸು ತ್ತವೆ. ಪ್ರಾಚೀನತೆಯ ದೃಷ್ಟಿಯಿಂದ ಇಲ್ಲಿಯ ಈ ಚಿತ್ರಗಳಿಗೂ ಶಾಸನಗಳಿಗೂ ಮಹತ್ವವಿದೆ.[2]

ಸಿರಿಯಾಳ ಕತೆಯ ಉಗಮವನ್ನು ಶೋಧಿಸಲು ತಮಿಳುನಾಡಿಗೆ ಹೋಗ ಬೇಕಾಗುತ್ತದೆ. ಕಾಲವೋ ಏಳನೆಯ ಶತಮಾನ. ಪಲ್ಲವವಂಶದ ರಾಜ ಒಂದನೆಯ ನರಸಿಂಹವರ್ಮ ಪರಾಕ್ರಮಿಯಾಗಿದ್ದನು. ಈತನು ಚಾಲುಕ್ಯ ಇಮ್ಮಡಿ ಪುಲಕೇಶಿಯ

---

[2] ಕ್ರಿ. ಶ. ೧೯೫೨ ಜಾನೆವರಿಯಲ್ಲಿ ನಾನು ಅಬ್ಲೂರನ್ನು ಸಂದರ್ಶಿಸಿ, ಅಲ್ಲಿಯ ಚಾರಿತ್ರಿಕ ಅವಶೇಷಗಳನ್ನು ಪರಿಶೋಧಿಸಿ, ಕೆಲವು ಹೊಸ ಶಾಸನ ಮುಂತಾದ ವಿಷಯಗಳನ್ನು ಕಂಡುಹಿಡಿದೆನು. ಈ ವಿಚಾರದಲ್ಲಿ ನನ್ನ ಲೇಖನವೊಂದು *Epigraphia Indica* ಪತ್ರಿಕೆಯಲ್ಲಿ ಪ್ರಕಟವಾಗುತ್ತಲಿದೆ.

ಪ್ರತಿಸ್ಪರ್ಧಿ. ನರಸಿಂಹವರ್ಮನು ಪುಲಕೇಶಿಯ ರಾಜಧಾನಿಯಾದ ವಾತಾಪಿ ಎಂದರೆ ಬಾದಾಮಿಯ ಮೇಲೆ ಧಾಳಿಮಾಡಿ ಪುಲಕೇಶಿಯನ್ನು ಸೋಲಿಸಿದನು ಎಂದು ಚರಿತ್ರಕಾರರು ಹೇಳುತ್ತಾರೆ. ನರಸಿಂಹವರ್ಮನ ಶಾಸನವು ಬಾದಾಮಿಯಲ್ಲಿ ದೊರೆತಿದೆ. ನರಸಿಂಹವರ್ಮನು ವಾತಾಪಿಕೊಂಡ ಎಂದರೆ ವಾತಾಪಿಯನ್ನು ಗೆದ್ದವನು ಎಂಬ ಬಿರುದನ್ನು ಧರಿಸಿದ್ದನು. ಪರಂಜೋತಿ ಎಂಬವನು ನರಸಿಂಹ ವರ್ಮನ ವಾತಾಪಿಯ ದಂಡಯಾತ್ರೆಯಲ್ಲಿ ಸೇನಾಪತಿಯಾಗಿದ್ದನು. ಸೇವಾ ನಿವೃತ್ತನಾದ ಪರಂಜೋತಿ ಮುಂದೆ ಅತ್ಯಂತ ಶಿವಭಕ್ತನಾದನು. ಶಿವನ ಮತ್ತು ಶಿವಭಕ್ತರ ಸೇವೆಯಲ್ಲಿ ತನ್ನ ಶೇಷಜೀವನವನ್ನು ಸವೆಯಿಸಿದನು. ಈತನು ಶಿವ ಭಕ್ತರಲ್ಲಿ ಅಗ್ರಗಣ್ಯನೆನಿಸಿ ಶಿರುತ್ತೊಂಡ ನಾಯನಾರ್ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಿರುವನು.

ಶಿರುತ್ತೊಂಡ ನಾಯನಾರ್ ಶಿವನಿಗಾಗಿ ಆತ್ಯಂತಿಕ ತ್ಯಾಗಮಾಡಿದನು. ಆತನ ಈ ಲೋಕೋತ್ತರ ತ್ಯಾಗದ ಕತೆ ಹೀಗೆ. ಶಿರುತ್ತೊಂಡನ ಸ್ವಗ್ರಾಮ ತಿರುಚ್ಚೆನ್ ಗಾಟ್ಟಾನ್‌ಗುಡಿ. ಈ ಗ್ರಾಮಕ್ಕೆ ಕಾಪಾಲಿಕ ಅಥವಾ ಭೈರವ ಪಂಥದ ಭಿಕ್ಷು ವೊಬ್ಬನು ಆಗಮಿಸಿದನು. ನಿಯಮದಂತೆ ಶಿರುತ್ತೊಂಡನು ತನ್ನಲ್ಲಿಗೆ ಭೋಜನಕ್ಕಾಗಿ ಬರಲು ಈ ಭಿಕ್ಷುವಿಗೆ ಅವುತಣವಿತ್ತನು. ಭೈರವ ಭಿಕ್ಷು ತನ್ನ ಘೋರವ್ರತದ ವಿವರ ಗಳನ್ನು ಯಜಮಾನನಿಗೆ ಅರುಹಿದನು. ವರ್ಷಕ್ಕೆ ಒಂದು ಸಲ ಐದು ವರ್ಷದ ಬಾಲಕನ ಮಾಂಸವನ್ನು ಭಕ್ಷಿಸುವುದೊಂದು ತನ್ನ ವ್ರತ. ಈ ಬಾಲಕನು ಸಂತೋಷವಾಗಿ ತನ್ನನ್ನು ಬಲಿಯಾಗಿ ಕೊಡಬೇಕು. ಆತನ ತಂದೆತಾಯಿಗಳೇ ಆತನ ದೇಹವನ್ನು ತುಂಡರಿಸಬೇಕು. ಶಿವಭಕ್ತರ ಸಂತೃಪ್ತಿಯೇ ತಮ್ಮ ಜೀವನದ ಸರ್ವಸ್ವವೆಂದು ಭಾವಿಸಿದ ಶಿರುತ್ತೊಂಡ ಮತ್ತು ಆತನ ಪತ್ನಿ ತಿರುವೆಂಗಾಟ್ಟುನಂಗೈ ಅತಿಥಿಯ ಈ ಘೋರವ್ರತವನ್ನು ನಡೆಸಿಕೊಡಲು ಸಿದ್ಧರಾದರು. ಐದು ವರ್ಷದ ಸಿರಾಲ ಎಂಬ ತಮ್ಮ ಮಗನನ್ನು ಕೊಂದು ಆತನ ಮಾಂಸವನ್ನು ಬೇಯಿಸಿ ಅತಿಥಿಗೆ ಉಣಬಡಿಸಿದರು. ಈ ಹೊತ್ತಿಗೆ ಮನೆಯ ಮಗು ತನ್ನ ಪಂಕ್ತಿಗೆ ಉಣ್ಣಲು ಬರಬೇಕೆಂದು ಆ ಅತಿಥಿ ಇನ್ನೊಂದು ವಿಚಿತ್ರಹಟವನ್ನು ಹಿಡಿದನು. ಅತಿಥಿಗೆ ಏನೆಂದು ಹೇಳಬೇಕು ಎಂಬುದು ತೋಚದೆ ಶಿರುತ್ತೊಂಡನು ಕಂಗೆಟ್ಟನು. ನಿರಾಶನಾದ ಆತನ ಕರೆಗೆ ಓಗೊಟ್ಟು ಸಿರಾಲನು ಎದ್ದುಬಂದನು. ಶಿರುತ್ತೊಂಡನ ಸತ್ವಪರೀಕ್ಷೆ ಪೂರ್ಣವಾಯಿತು. ಶಿವ ಪ್ರಸಾದದಿಂದ ಆ ಭಕ್ತನ ಕುಟುಂಬಕ್ಕೆ ಕೈಲಾಸಪ್ರಾಪ್ತಿ ಆಯಿತು. ಶಿವನೇ ಆ ಕಾಪಾಲಿಕ ಭಿಕ್ಷು. ಈ ಕತೆ ೧೨ನೆಯ ಶತಮಾನದ ತಮಿಳು ಪೆರಿಯಪುರಾಣದಲ್ಲಿ ಕೀರ್ತಿತವಾಗಿದೆ.

ಶಿರುತ್ತೊಂಡನ ಗ್ರಾಮವಾದ ತಿರುಚ್ಚೆನ್‌ಗಾಟ್ಟಾನ್‌ಗುಡಿ ತಂಜಾವೂರು ಜಿಲ್ಲೆಯಲ್ಲಿದೆ. ಈ ಗ್ರಾಮದಲ್ಲಿ ಬೇರೆ ದೇವಾಲಯದ ಪರಿವಾರದಲ್ಲಿ ವಾತಾಪಿ ಗಣಪತಿಯ ಮಂದಿರವಿದೆ. ಉತ್ತರ ಪತೀಶ್ವರ ಎಂಬ ಹೆಸರಿನ ಭೈರವ ಮಂದಿರವೂ ಇದೆ. ಈ ಎರಡು ಮಂದಿರಗಳು ಪರಂಜೋತಿಯ ವಾತಾಪಿ ವಿಜಯದ ಕುರುಹುಗಳೆಂದು ಹೇಳುತ್ತಾರೆ. ಈ ಗ್ರಾಮದಲ್ಲಿ ಇಂದಿಗೂ ಪ್ರತಿಸಂವತ್ಸರ ಚೈತ್ರಮಾಸದ ಭರಣಿ ನಕ್ಷತ್ರದ ದಿನ ಶಿರುತ್ತೊಂಡನ ಲೋಕೋತ್ತರ ಬಲಿದಾನದ ಸ್ಮಾರಕವಾಗಿ ಉತ್ಸವಗಳು ನಡೆಯುತ್ತವೆ. ಭರಣಿ ನಕ್ಷತ್ರದ ದಿನ ಆ ಘಟನೆ ಸಂಭವಿಸಿತಂತೆ. ಅಲ್ಲಿಯ ದೇವಾಲಯದಲ್ಲಿ ಶಿರುತ್ತೊಂಡ, ಆತನ ಪತ್ನಿ ತಿರುವೆಂಗಾಟ್ಟುನಂಗೈ ಮತ್ತು ಮಗ ಸಿರಾಲನ ಪ್ರತಿಮೆಗಳಿವೆ. ನರಸಿಂಹವರ್ಮ ಮತ್ತು ಆತನ ಅರಸಿಯ ವಿಗ್ರಹಗಳೂ ಇವೆ.[3]

ಈ ಕತೆ ತಮಿಳಿನಿಂದ ತೆಲುಗಿಗೂ ಹೋಗಿದೆ. ಪಾಲ್ಕುರಿಕೆ ಸೋಮನಾಥ ಮತ್ತು ಇತರ ಕವಿಗಳೂ ಈ ಶಿವಭಕ್ತನ ಚರಿತ್ರೆಯನ್ನು ವರ್ಣಿಸಿದ್ದಾರೆ. ಮೂಲ ಪಾತ್ರಗಳ ಹೆಸರುಗಳಲ್ಲಿ ಕೆಲವು ಮಾರ್ಪಾಟುಗಳಾಗಿವೆ. ಶಿರುತ್ತೊಂಡನು ಕೆಲವೆಡೆ ಸಿರಿಯಾಲ ಚೆಟ್ಟಿ, ಕೆಲವೆಡೆ ಚಿರುತೊಂಡ ನಂಬಿ ಆಗಿದ್ದಾನೆ. ಆತನ ಹೆಂಡತಿ ಸಂಗಳವ್ವ ; ಮಗ ಸಿರಾಲ.[4]

ಹನ್ನೊಂದು ಮತ್ತು ಹನ್ನೆರಡನೆಯ ಶತಮಾನಗಳಲ್ಲಿ ಕನ್ನಡನಾಡಿನಲ್ಲಿ ಪ್ರಬಲಿಸಿದ ಶೈವ-ವೀರಶೈವ ಆಂದೋಲನದಿಂದ ಶಿವನಿಷ್ಠೆ ಮತ್ತು ಶಿವಭಕ್ತರ ಸಂಕೀರ್ತನೆಗೆ ಹೆಚ್ಚಿನ ಪುರಸ್ಕಾರವು ಉಂಟಾಯಿತು. ಈ ಪೂರ್ವದಲ್ಲಿ ಶಿವನಿಷ್ಠೆಯ ಉತ್ಕಟ ಕೇಂದ್ರವಾಗಿದ್ದ ತಮಿಳುನಾಡಿನ ಶಿವಭಕ್ತರ ಅದ್ಭುತಕತೆಗಳು ಕನ್ನಡನಾಡಿನ ಶಿವಭಕ್ತರಲ್ಲಿ ಪ್ರಭಾವವನ್ನು ಬೀರತೊಡಗಿದುವು. ಈ ಸಂದರ್ಭದಲ್ಲಿ ಸಿರಿಯಾಳ ಕತೆಗೂ ಪ್ರಾಶಸ್ತ್ಯ ಬಂದಿತು. ಕನ್ನಡವಾಙ್ಮಯದಲ್ಲಿ ಸೇರಿಕೊಂಡ ಈ ಕತೆಯಲ್ಲಿ ಹಲವಾರು ವ್ಯತ್ಯಾಸಗಳು ಉಂಟಾಗಿವೆ. ಬಸವಣ್ಣನವರ ವಚನಗಳನ್ನು ಅವಲೋಕಿಸಿದರೂ ಈ ಕತೆಯ ಕೆಲ ವಿಶಿಷ್ಟ ವಿವರಗಳು ಹಸ್ತಗತವಾಗಬಹುದು. ಆದರೆ ಈ ಪರಿಯ ವಿವೇಚನೆ ಪ್ರಸ್ತುತ ಲೇಖನದ ಗುರಿಯಿಂದಾಚೆಗಾಗುವುದರಿಂದ ಅದಕ್ಕೆ ಕೈಯಿಕ್ಕುವುದಿಲ್ಲ.

---

[3] ಈ ವೀಚಾರದಲ್ಲಿ ಮದ್ರಾಸದ 'ಹಿಂದು' ಪತ್ರಿಕೆಯ ೩-೧-೧೯೪೩ ದಿನಾಂತದ ಸಂಚಿಕೆಯಲ್ಲಿ ಪ್ರಕಟವಾದ 'The Legend of Siruttonda Nayanar' ಎಂಬ ಲೇಖನವನ್ನು ಅವಲೋಕಿಸಬಹುದು.

[4] ತೆಲುಗು ಮಾಸಪತ್ರಿಕೆ ಭಾರತಿಯ ೧೯೫೧ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾದ 'ಸಿರಿಯಾಳ ಚರಿತ್ರ' ಎಂಬ ಲೇಖನವನ್ನು ನೋಡಬಹುದು.

ಮಹಾರಾಷ್ಟ್ರದಲ್ಲಿಯೂ ಸಿರಿಯಾಳನು ಮನ್ನಣೆಗೊಂಡಿದ್ದಾನೆ. ಆ ಪ್ರಾಂತ್ಯದಲ್ಲಿ ಸಿರಿಯಾಳನನ್ನು ಕುರಿತು ಶ್ರಾವಣ ಶುಕ್ಲ ಷಷ್ಠಿಯ ದಿನ ಒಂದು ಹಬ್ಬವನ್ನು ಆಚರಿಸುತ್ತಾರೆ. ಇದರ ಆಚರಣೆ ಮುಖ್ಯವಾಗಿ ಹೆಂಗಳೆಯರದು. ಈ ಹಬ್ಬದ ಹೆಸರು ಸಿರಿಯಾಳಷಷ್ಠಿ.

ಇದು ಸಿರಿಯಾಳಕತೆಯ ಮೂಲ ಮತ್ತು ವಿಕಾಸದ ಸಂಕ್ಷಿಪ್ತವೃತ್ತಾಂತ. ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಆಕ್ರಮಿಸಿದ ತ್ರಿವಿಕ್ರಮನಂತೆ ತಮಿಳುನಾಡಿನಲ್ಲಿ ಅಂಕುರಿಸಿದ ಸಿರಿಯಾಳಕತೆ ಕನ್ನಡ, ತೆಲುಗು, ಮಹಾರಾಷ್ಟ್ರ, ಈ ಮೂರು ಪ್ರದೇಶಗಳಲ್ಲಿ ಹಬ್ಬಿಕೊಂಡಿದೆ.

ಸಿರಿಯಾಳಕತೆಯಲ್ಲಿ ಉಂಟಾದ ಮಾರ್ಪಾಟುಗಳಲ್ಲಿ ಕೆಲವು ಅಂಶಗಳು ಲಕ್ಷಣೀಯವಾಗಿವೆ. ಮೂಲದಲ್ಲಿಯ ಶಿರುತ್ತೊಂಡ ಎಂಬ ಹೆಸರು ಸಿರಿಯಾಳ ಎಂದು ಪರಿವರ್ತನಗೊಂಡಿದೆ. ಶಿರುತ್ತೊಂಡನು ಪೂರ್ವ ವಯಸ್ಸಿನಲ್ಲಿ ಪರಂಜೋತಿಯಾಗಿದ್ದಾಗ ಕ್ಷಾತ್ರವೃತ್ತಿಯ ವೀರನಾಗಿದ್ದನು. ಈ ಸಿರಿಯಾಳನೋ ವೈಶ್ಯವೃತ್ತಿಯ ಸೆಟ್ಟಿ. ಸಿರಿಯಾಳನಂತೆ ಆತನ ಸತಿ ಚೆಂಗಳೆಯ ಹೆಸರು ಹೊಸದು. ಶಿರುತ್ತೊಂಡನ ಮಗ ಸಿರಾಲ. ಈ ಹೆಸರೇ ವಿಕಾರಗೊಂಡು ಸಿರಿಯಾಳ ಎಂದಾಗಿರಬಹುದೆ? ತಮಿಳ ಸಿರಾಲನು ಕನ್ನಡದಲ್ಲಿ ಚೀಲಾಳ ಇಲ್ಲವೆ ಚಿಲ್ಲಾಳ ಆಗಿದ್ದಾನೆ; ಮಹಾರಾಷ್ಟ್ರದಲ್ಲಿ ಚಿಲಯಾ.

ಇನ್ನೊಂದು ಮನನೀಯ ವಿಚಾರ. ಪಲ್ಲವಕುಲದ ಒಂದನೆಯ ನರಸಿಂಹವರ್ಮನ ಸೇನಾಪತಿಯಾಗಿ ಪರಂಜೋತಿ ಕರ್ನಾಟಕದಲ್ಲಿ ದಂಡೆತ್ತಿಬಂದು, ಚಲುಕ್ಯದಲವನ್ನು ಸೋಲಿಸಿ ಕರ್ನಾಟಕದಿಂದ ಕೆಲವು ವಿಜಯಚಿಹ್ನಗಳನ್ನು ತನ್ನ ನಾಡಿಗೆ ತೆಗೆದುಕೊಂಡು ಹೋಗಿರಬಹುದು. ಆದರೆ ಆತನ ಈ ದಂಡಿನ ವಿಜಯವು ಕ್ಷಣಿಕವಾಗಿ ಪರಿಣಮಿಸಿತು. ಮುಂದೆ ಇಮ್ಮಡಿ ಪುಲಕೇಶಿಯ ಉತ್ತರಾಧಿಕಾರಿಗಳು ಹಲವು ಜಾರಿ ತಮಿಳುನಾಡಿನಲ್ಲಿ ಆಕ್ರಮಣಮಾಡಿ ಪಲ್ಲವ ನರೇಂದ್ರರನ್ನು ಪರಾಜಯಗೊಳಿಸಿ ಆ ಹಿಂದಿನ ಚಲುಕ್ಯರ ಪರಾಭವದ ಕಲಂಕವನ್ನು ಪೂರ್ತಿಯಾಗಿ ತೊಡೆದುಹಾಕಿದರು. ಆದರೆ ಆ ಪರಂಜೋತಿಯ ಅಪರಾವತಾರಿಯಾದ ಶಿವಭಕ್ತ ಶಿರುತ್ತೊಂಡನು ಇನ್ನೊಂದು ಬಗೆಯಿಂದ ಅಭಿಯೋಗಮಾಡಿ ಕರ್ನಾಟಕದ ಮೇಲೆ ತನ್ನ ಜಯಶೀಲಪ್ರಭಾವವನ್ನು ಚಿರಕಾಲ ಸ್ಥಾಪಿಸಿದನು. ಈ ಎರಡನೆಯ ವಿಜಯವು ಧರ್ಮ ಮತ್ತು ಸಂಸ್ಕೃತಿಯ ಆವರಣದಲ್ಲಿಯದು. ಸಂಸ್ಕೃತಿಯ ಶಕ್ತಿ ಇನಿತು ಬಲವತ್ತರವಾದುದು, ಗಹನವಾದುದು.

ಶ್ರೀ ದೇಸಾಯಿ ಪಾಂಡುರಂಗರಾಯರು.

ಆದಿಶಕ್ತಿಗೆ

ನಮೋ ನಮೋ ಆದಿಶಕ್ತಿ
ಜಗಜಗಗಳ ಪೊರೆವ ಶಕ್ತಿ
ನಮೋ ನಿನ್ನ ಪಾದಕೆ
ನಿನ್ನೊಡಲೊಳಗೈಕ್ಯಮಾದ
ವಿಶ್ವಜ್ಞಾನವೇದಕೆ.
ನಿನ್ನ ಶಕ್ತಿಯೊಂದೆ ಜಗದ
ಅಣುಅಣುವೊಳು ಹಂಚಿದೆ.
ಋಗದಿ ಮಿಗದಿ—ಜಗದಿ ಸೊಗದಿ
ನೂರು ತೆರದಿ ಮಿಂಚಿದೆ!
ವಿಶ್ವದಾತ್ಮ ಶಕ್ತಿ ನೀನು
ಸಂಧ್ಯೆಯುಷೆಯ ರೂಪವಾಗಿ
ನಿಶಿಯ ನೀಲ ನಭಾಂಗಣದಿ
ಜ್ಯೋತಿಯ ಸಾಮ್ರಾಜ್ಯವಾಗಿ
ವೃಕ್ಷಲತಾದೇಹದಲ್ಲಿ
ಋತುಋತುವಾಭರಣವಾಗಿ
ಚೆಲುವಿನಂತೆ ಮೆರೆಯುವೆ!
ಆನಂದದ ರೂಪವಾಗಿ
ಲಹರಿ ಲಹರಿ ಗಾನವಾಗಿ
ಹಕ್ಕಿಗೊರಳಿನಿಳಿಯುವೆ.
ಬಾನಿನೊಡಲ ಮೇಘದಿಂದೆ
ಬೆಂದ ಭೂಮಿಯೊಡಲಿದು
ಪ್ರಾಣಮಯಕೆ ಅನ್ನವಾಗಿ
ದೇವಗಂಗೆಯಾಗಿ ಸುರಿವೆ,
ಬೆಳೆಯ ರೂಪ ತಳೆಯುವೆ!
ಅನ್ನಮಯಕೆ ಪ್ರಾಣವಾಗಿ
ಕೋಟಿಕೋಟಿ ರಸದ ಕಡಲು
ಕವಿಯ ಹೃದಯದಿಂದ ಪುಟಿದು
ಭಾವ ಗಂಗೆಯಾಗಿ ಸುರಿವೆ!
ನಿನ್ನ ಒಡಲು
ರಸದ ಕಡಲು
ಜ್ಞಾನ ಸುಧಾಸಾಗರ.
ನೂರುಬೆಳಕಿನೊಡಲ ಬೆಳಕು
ಸೂರ್ಯಚಂದ್ರರಾದಿ ಬೆಳಕು
ನೀನೆ ಬೆಳಕಿನಾಗರ!
ನಮೋ ನಮೋ ಆದಿಶಕ್ತಿ
ಜಗಜಗಗಳ ಪೊರೆವ ಶಕ್ತಿ
ನಮೋ ನಿನ್ನ ಪಾದಕೆ . . .!

ಜಿ. ಎಸ್. ಸಿದ್ಧಲಿಂಗಯ್ಯ

ಗೀತಾ ಸಂದೇಶ

ಸೃಷ್ಟಿನಾಟಕದ ಕವಿ ಶ್ರೀ ಕೃಷ್ಣ. ಅವನ ರಂಗಕ್ಕೆ ಪಾತ್ರಧಾರರನ್ನು ಅಣಿ ಮಾಡಿದ ಸೂತ್ರಧಾರನೂ ಅವನೆ. ದ್ವಾಪರಯುಗದ ನಾಟಕದ ಕೊನೆಯ ಅಂಕ ವನ್ನು ಕುರುಕ್ಷೇತ್ರ ಸಮರಾಂಗಣದಲ್ಲಿ ಆಡಿ ತೋರಿಸುತ್ತಿರುವನು. ಪಾಂಡವ ಕೌರವರ ಅಪಾರ ಸೇನಾಸಾಗರ ಕುರುಕ್ಷೇತ್ರದಲ್ಲಿ ಕಾದಲನುವಾಗಿ ನಿಂತಿದೆ. ಪಾಂಡವರು ಬಾಲ್ಯದಿಂದಲೂ ಕೌರವನ ಕುಟಿಲ ತಂತ್ರಗಳಿಗೆ ಒಳಗಾಗಿ, ಬೆಂದು ನೊಂದು ಅವಮಾನ ಹೊಂದಿ, ಕೌರವನಿಂದ ತಮಗೆ ಬರಬೇಕಾದ ರಾಜ್ಯವನ್ನು ಬೇಡಿ ನಿರಾಶರಾಗಿ, ಶರದಮೊನೆಯ್ಯಲ್ಲಿ ಕಾದಿ ಅಲ್ಲದೆ ಬೇಡಿದರೆ ದೊರಕುವುದಿಲ್ಲವೆಂದು ಅತಿರಥ ಮಹಾರಥರನ್ನೊಳಗೊಂಡ ಏಳು ಅಕ್ಷೋಹಿಣೀ ಸೈನ್ಯದೊಂದಿಗೆ ಯುದ್ಧ ಮಾಡುವುದಕ್ಕಾಗಿ ಕುರುಕ್ಷೇತ್ರಕ್ಕೆ ಬಂದಿರುವರು. ಪ್ರಳಯ ಮೊದಲಾಗುವುದಕ್ಕೆ ಯಮನ ಸೂರೆಗೆ, ದ್ವಾಪರಯುಗದ ಶ್ರೇಷ್ಠತಮ ವ್ಯಕ್ತಿಗಳೆಲ್ಲ ಅವ್ಯಕ್ತದ ಗೋರಿಗೆ ಸಾಗಿಹೋಗುವುದಕ್ಕೆ ಕಾಲ ಸ್ವಲ್ಪ ಉಳಿದಿದೆ. ಅರ್ಜುನನು ಶ್ರೀ ಕೃಷ್ಣನನ್ನು ಸಾರಥಿಯಾಗಿ ಮಾಡಿಕೊಂಡು ಎರಡು ಸೈನ್ಯಗಳ ಮಧ್ಯದಲ್ಲಿ ತನ್ನ ರಥವನ್ನು ನಿಲ್ಲಿಸುವನು. ಯಾರ ಮೇಲೆ ಯುದ್ಧಮಾಡಬೇಕೆಂದು ಬಂದಿರುವನೊ ಅವರನ್ನು ಅರ್ಜುನ ಒಮ್ಮೆ ದಿಟ್ಟಿಸಿ ನೋಡುವನು. ಯಾರ ತೊಡೆಯಮೇಲೆ ತಮ್ಮ ಬಾಲ್ಯ ವನ್ನು ಕಳೆದರೊ, ಯಾರ ಆಶ್ರಯದಿಂದ, ಹರಕೆಯ ಬಲದಿಂದ, ಯುವಕರಾಗಿ, ಬಲಾಢ್ಯರಾಗಿ ಪ್ರಖ್ಯಾತ ಜಿಲ್ಲಾಳುಗಳಾದರೊ ಅಂತಹ ಕುರುಪಿತಾಮಹ ಭೀಷ್ಮನೇ ಸೈನ್ಯಕ್ಕೆ ಅಧಿಪತಿಯಾಗಿರುವನು. ಒಂದು ಕಡೆ ತನಗೆ ಧನುರ್ವಿದ್ಯೆಯ ದೀಕ್ಷೆಕೊಟ್ಟು ಜಗತ್ರಯದ ಅಸೀಮ ಸಾಹಸಿಯಂತೆ ಮಾಡಿ, ಹೆತ್ತ ತನ್ನ ಮಗ ಅಶ್ವತ್ಥಾಮನಿ ಗಿಂತ ಹೆಚ್ಚು ಪ್ರೀತಿಸುತ್ತಿದ್ದ ಗುರುವರ್ಯ ದ್ರೋಣಾಚಾರ್ಯರಿರುವರು. ಅಕ್ಕ ಪಕ್ಕದಲ್ಲೆ ಒಂದೇ ವಂಶದ ತರುವಿನಿಂದ ಕವಲೊಡೆದ ದಾಯಾದಿಗಳು, ಬಂಧುಗಳು, ಮಿತ್ರರು ಮುಂತಾದವರು ಇರುವರು. ಇವರನ್ನು ನೋಡಿದೊಡನೆ ಹದಿನಾಲ್ಕು ವರುಷಗಳು ಅರಣ್ಯದಲ್ಲಿ ಪಟ್ಟ ಕಷ್ಟವನ್ನು ಆತ ಮರೆಯುವನು. ಪೌರುಷದ ತನ್ನ ಜೀವನವನ್ನೇ ಒಂದು ವರ್ಷ ಬೃಹನ್ನಳೆಯಾಗಿ ಸವೆಸಿದ ಅವಮಾನವನ್ನೂ ಆತ ಲೆಕ್ಕಿಸನು. ದ್ರೌಪದಿಯ ವಸ್ತ್ರಾಪಹರಣ ಸಮಯದಲ್ಲಿ ಮಾಡಿದ ವೀರಪ್ರತಿಜ್ಞೆ ಜಾರುವುದು. ಗೊಡ್ಡುವೈರಾಗ್ಯದ ಬೂದಿ, ಸಿಂಹಪರಾಕ್ರಮಿಯ ಅಗ್ನಿಕುಂಡ ವನ್ನು ಆವರಿಸುವುದು. ತಾಮಸಿಕ ಮೋಹ, ದಯೆಯ ನೆಪದಲ್ಲಿ ಕಾಲಿಟ್ಟಿತು. ಕಲಿಯ

ಎದೆಗೆ ಮತ್ತೊಂದು ಗಳಿಗೆಯಲ್ಲಿ ಮಹಾ ಶಸ್ತ್ರಾಸ್ತ್ರಗಳನ್ನು ಕಾಳ್ಗುವ ಗಾಂಡೀವ ಕೈಯಿಂದ ಜಾರಿತು. ಕಣ್ಣಿನಲ್ಲಿ ಕಂಬನಿ ತುಂಬಿತು. ಅಂಗೋಪಾಂಗವೆಲ್ಲ ಕಂಪಿಸಿತು. ಯುದ್ಧ ಮಾಡುವುದೆಂತು? ರಕ್ತದ ಕಾಲುವೆಯಿಂದ ರಣಭೂಮಿಯನ್ನು ಸಾರಿಸಿ ಜಯವಧುವಿಗೆ ಆಹ್ವಾನವೀಯಲೆ? ಆಚಾರ್ಯರನ್ನು, ಪಿತಾಮಹರನ್ನು, ನಂಟರಿಷ್ಟ ರನ್ನು ಕೊಂದ ಕಲುಷಿತ ಕೈಗಳಿಂದ ಧರ್ಮದೇವಿಯನ್ನು ಆರಾಧಿಸುವುದೇ? ಎಂದು ಯೋಚಿಸುತ್ತ ಕಾರ್ಪಣ್ಯ ದೋಷಹತಸ್ವಭಾವನಾಗಿ ಶ್ರೀ ಕೃಷ್ಣನನ್ನು ಯುದ್ಧ ಮಾಡುವುದು ಧರ್ಮವೆ ಎಂದು ಪ್ರಶ್ನಿಸಿದನು.

ಆಗಲೆ

> ಕುತಸ್ತ್ವಾ ಕಶ್ಮಲಮಿದಂ ವಿಷಮೇಸಮುಪಸ್ಥಿತಂ
> ಅನಾರ್ಯಜುಷ್ಟಮ್ ಅಸ್ವರ್ಗ್ಯಂ ಅಕೀರ್ತಿಕರಂ ಅರ್ಜುನ ||
> ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೆ
> ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವಾ ಉತ್ತಿಷ್ಠ ಪರಂತಪ ||

ಎಂಬ ಗುಡುಗಿನಂತೆ ಮೊಳಗುವ ಗಂಭೀರವಾಣಿಯಿಂದ ಶ್ರೀ ಕೃಷ್ಣನ ಗೀತಾ ಸಂದೇಶ ಮೊದಲಾಗುವುದು. ಜ್ಞಾನ ಭಕ್ತಿ ವೈರಾಗ್ಯದ ಬಿರುಗಾಳಿಯಿಂದ ತಾತ್ಕಾಲಿಕವಾಗಿ ಆವರಿಸಿದ ಅಜ್ಞಾನಕಬೂದಿ ಹಾರಿಹೋಗುವುದು. "ಸ್ವರ್ಗ ತಾನಾಗಿ ತೆರೆದ ಬಾಗಿಲಿನಂತೆ ಇದೆ ಧರ್ಮಯುದ್ಧ; ಗೆದ್ದರೆ ಇಹಲೋಕದ ಸೌಖ್ಯವಿದೆ, ಮಡಿದರೆ ಪರಲೋಕದ ಸೌಖ್ಯ, ಸ್ವಧರ್ಮಕ್ಕೋಸ್ಕರ ಮಡಿದರೂ ಶ್ರೇಷ್ಠವೇ" ಮುಂತಾದ ಪೌರುಷವಾಕ್ಯದ ಸಲಾಕಿಯಿಂದ ಅರ್ಜುನನ ಅಗ್ನಿ ಕುಂಡವನ್ನು ಮೀಟಿ, ಪುನಃ ಕ್ಷಾತ್ರಪೌರುಷದ ಕಿಡಿ ಕಾರುವಂತೆ ಮಾಡುವನು. ಅರ್ಜುನನನ್ನು ನಿಮಿತ್ತಮಾತ್ರವಾಗಿ ಮಾಡಿಕೊಂಡು ಅಧರ್ಮದ ಕಳೆಯನ್ನು ಬೇರುಸಹಿತ ನಿರ್ದಾಕ್ಷಿಣ್ಯವಾಗಿ ನಿರ್ಮೂಲಮಾಡಿ "ಸತ್ಯಮೇವ ಜಯತೆ ನಾನೃತಂ" ಎಂಬುದನ್ನು ಜಗತ್ತಿಗೆ ಬೋಧಿಸುವನು.

ಭಗವದ್ಗೀತೆಯು ಮಹಾಭಾರತದ ಭೀಷ್ಮಪರ್ವದಲ್ಲಿ ಅಂತರ್ಗತವಾಗಿದೆ. ಕೆಲವು ವಿಮರ್ಶಕರು ಗೀತೆಯನ್ನು ನಂತರ ಬರೆದು ಯಾರೋ ಮಹಾಭಾರತದಲ್ಲಿ ಸೇರಿಸಿರಬಹುದು ಎಂಬ ವಾದವನ್ನು ತರುವರು. ಅವರ ವಾದಕ್ಕೆ ಕಾರಣ: ಯುದ್ಧಕ್ಕೆ ಸನ್ನದ್ಧನಾಗಿ ಬಂದಿರುವ ಅರ್ಜುನನಲ್ಲಿ ವೈರಾಗ್ಯಬರುವುದು, ಅದನ್ನು ನಿಧಾನವಾಗಿ ಶ್ರೀ ಕೃಷ್ಣನು ೭೦೦ ಶ್ಲೋಕಗಳಲ್ಲಿ ವಿವರಿಸುತ್ತ ಹೋಗುವುದು ಅಸಂಗತವಾಗಿದೆ ಎಂಬುದು. ಆದರೆ ವೈರಾಗ್ಯ ಮಾನವನಿಗೆ ಇಂತಹ ಕಾಲದಲ್ಲೆ ಬರಬೇಕು, ಇಂತಹ ಸನ್ನಿವೇಶದಲ್ಲೇ ಬರಬೇಕು ಎಂಬ ಯಾವ ನಿಯಮವೂ ಇಲ್ಲ.

ಹಲವು ಘಟನೆಗಳು ಮಾನವನನ್ನು ಅತೀಂದ್ರಿಯ ಸತ್ಯದೆಡೆಗೆ ಕೊಂಡೊಯ್ಯುವುವು. ಅದರಲ್ಲಿಯೂ ಯುದ್ಧರಂಗ ಸಾವಿರಾರು ಜನರ ಕೊಲೆ, ಬಂಧುಬಾಂಧವರು, ಗುರು ಹಿರಿಯರ ಹತ್ಯೆ, ಇವುಗಳೆಲ್ಲ ಅರ್ಜುನನ ಹೃದಯವನ್ನು ಕರಗಿಸಿರಬಹುದು. ಅಷ್ಟು ದೀರ್ಘವಾದ ಉಪನ್ಯಾಸವನ್ನು ಶ್ರೀ ಕೃಷ್ಣ ಕೊಡುವುದಕ್ಕೆ ಆಗ ಸಮಯವೆಲ್ಲಿತ್ತು, ಎಂಬ ಪ್ರಶ್ನೆಗೆ, ಶ್ರೀ ಕೃಷ್ಣನು ಅರ್ಜುನನಿಗೆ ಎಲ್ಲವನ್ನೂ ಸಮಗ್ರ ಈಗ ಗೀತೆಯಲ್ಲಿ ಇರುವಂತೆಯೇ ಹೇಳಿದ ಕೆಲವು ಮಾತಿನಲ್ಲಿ ಅಡಗಿಸಿ ಹೇಳಿರಬಹುದು. ಆದರೆ ಅದೇ ವಿಷಯಗಳನ್ನು ವ್ಯಾಸ ಬರೆಯುವಾಗ ವಿವರವಾಗಿ ದೀರ್ಘವಾಗಿ ಲಂಬಿಸಿರಬಹುದು. ಶೈಲಿಯ ರೀತಿಯಲ್ಲಿ, ಮಹಾಭಾರತ ಮತ್ತು ಗೀತೆಯಲ್ಲಿ ಒಂದೇ ಕವಿಯ ಕೈವಾಡ ವನ್ನು ನೋಡಬಹುದು ಎಂಬುದು ಬಾಲಗಂಗಾಧರ ತಿಲಕರ ಅಭಿಪ್ರಾಯ. ಗೀತೆಯನ್ನು ಬಿಟ್ಟರೆ ಮಹಾಭಾರತಕ್ಕೆ ಬೆಲೆಯಿಲ್ಲ, ಕಳೆಯಿಲ್ಲ. ಆದಕಾರಣವೆ ಹಿಂದಿನವರು ಗೀತೆಯನ್ನು ಕುರಿತು "ಮಹಾಭಾರತ ತೈಲಪೂರ್ಣಂ ಪ್ರಜ್ವಾಲಿತೋ ಜ್ಞಾನಮಯಃ ಪ್ರದೀಪಃ" ಎಂದು ಹೇಳಿರುವರು. ಇಡೀ ಮಹಾಭಾರತ ಗೀತೆಯೆಂಬ ನಂದಾದೀವಿಗೆಯನ್ನು ಹತ್ತಿಸುವುದಕ್ಕೆ ಇರುವ ತೈಲದಂತೆ.

ಗೀತೆ ಪ್ರಸ್ಥಾನತ್ರಯಗಳಲ್ಲಿ ಒಂದು. ಹಿಂದಿನಿಂದಲೂ ತ್ರಿಮತಸ್ಥಾಪನಾ ಚಾರ್ಯರ ಗೌರವಕ್ಕೆ ಪಾತ್ರವಾಗಿದೆ. ಯಾವ ಆಚಾರ್ಯರು ಬರಲಿ ಅವರು ಒಂದು ತತ್ವಸಂಪ್ರದಾಯವನ್ನು ಸ್ಥಾಪಿಸಬೇಕಾದರೆ, ಗೀತೆಗೆ ಭಾಷ್ಯವನ್ನು ಬರೆದು ತಾವು ಸಾರುವ ತತ್ವ ಆಗಲೇ ಗೀತೆಯಲ್ಲಿ ಅಂತರ್ಗತವಾಗಿದೆ ಎಂದು ತೋರಿಸಿದರೆ ಮಾತ್ರ ಅವರು ನೆಡುವ ಸಂಪ್ರದಾಯದ ತರುವಿಗೆ ನಂತರ ಬಂದವರು ನೀರು ಹಾಕಬೇಕಾದರೆ.

ಹಲವಾರು ಉಪನಿಷತ್ತುಗಳು ಶ್ರೀ ಕೃಷ್ಣನ ಕಾಲಕ್ಕೆ ಮುಂಚೆ ಇದ್ದವು. ಅವು ಸಾಧಾರಣ ಜನರು ಓದಿ ಅರ್ಥಮಾಡಿಕೊಳ್ಳುವಷ್ಟು ಸುಲಭವಾಗಿರಲಿಲ್ಲ. ಸೂಕ್ಷ್ಮ ಮತಿಯವರಾಗಿರಬೇಕು. ಬುದ್ಧಿಯ ಗರಡಿಯಲ್ಲಿ ಚೆನ್ನಾಗಿ ಪಳಗಿರಬೇಕು. ಉಪ ನಿಷತ್ತಿನಲ್ಲಿ ಭಕ್ತಿ ಕೆಲವು ಕಡೆ ಮಿಂಚಿನಂತೆ ಹೊಳೆದರೂ ಅಲ್ಲಿ ಪ್ರಾಧಾನ್ಯವಿರುವುದು ಜ್ಞಾನಮಾರ್ಗಕ್ಕೆ. ವೇದದಲ್ಲಿ ಬರುವ ಉಪನಿಷತ್ತುಗಳನ್ನು ಓದಲು ಎಲ್ಲರೂ ಅರ್ಹರಲ್ಲ ವೆಂದೂ ಬೇರೆ ಪೂರ್ವಿಕರು ಬೇಲಿ ಹಾಕಿದ್ದರು. ಎಲ್ಲ ಪಂಗಡಗಳಿಗೂ ತೆರೆದ, ಪಂಡಿತ ನಿಂದ ಪಾಮರನವರೆಗೆ ಓದಿದರೆ ತಿಳಿಯಬಹುದಾದ, ವಿಚಾರದ ಒರೆಗಲ್ಲಿನ ಮೇಲೆ ತಿಕ್ಕಿದಾಗ ಹೇಗೆ ನಮಗೆ ತೃಪ್ತಿಯನ್ನು ಕೊಡಬಲ್ಲದೊ, ಹಾಗೆ ಭಾವದ ನಾಡಿಯನ್ನು ಮೀಟಿ ಹೃದಯಕ್ಕೆ ಆನಂದವನ್ನು ಕೊಡಬಲ್ಲ, ಜಗದ ಕಷ್ಟನಷ್ಟಗಳನ್ನು ಕಂಡಾಗ ಓಡಿಹೋಗದೆ ಜಗ್ಗದೆ, ಕುಗ್ಗದೆ, ಎದೆಕೊಟ್ಟು ಅವುಗಳೊಂದಿಗೆ ಕೊನೆಯತನಕ

ಹೋರಾಡುವಂತಹ, ಫಲದಂಕಮಲ್ಲರನ್ನು ಪ್ರೋತ್ಸಾಹಿಸುವಂತಹ ಕರ್ಮ ಪ್ರಾಧಾನ್ಯವಾದ ಸಂದೇಶ ಒಂದು ಜಗತ್ತಿಗೆ ಬೇಕಾಗಿತ್ತು. ಶ್ರೀ ಕೃಷ್ಣನು ಈ ಅವಶ್ಯಕತೆಯನ್ನು ಮನಗಂಡು ಗೀತೆಯಲ್ಲಿ ಒಂದು ಮಾರ್ಗವನ್ನು ತೋರಿರುವನು. ಶ್ರೀ ಕೃಷ್ಣನು ಉಪನಿಷತ್ತುಗಳನ್ನು ತ್ಯಜಿಸಲಿಲ್ಲ. ಅವುಗಳ ಸಾರವನ್ನೆಲ್ಲ ಗೀತೆಯಲ್ಲಿ ಹುದುಗಿಸಿಟ್ಟಿರುವನು. ಆದಕಾರಣ ಉಪನಿಷತ್ತಿಗೆ ಇರುವ ಪ್ರಾಧಾನ್ಯವೇ ಗೀತೆಗೂ ಇರುವುದು. "ಸರ್ವೋಪನಿಷದೋ ಗಾವೋ, ದೋಗ್ಧಾ ಗೋಪಾಲನಂದನಃ" ಎಂದಿರುವರು. ಗೀತೆಯ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ "ಇತಿ ಶ್ರೀಮತ್ ಭಗವತ್ ಗೀತಾಸು, ಉಪನಿಷತ್ಸು" ಎಂದು ವ್ಯಾಸ ಹೇಳಿರುವನು. ಆದರೆ ಇದು ಉಪನಿಷತ್ತಿಗಿಂತಲೂ ಸುಲಭ. ಶ್ರೀ ಕೃಷ್ಣನು ಮಾತನಾಡುತ್ತಿರುವಾಗ ಅರ್ಜುನನು ಮಾತ್ರವಲ್ಲ ಇರುವುದು. ಅರ್ಜುನ ಮಾನವಕೋಟಿಯ ಒಬ್ಬ ಪ್ರತಿನಿಧಿ. ಆತನೊಬ್ಬ ನಿಮಿತ್ತ ಮಾತ್ರ. ಇಡೀ ಜಗದ ಬದ್ಧಜೀವಿಗಳಿಗೆ, ದುಃಖಿಗಳಿಗೆ, ನಿರಾಶ್ರಿತರಿಗೆ, ಸಂಶಯ ತುಮುಲದಲ್ಲಿ ಸಿಕ್ಕಿ ನರಳುತ್ತಿರುವವರಿಗೆ, ಅರ್ಜುನನ ಮೂಲಕ ಸಂದೇಶ ಬರುತ್ತಿದೆ. ಶ್ರೀಕೃಷ್ಣನ ಮುಂದೆ ದ್ವಾಪರಯುಗದ ಅಂತ್ಯಮಾತ್ರವಲ್ಲ ಇರುವುದು. ಅನೇಕ ಶತಶತಮಾನಗಳನ್ನೊಳಗೊಂಡ ಕಾಲಚಕ್ರವೇ ಅವನ ಮುಂದೆ ಇರುವುದು. ಎಲ್ಲರಿಗೂ, ಎಲ್ಲ ಕಾಲದಲ್ಲಿಯೂ ಜೀವಿಗಳು ಯಾವ ಆಶ್ರಮದಲ್ಲಿರಲಿ, ಯಾವ ವೃತ್ತಿಯನ್ನು ಅನುಸರಿಸುತ್ತಿರಲಿ, ಪಂಡಿತನಾಗಿರಲಿ, ಪಾಮರನಾಗಿರಲಿ, ಯತಿಯಾಗಿರಲಿ, ಪಾಪಿಯಾಗಲಿ, ಬ್ರಾಹ್ಮಣನಾಗಲಿ, ಚಂಡಾಲನಾಗಲಿ ಎಲ್ಲರಿಗೂ ಉಪಯೋಗವಾಗುವಂತಹ ಅಮೃತವಿದೆ ಇಲ್ಲಿ. ಶ್ರೀ ಶಂಕರಾಚಾರ್ಯರು ಗೀತಾಭಾಷ್ಯವನ್ನು ಬರೆಯುವಾಗ ಗೀತೆಯನ್ನು "ಸಮಸ್ತ ವೇದಾರ್ಥಸಾರಸಂಗ್ರಹಭೂತಂ| ಯಃ ತದರ್ಥೆ ವಿಜ್ಞಾತೆ ಸಕಲ ಪುರುಷಾರ್ಥ ಸಿದ್ಧಿಂ" ಎಂದಿರುವರು.

ಭಗವದ್ಗೀತೆಯಲ್ಲಿ ಒಂದು ತತ್ವವಲ್ಲ ಒಂದು ಸಂಪ್ರದಾಯವಲ್ಲ ಇರುವುದು. ಇದೊಂದು ಹಿಮಾಲಯ ಪರ್ವತಸ್ತೋಮದಂತೆ, ಹಲವು ತತ್ವಗಳ ಶ್ರೇಣಿ. ಇಲ್ಲಿ ಅತಿ ಮುಖ್ಯವಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳೆಂಬ ಮುಖ್ಯನದಿಗಳು ಉದ್ಭವಿಸಿ, ಹರಿದು, ಭಗವಂತನೆಂಬ ಮಹಾಸಾಗರವನ್ನು ಸೇರುವುವು. ಇಲ್ಲಿ ಒಂದು ಯೋಗವಲ್ಲ ಇರುವುದು. ಜೀವಿಯ ಯುಕ್ತಿ, ಭಕ್ತಿ, ಶಕ್ತಿಗಳನ್ನು ಪ್ರಚೋದಿಸುವುದಕ್ಕೆ ಯಾವ ಯಾವ ಸಂದೇಶಗಳು ಬೇಕೊ ಅದೆಲ್ಲ ಇಲ್ಲಿರುವುದು. ಆ ಮಿಶ್ರವನ್ನು ಯಾವುದಾದರೊಂದು ಹೆಸರಿನಿಂದ ಕರೆಯಬಹುದು, ಅಥವ ಕರೆಯದೆ ಇರಬಹುದು.

ಗೀತೆಯಲ್ಲಿ ಭಕ್ತರು ಬೇಕಾದರೆ ಸಾಕಾರವನ್ನು ಆರಾಧಿಸಬಹುದು, ಜ್ಞಾನಿಗಳು ನಿರಾಕಾರವನ್ನು ಆರಾಧಿಸಬಹುದು. ಅವನೆಲ್ಲೆಡೆಯಲ್ಲಿಯೂ ಇರುವನು. ಅವನಿಚ್ಛೆ

ಯಿಂದ ವಿಶ್ವ ಚಿಮ್ಮಿ ಬಂದಿದೆ. ಅವನೊಲುಮೆಯಿಂದ ಇದು ಬೆಳೆಯುತ್ತಿದೆ. ಅವನ ಮುನಿಸಿನಿಂದ ಇದು ನಾಶವಾಗುವುದು. ಎಲ್ಲೆಡೆಯಲ್ಲಿಯೂ ಅವನ ಕಾಲೆ, ಎಲ್ಲೆಡೆಯಲ್ಲಿಯೂ ಅವನ ಕೈಗಳೆ, ಎಲ್ಲೆಡೆಯಲ್ಲಿಯೂ ಅವನ ಶಿರವೆ. ಇಷ್ಟೇಕೆ, ಅನಂತ ತಾರೆ ನಿಹಾರಿಕೆಗಳನ್ನೊಳಗೊಂಡ ಬ್ರಹ್ಮಾಂಡವೆಲ್ಲವೂ ಅವನ ಒಂದು ಅಂಶದಿಂದ ಆಗಿದೆ. ಈ ವ್ಯಕ್ತದಲ್ಲಿ ಅವನು ಬರಿಯದಾಗುವುದಿಲ್ಲ. ಇದನ್ನೂ ಮೀರಿರುವನು. ಯಾವ ಹೆಸರಿನಿಂದ ಬೇಕಾದರೂ ಅವನನ್ನು ಕರೆಯಬಹುದು, ಯಾವ ರೂಪಿನಿಂದ ಬೇಕಾದರೂ ಅವನನ್ನು ಆರಾಧಿಸಬಹುದು, ಯಾವ ಭಾವದ ಮೂಲಕವಾಗಿ ಬೇಕಾದರೂ ನಾವು ಸಂಬಂಧವನ್ನು ಕಲ್ಪಿಸಿಕೊಳ್ಳಬಹುದು. ಶ್ರೀ ಕೃಷ್ಣನು ಇನ್ನೂ ಒಂದು ಹೆಜ್ಜೆ ಮುಂದುವರಿದು ಹೋಗುವನು. ಭಕ್ತನು ಯಾವ ನೆವದಿಂದಲಾದರೂ ಇವನ ಹತ್ತಿರ ಬರಬಹುದು. ಎಲ್ಲರನ್ನೂ ಮೆಟ್ಟಲುಮೆಟ್ಟಲಾಗಿ ಮುಕ್ತಿಗೆ ಸೆಳೆಯುವನು. ಭಕ್ತರಲ್ಲಿ ನಾಲ್ಕುವಿಧ, ಆರ್ತ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ. ಅವರಲ್ಲಿ ಜ್ಞಾನಿಯು ಅತ್ಯುತ್ತಮನಾದರೂ, ಉಳಿದವರೂ ಉದಾರಿಗಳೆನ್ನುವನು. ಏಕೆಂದರೆ ಕಾಮ್ಯದಿಂದ ಪ್ರೇರೇಪಿತನಾಗಿ ಇಂದು ಭಕ್ತ ದೇವರ ಹತ್ತಿರ ಬಂದರೂ ಅವನ ಕಾಮವೆಲ್ಲ ಕ್ರಮೇಣ ಸೀದುಹೋಗಿ ಪೂರ್ಣ ಭಕ್ತಿಯೊಂದೇ ಅವನಲ್ಲಿ ಕೊನೆಗೆ ನೆಲೆಸುವುದು.

ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದು ಗುರಿ ಸೇರಬೇಕಾದರೆ ಹೆಜ್ಜೆ ಹೆಜ್ಜೆಗೆ ನಮ್ಮ ಹೀನಸಂಸ್ಕಾರಗಳೊಂದಿಗೆ ಹೋರಾಡಬೇಕು. ಬಾಹ್ಯಜಗತ್ತಿನಲ್ಲಿ ಮಾನವನು ಮಾಡುವ ಸಾಹಸವನ್ನೆಲ್ಲ ಮೀರಿದೆ ಆಂತರಿಕ ಜಗತ್ತಿನ ಸಾಹಸ. ಕಡಲಾಳಕ್ಕೆ ಮುಳುಗಬಹುದು. ಮುಗಿಲೆತ್ತರಕ್ಕೆ ಹಾರಬಹುದು. ಕಣವನ್ನು ಭೇದಿಸಿ ಅದರ ರಹಸ್ಯವನ್ನು ಹೊರಗೆಡಬಹುದು. ಕಣ್ಣಿಗೆ ಕಾಣುವ ಅರಿಗಳ ಸೇನಾಸಮೂಹವನ್ನು ಹಲವಾರು ಶಸ್ತ್ರಾಸ್ತ್ರಗಳ ಸಹಾಯದಿಂದ ಗೆಲ್ಲುವುದು ಸುಲಭ. ಆದರೆ ಕಣ್ಣಿಗೆ ಕಾಣಿಸದ, ನಮ್ಮ ಮನಸ್ಸಿನ ಅಂತರಾಳದಲ್ಲಿದ್ದು ಆಸೆಗಳ ಬುದ್ಬುದಗಳನ್ನು ಹೊರಗೆಡಹುತ್ತಿರುವ ಬಾಡಬಾಲನನನ್ನು ಶೋಧಿಸಿ ನಿರ್ನಾಮಮಾಡುವುದು ಅತ್ಯದ್ಭುತವಾದ ಸಾಹಸ. ಅದು ಕೆಲವು ದಿನಗಳಲ್ಲಿ ಮುಗಿಯುವುದಲ್ಲ; ಕೆಲವು ವರುಷಗಳಲ್ಲಿ ಮುಗಿಯುವುದಿಲ್ಲ. ಹಲವು ಜನ್ಮಗಳನ್ನೇ ಅದಕ್ಕೆ ಮೀಸಲಾಗಿಡಬೇಕು. ಕೈಯಲ್ಲಿರುವ ಸುಖವನ್ನು ಬಿಡಬೇಕು. ಮುಂದೆ ಸಿಕ್ಕಬಹುದಾದ ಅನಂತ ಆನಂದಕ್ಕೆ ಕಾದು ಕುಳಿತಾಗ ಆ ಸುಖವು ಇದೆಯೊ ಇಲ್ಲವೊ ಎಂಬುವ ಹಲವಾರು ಸಂಶಯಗಳು ನಮ್ಮನ್ನು ಮುತ್ತುವುವು. ಅರ್ಜುನನೂ ಕೂಡ ಈ ಪ್ರಶ್ನೆಯನ್ನೇ ಎತ್ತುವನು. ಅದಕ್ಕೇ ಶ್ರೀ ಕೃಷ್ಣನ ಭರವಸೆ,

ಪಾರ್ಥ ನೈವೇಹ ನಾಮುತ್ರ ವಿನಾಶಸ್ತಸ್ಯವಿದ್ಯತೆ |
ನಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ ||

"ಪಾರ್ಥ, ಸತ್ಯವಾಗಿಯೂ ಅವನಿಗೆ ಇಹದಲ್ಲಾಗಲಿ, ಪರದಲ್ಲಾಗಲಿ ನಾಶವೆಂಬುದಿಲ್ಲ. ಶುಭವಾಚರಿಸುವವನಿಗೆ ದುಃಖವೆಂದಿಗೂ ಬರುವುದಿಲ್ಲ." ಎಲ್ಲ ಸಾಧಕರಿಗೂ ನವಸ್ಫೂರ್ತಿಯನ್ನು ಕೊಡುವ ಸಂದೇಶವಿದು.

ಶ್ರೀ ಕೃಷ್ಣನ ಬೋಧನೆಯಲ್ಲಿ ನಮಗೆ ತೋರುವುದು ಅಧಿಕಾರ, ವಿಚಾರ, ಅನುಭವದ ಒಂದು ಸಾಮರಸ್ಯ. ಶ್ರೀ ಕೃಷ್ಣನು ಸ್ವಯಂ ಅವತಾರ ಪುರುಷನಾಗಿದ್ದರೂ, ಆಜನ್ಮಸಿದ್ಧ ಪುರುಷನಾದರೂ, ಬೋಧಿಸುವಾಗ ಹಿಂದಿನ ಋಷಿಗಳೂ ನನ್ನಂತೆ ಹೇಳಿರುವರು. ಹಿಂದಿನ ಧರ್ಮಗ್ರಂಥಗಳೂ ಅದನ್ನೆ ಸಾರುವುದು, ಎಂದು ಪ್ರಮಾಣಕ್ಕೆ ಹಿಂದಿನವರ ಅನುಭವಗಳನ್ನು ತರುವನು. ಹಿಂದಿನವರನ್ನೆಲ್ಲ ಧಿಃಕರಿಸಿ, ಅವರೇನೂ ಕಂಡಿಲ್ಲ, ನಾನು ಅದನ್ನು ಮೊದಲುಬಾರಿ ನೋಡಿರುವುದು ಎಂದು ಹೆಮ್ಮೆ ಕೊಚ್ಚಿಕೊಳ್ಳುವುದಿಲ್ಲ. ಹಿಂದಿನವರಿಗೆ ಗೌರವ ತೋರುವುದು ಇಂದಿನ ಕಿರಿಯರ ಒಂದು ಹಿರಿಯ ಗುಣ. ಅರ್ಜುನನ ಸಂಶಯವನ್ನು ಕೇವಲ ಹಿಂದಿನವರ ಅಧಿಕಾರ ವಾಣಿಯಿಂದ ಮಾತ್ರ ಹೋಗಲಾಡಿಸಲಿಲ್ಲ. ಪ್ರತ್ಯಕ್ಷ ಅನುಭವವನ್ನು ಕೊಡುವನು. ಅನುಭವ ಕೊಟ್ಟಮೇಲೂ ಶ್ರೀ ಕೃಷ್ಣನು ವಿಚಾರವನ್ನು ಬಿಡಲಿಲ್ಲ; ಅಥವ ತಾನು ಹೇಳಿದುದನ್ನೆ ನೀನು ಮಾಡಲೇಬೇಕೆಂಬ ಬಲಾತ್ಕಾರವನ್ನಾದರೂ ಉಪಯೋಗಿಸಲಿಲ್ಲ. "ಸೂಕ್ಷ್ಮವಾದ ಜ್ಞಾನವನ್ನು ನಿನಗೆ ಹೇಳಿದೆ. ಈಗ ನಿನಗೆ ಹೇಗೆ ತೋರುವುದೊ ಹಾಗೆ ಮಾಡು" ಎಂದು ಎಲ್ಲವನ್ನೂ ಅವನ ಪಾಲಿಗೇ ಬಿಡುವನು.

ಶ್ರೀ ಕೃಷ್ಣನಂತಹ ಸೂಕ್ಷ್ಮಮತಿಯ, ಉದಾರಚಿತ್ತದ, ಅತಿ ಜೋಪಾನವಾದ ಸುಧಾರಕರು ಸಿಕ್ಕುವುದು ಬಹಳ ಕಷ್ಟ. ಅನೇಕ ವೇಳೆ ನಮ್ಮ ಕಣ್ಣಮುಂದೆ ಬಂದು ಹೋದ ಸುಧಾರಕರಲ್ಲಿ ಪರರಿಗೆ ಮರಗುವ ಹೃದಯವೇನೋ ಇದೆ. ಆದರೆ ಅವರಲ್ಲಿ ಸಹನೆ ಇಲ್ಲ. ಎಲ್ಲಿ ತಮ್ಮ ದೃಷ್ಟಿಯಿಂದ ಅದು ತಪ್ಪೊ ಅದನ್ನು ಖಂಡಿಸಿ ನಾಶ ಮಾಡುವ ವರೆಗೂ ಅವರ ಚಿತ್ತಕ್ಕೆ ಶಾಂತಿ ಇಲ್ಲ. ಆದರೆ ಶ್ರೀ ಕೃಷ್ಣನು ಯಾವ ಮಾರ್ಗವನ್ನೂ ದೂರುವುದಿಲ್ಲ. ಶ್ರೀ ಕೃಷ್ಣನ ಎದುರಿಗೆ ಇಡೀ ಮಾನವಕೋಟಿಯ ವಿಕಾಸದ ಏಣಿ ಇದೆ. ಮಾನವನು ಪೂರ್ಣಾವಸ್ಥೆಗೆ ಬೆಳೆಯಬೇಕು. ಆ ಸ್ಥಾನಕ್ಕೆ ನೆಗೆಯುವುದಕ್ಕೆ ಆಗುವುದಿಲ್ಲ. ಹೂವು ಮಿಡಿಯಾಗಿ, ಕಾಯಾಗಿ ಹಣ್ಣಾಗಬೇಕು. ತನ್ನ ಅವಸರಕ್ಕೆ ಅದು ಒಂದು ಸ್ಥಿತಿಯನ್ನು ಬಿಟ್ಟು ಮತ್ತೊಂದು ಸ್ಥಿತಿಗೆ ನೆಗೆಯಲಾರದು. ಮಗುವು ಹುಡುಗನಾಗಿ, ಯುವಕನಾಗಿ, ಜಗದ ಸುಖದುಃಖಗಳ ಪೆಟ್ಟನ್ನು ತಿಂದು ಮಾಗಬೇಕು. ಅಜ್ಞಾನಿಯೂ ಕೂಡ ನಾನಾ ಅನುಭವಗಳನ್ನು ಪಡೆದು

ಜ್ಞಾನಿಯಾಗಬೇಕು. ಶ್ರೀ ಕೃಷ್ಣನು ಯಾರನ್ನೂ ದೂರುವುದಿಲ್ಲ. ಮೆಟ್ಟಲು ಮೆಟ್ಟಲಾಗಿ ಅವರನ್ನು ಮೇಲಕ್ಕೆ ಎತ್ತಲು ಪ್ರಯತ್ನಪಡುವನು. ಗೀತೆ, ಆಧ್ಯಾತ್ಮಿಕ ಜೀವನದಲ್ಲಿ ಆಗಲೆ ಒಂದು ಮಟ್ಟವನ್ನು ಮುಟ್ಟಿರುವವನಿಗೆ ಮಾತ್ರ ನೆರವಾಗಿರುವ ಗ್ರಂಥವಲ್ಲ. ಆಧ್ಯಾತ್ಮಿಕ ಜೀವನದಲ್ಲಿ ಆಗ ತಾನೆ ಕಣ್ತೆರೆದ ಎಳೆ ಹಸುಳೆಯಿಂದ ಹಿಡಿದು, ಸಿದ್ಧಿಯ ಪರಮಪದವನ್ನು ಮುಟ್ಟಿದ ಪರಮಹಂಸನ ವರೆಗೆ ಅವರವರಿಗೆ ಬೇಕಾದ ಸಲಹೆಗಳಿವೆ.

ಶ್ರೀ ಕೃಷ್ಣನು ಚಾರಿತ್ರಿಕ ವ್ಯಕ್ತಿಯೊ ಅಥವ ಕಾಲ್ಪನಿಕ ವ್ಯಕ್ತಿಯೊ, ಎಂದು ಕೆಲವರು ಅನುಮಾನಿಸಬಹುದು. ಗೀತೆ ಮಹಾಭಾರತ ಬರೆದ ಕಾಲದಲ್ಲಿ ಇತ್ತೋ ಅಥವ ಅನಂತರ ಬಂದವರು ಇದನ್ನು ಬರೆದು ಮಹಾಭಾರತದಲ್ಲಿ ಸೇರಿಸಿರಬಹುದು ಎಂದು ಕೆಲವರು ತಿಳಿಯಬಹುದು. ಕೃಷ್ಣ ಕಾಲ್ಪನಿಕ ವ್ಯಕ್ತಿಯಾದರೇನು? ಗೀತೆ ಅನಂತರ ಬರೆದಿದ್ದರೇನು? ಅದರಲ್ಲಿರುವ ಆಧ್ಯಾತ್ಮಿಕ ಸತ್ಯಗಳು ಅಮರವಾಗಿವೆ. ಇದಕ್ಕೆ ಗೀತಾಸಂದೇಶದಂತೆ ತಮ್ಮ ಜೀವನವನ್ನು ಹದಗೊಳಿಸಿ ಸಿದ್ಧಿಯ ಪರಮಪದ ವನ್ನು ಮುಟ್ಟಿದ ಹಲವು ಸಾಧುಸಂತರ, ಆಚಾರ್ಯರ ಜೀವನವೆ ಸಾಕ್ಷಿಯಾಗಿದೆ. ಗೀತೆ ಕಾಲಾನಂತರ ವ್ಯಕ್ತಿಗೆ ಮುಕ್ತಿಯನ್ನು ಕೊಡುವ ಗ್ರಂಥಮಾತ್ರವಲ್ಲ. ಇಹದಲ್ಲಿ ಜೀವರಿಗೆ ಸುಖವನ್ನೂ, ಇಡೀ ದೇಶದಲ್ಲಿ ಸಮಾಜಕ್ಕೆ ಸಕಲ ಕಾರ್ಯ ರಂಗದಲ್ಲಿಯೂ ಒಂದು ಹೊಸ ಹುರುಪನ್ನೂ ಕೊಡಬಲ್ಲುದು. ಇದು ಪಾರಾಯಣ ಗ್ರಂಥವಾಗಿ ನಾಲಿಗೆಯ ಮೇಲೆ ನಲಿದಾಡಿದರೆ ಸಾಲದು. ಇದು ಮುಖ್ಯವಾಗಿ ಅನುಷ್ಠಾನಿಕಗ್ರಂಥ. ಇದರ ಭಾವ ನಮ್ಮ ಹೃದಯದ ಆಳಕ್ಕೆ ಹೋಗಬೇಕು. ಗೀತೆಯ ಅಮೃತ ನಮ್ಮ ಜೀವನದ ತಾಯಿಬೇರಿಗೆ ತಾಗಬೇಕು. ಆಗ ಮಾತ್ರ ನಮ್ಮ ಆಲೋಚನೆ ಮತ್ತು ಕ್ರಿಯೆ ಪ್ರಗತಿಗಾಮಿಗಳಾಗುವುದು. ಗೀತೆ ನಿತ್ಯಕಾಲದ ಧರ್ಮ ಗ್ರಂಥ. ಕಾಲ ಕಳೆದಂತೆ ಮಾಸುವುದಿಲ್ಲ. ನಮ್ಮ ಜೀವನ ಒಂದು ಕುರುಕ್ಷೇತ್ರ. ಎಲ್ಲ ಮಾನವರೂ ಅರ್ಜುನನಂತೆ ಬಾಹ್ಯ ಶತ್ರುವಿನೊಂದಿಗೆ ಯುದ್ಧ ಮಾಡದೇ ಇದ್ದರೂ ಬೇರೆಬೇರೆ ಕಾರ್ಯಕ್ಷೇತ್ರದಲ್ಲಿ ನಿರತರಾಗಿರುವಾಗ, ಅರ್ಜುನನ ಮನಸ್ಸಿ ನಲ್ಲಿ ಯಾವಯಾವ ಪ್ರಶ್ನೆಗಳೆದ್ದವೊ, ಅವನು ಯಾವ ದುಃಖಕ್ಕೆ ಈಡಾದನೊ, ಅವನು ಯಾವ ಧರ್ಮಸಂಕಟಕ್ಕೆ ಒಳಗಾದನೊ ಅದರಂತೆ ನಾವೆಲ್ಲರೂ ಒಂದಲ್ಲ ಒಂದುದಿನ ಅನುಭವಿಸುವೆವು. ಶ್ರೀ ಕೃಷ್ಣನು ಪಾರ್ಥನಿಗೆ ಮಾತ್ರ ಸಾರಥಿಯಲ್ಲ. ಎಲ್ಲ ಜೀವರ ರಥಕ್ಕೆ ಸಾರಥಿ ಅವನು. ಅವನನ್ನು ನೆಚ್ಚಿ ನಮ್ಮ ಜೀವನ ರಥವನ್ನು ಮುಂದುವರಿಸಿದರೆ, ಸಂಶಯಗಳಿಂದ ಪರಿಹರಿಸಿ, ಕಷ್ಟನಷ್ಟಗಳ ಕೋಟಲೆಯಿಂದ ಮೇಲೆತ್ತಿ, ಶಾಶ್ವತ ಸಚ್ಚಿದಾನಂದ ಸುಖವನ್ನು ಎಲ್ಲರಿಗೂ ನೀಡುವೆನೆಂದು ಭಾಷೆಕೊಟ್ಟಿರುವನು.

ಸೋಮನಾಥಾನಂದ

ಕಾವ್ಯದಲ್ಲಿ ತತ್ತ್ವಚಿಂತನೆ

ಕಾವ್ಯ ಉಪದೇಶಾತ್ಮಕವಾಗಿರಬಾರದು, ತತ್ತ್ವಾರ್ಥನಿರೂಪಣೆಗೆ ವಾಹಕವಾಗಿರಬಾರದು ಎಂದು ಹೇಳುವುದು ಸರಿಯಲ್ಲ. ಆದರೆ ತತ್ತ್ವಪ್ರತಿಪಾದನಾವಸರದಲ್ಲಿ ಕಾವ್ಯಸೌಂದರ್ಯ ಕುಂಠಿತವಾಗಬಾರದು. ಸೌಂದರ್ಯಾಂಶದ ಅಭಾವದಿಂದ ಒಂದು ಕೃತಿ ಕಾವ್ಯತ್ವಕ್ಕೆ ಏರುವುದಿಲ್ಲ ಹೊರತು ಉಪದೇಶಾಂಶ ಅದರಲ್ಲಿದೆ ಎಂಬಷ್ಟೆ ಕಾರಣದಿಂದಲೆ ಅಲ್ಲ. ವಸ್ತುತಃ ಸೌಂದರ್ಯಾಂಶಕ್ಕೂ ಉಪದೇಶಾಂಶಕ್ಕೂ ಅನಿವಾರ್ಯವಾದ ವಿರೋಧಭಾವವೇನೂ ಇರುವುದಿಲ್ಲ. ಕೃತಿಯ ಉತ್ತಮತೆ ಅಥವಾ ಅನುತ್ತಮತೆ ಕವಿಯ ಶಕ್ತಿಯನ್ನವಲಂಬಿಸುತ್ತದೆ. ಚಿಂತನಾಂಶದ ಭಾವ ಅಥವಾ ಅಭಾವದಿಂದ ಕಾವ್ಯದ ದೋಷ ಅಥವಾ ಗುಣ ನಿರ್ಣಯವಾಗುವುದಿಲ್ಲ; ಅದು ನಿರ್ಣಯವಾಗುವುದು ಕವಿಪ್ರತಿಭೆಯ ಭಾವ ಅಥವಾ ಅಭಾವದ ಮೇಲೆ. ಆದ್ದರಿಂದ ಯಾವನಾದರೊಬ್ಬ ಕವಿಯ ನೀತಿ ಅಥವಾ ತತ್ತ್ವಪ್ರತಿಪಾದನೆಯನ್ನು ಖಂಡಿಸಲು ನಮಗೆ ಯಾವ ಸಕಾರಣವಾದ ಆಧಾರವೂ ಇರುವುದಿಲ್ಲ. ನಿಜವಾಗಿಯೂ ಖಂಡನೀಯವಾಗಬಹುದಾದುದು ಯಾವುದೆಂದರೆ ನೀತಿಬೋಧೆಗೂ ತತ್ತ್ವಪ್ರತಿಪಾದನೆಗೂ ಕಾವ್ಯರಸರೂಪಗಳನ್ನು ಕೊಡಲಾರದ ಅವನ ಅಸಾಮರ್ಥ್ಯ. ರಸಾನುಭವಕ್ಕೆ ಒಂದಿನಿತೂ ಊನ ಬರದಂತೆ ತತ್ತ್ವಾಂಶಗಳನ್ನು ನೀಡುವ ಕವಿ ನಮಗೆ ಸರ್ವದಾ ಮಾನ್ಯನಾಗುತ್ತಾನೆ. ಅವನ ಚಿಂತನಾಂಶ ಅಥವಾ ತತ್ತ್ವಾಂಶವು ಕಲ್ಪನಾಂಶ ಮತ್ತು ಭಾವನಾಂಶಗಳಿಂದ ರಸವರ್ತಿತ ಅಥವಾ ದೀಪ್ತವಾಗಬೇಕು. ಅದು ಸೌಂದರ್ಯಾನುಭವಕಾರಿಯಾದ ಕೃತಿಯಾಗಿ ರೂಪಗೊಳ್ಳಬೇಕು, ಅದಕ್ಕೆ ಉಕ್ತಿವಕ್ರತೆ ಒದಗಬೇಕು. ಆಗ ಸಹೃದಯನಿಗೆ ಕೃತಿಯ ಚಿಂತನಾಂಶದ ವಸ್ತುವು ರಸಾತ್ಮಕವಾಗಿ ಅನುಭವಕ್ಕೆ ಬರುತ್ತದೆಯೆ ಹೊರತು ಬರಿಯ ವಿಚಾರಾತ್ಮಕವಾದ ತತ್ತ್ವಪ್ರತಿಪಾದನೆಯಾಗಿ ಉಳಿಯುವುದಿಲ್ಲ. ಅಂತಹ ರಸಾತ್ಮಕತೆಯೊಂದು ದೊರೆಕೊಂಡಿತೆಂದರೆ ಕವಿ ತತ್ತ್ವದರ್ಶಿಯೆಂದೂ ಋಷಿಯೆಂದೂ ದಾರ್ಶನಿಕನೆಂದೂ ಸಹೃದಯನ ಆರಾಧನೆಗೆ ಅರ್ಹನಾಗುತ್ತಾನೆ. ಜೀವನದ ತತ್ತ್ವಧರ್ಮನೀತಿಗಳು ಅಂತಹ ಕವಿಯ ರಸಪ್ರಜ್ಞೆಯಲ್ಲಿ ತಪೋಮಯವಾಗಿ ಶಕ್ತಿಪೂರ್ಣವಾಗುತ್ತವೆ ಎಂಬುದು ಸಹೃದಯನಿಗೆ ಗೋಚರವಾಗುತ್ತದೆ.

ವಿಲಿಯಂ ಹೆನ್ರಿ ಹಡ್ಸನ್

ಮೈಸೂರು ದೇಶದ ಕೆಲವು ಶಿಲ್ಪಿಗಳು[1]

ಪ್ರಪಂಚದ ಶಿಲ್ಪಕಲೆಯ ಇತಿಹಾಸದಲ್ಲಿ ಭರತಖಂಡಕ್ಕೆ ಒಂದು ವಿಶೇಷಸ್ಥಾನವಿದೆ. ಭರತಖಂಡದಲ್ಲಿಯೂ ಕರ್ಣಾಟಕ, ಅದರಲ್ಲಿಯೂ ಮೈಸೂರು ಬಹು ಪ್ರಧಾನ ಸ್ಥಾನವನ್ನಾಕ್ರಮಿಸಿದೆ. ಮೈಸೂರಿನ ವಾಸ್ತುಶಿಲ್ಪ ಅಥವಾ ತಕ್ಷವಿದ್ಯೆಗೆ ಸುಮಾರು ಅವಿಚ್ಛಿನ್ನವಾದ ಒಂದು ಸಾವಿರದ ಅಯ್ದುನೂರು ವರ್ಷದ ಇತಿಹಾಸವಿದೆ. ಶಿಲ್ಪಗಳ ನಿರ್ಮಾಣಕ್ಕೆ ಪ್ರೇರಕವಾದ ಶಕ್ತಿ, ಅವುಗಳ ವಿವಿಧ ಶಾಖೆಗಳು, ಬಹುಮುಖವಾದ ಪ್ರಗತಿ ಇವುಗಳನ್ನು ಖಚಿತವಾಗಿ ನಿಷ್ಕರ್ಷಿಸುವುದಕ್ಕೆ ಸಾಕಷ್ಟು ಆಧಾರಗಳು ದೇಶದಾದ್ಯಂತ ಹೇರಳವಾಗಿ ಸಿಕ್ಕುವುವು. ಇವುಗಳಲ್ಲಿ ಪ್ರಧಾನವಾದುವು ಶಿಲ್ಪಗಳ ಕೆಳಗಿರುವ ಅಂಕಪಟ್ಟಿಕೆಗಳು. ಇವುಗಳು ಒಂದು ದೃಷ್ಟಿಯಿಂದ ಮೈಸೂರು ದೇಶದ ವೈಶಿಷ್ಟ್ಯವೆಂದೇ ಹೇಳಬಹುದು. ಇಂತಹ ಪಟ್ಟಿಕೆಗಳು ಇತರೆಡೆಗಳಲ್ಲಿ ಇಷ್ಟು ಹೆಚ್ಚಾಗಿ ದೊರೆಯುವುದಿಲ್ಲ. ಇವುಗಳ ಆಧಾರದ ಮೇಲೆಯೂ ದೇಶದಲ್ಲೆಲ್ಲ ವಿಶೇಷವಾಗಿ ಹರಡಿರುವ ಶಾಸನಗಳ ಆಧಾರದಿಂದಲೂ ಮೈಸೂರು ದೇಶದ ಕೆಲವು ಶಿಲ್ಪಿಗಳ ಪರಿಚಯವನ್ನು ಮಾಡಿಸಲು ಈ ಲೇಖನದಲ್ಲಿ ಪ್ರಯತ್ನಿಸಿದೆ.

ದೇಶದ ಅನೇಕ ಶಿಲ್ಪಗಳ ಕೆಳಗೆ—ವಿಗ್ರಹಗಳು, ಕಂಭಗಳು, ಕಲಾಕೃತಿಗಳು, ಲೋಹದ ಪಾತ್ರೆಪದಾರ್ಥಗಳು—ಅಂಕಿತಗಳನ್ನು ಕೆತ್ತಿರುವುದು ಇತಿಹಾಸದ ದೃಷ್ಟಿಯಿಂದ ಬಹು ಉಪಯುಕ್ತವಾಗಿದೆ. ಈ ಅಂಕಿತಗಳು ಕೆಲವಲ್ಲಿ ಶಿಲ್ಪದ ವಿವರಣೆ, ಕೆತ್ತಿದ ಸನ್ನಿವೇಶ ವರ್ಣಿತವಾಗಿದೆ; ಮತ್ತೆ ಕೆಲವಲ್ಲಿ ನಿರ್ಮಾಪಕರ ಹೆಸರೂ ಇರುವುದುಂಟು. ಅನೇಕಗಳಲ್ಲಿ ಶಿಲ್ಪಿಯ ಹೆಸರು, ಪರಿಚಯ, ಯೋಗ್ಯತೆ, ಮಹತ್ವ ಮೊದಲಾದುವು ಸೂಚಿತವಾಗಿ ವಾಸ್ತುಶಿಲ್ಪದ ಇತಿಹಾಸಕ್ಕೆ ಬಹುಮಟ್ಟಿಗೆ ಸಹಾಯಕವಾಗಿದೆ.

ಮೈಸೂರು ದೇಶದ ಶಿಲ್ಪವಿದ್ಯೆಯನ್ನು ಕೂಲಂಕಷವಾಗಿ ಅಭ್ಯಾಸಮಾಡಿದರೆ ದೇವಾಲಯ ನಿರ್ಮಾಣ, ಚಿನ್ನ, ಬೆಳ್ಳಿ, ತಾಮ್ರ ಮತ್ತು ಕಲ್ಲುಗಳಲ್ಲಿ ಕಂಡರಸುವುದು ಮೊದಲಾದ ಶಿಲ್ಪವಿದ್ಯೆಗಳು ಅಕ್ಕಸಾಲೆ, ಕಂಚುಗಾರ, ಕಮ್ಮಾರ, ಬಡಗಿ, ಕಲ್ಲುಕುಟಿಗರೆಂಬ ಜನಗಳಲ್ಲಿ ನೆಲಸಿತ್ತೆಂದು ಹೇಳಬಹುದು. ಇವರಿಗೆ ಪಾಂಚಾಲರೆಂಬ ಮತ್ತೊಂದು ಹೆಸರೂ ಉಂಟು. ಇತರ ದ್ವಿಜವರ್ಣದವರಂತೆ ಇವರೂ ಯಜ್ಞೋಪವೀತವನ್ನು ಧರಿಸಿ

---

[1] ಮೈಸೂರು ಶಾಸನ ಇಲಾಖೆಯ ಅನೇಕ ವರದಿಗಳು, 'ಎಫಿಗ್ರಾಫಿಯ ಕರ್ಣಾಟಿಕಾ' ಸಂಪುಟಗಳು, ಹಯವದನರಾಯರ 'ಮೈಸೂರು ಗೆಜಟಿಯರ್' ಇವುಗಳನ್ನು ಈ ಲೇಖನಕ್ಕೆ ಪ್ರಮಾಣ ಗ್ರಂಥಗಳಾಗಿ ಸ್ವೀಕರಿಸಿದೆ.

ಉಪಾಧ್ಯಾಯ ಮತ್ತು ಅದರ ಅಪಭ್ರಂಶವಾದ ಒವಜ, ಓಜ ಎಂಬ ಹೆಸರುಗಳನ್ನೂ ಅವಕ್ಕೆ ಸಮಾನಾರ್ಥಕವಾದ ಆಚಾರ್ಯ ಅಥವಾ ಆಚಾರಿ ಎಂಬ ಹೆಸರನ್ನೂ ಹೊಂದಿ ತಾವು ದೇವಶಿಲ್ಪಿಯಾದ ವಿಶ್ವಕರ್ಮನ ವಂಶಸ್ಥರೆಂದು ಹೇಳಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಈ ಗುಂಪಿನವರು ತಮ್ಮ ಅಭಿರುಚಿಯ ಮೇಲೆ ಯಾವ ವೃತ್ತಿಯನ್ನಾದರೂ ಅವಲಂಬಿಸಬಹುದು. ಇವರೆಲ್ಲರಿಗೂ ಆಚಾರಿಗಳೆಂಬ ವ್ಯವಹಾರವಿದೆ. ಕ್ರಿ.ಶ. ೭೦೦ ರ ಶ್ರವಣಬೆಳಗೊಳದ ೨೧ ನೆಯ ಶಾಸನವನ್ನು ಕಂಡರಿಸಿದವನು ಪಲ್ಲವಾಚಾರಿ. ಶ್ರವಣದಹಳ್ಳಿ ಶಾಸನವೊಂದನ್ನು ಕಂಡರಿಸಿದವನು ಧನಪತಿಯಾಚಾರಿ. ಶ್ರವಣಬೆಳಗೊಳದ ೬೭ ನೆಯ ಶಾಸನವನ್ನು ಬಿರುದ ರೂವಾರಿ[1] ಮುಖತಿಳಕ ಗಂಗಾಚಾರಿ ಕಂಡರಿಸಿದ. ಆತನು ತನ್ನನ್ನು 'ಬಿರುದ ರೂವಾರಿ ತಲೆದೊಡವು' ಎಂದು ಅದೇ ಶಾಸನದಲ್ಲಿ ಸಂಬೋಧಿಸಿಕೊಂಡಿದ್ದಾನೆ. ಅಲ್ಲದೆ ತಾನು ಶುಭಚಂದ್ರ ಸಿದ್ಧಾಂತದೇವನ ಶಿಷ್ಯನೆಂದೂ ಹೇಳಿಕೊಂಡಿದ್ದಾನೆ. ಈತನ ತಮ್ಮನಾದ ಕಾಮಾಚಾರಿಯು ಅಲ್ಲಿಯ ೧೪೩ ನೆಯ ಶಾಸನವನ್ನು ಕೊರೆದವನು. ಅದೇ ಶ್ರವಣಬೆಳಗೊಳದ ೭೩ ನೆಯ ಶಾಸನವನ್ನು ಹೊಯ್ಸಳಾಚಾರಿಯ ಮಗನಾದ 'ಬಿರುದ ರೂವಾರಿ ತಿಳಕ' ವರ್ಧಮಾನಾಚಾರಿಯು ಕೆತ್ತಿದನು. ಆಚಾರಿ ಶಬ್ದದಂತೆಯೇ ಓಜ, ಓಜಿ ಶಬ್ದಗಳೂ ಪ್ರಾಚೀನಕಾಲದಿಂದ ಶಾಸನಗಳಲ್ಲಿ ಸಿಕ್ಕುತ್ತವೆ. ಮೊತ್ತಮೊದಲು ಇದು ನಮಗೆ ಗೋಚರವಾಗುವದು ಹತ್ತನೆಯ ಶತಮಾನದಲ್ಲಿ. ಶ್ರವಣಬೆಳಗೊಳದ ಗೊಮ್ಮಟ ವಿಗ್ರಹದ ಪ್ರಾಕಾರದ ಹೊರಗೆ ಉತ್ತರಕ್ಕಿರುವ ಬಂಡೆಯಮೇಲಿರುವ ಶ್ರೀಮತ್ 'ಬಡಿಗೋಜ' ಎಂಬುದು. ಕ್ರಿ.ಶ. ೮೨೮ ರ ಒಂದನೆಯ ರಾಚಮಲ್ಲನ ಮನ್ನೆಯ ಶಾಸನವನ್ನು (ತಾಮ್ರಫಲಕ) ವಿಶ್ವಕರ್ಮಗೋತ್ರದ ಮಧುರೋವಜನು ಕೆತ್ತಿದನೆಂದು ಉಕ್ತವಾಗಿದೆ. (ಮೈ. ಶಾ. ವ. ೧೯೦೯-೧೦). ಬೇಲೂರು ದೇವಸ್ಥಾನದ ಶಿಲ್ಪಿಗಳಲ್ಲಿ (೧೧೧೭) ದಾಸೋಜ, ಇವನ ಮಗ ಚಾವಣ, ಚಿಕ್ಕಹಂಪ, ಮಲ್ಲಿಯಣ್ಣ, ಮಾಯಣ, ಕುಮಾರಮಾಚಾರಿ, ಪದರಿ ಮಲ್ಲೋಜ, ಕೆಂಚಮಲ್ಲಿಯಣ್ಣ, ಕೇಶವದೇವ, ಮಸಡ, ಬೀರ, ಗದಗಿನ ನಾಗೋಜ ಇವರ ವಿಷಯವಾದ ಕೆಲವು ವಿವರಗಳು ಅಂಕಪಟ್ಟಿಕೆಗಳಲ್ಲಿ ಸಿಕ್ಕುತ್ತವೆ. ದಾಸೋಜ, ಇವನ ಮಗ ಚವಣದಾಸೋಜ, ಅವನ ಮಗ ಚಾವಣ ಈ ಮೂವರೂ ಶಿವಮೊಗ್ಗ ಜಿಲ್ಲೆಯ ಷಿಕಾರಿಪುರ ತಾಲ್ಲೋಕಿಗೆ ಸೇರಿದ ಬೆಳ್ಗಾಮಿ ಗ್ರಾಮಕ್ಕೆ ಸೇರಿದವರು. ದಾಸೋಜನಿಗೆ 'ಬಿರುದ ರೂವಾರಿ ಗೊಂಡಲಬಡಿವ' ಎಂದೂ ಚವಣ ದಾಸೋಜನಿಗೆ 'ಬಿರುದರೂವಾರಿ ಮದನಮಹೇಶ' ಎಂದೂ ಮೊಮ್ಮಗ ದಾಸೋಜನಿಗೆ 'ಮಚ್ಛರಿಪ ರೂವಾರಿ ಶರಭುಭೇರುಂಡ' ಎಂದೂ ಬಿರುದುಗಳಿ

[1] 'ರೂಪಕಾರಿ' ಎಂಬುದರ ತದ್ಭವ ರೂವಾರಿ.

ದ್ದಂತೆಯೂ, ಇವರು ಬಳ್ಳಿಗ್ರಾಮದ ಧರ್ಮೇಶ್ವರ ದೇವರ ಪಾದಪದ್ಮೋಪಜೀವ ಮಧುಕರಾಯಮಾನರೆಂದೂ, ಕೇಶವದೇವನ ಅನುಮತದ ಮೇಲೆ ಕೆಲಸಮಾಡಿದವ ರೆಂದೂ ಹೇಳಿಕೊಂಡಿದ್ದಾರೆ. ಚಿಕ್ಕಹಂಪನು ತ್ರಿಭುವನಮಲ್ಲದೇವ ವಿಷ್ಣುವರ್ಧನನ ಆಸ್ಥಾನಶಿಲ್ಪಿ. ಬಿಟ್ಟಿದೇವನ ಆಜ್ಞೆಯಪ್ರಕಾರ ಅವನಿಂದ ನಿರ್ಮಿತವಾದ ವಿಜಯ ನಾರಾಯಣಸ್ವಾಮಿಯ ದೇವಸ್ಥಾನದ ಮಂಟಪದ ಕೆಲವು ಕಂಭಗಳನ್ನು ರಚಿಸಿದ್ದಾನೆ. ಈತನು ಇನೇಜನಮಗ 'ಮಚ್ಛರಿಪ ರೂವಾರಿಗಳ ಗಂಡ' ಎಂಬುದು ಈತನ ಬಿರುದು.—ಮಲ್ಲಿಯಣ್ಣನು 'ತಲಕಾಡುಕೊಂಡ ತ್ರಿಭುವನಮಲ್ಲ ಭುಜಬಲಗಂಗ ವೀರ ಹೊಯ್ಸಳದೇವನ ಶಿಲ್ಪಿ'ಯೆಂದೂ ತಾನು 'ರೂವಾರಿಪುಲಿ' 'ಮಚ್ಛರಿಪ ರೂವಾರಿ ಗಿರಿ ವಜ್ರದಂಡ'ನೆಂದೂ ಹೇಳಿಕೊಂಡಿದ್ದಾನೆ. ಪದರಿ ಮಲ್ಲೋಜನು ವಡೋಜನ ಅಳಿಯ ನೆಂದೂ ತಾನು 'ಬಿರುದ ರೂವಾರಿಗಳ ಗಂಡಗತ್ರಿ'ಯೆಂದೂ ತಿಳಿಸಿದ್ದಾನೆ. ನಾಗೋಜನು ಗದಗಿನ ಸ್ವಯಂಭು ತ್ರಿಕೂಟೇಶ್ವರನ ಶಿಲ್ಪಿಯೆಂದೂ ಸರಸ್ವತಿಯ ಪಾದಪದ್ಮೋಪ ಜೀವಮಾಧುಕರಾಯಮಾನನೆಂದೂ ಕಾಟೋಜನ ಮಗನೆಂದೂ 'ರೂವಾರಿ ಜಗದ್ದಳ' ನೆಂದೂ ತಿಳಿಸಿದ್ದಾನೆ. ಮಸಡನು ಎಲ್ಲಣ್ಣನ ಮಗ. ಬೇಲೂರಿನ ಶಿಲಾಬಾಲಿಕೆಯರಲ್ಲಿ ದಾಸೋಜನಿಂದ ನಿರ್ಮಿತವಾದುದು ನಾಲ್ಕು; ಚಿಕ್ಕ ಹಂಪನಿಂದ ನಿರ್ಮಿತವಾದುದು ಎರಡು. ಪದರಿಮಲ್ಲೋಜ, ಕೆಂಚಮಲ್ಲಿಯಣ್ಣ, ಮಸಡ, ಮತ್ತು ನಾಗೋಜರದು ಒಂದೊಂದು. ಬೇಲೂರಿನ ಕೇಶವದೇವಾಲಯದ ಹೊರಗೆ ಭಂಡಾರಿ ಮಾಧುವಣ್ಣ, ಮಧುವಣ್ಣ. ಬೇಚಮ, ಗುಮ್ಮಬೀರಣ್ಣ ಇವರುಗಳಿಂದ ಕೆತ್ತಲ್ಪಟ್ಟ ನಾಲ್ಕು ವಿಗ್ರಹ ಗಳಿವೆ. ಇವುಗಳಲ್ಲಿ ಮೊದಲನೆಯದು ಆಧಾರಶಕ್ತಿ; ಎರಡನೆಯದು ವೇಣುಗೋಪಾಲ. ಬೇಲೂರು ದೇವಾಲಯದಲ್ಲಿಯೇ ಹೆಸರಿಲ್ಲದ ಎರಡು ಅಂಕಪಟ್ಟಿಕೆಗಳಿವೆ. ಇವುಗಳಲ್ಲಿ ಮೊದಲನೆಯವನು 'ಕಲಿಯುಗದ ವಿಶ್ವಕರ್ಮನೆಂದೂ ಲೊಕ್ಕಿಗುಂಡಿ ಅಗ್ರಹಾರ ದವನೆಂದೂ, ಎರಡನೆಯವನು ಕುಂತಲದೇಶದಲ್ಲಿರುವ ಬೇಹೂರ ಅಗ್ರಹಾರದ ತ್ರಿಭುವನ ಮಲ್ಲನ ಮಾಣಿಯೆಂದೂ 'ಬಿರುದು ರೂವಾರೀಭಕಂಠೀರವ'ನೆಂದೂ ಉಕ್ತವಾಗಿದೆ.

ಕ್ರಿ.ಶ. ೧೧೪೫ರಲ್ಲಿ ರಚಿತವಾದ ಶ್ರವಣಬೆಳಗೊಳದ ೧೪೦ ನೆಯ ಶಾಸನದಲ್ಲಿ ರಾಮೋಜನ ಮಗನಾದ ಒಬ್ಬ ದಾಸೋಜನ ವಿಷಯವು ಬರುತ್ತದೆ. ಈತನು ಮೇಲೆ ತಿಳಿಸಿರುವ ದಾಸೋಜನೇ ಇರಬೇಕು. ಶ್ರವಣಬೆಳಗೊಳದ ಚಂದ್ರಗುಪ್ತ ಬಸ್ತಿಯಲ್ಲಿರುವ ಕಲ್ಲಿನ ತೆರೆಗಳನ್ನು ಈತನೇ ಬಿಡಿಸಿದವನು. ಚಿಕ್ಕಹಂಪ ಮತ್ತು ಮಲ್ಲಿಯಣ್ಣ ಇವರಿಬ್ಬರೂ ತ್ರಿಭುವನಮಲ್ಲ ವಿಷ್ಣುವರ್ಧನನ ಆಸ್ಥಾನ ಶಿಲ್ಪಿಗಳೆಂದು ಕರೆದುಕೊಂಡಿರುವುದನ್ನು ನೋಡಿದರೆ ಇವರು ಪ್ರಧಾನಶಿಲ್ಪಿಗಳಾಗಿದ್ದು ಇವರ ನೇತೃತ್ವದಲ್ಲಿ ಇತರರು ಕೆಲಸಮಾಡುತ್ತಿದ್ದಿರಬಹುದು.

ಹಳೆಯಬೀಡಿನ ಹೊಯ್ಸಳೇಶ್ವರ ದೇವಾಲಯದ ಮೂರ್ತಿಗಳನ್ನು ಕೆತ್ತಿರುವವರ ವಿಷಯ ವಿವರವಾಗಿ ತಿಳಿಯುವಂತಿಲ್ಲ. ಅಪೂರ್ವವಾಗಿ ಬರಿಯ ಹೆಸರುಗಳು ಮಾತ್ರ ಶಿಲ್ಪದ ಕೆಳಗಿನ ಪಟ್ಟಿಕೆಗಳಲ್ಲಿ ಕೆತ್ತಲ್ಪಟ್ಟಿವೆ. ಬಲ್ಲಣ್ಣ, ಬೊಂಚಣ್ಣ, ಚೌಗ ದೇವೋಜ, ಉದಯಗಿರಿ ಹರೀಶ ತನಗೊಂಡೂರು ಹರೀಶ, ಕಾಳಿದಾಸಿ, ಕೆದರೋಜ, ಕೇತನ, ಮಬಲಕಿ, ಮಾಚಣ ಮಣಿಬಲಕಿ, ಕನಿಮೋಜನ ಮಗ ಮಾಸ ಮತ್ತು ರೇವೋಜ ಇವೇ ಆ ಹೆಸುರುಗಳು. ಇವರಲ್ಲಿ ಯಾರೂ ಬೇಲೂರು ದೇವಾಲಯದ ಶಿಲ್ಪಿಗಳಲ್ಲ. ಆದರೆ ೧೧೪೧ ರ ಬೇಲೂರಿನ ೨೩೯ ನೆಯ ಶಾಸನದಲ್ಲಿ 'ಸ್ವಸ್ತಿಶ್ರೀಮತು ಪ್ರತಾಪ ಹೊಯ್ಸಳ ನಾರಸಿಂಹ ದೇವರ ರೂವಾರಿ ಕೆದರೋಜಂಗೆ 'ಮಲೆವರಗಂಡ 'ಬಿರುದ ರೂವಾರಿ ಗಿರಿವಜ್ರದಂಡ' ರೂವಾರಿ ಕಾಳಿದಾಸಿಗೆಯ್ದ ಮಕರತೋರಣ ಎಂದಿರುವುದರಿಂದ ಕೆದರೋಜ ಇಲ್ಲಿಯ ಮುಖ್ಯಸ್ಥನಾಗಿರಬೇಕೆಂದು ತೋರುತ್ತದೆ. ಇದು ಹೊಯ್ಸಳೇಶ್ವರ ದೇವಾಲಯದ ದಕ್ಷಿಣದ ದ್ವಾರದ ಮೇಲಿರುವ ಕೆತ್ತನೆಯ ಕೆಲಸಕ್ಕೆ ಅನ್ವಯಿಸತಕ್ಕದ್ದು. ಇದೇ ದೇವಾಲಯದ ನಂದಿಮಂಟಪದ ಹಿಂದಿರುವ ಶಾಸಸದ ಪ್ರಕಾರ ದೇವೋಜನು ಪಶ್ಚಿಮದ್ವಾರವನ್ನು ರಚಿಸಿದನೆಂದು ಗೊತ್ತಾಗುವುದು. ಕೇದಾರೇಶ್ವರ ದೇವಸ್ಥಾನದಲ್ಲಿ ದೇವೋಜನ ಹೆಸರುಳಿದು ಮತ್ತಾರ ವಿಷಯವೂ ಇಲ್ಲ. ಹೊಯ್ಸಳೇಶ್ವರ ದೇವಾಲಯದಲ್ಲಿ ಕೆಲಸಮಾಡಿದ ರೇವೋಜನೂ ಈತನೇ ಇರಬೇಕು.

ನಾಗಮಂಗಲದ ೯೪-೯೬ (೧೧೪೨; ೧೧೫೦)ನೆಯ ಶಾಸನಗಳ ಪ್ರಕಾರ ಹೆಬ್ಬೆ ಬಿದುರವಾಡಿ ಸಾಮಂತ ಸೋಮನಿಂದ ನಿರ್ಮಾಪಿತವಾದ ಜಿನಾಲಯವೊಂದನ್ನು ಕಲ್ಕಣೀನಾಡಿನ ಆಚಾರ್ಯ ಕಲಿಯುಗ ವಿಶ್ವಕರ್ಮ ಮಾಚೋಜನು ಕಟ್ಟಿದನೆಂದು ತಿಳಿದುಬರುತ್ತದೆ. ಹಿಂದೆ ಬೇಲೂರು ದೇವಾಲಯದ ಹೆಸರಿಲ್ಲದ ಪಟ್ಟಿಕೆಗಳಲ್ಲಿ ಕಾಣುವ ಇದೇ ಬಿರುದಿನ ಶಿಲ್ಪಿ ಇವನೇ ಇರಬೇಕು. ಇವನ ಬಿರುದುಗಳನ್ನು ನೋಡಿದರೆ ಇವನು ಆ ಕಾಲದ ಶಿಲ್ಪಿಶಿಖಾಮಣಿಯಾಗಿದ್ದಿರಬೇಕು.

ಕ್ರಿ.ಶ. ೧೧೯೬ ರಲ್ಲಿ ನಿರ್ಮಿತವಾದ ತರೀಕೆರೆಯ ಅಮೃತೇಶ್ವರ ದೇವಾಲಯದ ಸೊಗಸಾದ ಮೂವತ್ತು ಭುವನೇಶ್ವರಿಗಳೂ ಅದರ ಕೆಳಗಿರುವ ಅಂಕಿತ ಪಟ್ಟಿಕೆಗಳ ಪ್ರಕಾರ ಮಲ್ಲಿತಮ್ಮ ಪದುಮಣ್ಣ ಬಲುಗ ಮತ್ತು ಮಲಯ ಇವರಿಂದ ರಚಿತವಾದುವು. ಇವರಲ್ಲಿ ಮಲ್ಲಿತಮ್ಮನ ಹೆಸರು ನುಗ್ಗೇಹಳ್ಳಿಯ ನರಸಿಂಹದೇವಾಲಯ (೧೨೪೯) ಗೋವಿಂದನಹಳ್ಳಿ ಪಂಚಲಿಂಗೇಶ್ವರ ದೇವಾಲಯ, (೧೨೫೦) ಸೋಮನಾಥಪುರದ ಕೇಶವ ದೇವಾಲಯ ಇವುಗಳಲ್ಲಿಯೂ ಸಿಕ್ಕುತ್ತದೆ. (೧೨೬೮) ಪ್ರಕಾರ ಈತನು ಸುಮಾರು ೭೨ ವರ್ಷಕಾಲ ಶಿಲ್ಪಕಾರ್ಯದಲ್ಲಿ ತೊಡಗಿರಬೇಕು. ೧೧೯೬ ರಲ್ಲಿ ಕಟ್ಟಿದ ಅಮೃತೇಶ್ವರ ದೇವಾಲಯದ ನಿರ್ಮಾಣಕಾಲದಲ್ಲಿ ಈತನಿಗೆ ೧೬ ವರ್ಷ

ಗಳೆಂದು ಇಟ್ಟುಕೊಂಡರೂ ೧೨೬೮ ರಲ್ಲಿ ಕಟ್ಟಿದ ಸೋಮನಾಥಪುರದ ದೇವಾಲಯದ ರಚನೆಯ ವೇಳೆಗೆ ಈತನಿಗೆ ೮೮ ವರ್ಷವಾಗಿದ್ದಿರಬೇಕು. ನುಗ್ಗೇಹಳ್ಳಿಯ ದೇವಾಲಯದ ದಕ್ಷಿಣದ ಗೋಡೆಯಲ್ಲಿರುವ ವಿಗ್ರಹಗಳನ್ನು ನಂದಿಯ ಬೈಚೋಜನು ಮಾಡಿದುದು. ಉತ್ತರದಲ್ಲಿರುವುದು ಮಲ್ಲಿತಮ್ಮನದು. ಬೈಚೋಜನು 'ರೂವಾರಿ ಗಿರಿವಜ್ರದಂಡ' 'ಬಿರುದ ರೂವಾರಿ ಶಿಖಾಖಡ್ಗ' ಎಂಬ ಬಿರುದುಗಳನ್ನು ಹೇಳಿ ಕೊಂಡಿದ್ದಾನೆ. ಮಲ್ಲಿತಮ್ಮನದು ಹೆಸರು ಮಾತ್ರ ಕಂಡರಿಸಿದೆ. ನುಗ್ಗಿಹಳ್ಳಿಯ ದೇವಾಲಯದಲ್ಲಿ ಮಲ್ಲಿತಮ್ಮನ ಹೆಸರು ೧೬ ಕಡೆಯಲ್ಲಿಯೂ ಬೈಚೋಜನ ಹೆಸರು ನಾಲ್ಕು ಎಡೆಯಲ್ಲಿಯೂ ಸಿಕ್ಕುತ್ತದೆ. ೧೨೫೦ ರಲ್ಲಿ ಕಟ್ಟಲ್ಪಟ್ಟ ನಾಗಲಾಪುರದ ಕೇಶವ ದೇವಾಲಯದಲ್ಲಿಯೂ ಬೈಚೋಜನು ಭಾಗವಹಿಸಿದ್ದ. ಅಲ್ಲಿಯ ವಿಗ್ರಹಗಳ ತಲೆಯ ಮೇಲಿರುವ ಸಣ್ಣ ಸಣ್ಣ ಗೋಪುರಗಳ ಕೆಳಗೆ ಏಳು ಸಲ ಅವನ ಹೆಸರು ಸೂಚಿತವಾಗಿದೆ. ತುರುವೇಕೆರೆಯ ಮೂಲಸಂಖೇಶ್ವರ ದೇವಾಲಯದ ತಳಹದಿಯ ಮೇಲಿರುವ ಒಂದು ಶಾಸನದ ಪ್ರಕಾರ ಜಕ್ಕಣ ಮತ್ತು ಈಶ್ವರ ಎಂಬಿಬ್ಬರ ಹೆಸರು ಕಂಡುಬರುವುದು. ಬಹುಶಃ ಜಗತ್ಪ್ರಸಿದ್ಧನಾದ ಜಕಣಾಚಾರಿಯು ಈ ಜಕ್ಕಣನೇ ಇದ್ದಿರಬೇಕು. ೧೨೬೦ ರಲ್ಲಿ ನಿರ್ಮಿತವಾದ ಸೋಮನಾಥಪುರದ ದೇವಾಲಯದಲ್ಲಿ ಮಲ್ಲಿತಮ್ಮ (ಮಲ್ಲಿ) ಬಳೆಯ, ಚೌಡಯ, ಚಾಮಯ, ಮಸಣಿ ತಮ್ಮ, ಭರಮಯ್ಯ, ನಂಜಯ್ಯ ಯಲಮಸಯ್ಯ ಎಂಬ ಹೆಸರುಗಳು ಕಂಡುಬರುವುವು. ಇವುಗಳಲ್ಲಿ ಮಲ್ಲಿತಮ್ಮನೊಬ್ಬನ ಹೆಸರೇ ४೦ ಕಡೆಗಳಲ್ಲಿ ಸಿಕ್ಕುವುವು. ಈ ದೇವಾಲಯದ ಕಾರ್ಯದಲ್ಲಿ ಆತನದು ಪ್ರಧಾನಪಾತ್ರವಿದ್ದಿರಬೇಕು.

ಮೇಲ್ಕಂಡ ಶಿಲ್ಪಿ ಶ್ರೇಷ್ಠರನೇಕರು ದೇವಾಲಯ ನಿರ್ಮಾಣದಲ್ಲಿಯೇ ಅಲ್ಲದೆ ವೀರಗಲ್ಲು ಮಹಾಸತಿಕಲ್ಲು ಮೊದಲಾದ ಸಾಮಾನ್ಯತಕ್ಷಕ ವಿದ್ಯೆಯಲ್ಲಿಯೂ ಭಾಗ ವಹಿಸಿದ್ದಾರೆ. ಆ ಕೆಲಸ ಸಾಮಾನ್ಯವಾಗಿ ಸಾಮಾನ್ಯ ತಕ್ಷಕರ ಕೆಲಸವೇ ಆದರೂ ಕೆಲವು ಉತ್ತಮ ವೀರಗಲ್ಲಿನ ಶಿಲ್ಪ ಶ್ರೇಷ್ಠವರ್ಗದ ಶಿಲ್ಪಿಗಳ ಕೈವಾಡವಾಗಿರುತ್ತದೆ. ನಗರದ ೨೭ ನೆಯ ಶಾಸನದಲ್ಲಿ ಉಕ್ತವಾಗಿರುವ ಸಿಂಗೋಜನ ಕಾರ್ಯ ಇದಕ್ಕೆ ಉತ್ತಮ ನಿದರ್ಶನ.

ಹೊಯ್ಸಳರ ಕಾಲದಲ್ಲಿ ಶಿಲ್ಪಿಗಳನೇಕರು ಉತ್ತಮ ಶಿಲ್ಪಿಶ್ರೇಷ್ಠರಾಗಿದ್ದುದಲ್ಲದೆ ಸಾಮಾನ್ಯ ತಕ್ಷಕರಾಗಿಯೂ ಇರುತ್ತಿದ್ದರು. ಆ ಕಾಲದ ರಾಜರು ತಮ್ಮ ಕಾರ್ಯದ ಮೇಲ್ವಿಚಾರಣೆಗೆ ಬಹು ಕುಶಲರಾದ ಆಸ್ಥಾನಶಿಲ್ಪಿಗಳನ್ನು ನೇಮಿಸಿ ಕೊಂಡು ತಮ್ಮ ಕಲಾಮಂದಿರಗಳನ್ನು ನಿರ್ಮಾಣಮಾಡಿಸಿರಬೇಕು. ಅವರ ಕೈಕೆಳಗೆ ಅನೇಕರು ಸಾಮಾನ್ಯಶಿಲ್ಪಿಗಳಂತೆ ಕೆಲಸಮಾಡುತ್ತಿದ್ದಿರಬೇಕು. ಈ ವಿಷಯವನ್ನು ಹಿಂದೆಯೇ ವಿಶದಪಡಿಸಿದೆ.

ಅಲ್ಲದೆ ಹಿಂದಿನ ಕಾಲದಲ್ಲಿ ಶಿಲ್ಪ ಮತ್ತು ತಕ್ಷಕ ವಿದ್ಯೆಗಳಿಗೆ ವಿಶೇಷ ಗೌರವವಿದ್ದಿರಬೇಕು. ಒಂದು ಶಾಸನದ ಪ್ರಕಾರ ಬೆಳಗಾಮಿಯಲ್ಲಿ ಕೇದಾರೇಶ್ವರ ದೇವಾಲಯದ ಮಂಟಪವೊಂದನ್ನು ಸಕಾಲದಲ್ಲಿ ಮುಗಿಸಿಕೊಟ್ಟುದಕ್ಕಾಗಿ ಸುಪ್ರೀತನಾದ ವಾಮಶಕ್ತಿಯೆಂಬ ಯತಿವರ್ಯನು (೧೧೮೬) ಬಿಸದೋಜ, ಚಾವೋಜ, ಸಿಂಗೋಜ ಎಂಬ ಮೂವರಿಗೆ ಕಿರುಬಳ್ಳಿ ಗ್ರಾಮದಲ್ಲಿ ೧೫೦ ಕಮ್ಮ ಬತ್ತಬರುವ ಭೂಮಿಯನ್ನು ಆಚಂದ್ರಾರ್ಕವಾಗಿ ಅನುಭವಿಸುವಂತೆ ದಾನವನ್ನು ಕೊಟ್ಟಿದ್ದಾನೆ. ಬೇರೊಂದೆಡೆಯಲ್ಲಿ ಇವರಿಗೆ ತ್ರಿಪೌರುಷ ಈ ಭೂಮಿಯನ್ನು ಉಚಿತವಾಗಿ ಅನುಭವಿಸುವಂತೆ ಅವಕಾಶ ಕಲ್ಪಿಸಿಕೊಟ್ಟಿದೆ. ೧೩೩೬ ನೆಯ ವರ್ಷದ ಯಳಂದೂರಿನ ೩೮ ನೆಯ ಶಾಸನದಲ್ಲಿ 'ಉಪೇಂದ್ರಪುರವಾದ ಮದ್ದೂರು ಶ್ರೀಮದಶೇಷಮಹಾಜನಗಳು ಉದಗುಂದೂರ ಕಱತ್ತಿಮಾಸವೆಗ್ಗಡೆ ತನದಲು ಕಂಚುಗಾಱ ಪೆಮ್ಮೋಜನ ಮಗ ಮಂಬೋಜಂಗೆ ತನ್ನಂಗದ ಕೆಲಸಗತಿಯಿಂದ ಮಹಾಜನಂಗಳಂ ಮೆಚ್ಚಿಸಿದನಾಗಿ ಆ ಮಹಾಜನಂಗಳು ಕರುಣಿಸಿ' ಮಾನ್ಯ ಕೊಟ್ಟಿರುವುದನ್ನು ನೋಡಿದರೆ ಶಿಲ್ಪಿಗಳು ಜನಸಾಮಾನ್ಯರಿಗೆ ಮಾಡುವ ಸಹಾಯಕ್ಕೆ ಪ್ರತಿಯಾಗಿ ಮಹಾಜನಗಳು ಅವರಿಗೆ ಶಾಶ್ವತವಾದ ದತ್ತಿಯನ್ನು ಬಿಡುತ್ತಿದ್ದಂತೆಯೂ ಕಾಣುತ್ತದೆ. ೧೩೬೨ ರಲ್ಲಿ ರಚಿತವಾದ ಗುಂಡಲಪೇಟೆ ೩೪ ನೆಯ ಶಾಸನದಲ್ಲಿಯೂ ಹಾಸನದ ೧೪೯ ನೆಯ ಶಾಸನದಲ್ಲಿಯೂ ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿಯ ದೇವಸ್ಥಾನವನ್ನು ರಚಿಸಿದ ಮಲ್ಲೋಜ ಮಾಣಿಯೋಜರ ಶಿಲ್ಪವಿದ್ಯಾವೈಭವವು ವರ್ಣಿತವಾಗಿದೆ. ಶಿಲ್ಪಶಾಸ್ತ್ರದಲ್ಲಿ ಉಕ್ತವಾಗಿರುವ ಸರ್ವತೋಭದ್ರ, ವೃಷಭ, ನಳಿನಿಕ, ಉತ್ತುಂಗ, ವೈರಾಜ, ಗರುಡ, ವರ್ಧಮಾನ ಶಂಖವೃತ್ತ, ಪುಷ್ಪಕ, ಗೃಹರಾಜ ಮೊದಲಾದ ರೀತಿಯ ಪ್ರಾಸಾದ ನಿರ್ಮಾಣದಲ್ಲಿ ಅವರು ಬಹು ಕುಶಲರಾಗಿದ್ದರಂತೆ.

ತಮ್ಮ ತಮ್ಮ ಕೃತಿಗಳ ಕೆಳಗಿನ ಪಟ್ಟಿಕೆಯಲ್ಲಿ ತಮ್ಮ ಹೆಸರುಗಳನ್ನು ಸೂಚಿಸುವುದು ಚಾರಿತ್ರಿಕ ದೃಷ್ಟಿಯಿಂದ ಬಹು ಉಪಯುಕ್ತವಾದುದು. ಹೊಯ್ಸಳರ ಈ ಸಂಪ್ರದಾಯ ವಿಜಯನಗರ ಮತ್ತು ಮೈಸೂರರಸರ ಕಾಲದಲ್ಲಿಯೂ ಬೆಳೆದು ಬಂದಿತು. ಆದರೆ ಮುಂದಿನ ಕೆಲವರು ಶಿಲ್ಪಿಯ ಪರಿಚಯದೊಂದಿಗೆ ಶಿಲ್ಪದ ಪರಿಚಯವನ್ನು ಮಾಡಲು ಯತ್ನಿಸಿದ್ದಾರೆ. ಆದರೂ ಅಂತಹ ಸಂದರ್ಭಗಳು ವಿಶೇಷವಾಗಿಲ್ಲ. ಮೇಲುಕೋಟೆ, ಟಿ. ನರಸೀಪುರ, ಕೊಪ್ಪ ತಾಲ್ಲೋಕಿನ ಜಂಬುಟಿಗೆ ದೇವಾಲಯಗಳಲ್ಲಿ ಇಂತಹವುಗಳಿಗೆ ಉದಾಹರಣೆಗಳು ಅಪೂರ್ವವಾಗಿ ಸಿಕ್ಕುತ್ತವೆ. ಈ ಶಿಲ್ಪಿಗಳ ಹೆಸರು ಅವರ ಕೃತಿಗಳಂತೆಯೇ ಅನಂತಕಾಲ ವ್ಯಾಪಿಯಾಗಿ ದೇಶಕ್ಕೆ ಆಚಂದ್ರಾರ್ಕವಾದ ಕೀರ್ತಿಯನ್ನು ತರತಕ್ಕವುಗಳಾಗಿವೆ.

'ಸ್ವಚ್ಛಂದಂ'

'ಕುವೆಂಪು' ಅವರ ಮಂಥರೆ

"ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ, ನೆನೆವೊಡೆ ಕರ್ಣನಂ ನೆನೆಯ" ಎಂದು ಆದಿಪಂಪ ಕರ್ಣನನ್ನು ಕುರಿತು ಹಾಡಿದ. ಆತನು ಬರೆಯತೊಡಗಿದುದು ವಿಕ್ರಮಾರ್ಜುನವಿಜಯ, ತನ್ನ ಆಶ್ರಯದಾತನಾದ ಗುಣಾರ್ಣವನೊಳ್ಪಿನಿಂದ ಎದೆತುಂಬಿ ಆತನನ್ನು "ಕಥಾನಾಯಕನಂ ಮಾಡಿ ಸಂದರ್ಜುನನೊಳ್ ಪೋಲ್ವ ಕಥಾಭಿತ್ತಿ"ಯನ್ನು ಆತ ಅಲ್ಲಿ ಎತ್ತಿಕೊಂಡಿದ್ದಾನೆ. ಆದರೂ ಪ್ರತಿನಾಯಕನ ಮಹತ್ತನ್ನು ದೃಷ್ಟಿಸುವಲ್ಲಿ ಮತ್ತು ಸೃಷ್ಟಿಸುವಲ್ಲಿ ಆತನ ಪ್ರತಿಭೆಯ ಹಸ್ತ ಕೃಪಣವಾಗಿಲ್ಲ, "ಕರ್ಣ ರಸಾಯನಮಲ್ತೆ ಭಾರತಂ" ಎಂದು ಮಹಾಕವಿ ಹೃದಯ ಆತನಿಗಾಗಿ ಮಿಡಿದಿದೆ.

ಒಂದು ದೃಷ್ಟಿಯಿಂದ ಇದು ಅಷ್ಟು ಮಹತ್ತರವಾಗಿ ನಮಗೆ ಕಾಣಲಾರದು. ಏಕೆಂದರೆ ಕರ್ಣನ ಕಥೆಯೇ ಅಂತಹದು. ವಿಧಿಯ ವಿನ್ಯಾಸದಿಂದ ಆತನು ಎದುರಿಸಬೇಕಾಗಿ ಬಂದ ವಿಚಿತ್ರಪ್ರಸಂಗಗಳ ಪರಿಣಾಮದ ದುರಂತ ಚಿತ್ರವನ್ನು ಕಂಡಾಗ ಎಂತಹವರಿಗೂ ಎದೆ ಮಿಡಿಯದಿರುವುದಿಲ್ಲ. ಆದರೆ ಕೇವಲ ಪಾಪಮಯವಾದ ಕಾರ್ಯನಿರ್ವಹಣೆಗಾಗಿಯೇ ಸೃಷ್ಟಿಯಾದ ಅಥವಾ ಅದೊಂದು ಕಾರ್ಯದಲ್ಲಿಯೇ ಪರ್ಯವಸಾನವಾಗಬಹುದಾದ ಅಲ್ಪವ್ಯಕ್ತಿಯ ಹೃದಯವನ್ನೂ ಹೊಕ್ಕು, ಆ ವ್ಯಕ್ತಿಯ ಜೀವಿತದ ಹಿನ್ನೆಲೆಯ ಬೆಳಕಿನಲ್ಲಿ ನಿಂತು, ಅದರ ಮನಸ್ಸಿನ ವಿವಿಧ ಭಾವಾನುರಾಗಗಳಿಗೆ ಕನ್ನಡಿಯನ್ನು ಹಿಡಿದು ಸಹೃದಯರ ಅನುಕಂಪೆಯ ಕಾಣಿಕೆಯನ್ನು ಪಡೆಯುವುದು ಸಾಮಾನ್ಯ ಪ್ರಜ್ಞೆಗೆ ನಿಲುಕದು. ಕುವೆಂಪುರವರ ಮಂಥರೆಯ ಪಾತ್ರದಿಂದ ಅಂತಹ ಅಸಾಮಾನ್ಯವಾದ ಕಲಾಚಿತ್ರ ನಿರ್ಮಿತವಾಗಿರುವುದನ್ನು ಕಾಣುತ್ತೇವೆ.

ವಾಲ್ಮೀಕಿ ರಾಮಾಯಣವನ್ನೋದಿದವರಿಗೆ 'ಮಂಥರೆ'ಯೆಂದ ಕೂಡಲೇ ಒಂದು ಚಿತ್ರ ಬರುತ್ತದೆ. ಕುಬ್ಜೆ, ಅಸುಂದರೆ, ವೃದ್ಧೆ, ಪಾಪದರ್ಶಿನಿ, ಆದರೆ ಕೈಕೆಯ ಹಿತೈಷಿಣಿ. ಈಕೆಯ ಪಾಪಕಾರ್ಯದ ಪರಿಣಾಮ ರಾಮಾಯಣದ ದಿಕ್ಕನ್ನೇ ಬದಲಾಯಿಸುವಂತೆ ಮಾಡುತ್ತದೆ. ಅದಕ್ಕಾಗಿಯೇ ಈಕೆಯ ಆಗಮನ, ಮತ್ತು ಅಲ್ಲಿಯೇ ಈಕೆಯ ಅಂತ್ಯ. ಈಕೆಯ ಪೂರ್ವಾಪರ ವಿಚಾರವಾಗಲಿ, ವ್ಯಕ್ತಿತ್ವದ ಸೂಕ್ಷ್ಮ ಚಿತ್ರವಾಗಲೀ ಕವಿಗೆ ಬೇಕಾಗಿಲ್ಲ.

ಶಿಲೆಯನ್ನು ಅರಸಿತಂದು, ಉಳಿ ಮೊದಲಾದ ಆಯುಧಗಳನ್ನು ಸಿದ್ಧಪಡಿಸಿಕೊಂಡು ಬೃಹದಾಕಾರದ ಶಿಲ್ಪವನ್ನು ಸ್ವಪ್ರತಿಭೆಯಿಂದ ನಿರ್ಮಿಸುವ ಶಿಲ್ಪಿ ಆ

ವಿಗ್ರಹದ ಕಾಲ್‌ಬೆರಳಿನ ಕಿಂಕಿಣಿಗೋ, ತೋರಹಾರದ ಕಿರುಮುತ್ತಿನ ಸೌಂದ ರ್ಯಕ್ಕೋ ಹೆಚ್ಚು ಗಮನವನ್ನು ಕೊಡದೇಹೋದರೆ ಅದು ಆತನ ಅಶಕ್ತತೆಯು ಚಿಹ್ನೆಯಲ್ಲ; ಕಲಾಯಾತ್ರೆಯಲ್ಲಿ ಉಂಟಾದ ಉತ್ಸಾಹದ ಪರಿಣಾಮ. ಆದರೆ ಒಮ್ಮೆ ನಿರ್ಮಿತವಾದ ಈ ಪ್ರತಿಮೆಯನ್ನೇ ಪ್ರತಿಮಿಸಲು ಯತ್ನಿಸುವ ಇನ್ನೊಬ್ಬ ಶಿಲ್ಪಿ 'ಕುಸರಿ'ಯ ಕಸೂತಿ ಕೆಲಸದಿಂದ ಅದನ್ನು ಸರ್ವಾಂಗ ಸುಂದರವನ್ನಾಗಿ ಮಾಡಿ ಅದರಲ್ಲಿ 'ತನ್ನತನ' ಒಂದನ್ನು ಪ್ರತಿಷ್ಠಿಸಿದರೆ ಅದೇ ಆತನ ಪ್ರತಿಭೆಗೆ ಭೂಷಣ, ನಿರ್ಮಿಸಿದುದಕ್ಕೆ ಸಾರ್ಥಕ; ಆಗ ಮಾತ್ರ ಅದೊಂದು ನೂತನಸೃಷ್ಟಿ. 'ಕಥೆ ನಿನ್ನದಾದೊಡಂ ಕೃತಿ ನನ್ನ ದರ್ಶನಂ . . .' ಎಂದು ವಾಲ್ಮೀಕಿಗೆ ವಂದಿಸಿ ರಾಮಾಯಣದ ಕಲಾಯಾತ್ರೆಯಲ್ಲಿ ತೊಡಗಿದ ಕುವೆಂಪುರವರು ಈ ಬಗೆಯ ನೂತನ ಸೃಷ್ಟಿಗೆ ಕಾರಣರಾಗಿದ್ದಾರೆ. ಅವರ ಈ ಸೃಷ್ಟಿಪ್ರತಿಭೆಯು ಒಂದಂಶ ಮಂಥರೆಯನ್ನೂ ಮೀಯಿಸಿದೆ.

ಮಂಥರೆ ತನ್ನ ಪಾಪಕರ್ಮದ ಅಪಖ್ಯಾತಿಯಿಂದ ಇಲ್ಲಿಯೂ ಮುಕ್ತವಾಗಿಲ್ಲ, ಮುಕ್ತವಾಗುವಂತೆಯೂ ಇಲ್ಲ. ಆದರೆ ಅದನ್ನು ನೋಡಿರುವ ದೃಷ್ಟಿ ಬೇರೆ ಯಾಗಿದೆ, ಅಂತೆಯೇ ಸೃಷ್ಟಿಯೂ ಬೇರೆಯೇ. ರಾಮಾಯಣದ ನೌಕೆಯನ್ನು ಅದ್ಭುತ ಸಾಹಸದ ರಸಪ್ರವಾಹದ ಕಡೆಗೆ ತಿರುಗಿಸುವ ವಿಧಿಯ ಒಂದು ಹುಟ್ಟಾಗಿ ಬರುತ್ತಾಳೆ ಮಂಥರೆ.

ವಾಲ್ಮೀಕಿಯ ರಾಮಾಯಣದಲ್ಲಿ ನಾವು ಮಂಥರೆಯನ್ನು ಮೊಟ್ಟಮೊದಲು ಕಾಣುವುದು ರಾಮನ ಯುವರಾಜ ಪಟ್ಟಾಭಿಷೇಕ ಸಿದ್ಧತೆಯ ನಂತರವೇ. ಆದರೆ ರಾಮಾಯಣದರ್ಶನದಲ್ಲಿ ಕಾವ್ಯದ ಪ್ರಾರಂಭದಲ್ಲಿಯೇ ಆಕೆಯನ್ನು ಕರೆದು ತಂದಿದ್ದಾರೆ. ಅತ್ಯಪೂರ್ವವಾದ ಸನ್ನಿವೇಶ ಒಂದರಲ್ಲಿ ಆಕೆಯ ಪರಿಚಯ ನಮ ಗಾಗುತ್ತದೆ.

ಒಂದು ಹುಣ್ಣಿಮೆಯ ರಾತ್ರಿ, 'ಅರಮನೆಯ ಉದ್ಯಾನ ಶಾದ್ವಲಶ್ಯಾಮ ವೇದಿಕೆಯಲ್ಲಿ, ರಾಣಿಯರ್ ತಮ್ಮ ಮಕ್ಕಳ್ವೆರಸಿ' ವಿಹರಿಸುತ್ತಿರಲು ಶಿಶುವಾದ ರಾಮನು ಬಾಂದಳದಲ್ಲಿ ತೇಲುತ್ತಿದ್ದ ಪೂರ್ಣಶಶಿಯನ್ನು ನೋಡಿ, ಅದನು ಬಯಸಿ, ಬೇಡಿ ಅಳತೊಡಗುವನು. ಸಂತೈಕೆಗಳೆಲ್ಲಾ ವ್ಯರ್ಥವಾದುವು. ಒಡವೆ ವಸ್ತು, ಭಕ್ಷ್ಯ ಭೋಜ್ಯ, ಹಣ್ಣು ಹಂಪಲುಗಳನ್ನೆಲ್ಲಾ ತಿರಸ್ಕರಿಸಿ ಕಣ್ಣು ಕೆಂಪಾಗುವ ವರೆಗೂ ಅತ್ತನು. ದಶರಥನೂ 'ಮರುಗಿದನು ಮಗನಾಶೆ ತನ್ನ ಬಲ್ಮೆಗೆ ಮೀರಿ ಕೈಗೂಡ ಲಸದಳಮಲಾ ಎಂದು' ಬಿಸುಸುಯ್ದನು. ರಾಮನ ರೋದನ ಒಂದೇ ಸಮನೆ ನಡೆದಿತ್ತು, ಎಲ್ಲರೂ ಮುಂಗಾಣದೆ ಕುಳಿತರು.

ಆ ವೇಳೆಗೆ ಸರಿಯಾಗಿ—

"...... ಬಂದಳ್ ಮುದುಕಿಯೊರ್ವಳಾ
ತಾಣಕ್ಕೆ, ಕಿಶೋರ ಭರತನನಾಂತು ಕೌಂಕುಳಲಿ.
ಕಂಡುದೆ ತಡಂ ಅಮಂಗಳವನೀಕ್ಷಿಸಿದಂತೆ
ಮೊಗಂ ಮುರಿದು ಮಾತು ನಿಲ್ಲಿಸಿದರನಿಬರುಮಲ್ಲಿ,.
ಕೈಕೆ ಹೊರತಾಗಿ.

ಯಾರಿವಳು? ಈಕೆಯ ಆಗಮನವೇ ಅಮಂಗಳಸ್ವರೂಪವೇಕೆ? ಏಕೆನ್ನುವುದಕ್ಕೆ ಈಕೆಯನ್ನೇ ನೋಡಿ:

ಕುಡುಬಿಲ್ಲು ಬಾಗಿದ ಮೆಯ್ಯ
ತೊನ್ನ ಬೆಳ್ಗಲೆವಿಡಿದ ಕರ್ರನೆಯ ಕುಬ್ಜತೆಯ,
ಗೂಳಿ ಹಿಣಿಲಿನವೋಲು ಗೂನುವುಬ್ಬಿದ ಬೆನ್ನ,
ಸುಕ್ಕು ನಿರಿನಿರಿಯಾಗಿ ಬತ್ತಿದ ತೊವಲ್‌ಪತ್ತಿ
ಬಿಗಿದೆಲ್ವುಗೂಡಿನಾ ಶಿಥಿಲ ಕಂಕಾಲತೆಯ,
ಪಲ್ಲುದುರಿ ಬೋಡಾದ ಬಚ್ಚುಬಾಯಿಯ, ಕುಳಿಯ
ಕೆನ್ನೆಗಳ, ದಿಟ್ಟಿಮಾಸಿದ ಕಣ್ಣಕೋಟರದ,
ಕೆರ್ಬುನ ಮೊರಡುಮೊಗದ, ಕೂದಲುದುರಿದ ಬೋಳು
ಪುರ್ಬಿನ ವಿಕಾರದಾ, ಬೆಳ್ವಕ್ಕಿ ತಿಪ್ಪಳಿಸೆ
ಮಂಡೆಯಂ ಮುತ್ತಿ ಕೆದರಿದ ಬೆಳ್ಳನೆಯ ನವಿರ,
ಅಸ್ಥಿಪಂಜರದಂತೆವೋಲಸ್ಥಿರಸ್ಥವಿರೆಯಂ . . ."

ಅಬ್ಬ! ಮಂಥರೆ! ಕುರೂಪತೆಯ ಪರಮಾವಧಿ. ವಾಲ್ಮೀಕಿಯ ಮಂಥರೆ ಇಂತಹ ಭೀಕರ ವಿಕಾರೆಯೆಂದೆನಿಸುವುದಿಲ್ಲ. ಆತ್ಮಸೌಂದರ್ಯದ ಜೊತೆಜೊತೆಯಲ್ಲಿಯೇ ಅಥವಾ ಅದಕ್ಕಾಗಿಯೇ ದೇಹವಿಕಾರ ಇಲ್ಲಿ ಹೆಚ್ಚಬೇಕಾಗಿ ಬಂದಿದೆ.

ದೇಹ ಇಷ್ಟು ವಿಕಾರವಾದರೂ ಆಕೆಯ ಮನಸ್ಸು ಕೋಮಲ. ರಾಮನು ಚಂದ್ರನನ್ನು ಬಯಸಿ ಅಳುತ್ತಿದ್ದರೆ ಆಕೆಯ ಮನ ಕರಗಿತು. ಆತನ ಅಸಾಧ್ಯವಾದ ಬಯಕೆಯನ್ನೂ ತಣಿಸುವ ಒಂದು ಉಪಾಯ ಆಕೆಯ ಬುದ್ಧಿಗೆ ಸ್ಫುರಿಸಿತು. ಅದರ ಬೆಂಬಲದಿಂದ ಆತನನ್ನು ಸಂತೈಸಲು ಬಂದಳು. ತನ್ನ ಮಡಲಿನಿಂದ ಕನ್ನಡಿಯನ್ನು ತೆಗೆದು ಕೈಕೆಯ ಕೈಲಿಟ್ಟು ತನ್ನ ಉಪಾಯವನ್ನು ಅರುಹಿದಳು. ಕೈಕೆ ಆ ಕನ್ನಡಿಯನ್ನು ರಾಮನ ಕೈಗೆ ಕೊಟ್ಟಳು. ರಾಮನು ಅದರಲ್ಲಿ ಚಂದ್ರನ ಪ್ರತಿಬಿಂಬವನ್ನು ಕಂಡು 'ಪಡೆದೆನಿಂದುವನೆಂದು ಕುಣಿಕುಣಿದು ನಲಿಯತೊಡಗಿದನು.' ತನ್ನ ಉಪಾಯ ಫಲಿಸಿದುದಕ್ಕಾಗಿ, ಅದಕ್ಕಿಂತ ಹೆಚ್ಚಾಗಿ ರಾಮನ ಮುಗ್ಧಸಂತೋಷವನ್ನು ಕಂಡು ಮುದಿ

ಗೂನಿಯ ಹೃದಯದಲ್ಲಿ ಸಂತಸ ಉಕ್ಕಿತು. ರಾಮನನ್ನು ಮುದ್ದಿಸಲು ತನ್ನ ಒಲವಿನ ತೋಳನ್ನು ಚಾಚಿದಳು. ಆ ಕೂಡಲೆ ಕೌಸಲ್ಯೆ :

"ಕಂದಂಗಮಂಗಳಂ. ಮುಟ್ಟದಿರ್ ಮುಟ್ಟದಿರ್ !
ಬೇಡವೇಡೆನ್ನುತೆ ನಿವಾರಿಸಿದಳಾಕೆಯಂ,
ಮುದಿ ಮಂಥರೆಯ ಮೈತ್ರಿ ಜಜ್ಜರಿತಮಪ್ಪಂತೆವೋಲ್."

ಅಯ್ಯೋ ದೊಡ್ಡಸ್ಥಿಕೆಯೇ, ಒಲ್ಮೆಗೆ ಪ್ರತಿಕಾಣಿಕೆ ಅಪಮಾನವೇ ? ಭರತನಿಗಿಲ್ಲದ ಅಮಂಗಳ ರಾಮನಿಗೆ ಮಾತ್ರಾ ಅಂಟಿಕೊಳ್ಳುತ್ತದೆಯೇ ? ಪಾಪ : ಮಂಥರೆಗೆ ಕಣ್ಬನಿ ಚಿಮ್ಮಿತು.

"ನಿಲ್ಲದಲ್ಲಿಂ ನಡೆದಳಯ್ ಭರತನಂ ಬಿಗಿದಪ್ಪಿ,
ತುಳಿದ ಸರ್ಪಿಣಿಯಂತೆ ಮುಳಿಸಿನುರಿಯಿಂ ಪೊಗೆದು,
ಸುಯ್ದು, ಹೆಡೆಯೆತ್ತಿ."

ಯಾವ ರಾಮನ ದುಃಖದಿಂದ ಮನಕರಗಿ, ಪ್ರೇಮದಿಂದ ಹೃದಯ ತುಂಬಿ ಆತನನ್ನು ಸಂತಯಿಸುವ ಉಪಾಯವನ್ನು ತಂದಿತ್ತು ರಕ್ಷಿಸಿದಳೋ, ಆ ರಾಮನನ್ನು ಮುಟ್ಟಿ ಮುದ್ದಿಸುವುದಕ್ಕೂ ಮಾರ್ಗವಿಲ್ಲವಾಯಿತು ; ಆ ರಾಮನ ತಾಯಿಂದಲೇ ಅವಮಾನದ ಅಗ್ನಿ ಹೃದಯವನ್ನು ದಹಿಸಿತು, ಒಡೆದು ನುಚ್ಚುನೂರಾಗಿಸಿತು. ಮುಂದೆ ರಾಮನ ವನವಾಸ ಪ್ರಯಾಣ ಸಮಯದಲ್ಲಿ ಬಿದ್ದು ಬಿದ್ದು ಅಳುವುದನ್ನು ನೋಡುವಾಗ ಈ ಚಿತ್ರವನ್ನೂ ಸ್ವಲ್ಪ ಜ್ಞಾಪಿಸಿಕೊಳ್ಳಬೇಕು. ಈ ಒಂದು ದೃಶ್ಯ ವಾಲ್ಮೀಕಿಯಲ್ಲಿಲ್ಲ.

ಈ ಮಂಥರೆಯ ಪೂರ್ವಾಪರಗಳೇನು? ಎಲ್ಲಿ ಹುಟ್ಟಿದಳು? ಎಲ್ಲಿ ಬೆಳೆದಳು? ಹೇಗೆ ಬಂದಳು ? ಈ ವಿಷಯುಗಳಲ್ಲಿ ವಾಲ್ಮೀಕಿ ಮೌನಿ. "ಜ್ಞಾತಿದಾಸೀ ಯತೋಜಾತಾ ಕೈಕೇಯ್ಯಾಸ್ತು ಸಹೋಷಿತ" ಕೈಕೆಯ ಬಂಧುಗಳಿಗೆ ದಾಸಿಯಾಗಿದ್ದಳು. ಎಲ್ಲಿಯೋ ಹುಟ್ಟಿದಳು, ಕೈಕೆಯ ಜೊತೆಯಲ್ಲಿಯೇ ಇರುವಳು ಎಂದು ಒಂದೇ ಮಾತಿನಲ್ಲಿ ಮುಕ್ತಾಯಮಾಡುತ್ತಾನೆ. ಆದರೆ ರಾಮಾಯಣದರ್ಶನದಲ್ಲಿ ಆಕೆಯ ಒಂದು ಪೂರ್ಣ ಚಿತ್ರ ನಮಗೆ ದೊರಕುತ್ತದೆ. ಮನೋವಿಜ್ಞಾನದ ಕುಂಚವೂ ಅಲ್ಲಿ ಕೆಲಸವನ್ನು ಮಾಡಿದೆ.

ಕೈಕೆಯ ತಂದೆಯೊಂದುದಿನ ಬೇಟೆಗೆ ಹೋಗಿ ಹಿಂದಿರುಗುತ್ತಿರಲು, ಒಂದು ಶಿಶುವಿನ ಕರುಣಾಕ್ರಂದನ ಆತನನ್ನು ತಡೆದು ನಿಲ್ಲಿಸಿತು. ಪೆತ್ತವರೂ ಪೇಸಿ ಬಿಸುಟು ಹೋಗುವಂತಹ 'ವಿಕೃತಿ ರೂಹುವೆತ್ತಂತಿರ್ದ' ಆ ದಸ್ಯುಶಿಶುವಿನ ಕರುಣಸ್ಥಿತಿಯಿಂದ ಆತನ ಬಗೆ ಕರಗಿತು. ಆ ಹೆಣ್ಣು ಶಿಶುವನ್ನು ಮನೆಗೆ ತಂದನು 'ವಿಧಿವಿಲಾಸದಲಿ.'

" ಬೆಳೆದುದು ಕೂಸು ಕುಳ್ಳಾಗಿ, ಗೂನಾಗಿ, ತೊತ್ತಾಗಿ, ಕರ್ರಗೆ, ಜನರ ಕಣ್ಗೆ ಹೇಸಿನಾಕೃತಿಯಾಗಿ " ರಾಜನ ಆಜ್ಞೆಯನ್ನು ಲೆಕ್ಕಿಸದೆ ಜನರು ಆಕೆಯನ್ನು ' ಥೂ ' ಎಂದು, ' ಛೀ ' ಎಂದು ತೊಲಗಿಸುವರು, ನಾಯ್ಮರಿಗಿಂತ ಕಡೆಯಾಗಿ ಕಾಣುವರು. ಹೀಗೆ ಮನುಷ್ಯನ ಎದೆಯೊಲವಿನ ಸೆಲೆಯನ್ನೇ ಕಾಣದೆ, ಕೇವಲ ಅತಿರಸ್ಕೃತ ಸನ್ನಿವೇಶದ ಅಸಹ್ಯ ಅಗ್ನಿಯಲ್ಲಿ ಬೆಳೆಯತೊಡಗಿದಳು. ಆಕೆಗೆ " ಮಂಥರೆಯೆಂದು ಪೆಸರ ನೆಸೆದರ್ ಮೊಗಕೆ ಕೆಸರನಿಡುವಂತೆ."

ಮಂಥರೆಯು ಹೀಗೆ ಭೀಷಣವಾದ ಏಕಾಂತವಾಸದಿಂದ ಕಾಲವನ್ನು ನೂಕುತ್ತಿರಲು ಕೇಕಯ ರಾಜಸತಿಗೆ ಕೈಕೆ ಜನಿಸಿದಳು. ರಾಜನು ಮಂಥರೆಯ ದುಸ್ಥಿತಿಯಿಂದ ಕರುಣೆಗೊಂಡು ಆ ಮಗುವನ್ನಾಡಿಸುವ ಕೆಲಸವನ್ನು ಆಕೆಗೆ ವಹಿಸಿದನು. ಮಂಥರೆಗೆ ಹೊಸ ಪ್ರಪಂಚದ ಉದಯವಾಯಿತು :

" ಮಳೆಹೊಯ್ದ ತೆರನಾಯ್ತು ಮಂಥರೆಯ ಮರುಧರೆಗೆ,
ಚೈತ್ರನಾಗಮವಾಯ್ತು ಮಂಥರೆಯ ಶಿಶಿರಕ್ಕೆ,
ಮಂಥರೆಯ ಬಾಳ್ನಿಶೆಗೆ ಶಶಿಯುದಿಸಿದಂತಾಯ್ತು,
ಮಂಥರೆಯ ಮೃತ್ಯುವಿಗೆ ತಾನಮೃತಸೇಚನೆಯಾಯ್ತು,
ಶುಷ್ಕತಾ ಶೂನ್ಯತೆಯೆಳೊಲ್ಮೆ ಸಂಚರವಾಯ್ತು,
ಬದುಕು ಸಾರ್ಥಕಮಧುರವಾಯ್ತು ಶಿಶುಸನ್ನಿಧಿಯ
ಪ್ರೇಮ ಸೌಂದರ್ಯ ಮಹಿಮೆಯಲಿ."

ಮಗುವಿನ ಲಾಲನೆ ಪಾಲನೆಗಳೇ ಆಕೆಯ ಜೀವಿತದ ಸರ್ವಸುಖಗಳೂ ಆದುವು. ' ಹೃದಯದಲ್ಲಿ ಸುಪ್ತವಾಗಿದ್ದ ಚೆಲುವು ಒಲವುಗಳ ಚಿಲುಮೆ ಕಣ್ದೆರೆಯಿತು. ತನ್ನ ಅಪಮಾನ ಅನ್ಯಾಯ ಎಲ್ಲವನ್ನೂ ಮರೆತು ಕೈಕೆಯಲ್ಲಿಯೇ ಸಾಯುಜ್ಯ ಹೊಂದಿದಳು.

ಕಾಲ ಉರುಳಿತು. ಮಂಥರೆಗೆ ಮುಪ್ಪಡಿಸಿತು. ವಿಕಾರ ಇನ್ನೂ ಹೆಚ್ಚಿತು. ಆದರೆ ಕೈಕೆಯು ಮಾತ್ರ ಶೈಶವದ ಕೃತಜ್ಞತೆಯ ಪ್ರೇಮದಿಂದಲೇ ಮಂಥರೆಯನ್ನು ಆದರಿಸುತ್ತಿದ್ದಳು. ದಶರಥನ ರಾಣಿಯಾಗಿ ಅವಳು ಅಯೋಧ್ಯೆಗೆ ಬರುವಾಗ ಮಂಥರೆಯೂ ಅವಳನ್ನು ನೆರಳಿನಂತೆ ಹಿಂಬಾಲಿಸಿದಳು.

ಅಯೋಧ್ಯೆಯಲ್ಲಿಯೂ ಮಂಥರೆ ತಿರಸ್ಕೃತ ಜೀವನವನ್ನೇ ಬಾಳಬೇಕಾಯಿತು. ಸಪಿಸುವರು, ಹೊರದಬ್ಬುವರು, ಗಾಳಿ ಸೋಕುವುದೆಂದು ಹೇಸುವರು, ಅಸಹ್ಯಪಡುವರು. " ಮನ್ನಣೆ ಕುರೂಪತೆಗೆ ತಾನೆಲ್ಲಿ ? " ಕೌಸಲ್ಯೆ ಸುಮಿತ್ರೆಯರಂತೂ ಮಂಥರೆ ಬಳಿಯಲ್ಲಿದ್ದರೆ ಕೈಕೆಯನ್ನು ಬಳಿಸೇರಿಸಲೂ ಹಿಂಜರಿಯುತ್ತಿದ್ದರು.

ಹೀಗೆ ಆ ಆಜನ್ಮ ತಿರಸ್ಕೃತೆ ಅವಮಾನವನ್ನೇ ಉಂಡುಟ್ಟು ಇರುವಲ್ಲಿ ಆಕೆಯ ಜೀವನದಲ್ಲಿ ಮತ್ತೊಮ್ಮೆ ಸೂರ್ಯೋದಯವಾಯಿತು. "ಬೆಸಲೆಯಾದಳು ಕೈಕೆ ಭರತನಂ". ಮಂಥರೆಗೆ ಮೂರನೆಯ ಕಣ್ ಮೂಡಿದಂತಾಯ್ತು. ಭರತನನ್ನು ಹಗಲಿರುಳು ಅಗಲದೆ ಸಲಹಿದಳು 'ಹಡೆದ ತಾಯಿಯೆ ನಾಣ್ಬುವೋಲಂತೆ'; ಜಿಪುಣ ಬಡವಂ ಕಡವರವನಪ್ಪಿಕೊಳ್ವಂತೆ."

ಮಂಥರೆಯ ಮಾತೃವಾತ್ಸಲ್ಯದ ಹೃದಯ ಭರತನನ್ನಲ್ಲದೆ ಇತರರನ್ನು ಒಳಕೊಳ್ಳದಷ್ಟು ಕಿರಿದಾಗಿರಲಿಲ್ಲ. ರಾಮನಿಗೂ ಅಲ್ಲಿ ಅವಕಾಶವಿತ್ತು, ಹಾಗೆಯೇ ಲಕ್ಷ್ಮಣ ಶತೃಘ್ನರಿಗೂ ಸ್ವಾಗತವಿಲ್ಲದಿರಲಿಲ್ಲ. ಆದರೆ ರೂಪಾರಾಧಕರಾದ ಆ ನಾಗರಿಕರು ಅವಳ ವಿಕಾರಾಕೃತಿಯ ಅಂತರಾಳದಲ್ಲಿರುವ ಪ್ರೇಮಪೂರಿತ ಹೃದಯವನ್ನು ಅರಿಯಲಾರದೆ ಹೋದರು. 'ಮುಟ್ಟದಿರ್ ಮುಟ್ಟದಿರ್, ಕದಂಗಮಂಗಳಂ' ಎಂಬ ದೊಡ್ಡಸ್ತಿಕೆಯ ದೊಡ್ಡ ಗೋಡೆಯನ್ನು ಕಟ್ಟಿಕೊಂಡರು. ಮಂಥರೆಯ ಹೃದಯ ಮಿಡಿಯಿತು, ಸಿಡಿಯಿತು. ಎಲ್ಲೆಡೆಯ ಪ್ರೇಮ ಭರತ ಕೈಕೆಯರಲ್ಲಿಯೇ ಕೇಂದ್ರೀಕೃತವಾಯಿತು. ಕೈಕೆ ಭರತರೇ ಆಕೆಯ ಸರ್ವ ಪ್ರಪಂಚ. ಅವರಿಗಾಗಿಯೇ ಈ ಸರ್ವ ಪ್ರಪಂಚ. ಅವರಿಗಾಗಿಯೇ ಈ ರಾಜ್ಯ, ಈ ರಾಜ, ಈ ಭೂಮಿ, ಸರ್ವವೂ ಅವರೇ.

"ಹಾ ! ಮಂಥರೆಯ ಈ ಮಮತೆಯಾವರ್ತದೊಳ್
ಸುಟ್ಟುರೆಗೆ ಧೂಳಿ ತರಗೆಲೆ ತಿರ್ರನೆಯೆ ಸುತ್ತುವೋಲ್
ಸಿಲ್ಕಿ ಘೂರ್ಣಿಸದಿಹುದೆ ಪೇಳ್ ತ್ರೇತಾಮಹಾಯುಗಂ !"

ಇದಿಷ್ಟು ವಾಲ್ಮೀಕಿ ರಾಮಾಯಣದಲ್ಲಿಲ್ಲದ ಹಿನ್ನೆಲೆ. ಇದರ ಮೇಲೆ ನಿಂತು, ಮತ್ತು ಇದರ ಬೆಳಕಿನಲ್ಲಿ ನಾವು ಈಕೆಯ ಮುಂದಿನ ಕಾರ್ಯಗಳನ್ನು ನೋಡಿದಾಗ ಈಕೆ ನಮ್ಮ ಮೆಚ್ಚುಗೆಗಲ್ಲದಿದ್ದರೂ ತಿರಸ್ಕಾರಕ್ಕಂತೂ ಪಾತ್ರಳಾಗುವುದಿಲ್ಲ; ರಾಮಚಂದ್ರನ ವನವಾಸಕ್ಕೆ ಕಾರಣಳಾಗಿ ಸರ್ವರನ್ನೂ ದುಃಖದಲ್ಲಿ ಮುಳುಗಿಸಿದರೂ ನಮ್ಮ ಕೋಪಕ್ಕೆ ಕಾರಣಳಾಗುವುದಿಲ್ಲ, ಅನುಕಂಪೆಗೆ ಪಾತ್ರಳಾಗುತ್ತಾಳೆ. ಅಗೋಚರವಾದ ವಿಧಿಯ ಕೈವಾಡವನ್ನು ನಾವಲ್ಲಿ ಕಾಣುತ್ತೇವೆ. ಎಲ್ಲಿಯೋ ಹುಟ್ಟಿ, ಹೇಗೋ ಬೆಳೆದು, ಯಾರದೋ ಸುಖಕ್ಕಾಗಿ ಮಂಥರೆಯು ಮಾಡುತ್ತಿರುವ ಸಾಹಸವನ್ನು ನೋಡಿದರೆ "ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ" ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ರಾಮನ ವನವಾಸಕ್ಕೆ ಕಾರಣವಾದುದು ಇದರ ಕೈವಾಡವೇ. ಇದು ಮಂಥರೆಯನ್ನು ಒಂದು ಆಯುಧವನ್ನಾಗಿ ಉಪಯೋಗಿಸಿಕೊಂಡಿತು ಅಷ್ಟೆ. ಅದರ ಆಣತಿಯಂತೆ:

"ಮಥಿಸಿದುದು ದಶರಥನ ವಿಧಿ ಮಂಥರೆಯ ಮನದಿ
ತನ್ನ ತಂತ್ರದ ಕೃತಿಯನಾ ಇರುಳ್ ಕನಸಿನಲಿ."

ಆ ಕನಸಿನ ಮರುಕ್ಷಣದಲ್ಲಿಯೇ ರಾಮನ ಪಟ್ಟಾಭಿಷೇಕದ ಕಟುವಾದ ಸತ್ಯ ಆಕೆಗೆ ತಿಳಿದುಬರುತ್ತದೆ. ತನ್ನ ಭರತನಿಗೆ ಕೇಡು ತಟ್ಟುವುದೆಂದು ಪಾಪ! ಆ ಮುದಿ ಮನಸ್ಸು ನಿರ್ಧರಿಸುತ್ತದೆ. "ಹೃದಯವೊಡೆದಂತೆ ತತ್ತರಿಸಿ" ಕೈಕೆಯ ಬಳಿಗೆ ಬರುತ್ತಾಳೆ. "ಓ ಕೈಕೆ . . . ಕೆಟ್ಟೆ ನೀಂ, ಕೆಟ್ಟೆ ನಾಂ, ಹಾ! ಭರತ! ಭರತ! ಎಲ್ಲಿಹಯ್, ಎಲ್ಲಿಹೆಯೊ ಇಂದು? ಬಾ ಬೇಗ ಬಾ," ಎಂದು ದೊಪ್ಪನೆ ಪ್ರಜ್ಞೆತಪ್ಪಿ ಬೀಳುತ್ತಾಳೆ.

ವಾಲ್ಮೀಕಿಯ ರಾಮಾಯಣದಲ್ಲಿ ಈ ತನ್ಮಯತೆಯ ವೇದನೆಯಿಲ್ಲ, ಕೈಕೆಯ ಹಿತಕ್ಕಾಗಿಯೇ ಅಲ್ಲಿಯೂ ಈಕೆ ಪಾಪಕಾರ್ಯೋದ್ಯುಕ್ತಳಾದರೂ ಇಲ್ಲಿ ಬರುವಂತಹ ಪ್ರೇಮೋನ್ಮಾದದಿಂದ ಪ್ರೇರಿತವಾದ ಅಮರಚಿತ್ರವಿಲ್ಲ, ಅಸೂಯೆಯಿಂದ ಉಂಟಾದ ಹಠಸ್ವಭಾವ ಅಲ್ಲಿ ಎದ್ದುಕಾಣುತ್ತದೆ.

ತನ್ನ ಹೃದಯ ತುಂಬಿ ಬಂದ ಆವೇಶದ ವಾದದಿಂದ ಕೈಕೆಯನ್ನು ಗೆಲ್ಲುತ್ತಾಳೆ; ಆಕೆಯ ಮನಸ್ಸನ್ನು ಕಲುಷಿತವನ್ನಾಗಿ ಮಾಡುತ್ತಾಳೆ. "ಭರತನೆಯೆ ದಿಟದಿಂದೆಯುಂ ಜೇಷ್ಠನ್" ಎಂಬ ಅಸ್ತ್ರ ಕಪಟವಾದಕ್ಕಾಗಿಯೋ ಅಥವಾ ನಿಜವಾದ ತಿಳುವಳಿಕೆಯೋ ತಿಳಿಯದು. ವಾಲ್ಮೀಕಿಯ ಮಂಥರೆಗೆ ಮಾತ್ರ ಗೊತ್ತು. ಭರತನು ಪ್ರತ್ಯಾಸನ್ನನೇ ಹೊರತು ಜೇಷ್ಠನಲ್ಲ ಎಂದು. ಅಂತೂ ಮಂಥರೆಯ ಪ್ರೇಮಖಡ್ಗ ಕೈಕೆಯ ಹೃದಯವನ್ನು ಹೊಕ್ಕಿತು. "ಭರತನಂ ರಾಮಂಗೆ ತೊಳ್ತುಗೆಯ್ಸದೆ ಪಳುವಕಾದೊಡಂ ಕಳುಹು, ದಯೆದೋರು ನಾನವನೊಡನೆ ಪೋದಪೆನ್ ಶುಶ್ರೂಷೆಗೆಯ್ಯೆ, ಭಿಕ್ಷೆಯಿದೆನಗೆ ನಿನ್ನಿಂದೆ" ಎಂಬ ಆಕೆಯ ಬೇಡಿಕೆ ಕೈಕೆಯನ್ನು ಕರಗಿಸಿದುವು, ತಿರುಗಿಸಿದುವು. "ಆಕೆಯಂ ತೆಗೆದಪ್ಪಿದಳ್ ಕೈಕೆ ಮುಳುಗುವಾತಂ ಪ್ರಾಣರಕ್ಷಣೆಗೆ ಮೊಸಳೆಯಂ ತಬ್ಬುವೋಲಂತೆ."

"ಮೇಲೇಳು ಕಾರ್ಯಸಾಹಸಿಯಾಗು" ಎಂದು ಮಂಥರೆ ಕೈಕೆಯನ್ನು ತಿವಿದೆಬ್ಬಿಸಿ ದಶರಥನು ಹಿಂದೆ ಕೊಟ್ಟ ಭಾಷೆಯನ್ನು ಜ್ಞಾಪಿಸಿಕೊಡುತ್ತಾಳೆ. ಮತ್ತು

". . . ನಿನ್ನಾ ಕುಮಾರಂಗೆ ನೆಲದ ಸಿರಿಯುಂ
ಪಟ್ಟಮಹಿಷಿಯ ಕೌಸಲೆಯ ಕುವರ ರಾಮಂಗೆ
ಪದಿನಾಲ್ಕುವರ್ಷಂಬರಂ ವಿಪಿನಯಾತ್ರೆಯುಂ
ಜೋಡಿಗೊಳ್ಳುವ ತೆರದಿನೆಸಗವೇಳ್ಕುಂ . . ."

ಎಂದು ಉಪಾಯವನ್ನು ಪ್ರತಿಷ್ಠಿಸಿ "ಕೋಪಗೃಹಮಂ ಸೇರ್ದು ನೆರವೇರುವನ್ನೆಗಂ ನಿನ್ನರಕೆ ಹೊರಬಾರದಿರ್" ಎಂದು ಎಚ್ಚರಿಸಿ "ಪೋದಳತ್ತಳ್ ಕುಬ್ಜೆ."

ಇತ್ತ ಇಡೀ ರಾಮಾಯಣವೇ ಮಂಥರೆಯ 'ಮಮತೆಯ ಸುಳಿ'ಯ ಆವರ್ತದಲ್ಲಿ ಸಿಕ್ಕು ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ಗಿರಗಿರನೆ ತಿರುಗಿ ತತ್ತರಿಸ ತೊಡಗಿತು. ಸಿಂಹಾಸನಾರೋಹಣ ಸಿದ್ಧನಾಗಿದ್ದ ರಾಮಚಂದ್ರ, ವಲ್ಕಲವಸ್ತ್ರ ಧಾರಿಯಾಗಿ ವನಪ್ರಯಾಣಸನ್ನದ್ಧನಾಗಬೇಕಾಯಿತು. ದಶರಥನ ಪ್ರಾಣಪಕ್ಷಿ ಪುತ್ರಶೋಕಾಗ್ನಿಯ ಜ್ವಾಲೆಯಲ್ಲಿ ಸಿಕ್ಕು ಉರಿದು ಭಸ್ಮವಾಗಿಹೋಯಿತು. ಮಹದಾನಂದದ ಕನಸಿನಲ್ಲಿದ್ದ ರಾಜಮಂದಿರದ, ರಾಜಧಾನಿಯ ಕನಸು ಸಿಡಿದೊಡೆ ಯಿತು. ಶೋಕಸಾಗರದಲ್ಲಿ ಮುಳುಗಿ ದಿಕ್ಕೆಟ್ಟಿತು. ಭರತ ಶತ್ರುಘ್ನರು ರಾಜಧಾನಿಗೆ ಹಿಂದಿರುಗಿ ಬಂದರು; ಶೋಕಮೂಕರಾಗಿ ಮುಂಗಾಣದಾದರು—ಈ ಒಂದು ಗಭೀರ ಭೀಷಣಪರಿಸ್ಥಿತಿಯಲ್ಲಿ ಮಂಥರೆ ಮತ್ತೆ ನಮ್ಮೆದುರು ಬರುತ್ತಾಳೆ.

ವಾಲ್ಮೀಕಿಯ ಮಂಥರೆ ಈ ಸನ್ನಿವೇಶದಲ್ಲಿ ನಮ್ಮ ತಿರಸ್ಕಾರಕ್ಕೆ ಪಾತ್ರ ಳಾಗುತ್ತಾಳೆ. ಆಕೆಯ ಸ್ವಾರ್ಥಮಯ ಆಂತರಿಕ ವಿಕೃತಿಯ ಮುಂದೆ, ಈ ಬಾಹ್ಯ ವಿಕೃತಿಯೂ ಅಲ್ಪವೆನಿಸುತ್ತದೆ. ತನ್ನ ಪಾಪಕಾರ್ಯದಿಂದುಂಟಾದ ಭಯಂಕರ ಪರಿಣಾಮದ ಯೋಚನೆಯೇ ಆಕೆಗಿಲ್ಲ. ಸರ್ವಾಭರಣಭೂಷಿತಳಾಗಿ, ಚಂದನ ಸಾರಾದಿಗಳಿಂದ ಅಲಿಪ್ತ ಕುಬ್ಜಗಾತ್ರಳಾಗಿ, ಸಖಿಯರಿಂದ ಸುತ್ತುವರಿಯಲ್ಪಟ್ಟು ಬಹು ಸಂತೋಷದಿಂದ ಬರುತ್ತಾಳೆ. ಹಗ್ಗಗಳಿಂದ ಬಂಧಿತವಾದ ಹೆಣ್ಣುಕೋತಿ ಯಂತೆ ("ರಜ್ಜು ಬದ್ಧೇವ ವಾನರೀ . . ."), ಸೇವಕರು ಆಕೆಯನ್ನು ಹಿಡಿದುತಂದು ಶತ್ರುಘ್ನನಿಗೆ ಒಪ್ಪಿಸುತ್ತಾರೆ. ಶತ್ರುಘ್ನನು ಎತ್ತಿ ಆಕೆಯನ್ನು ನೆಲದಮೇಲೆ ಕುಕ್ಕಿ ಆಕೆಗೆ ಯೋಗ್ಯವಾದ ಶಿಕ್ಷೆಯನ್ನು ಕೊಡುತ್ತಾನೆ. ಕಿಟಾರನೆ ಕಿರುಚುತ್ತ ಹೊರಟು ಹೋಗುತ್ತಾಳೆ. ಮುಗಿಯಿತು ಆಕೆಯ ಗತಿ, ಆಕೆಯನ್ನು ನಾವು ಮತ್ತೊಮ್ಮೆ ಕಾಣುವಂತೆಯೂ ಇಲ್ಲ, ಮುಂದಿನ ಗತಿಯನ್ನು ತಿಳಿಯುವಂತೆಯೂ ಇಲ್ಲ.

ಆದರೆ ರಾಮಾಯಣದರ್ಶನದಲ್ಲಿ ಈ ಭಾಗ ಬಹಳ ಮನೋವೇಧಕವಾಗಿ ಬಂದಿದೆ. ಮಾತುಲನ ಮನೆಯಿಂದ ಬಂದ ಭರತನ ಆಗಮನವಾರ್ತೆಯಿಂದ ಮಂಥ ರೆಯ ಮಮತೆಯ ಹೃದಯ ಉಬ್ಬಿಹೋಗಿದೆ. ಆತನ ಮೈದಡವಬೇಕೆಂಬ ಸಂಭ್ರಮದ ಮುಗ್ಧ ಉತ್ಸಾಹದಿಂದ ಓಡಿಬರುತ್ತಾಳೆ. ಶತ್ರುಘ್ನ ಮೊದಲು ಕಣ್ಣಿಗೆ ಬೀಳುತ್ತಾನೆ. "ಭರತನೆಲ್ಲಿದನಯ್ಯ" ಎಂದು ಕೇಳುತ್ತಾಳೆ, ಅಡವಿಗಿಚ್ಚನ್ನು ತೊಡೆಯೇರಲಾಹ್ವಾನಿ ಸಿದ ತರಗೆಲೆಯಂತೆ ಆಕೆಯ ಸ್ಥಿತಿಯಾಗುತ್ತದೆ. ಶತ್ರುಘ್ನನು ಆಕೆಯನ್ನು ಕಂಡೊಡನೆಯೆ ಅವಳ ಪಾಪಕಾರ್ಯ ಸ್ಮರಣೆಯಿಂದ ಕೋಪೋದ್ರಿಕ್ತನಾಗಿ :

"ಕೇಶಹಸ್ತವನಿಳ್ದು ಕಲ್ನೆಲಕೆ ಕುಕ್ಕಿದನ್,
ಮೆಯ್ ಪನಿಯಲಿಕ್ಕಿದನ್, ಗೂನ್ ಬಿರಿಯಲೊಕ್ಕಿದನ್"

ಮಂಥರೆ ಕರ್ಕಶವಾಗಿ ಚೀರಿದಳು. ಇತ್ತಕಡೆಗೇ ಬರುತ್ತಿದ್ದ ಭರತನಿಗೆ ಆಕೆಯ ಚೀತ್ಕೃತಿ ಕೇಳಿಸಿತು

"ಪೆತ್ತ ತಾಯ್ಗಿರ್ಮಡಿಯೊಲುಮೆವೆತ್ತು, ಕೂಸಿಂದೆ
ಕೌಮಾರದನ್ನೆಗಂ, ಕಟ್ಟಿ ತನ್ನಳ್ಕರೆಯ
ತೊಟ್ಟಿಲನದರೊಳಿಟ್ಟು ಜೋಗುಳದುಲಿಗೆ ತೂಗಿ,
ನಿಚ್ಚಮುಂ ಸಾಕಿ ಬೆಚ್ಚಗೆ ಸಲಹಿದಾಕೆಯಾ
ಮಂಥರೆಯ ನೀಳ್ದ ಗೋಳ್ದನಿಯ ಕೇಳ್ದುದೆ ತಡಂ
ಕರುಳುರಿದುದೆರ್ದೆ ಕೊರೆದುದಯ್ ಕರುಣೆ ಭರತಂಗೆ!"

ಭರತ ಓಡಿಬಂದನು. "ಕಂಡನು ಗೂನಿಯುಂ ಬಡಿವ ಶತ್ರುಘ್ನನಂ."

ಮಂಥರೆ ಭರತನನ್ನು ನೋಡಿದಳು. ಯಾರ ಸೌಖ್ಯವನ್ನು ಕಣ್ಣುತುಂಬಾ ಕಾಣಬೇಕೆಂಬ ಏಕೈಕ ಉದ್ದೇಶಕ್ಕಾಗಿ ಈ ಮಹಾಸಾಹಸ ಕಾರ್ಯಕ್ಕೆ ಉದ್ಯುಕ್ತಳಾಗಿದ್ದಳೋ, ಯಾರ ಹಿತವೇ, ಯಾರ ದರ್ಶನವೇ, ಯಾರ ಒಂದು ಕರುಣೆಯ ಮಾತೇ ತನ್ನ ಜೀವಿತದ ಸರ್ವಸ್ವವೋ ಅಂತಹ ಭರತಭಾಸ್ಕರನನ್ನು ಆ 'ಪ್ರೇಮ ರಾಹು' ನೋಡಿದಳು. 'ಅಯ್ಯೋ' ದಮ್ಮಯ್ಯಾ ಬಾರಣ್ಣಯ್ಯ ರಕ್ಷಿಸೋ ಎಂದು ಕೈನೀಡಿ ಓಡಿಬಂದಳು, ಆತನ ಮರೆಹೊಗುವುದಕ್ಕಾಗಿ.

ಭರತನಿಗೆ ಆಕೆಯ ಪಾಪಕಾರ್ಯದ ನೆನಹು ಮರುಕೊಳಿಸಿತು. ಮನಸ್ಸಿನ ಗುರಿ ಬೇರೆಯಾಯಿತು. ಕರುಣೆಯನ್ನು ಓಡಿಸಿ ಕೋಪ ಆಕ್ರಮಿಸಿತು "ತೊಲಗೆಲೆ ಕುರೂಪಿ, ಓ ತೊಲಗು ಕಣ್ಬೊಲದಿಂದೆ, ತೊಲಗಾಚೆ ಪಾಪಿ, ಬಳಿಸಾರದಿರ್ ನಿಲ್ಲದಿರ್" ಎಂದು ಗುಡುಗಿ ಶತ್ರುಘ್ನನನ್ನು ಕರೆದುಕೊಂಡು "ಪಿಂತಿರುಗಿ ನೋಡದೆಯೆ ನಡೆದನಲ್ಲಿಂದೆ" ಮಂಥರೆ "ಗುಂಡುಬಡಿದಂತೆ ಕೆಡೆದಳವನಿಯಲಿ."

ಆಯಿತು. ಮಂಥರೆಯ ಸರ್ವಸ್ವವೂ ಸೂರೆಹೋಯಿತು. ಆಕೆಯ ಬಾಳ ದೋಣಿಯ ತಳ ಫಕ್ಕನೆ ಕಳಚಿಬಿತ್ತು. ಜನಿಸಿದಂದಿನಿಂದಲೂ ಜೀವನದ ಸುಖದಿಂದ ವಂಚಿತಳಾಗಿದ್ದ ಆ ದಾಸಿ, ಆ ಆಜನ್ಮತಿರಸ್ಕೃತೆ, ಪರರ ಸುಖದಲ್ಲಿಯೇ ತನ್ನ ಸುಖವನ್ನು ಕಂಡುಕೊಂಡ ಆ ಕುಬ್ಜೆ, ತನ್ನ ನೆಚ್ಚಿನ ನೇಹದ ಮುದ್ದೆ, 'ತನ್ನ ಮೆಚ್ಚಿನಾಕೆಯ ಶಿಶು, ಭರತನ ಹಿತವನ್ನಲ್ಲದೆ ಇನ್ನಾವ ಸ್ವಾರ್ಥವನ್ನು ಬಯಸಿದ್ದಳು? ಆದರೆ ಆ ತನ್ನ ಭರತನ ಅಕ್ಕರೆಯೇ ಕಿಚ್ಚಾದುದನ್ನು ಕಂಡು ಆಕೆಯ ಆತ್ಮ "ಬೂದಿಯಾಯ್ತುಳ್ಕೆಯೋಲುರಿದುರಿದು ಭರತನಾಗ್ರಹ ಗ್ರಹದ ಘಾತಕ್ಕೆ'

". . . , . . ಓ ಪತಿತೆ
ಓ ಕುಬ್ಜೆ, ಓ ಮಂಥರೆಯೆ ಮರುಗುವೆನ್ ನಿನಗೆ
ಕವಿ ಸಹಜ ಕರುಣೆಯಿಂ. ಲೋಕಕ್ರೋಧ ಮದಹಸ್ತಿ
ಪದದಲನ ರೋಷದಾವಾಗ್ನಿಗಾಹುತಿಯಾಗಿ
ಬಿಳ್ದ ನಿನ್ನಾ ಭಸ್ಮರಾಶಿಯಂ ತೊಳೆವುದಿದೊ
ಕಣ್ಗಂಗೆ ಕಾವ್ಯಮಹಿಮಾ ಸಿಂಧು ತೀರ್ಥಕ್ಕೆ !"

ಎಂದು ಕವಿಹೃದಯ ಮಿಡಿಯುತ್ತದೆ. ಅಂತೆಯೇ ಸಹೃದಯನ ಹೃದಯವೂ ಮರುಗುತ್ತದೆ, ಕರಗುತ್ತದೆ, ಕಂಬನಿಯನ್ನು ಮಿಡಿದರೂ ಅಚ್ಚರಿಯಿಲ್ಲ.

ವಿಶಾಲವಾದ ಈ ವಿಶ್ವದಲ್ಲಿ ಆಕೆಯನ್ನು ಬಳಿಸೇರಿಸುತ್ತಿದ್ದವರು ಎರಡು ಜೀವಗಳು ಮಾತ್ರ. ಒಂದು ಕೈಕೆ, ಇನ್ನೊಂದು ಭರತ. ಈ ಇಬ್ಬರನ್ನು ಕಳೆದು ಕೊಂಡ ಮುದಿಜೀವ ಎಲ್ಲಿ ಬಾಳಬೇಕು ? ಹೇಗೆ ಬಾಳಬೇಕು ? ಏಕೆ ಬಾಳಬೇಕು ? ಮುಂದೆ ಆಕೆಯ ಗತಿಯೇನು ?

ಭರತ, ಶತ್ರುಘ್ನರು ಅಲ್ಲಿಂದ ತೆರಳಿದ ಮೇಲೆ ಬಹಳ ಹೊತ್ತು ಅಲ್ಲಿಯೇ ಬಿದ್ದಿದ್ದಳು. ಪಸಿಯ ಗಾಯಂಗಳಿಂ ಬಿಸಿಯಾರ್ದ ನೆತ್ತರಂ ಸೋರಿ ಭೀಕರಮಾದ 'ತನ್ನ ವಿಕೃತಗಾತ್ರವನ್ನು ಹೊತ್ತುಕೊಂಡು ಆ 'ಪ್ರೇಮಭೈರವಿ' ಮೇಲೆದ್ದಳು. "ದೃಢಮನದ ಹೆಡೆಯೆತ್ತಿ ತನ್ನ ನಂಜಂ ತಾನೆ ಹೀರಲೆಳಸುವ ಕಾಳಸರ್ಪಿಣಿಯ ತೆರದಿ." ಭರತನ ಮೇಲೆ ಆಕೆಗೆ ಸ್ವಲ್ಪವಾದರೂ ಕೋಪವಿಲ್ಲ. ತನ್ನ ಕಾರ್‍ಯದಿಂದ ಆತ ಸಂತೋಷ ಸಾಗರದಲ್ಲಿ ಮುಳುಗುವನೆಂದು ಆಕೆ ಬಗೆದಿದ್ದಳು. ಆದರೆ ಭರತನಿಗೆ ಮಮತೆಯ ಬದಲು ಕೋಪ, ಸಂತೋಷದ ಬದಲು ದುಃಖವಾದುದನ್ನು ಕಂಡು ಆಕೆಗೆ ಎದೆಯೊಡೆಯಿತು. ಭರತನನ್ನು ಏನಾದರೂ ಮಾಡಿ ಮತ್ತೆ ಸಂತೋಷಗೊಳಿಸಬೇಕೆಂಬ ದೃಢನಿಶ್ಚಯ ಹೆಡೆ ಎತ್ತಿತು.

". . . , . . ಮತ್ತೆ ರಾಮನಂ
ಮನೆಗೆ ಕರೆತಂದೆನಾದೊಡೆ, ಕಂದ ಭರತಂಗೆ
ಮುದವಪ್ಪುದಪ್ಪುದಂತೆಯೆ ಕೈಕೆಗುತ್ಸವಂ."

ಎಂದು ನೆನೆಯುತ್ತ ರಾಮನ ಅನ್ವೇಷಣೆಗೆ ಹೊರಟಳು, ಮಂಥರೆ "ಪುಣ್ಯಾದನ್ವೇಷಣೆಗೆ ಪೋಪ ಪಾಪದ ತೆರದಿ"

ದಶರಥನ ದಹನಕ್ರಿಯೆಯ ದುಃಖದರ್ಶನಕ್ಕಾಗಿ ಪ್ರೇತವನಕ್ಕೆ ತೆರಳಿದ್ದ ಮಂದಿ ಈಕೆಯನ್ನು ಕಂಡರು. "ಕಲ್ ಮಣ್‌ಗಳಿಂದಿಕ್ಕಿದರ್ ಕೆಲರುಗುಳಿದರ್ ಮೊಗಕೆ." ಆದರೂ ಆ ಮುದುಕಿ "ಪರಿದರುವೆಯೇರ್ಗಳಿಂ ಸುರಿವ ನೆತ್ತರ್ವೆರಸಿ"

ಪಿಟ್ಟೆನ್ನದೆ ಮುಂದೆ ಮುಂದೆ ನಡೆದಳು. "ಹಾ ಜೀವನದೊಳೆನಿತೆನಿತು ದ್ವೇಷ ನಿಷ್ಠುರ ವೈರ ಕಷ್ಟಗಳಿಗೆಲ್ಲಮಾ ಪ್ರೇಮವೆ ಪಿತಾಮಹನ್" ಎಂಬ ಮಹಾವಾಕ್ಯಕ್ಕೆ ಜೀವಂತ ಪ್ರತೀಕವಾದಳು.

ಕಣ್ಗೆ ಕುರುಡಂಮೆತ್ತಿದ ರಾತ್ರಿಯ ಕತ್ತಲಿನಲ್ಲಿ ಮಂಥರೆ ರಾಮನನ್ನರಿಸಿದ ಆ ದೃಶ್ಯ, ಅದು ಅತ್ಯಂತ ಹೃದಯ ವಿದ್ರಾವಕವಾದ ಸನ್ನಿವೇಶ. "ಬೆಳಗಿನಿಂದುಣಿಸಿಲ್ಲ, ನೀರ್ಪನಿಯನೀಂಟಿಲ್ಲ, ಪೆಟ್ಟನಲ್ಲದೆ ಬೇರೆ ತಿಂದಿಲ್ಲ, ಕಣ್ಣೀರನೊಂದಲ್ಲದಿನ್ನೇನುಮಂ ಕುಡಿದಿಲ್ಲ." ಆದರೂ ಆ ಮುದುಕಿ "ತೊಟ್ಟನೋಂಪಿಯ ಬಲ್ಮೆಯೂರೆಗೋಲಂ ನೆಮ್ಮಿ ಸಂಚರಿಸಿದಳು ರಾಮನಂ ಕರೆದೊರಲಿ, ಕರೆದು ಕೂಗಿ," "ಓ ನನ್ನ ಭರತ ನಣ್ಣಯ್ಯ" ಎಂಬುದು ಆಕೆಯ ಕೂಗು. ಆಕೆ ಅರಸುತ್ತಿರುವುದು ಕೌಸಲ್ಯಾನಂದನ ನನ್ನಲ್ಲ, ದಶರಥ ಪುತ್ರನನ್ನಲ್ಲ, ಸರ್ವಜನ ನಯನಾಭಿರಾಮನನ್ನಲ್ಲ, ಭರತನಣ್ಣಯ್ಯ ನನ್ನು, ಕೈಕೆಯ ಪುತ್ರನ ಅನುಜನನ್ನು. "ಓ ನನ್ನ ಭರತನಣ್ಣಯ್ಯ, ಓ ನನ್ನ ರಾಮಯ್ಯ ಬಾರಯ್ಯ ದಮ್ಮಯ್ಯ" ಎಂದು ಎಚ್ಚರದಪ್ಪಿ ಕೂಗತೊಡಗಿದಳು.

ಸಾವಿಗಿಂತಲೂ ಸಾವಿರಪಾಲು ಕ್ಲೇಶದಾಯಕವಾದ ಆಕೆಯ ಬಾಳನ್ನು ಕೊನೆಗಾಣಿಸಲು ವಿಧಿಯ ಹಸ್ತವೇ ಮುಂದೆ ಬರಬೇಕಾಯಿತು. ಬಂದಿತು ದಾವಾಗ್ನಿಯ ರೂಪಿನಿಂದ:

"ಘನ ನಿಬಿಡ ಘೋರಾಂಧಕಾರ ತೀರದ ಮಧ್ಯೆ
ಪ್ರವಹಿಪಾ ವಿದ್ಯುತ್ಪ್ರವಾಹ ದೈತ್ಯಾಕೃತಿಯವೋಲ್
ಕೆದರಿದುದು ದಿಕ್ಕುದಿಕ್ಕಿಗೆ ತನ್ನ ಕೇಸುರಿಯ
ಕೇಶಪಾಶದ ರಾಶಿರಾಶಿ ವಿನ್ಯಾಸಮಂ.
ಬೆಂಕೆಗಣ್ಗಳನೆ ಸಿಡಿದೇಳ್ವ ಕೆಂಗಿಡಿಗಳಿಂ
ಸೂಸಿದುದು ತೋರತಾರೆಯ ಕೆಂಡ ಧಾರೆಯಂ."

ಮರವಟ್ಟು ಮರುಳಾದ ಮಂಥರೆಯ ಮುದಿಕಣ್ಣಿಗೆ ಆ ದಾವಾಗ್ನಿ ಚೈತನ್ಯಾತ್ಮಕ ನಾದ ಶ್ರೀರಾಮನಂತೆಯೇ ಕಾಣಿಸಿತು. ಅದರಲ್ಲಿ ನುಗ್ಗಿದಳು. "ಬಂದಪ್ಪಳಿಸಿದಗ್ನಿಗಾ ಮಂಥರೆಯ ಮೂರ್ತಿ ಹಾ: ಸುಟ್ಟು ಸೀದುದೊ ಚಿಟ್ಟೆಸೀವಂತೆ" ವಕ್ರವಾದ ಶ್ರೀಗಂಧದ ಕೊರಡು ಭಸ್ಮವಾದಂತೆ ಮಂಥರೆಯ ದೇಹ ಭಸ್ಮವಾಗಿಹೋಯಿತು. ಆದರೆ

". . . . . ವಿಶ್ವದೇಶಮಂ
ಪರಿಮಳದ ಪುಣ್ಯಪವನಂ ಪಸರಿಪೋಲಂತೆ,
ತುಂಬದೇನಿರ್ದಪಳೆ, ಪೇಳ್, ಲೋಕ ಲೋಕಂಗಳೊಳ್

ದೇವಿ ಮಂಥರೆಯಂತರಾತ್ಮದ ದಯಾಲಕ್ಷ್ಮಿ ತಾಂ
ತನ್ನ ಕೀರ್ತಿಯ ಸಯ್ಪಿನಮೃತಮಯ ಸೌಂದರ್ಯಮಂ ?''

'ದಯೆ' ಎಲ್ಲಿದ್ದರೇನು? ಅದು ವಂದನೀಯ. ಮಂಥರೆಯ ಅಂತರಾತ್ಮ ದಯಾಲಕ್ಷ್ಮಿಯ ಆಗರವಾಗಿತ್ತು. ಅದಕ್ಕಾಗಿ ಆಕೆಯನ್ನು ವಂದಿಸುತ್ತೇವೆ. 'ಪಸರಿಸಲಿ ತನ್ನ ಕೀರ್ತಿಯ ಸಯ್ಪಿನಮೃತಮಯ ಸೌಂದರ್ಯಮಂ' ಎಂದು ಆಶಿಸುತ್ತೇವೆ. ಒಂದು ಸಾಮಾನ್ಯ ಪಾತ್ರವನ್ನು ಇಂತಹ ಒಂದು ಉಜ್ವಲ ವಿಕೃತ ಸುಂದರ ಮೂರ್ತಿಯನ್ನಾಗಿ ಮಾಡಿ ಸಾಹಿತ್ಯಲೋಕದ ಚಿರಂತನ ಪಾತ್ರಗಳ ವರ್ಗಕ್ಕೆ ಏರಿಸಿರುವ ಕಲಾಚಿತ್ರ ನಿಜವಾಗಿಯೂ ಒಂದು ನೂತನ ಸೃಷ್ಟಿ.

ಎಚ್. ತಿಪ್ಪಯ್ಯ

ಶ್ರೀಯವರ ನಾಟಕಗಳು

'ಕನ್ನಡದ ಕಣ್ವ'ರೆಂದು ಪ್ರಸಿದ್ಧರಾಗಿರುವ ದಿವಂಗತ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಹೊಸಗನ್ನಡ ಸಾಹಿತ್ಯದ ಆಚಾರ್ಯಪುರುಷರು. ಅವರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದು, ಪ್ರಾಧ್ಯಾಪಕರಾಗಿದ್ದು, ವಿಶ್ವಸಾಹಿತ್ಯದ ಪರಿಚಯವನ್ನು ಪಡೆದುಕೊಂಡರು; ಒಂದು ತಲೆಮಾರಿಗಿಂತಲೂ ಹೆಚ್ಚು ಕಾಲ ಸಾರಸ್ವತ ತಪಸ್ಸನ್ನು ಆಚರಿಸಿ, ತಮ್ಮ ಜ್ಞಾನಭಂಡಾರವನ್ನು ತುಂಬಿ ಕೊಂಡರು. ಈ ಅಗಾಧ ಜ್ಞಾನದ ಹೂಬಿಸಿಲಲ್ಲಿ ಕನ್ನಡ ಸಾಹಿತ್ಯವನ್ನು ಬೆಳಸಿ, ಹಚ್ಚ ಹಸುರಾಗಿದ್ದ ತಮ್ಮ ಕನ್ನಡಾಭಿಮಾನವನ್ನು ಕಿರಿಯರಲ್ಲಿ ತುಂಬಿದರು. ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ, ಬೂದಿ ಮುಚ್ಚಿದಂತಿದ್ದ ಜನರ ಮಾತೃಭಾಷಾಭಿಮಾನ ವನ್ನು ಊದಿ ಉಜ್ವಲಗೊಳಿಸಿದರು. ಕೆಲವು ಶತಮಾನಗಳಿಂದಲೂ ನಿಂತ ನೀರಾಗಿ ಹೋಗಿದ್ದ ಕನ್ನಡ ಸಾಹಿತ್ಯವಾಹಿನಿಗೆ ಹೊಸದೊಂದು ಪಾತ್ರವನ್ನು ಸೃಷ್ಟಿಸಿ ನಮ್ಮ ಸಾಹಿತ್ಯತೀರ್ಥ ಮತ್ತೊಮ್ಮೆ ಪುನೀತವಾಗುವಂತೆ ಮಾಡಿದರು. 'ಕನ್ನಡದಲ್ಲಿ ಏನಿದೆ?' ಎಂದು ಮೂಗು ಮುರಿಯುತ್ತಿದ್ದ ಜನರ ಬಾಯಿ ಕಟ್ಟಿಹೋಯಿತು, ಶ್ರೀಯವರ ಅವಿರಳ, ಅವಿಶ್ರಾಂತ ವ್ಯವಸಾಯದ ಫಲವಾಗಿ. ಅವರ ನುಡಿಗಳು ಜನರ ಕಣ್ಣು ತೆರೆದವು; ಅವರ ಕೃತಿಗಳು ಕನ್ನಡಿಗರ ದೃಷ್ಟಿಯನ್ನು ವಿಶಾಲಗೊಳಿಸಿ, ಅವರಿಗೊಂದು ಹೊಸ ಹಾದಿಯನ್ನು ತೋರಿಸಿಕೊಟ್ಟವು. ಸಂಪ್ರದಾಯದ ವೃತ್ತ, ಕಂದ, ಷಟ್ಪದಿಗಳ ಚೌಕಟ್ಟಿನಲ್ಲಿ ಭಾವವೈವಿಧ್ಯಕ್ಕೆ ತಕ್ಕ ನಿರೂಪಣೆಗೆ ಅವಕಾಶವಿಲ್ಲದೆ ಉಬ್ಬಸಬಡುತ್ತಿದ್ದ ಕವಿಹೃದಯ ಸರಾಗವಾಗಿ ಉಸಿರಾಡಲು ಅನುಕೂಲವಾಯಿತು. ಹಳೆಯ ಕಟ್ಟುಗಳನ್ನು ಕಳಚಲು ಧೈರ್ಯ ಸಾಲದೆ, ಹೊಸ ಮಾರ್ಗದರ್ಶನಕ್ಕಾಗಿ ಹಾತೊರೆಯುತ್ತಿದ್ದ ತರುಣವೃಂದಕ್ಕೆ ಶ್ರೀಯವರು ಮುಂದಾಳಾಗಿ ನಿಂತು ಮಾರ್ಗದರ್ಶನ ಮಾಡಿಸಿದರು; ಕ್ರಾಂತಿಕಾರಕ ಬದಲಾವಣೆಗಳಿಗೆ ಕೈಯಿಟ್ಟರು. 'ಇಂಗ್ಲೀಷ್ ಗೀತಗಳು' ಬೆಳಕು ಕಂಡಿತು. ಆ ನಂದಾದೀವಿಗೆಯಿಂದ ಆಧುನಿಕ ಕನ್ನಡದ ಕವಿಗಳು ತಮ್ಮ ದೀವಿಗೆಯನ್ನು ಹೊತ್ತಿಸಿಕೊಂಡರು. ಹೀಗೆ ಸಾಹಿತ್ಯದಲ್ಲಿ ನೂತನ ಪಥವೊಂದಕ್ಕೆ ಅವರು ವಿಧಾತೃಗಳಾದರು. ಹೊಸಗನ್ನಡ ಕವಿತೆಗಳನ್ನು ಅವರಿಗೂ ಮೊದಲು ಬರೆದವರು ಇರಬಹುದು. ಆದರೆ ಅದಕ್ಕೆ ಒಂದು ಪ್ರಭಾವವನ್ನು ಬೀರಿ, ಸಕಲ ಜನಾದರಣೀಯವಾಗುವಂತೆ ಮಾಡಿದ ಕೀರ್ತಿ ನಿರ್ವಿವಾದವಾಗಿ

ಶ್ರೀಯವರಿಗೇ ಸಲ್ಲಬೇಕು. ಅವರ ವಿವಿಧ ಭಾಷಣಗಳೂ, ಗ್ರಂಥಗಳೂ, ಮುನ್ನುಡಿಗಳೂ ಜೀವನದ ಹೊಸ ನೋಟಕ್ಕೆ ಬೆಳಕು ಚೆಲ್ಲುತ್ತಾ, 'ವಿಶ್ವಭಾರತಿ ಶರಣು ಕಿರು ತೀರ್ಥಮಲ್ತು' ಎಂಬ ಬೋಧನೆಯನ್ನು ನಮ್ಮಲ್ಲಿ ತುಂಬುತ್ತಿವೆ. ಉತ್ತಮ ಅಭಿರುಚಿಗೆ ವಿಮರ್ಶನ ಮಾರ್ಗಕ್ಕೆ ಅವು ಕೈಗಂಬಗಳಾಗಿ ನಿಂತಿವೆ. ಹೊಸಗನ್ನಡ ಸಾಹಿತ್ಯದ ಈ ಕಾರಣಪುರುಷ ನಾಟಕ ಪ್ರಪಂಚದಲ್ಲಿಯೂ ಒಂದು ಕ್ರಾಂತಿಯನ್ನು ಹುಟ್ಟಿಸಿದ್ದಾನೆ. ಅದನ್ನಿಲ್ಲಿ ಸೂಕ್ಷ್ಮವಾಗಿ ಪರಿಶೀಲಿಸೋಣ—

ಪಾಶ್ಚಾತ್ಯ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡುವ ಸುಯೋಗಪಡೆದಿದ್ದ ಬಿ. ಎಂ. ಶ್ರೀಯವರು, ತಮಗೆ ದೊರೆತ ಈ ಸುಯೋಗವನ್ನು ಸದುಪಯೋಗಪಡಿಸಿಕೊಂಡರು. ಅಲ್ಲಿನ ಸಾಹಿತ್ಯರತ್ನಗಳನ್ನು ತಂದು ಸಾಧ್ಯವಾದಷ್ಟು ಕನ್ನಡದ ಕಣಜವನ್ನು ತುಂಬಬೇಕೆಂಬುದು ಅವರ ಹಿರಿಯ ಬಯಕೆ. ನಾಟಕದ ವಿಚಾರವಾಗಿ ಮಾತ್ರವೇ ಹೇಳುವುದಾದರೆ, ಅವರು, ತಮಗೆ ಕರತಲಾಮಲಕವಾಗಿದ್ದ ಷೇಕ್ಸ್‌ಪಿಯರ್ ನಾಟಕಗಳನ್ನೆಲ್ಲಾ ಕನ್ನಡಕ್ಕೆ ಭಾಷಾಂತರಿಸಬೇಕೆಂದು ಮನಸ್ಸುಮಾಡಿದ್ದರು.[1] ಆದರೆ ಕನ್ನಡಿಗರ ದುರ್ದೈವದಿಂದ ಆ ಕಾರ್ಯ ಅವರಿಂದ ನೆರವೇರಲಿಲ್ಲ. ಆ ಮಹಾಕವಿಯ ಒಂದು ನಾಟಕವನ್ನಾದರೂ ಅವರು ಭಾಷಾಂತರ ಮಾಡಿಕೊಟ್ಟಿದ್ದರೆ ಉಳಿದವರಿಗೆ ಮಾರ್ಗದರ್ಶನವಾದರೂ ಆಗುತ್ತಿತ್ತು. ಸುಪ್ತಚೇತನರಾಗಿದ್ದ ಕನ್ನಡಿಗರನ್ನು ಬಡಿದೆಬ್ಬಿಸುವುದರಲ್ಲಿಯೇ ಅವರ ಅಮೂಲ್ಯಕಾಲದ ಬಹುಭಾಗ ಕಳೆದುಹೋಯಿತು. ಷೇಕ್ಸ್‌ಪಿಯರ್‌ನ ನಾಟಕಗಳು ಕನ್ನಡಕ್ಕೆ ಬರದಿದ್ದರೂ ಗ್ರೀಕ್ ನಾಟಕಗಳಲ್ಲಿ ಒಂದೆರಡನ್ನು ಅವರು ನಮ್ಮ ಮುಂದೆ ಇಟ್ಟು ಹೋಗಿದ್ದಾರೆ. ಗ್ರೀಕ್ ಭಾಷೆಯಲ್ಲಿ ವಿಷಾದಾಂತ ನಾಟಕಗಳಿಗೆ ಪ್ರಸಿದ್ಧರಾಗಿರುವ ಈಸ್ಕಿಲಸ್, ಸಾಫೊಕ್ಲಿಸ್ ಮತ್ತು ಯೂರಿಪಿಡೀಸ್—ಈ ತ್ರಿಮೂರ್ತಿಗಳ ಕಾವ್ಯಗಳಲ್ಲಿ ಶ್ರೀಯವರಿಗೆ ಅಚ್ಚಳಿಯದ ಅಭಿಮಾನವಿತ್ತು. ಈ ಅಭಿಮಾನದಿಂದಲೇ ಅವರು ಗ್ರೀಕ್ ಭಾಷೆಯನ್ನು ಕಲಿತು ಮೂಲದಲ್ಲಿಯೇ ಆ ಕಾವ್ಯಗಳನ್ನು ಪರಿಚಯಮಾಡಿಕೊಂಡರು. ಅದರ ಫಲವಾಗಿ 'ಗದಾಯುದ್ಧ', 'ಅಶ್ವತ್ಥಾಮನ್' ಮತ್ತು 'ಪಾರ್ಸಿಕರು' ಎಂಬ ಮೂರು ನಾಟಕಗಳು ಅವರ ಲೇಖಣಿಯಿಂದ ಹೊರಬಂದಿದೆ. ಅವರ ಗ್ರೀಕ್ ನಾಟಕಾಭಿಮಾನ ವ್ಯಕ್ತವಾಗಿರುವುದೂ ಇದೇ ಕ್ರಮದಲ್ಲಿಯೇ. 'ಗದಾಯುದ್ಧ' ಗ್ರೀಕ್ ನಾಟಕದ ಅನುವಾದವೂ ಅಲ್ಲ; ಅದಕ್ಕೆ ಆಧಾರಗ್ರಂಥವೂ ಗ್ರೀಕಿನಲ್ಲಿಲ್ಲ. ಆದರೂ ಗ್ರೀಕ್ ನಾಟಕ ಪರಿಣತಿಯ ಮನೋಭಾವವೊಂದು ಸ್ಪಷ್ಟವಾಗಿ ಅದರಲ್ಲಿಯೇ ಗೋಚರಿಸು

[1] ಹಾಗೆಂದು ಶ್ರೀಯವರೇ ತಮ್ಮ ಬಾಷಣದ ಮಧ್ಯದಲ್ಲಿ ಒಮ್ಮೆ ಹೇಳಿದ್ದುದು ನನಗೆ ಜ್ಞಾಪಕವಿದೆ.

ತ್ತದೆ. ಎರಡನೆಯದಾದ 'ಅಶ್ವತ್ಥಾಮನ್' ಗ್ರೀಕ್ ನಾಟಕವೊಂದರ ಆಧಾರದ ಮೇಲೆ ಬರೆದುದು. ಗ್ರೀಕ್ ನಾಟಕದ ಅನುವಾದವಲ್ಲದಿದ್ದರೂ ಅದು ಗ್ರೀಕ್ ನಾಟಕದ ರೂಪಾಂತರ. ಕಡೆಯದಾದ ಪಾರ್ಸಿಕರು ಸ್ಪಷ್ಟವಾದ ಅನುವಾದ. ಹೀಗೆ ಅವರ ಗ್ರೀಕ್ ನಾಟಕಾಭಿಮಾನ ಗದಾಯುದ್ಧದಲ್ಲಿ ಅವ್ಯಕ್ತವಾಗಿದ್ದು, ಅಶ್ವತ್ಥಾಮನ್‌ನಲ್ಲಿ ರೂಪಾಂತರಗೊಂಡು, ಪಾರ್ಸಿಕರಲ್ಲಿ ತದ್ವದ್ರೂಪವಾಗಿ ಕಾಣಿಸಿಕೊಂಡಿದೆ. ಶ್ರೀಯವರು ಸಾಹಸಪುರುಷರು. ಈಸ್ಕಿಲಸ್ ಕವಿಯ 'ಪ್ರೊಮಿಥಿಯಸ್ ಬೌಂಡ್' ಮತ್ತು ಷೆಲ್ಲಿಯ 'ಪ್ರೊಮಿಥಿಯಸ್ ಅನ್‌ಬೌಂಡ್'—ಇವೆರಡನ್ನೂ ಒಟ್ಟಿಗೆ ಸೇರಿಸಿಕೊಂಡು ಒಂದು ನಾಟಕವನ್ನು ರಚಿಸಬೇಕೆಂದುಕೊಂಡಿದ್ದರಂತೆ. ಅದನ್ನು ಆಗಾಗ ತಮಾಷೆಗಾಗಿ "ಈಸ್ಕಿಲಸನ ಗಡ್ಡಕ್ಕೂ ಷೆಲ್ಲಿಯ ಮೀಸೆಗಳಿಗೂ ಗಂಟುಹಾಕಿ ತೂಗಾಡಬೇಕೆಂದಿದ್ದೇನೆ" ಎಂದು ಹೇಳುತ್ತಿದ್ದರು. ಈ ಕಾವ್ಯವನ್ನು ಆರಂಭಿಸಿ, ಅವರು ಹಾಕಿಕೊಂಡಿದ್ದ ಮುಖ್ಯ ಸಂಗತಿಗಳ (Outline) ಕರಡು ಪ್ರತಿ ಮಾತ್ರ ಈಗ ಉಳಿದುಕೊಂಡಿದೆಯಂತೆ. ಅದು ಹೋಗಲಿ, ಶ್ರೀಯವರು ನಮಗೆ ಬಿಟ್ಟು ಹೋಗಿರುವ ಮೂರು ನಾಟಕಗಳನ್ನು ಕುರಿತು ಇಲ್ಲಿ ವಿವೇಚಿಸೋಣ—

ಶ್ರೀಯವರ ನಾಟಕಗಳು ಗ್ರೀಕ್ ರುದ್ರನಾಟಕ[1]ದ ಬೆಳಕಿನಲ್ಲಿ ಬೆಳೆದವುಗಳು. ಆದ್ದರಿಂದ ಅವರ ನಾಟಕಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಗ್ರೀಕ್ ರುದ್ರನಾಟಕದ ಲಕ್ಷಣಗಳನ್ನು ಸ್ಥೂಲವಾಗಿಯಾದರೂ ಅರಿತುಕೊಳ್ಳುವುದು ಅತ್ಯಗತ್ಯ. ಈಗ ಸುಮಾರು ೨೫ ಶತಮಾನಗಳ ಹಿಂದೆ ಗ್ರೀಸ್ ದೇಶದ ಅಥೆನ್ಸ್ ಪಟ್ಟಣವು ನಾಗರೀಕತೆಗೂ ಕಲಾಸಂಸ್ಕೃತಿಗಳಿಗೂ ತೌರೂರಾಗಿತ್ತು. ಅಲ್ಲಿಯ ಜನರಿಗೆ ಡಯೊನಿಸಸ್ ಎಂಬ ಸಸ್ಯಾಧಿ ದೇವತೆಯಲ್ಲಿ ಬಹಳ ಭಕ್ತಿ. ಆ ದೇವತೆಯ ಪ್ರೀತ್ಯರ್ಥವಾಗಿ ಪ್ರತಿ ವಸಂತಕಾಲದಲ್ಲಿಯೂ ಜಾತ್ರೆ ನಡೆಸುತ್ತಿದ್ದರು. ಆಗ ಭಕ್ತರು ಆ ದೇವತೆಗೆ ಆಡನ್ನು ಬಲಿಯಿತ್ತು, ಮುಖಕ್ಕೆ ಮೊಗವಾಡವನ್ನು ಹಾಕಿಕೊಂಡು, ಗೀತೆಗಳನ್ನು ಹಾಡುತ್ತಾ ಬಲಿಗಂಬದ ಸುತ್ತಲೂ ಕುಣಿಯುತ್ತಿದ್ದರು. ಹೀಗೆ ಕುಣಿಯುತ್ತಿದ್ದ ಭಕ್ತರಿಗೆ ಮೇಳ (Chorus) ದವರೆಂದು ಹೆಸರು. ಅವರ ಮುಖ್ಯಸ್ಥನು ಮೇಳ ನಾಯಕನಾಗುತ್ತಿದ್ದನು. ತಮ್ಮ ದೇವತೆ ನಡೆಸಿದ ಸಾಹಸಕಾರ್ಯಗಳನ್ನು ನಾಯಕನು

---

[1] ಡಯೋನಿಸಸ್ಸಿಗೆ ಹಲವು ರೀತಿಯಲ್ಲಿ ಸಾದೃಶ್ಯವುಳ್ಳ, ರುದ್ರಭೂಮಿಗೆ ಅಧಿನಾಯಕನಾದ ಆದರೂ ಮಂಗಳದಾಯಕನಾಗಿ ಭವರೋಗಕ್ಕೆ ಭಿಷಜನಾದ ನಾಟ್ಯ ನಾಟಕ ಪ್ರದರ್ಶಕನಾದ ರುದ್ರನ ಹೆಸರಿನಿಂದ ಈ ಬಗೆಯ ನಾಟಕವನ್ನು ಕರೆಯಬಹುದೆಂದು ಭಾವಿಸಿ ರುದ್ರನಾಟಕವೆಂದು ನಾನು ಗಧಾಯುದ್ಧ ನಾಟಕ, ಅಶ್ವತ್ಥಾಮನ್ ಮುಂತಾದ ನಾಟಕಗಳಿಗೆ ಈ ಹೆಸರನ್ನಿಟ್ಟೆ—ಬಿ. ಎಂ. ಶ್ರೀ. "ರುದ್ರನಾಟಕ" ಕನ್ನಡ ನುಡಿ ಸಂಪುಟ ೩—ಸಂಚಿಕೆ ೧೯.

ಹಾಡುತ್ತಿರಲು ಉಳಿದವರು ಆತನನ್ನು ಅನುಕರಿಸುತ್ತಿದ್ದರು. (ಈ ಗೀತೆಗಳಿಗೆ ಡಿಥಿರ್ಯಾಂಬ್ (ಅಜಗೀತೆ) ಎಂದು ಹೆಸರು) ಬರುಬರುತ್ತಾ ದೇವತೆಯ ಸಾಹಸಗಳ ಜೊತೆಗೆ ತಮ್ಮ ಹಿಂದಿನ ವೀರಪುರುಷರ ಸಾಹಸವೂ ಅವರ ಗೀತೆಗಳಿಗೆ ವಸ್ತು ವಾಯಿತು. ಗೀತದಲ್ಲಿ ಸಂವಾದರೂಪವು ತಲೆದೋರಿ ನಾಯಕನೂ ಆತನ ಅನುಯಾಯಿಗಳೂ ಈ ಸಂಭಾಷಣೆಗಳನ್ನು ನಡೆಸುವುದು ಆರಂಭವಾಯಿತು—ನಮ್ಮ ಲಾವಣಿಕಾರರಲ್ಲಿ ಕಂಡುಬರುವ ಸವಾಲ್ ಜವಾಬುಗಳ ಹಾಗೆ. ಕಾಲಕ್ರಮದಲ್ಲಿ ಈ ಮೇಳದವರ ಜೊತೆಗೆ ನಟರೂ ಸೇರಿ ಗ್ರೀಕ್ ರುದ್ರನಾಟಕದ ರೂಪವನ್ನು ಪಡೆಯಿತು. ಬರುಬರುತ್ತಾ ಮೇಳದವರ ಪ್ರಾಮುಖ್ಯತೆ ಸ್ವಲ್ಪಮಟ್ಟಿಗೆ ಕಡಿಮೆ ಯಾಯಿತೆಂದು ಹೇಳಬಹುದು. ಆದರೆ ಮೇಳವಿಲ್ಲದ ಗ್ರೀಕ್ ರುದ್ರನಾಟಕವಾವುದೂ ಇಲ್ಲ.

ಗ್ರೀಕ್ ರುದ್ರನಾಟಕಗಳಲ್ಲಿ ಸಂಭಾಷಣೆಯ ಚಾಕಚಕ್ಯತೆಗಿಂತಲೂ ಕಥನ ಕಲೆಯ ಪ್ರದರ್ಶನವೇ ಹೆಚ್ಚು. ಅನೇಕ ವೇಳೆ "ನಾಟಕದಲ್ಲಿ ನಾಟಕೀಯತೆಗಿಂತ ಮಹಾಕಾವ್ಯಲಕ್ಷಣವೂ ಭಾವಗೀತಾಲಕ್ಷಣವೂ ಕಾಣಬರುತ್ತವೆ."[1] ಈ ನಾಟಕ ಗಳ ರಚನೆಯ ಹಿಂದಿನ ಮನೋಭಾವವೇ ಆ ಬಗೆಯಾದುದು. ನಾಟಕದಿಂದ ಬರುವ ವಿನೋದವೇನಿದ್ದರೂ ಕೇವಲ ಗೌಣ. ನೀತಿ ನಿರೂಪಣೆಯೇ ಈ ನಾಟಕ ಗಳ ಚರಮಗುರಿ. ಮಾನವನು ಮಾಡಿದ ತಪ್ಪಿಗೆ ಶಿಕ್ಷೆ ಅನಿವಾರ್ಯ. ಈ ಶಿಕ್ಷೆಯನ್ನು ವಿಧಿಸುವ ವಿಧಿ ಅಪ್ರತಿಹತವಾದುದು. ಅದರೊಡನೆ ಹೋರಾಡುವ ಮಾನವ ಕಡೆಗೆ ಸೋಲಲೇಬೇಕು.—ಇದು ಗ್ರೀಕ್ ರುದ್ರನಾಟಕಗಳ ತಿರುಳು. ತಪ್ಪಿಗೆ ಶಿಕ್ಷೆ ಯೆಂಬುದು ತಪ್ಪಿತಸ್ಥನ ಮರಣದಿಂದಲೇ ಕೊನೆಯಾಗುವುದೆಂದು ಹೇಳುವಂತಿಲ್ಲ. ಅದು ವಂಶಪರಂಪರೆಯಾಗಿ ಪಾಪ ಸೂತ್ರದಂತೆ ಹರಿದು ಬರಬಹುದು. ನಮ್ಮಲ್ಲಿರು ವಂತೆ ಅವರಲ್ಲಿ ಜನ್ಮಾಂತರದ ನಂಬಿಕೆ ಇಲ್ಲ. ಆದ್ದರಿಂದಲೇ ತಪ್ಪಿತಸ್ಥನ ಪಾಪ ಅವನ ಕರ್ಮದ ಬುತ್ತಿಯಾಗುವುದಕ್ಕೆ ಬದಲಾಗಿ ಅವನ ವಂಶದವರನ್ನು ಹಿಂಬಾಲಿಸುತ್ತದೆ.

ಗ್ರೀಕ್ ರುದ್ರನಾಟಕಗಳಲ್ಲಿ ಸಾಮಾನ್ಯವಾಗಿ ನಾಯಕನು ತನ್ನ ಹೋರಾಟದ ಕೊನೆಯಲ್ಲಿ ಸಾವಿಗೆ ತುತ್ತಾಗುತ್ತಾನೆ. ಆದರೆ ಸಾಯಲೇಬೇಕೆಂಬ ನಿಯಮ ವೇನೂ ಇಲ್ಲ. 'ಪಾರ್ಸಿಕರು' ನಾಟಕದ ನಾಯಕದ ಸಾಯದೆ ಬದುಕಿದ್ದರೂ ಅವನ ಬಾಳು ಸಾವಿನ ಗೋಳಿಗಿಂತಲೂ ಕೀಳು; ಅವನ ಯಾತನೆ ರುದ್ರತೆಗೆ ಮೂಲ. ಇಂತಹ ಹಲವಾರು ಉದಾಹರಣೆಗಳನ್ನು ಗ್ರೀಕ್ ರುದ್ರನಾಟಕದಿಂದ

[1] ಕೆ. ವಿ. ರಾಘವಾಚಾರ್ : "ಸಂಭಾವನೆ"ಯಲ್ಲಿ "ಗ್ರೀಕ್ ರುದ್ರನಾಟಕಗಳು."

ಕೊಡಬಹುದು. ಮಾನವ ಮದಿಸಿ ದೈವಶಾಸನವನ್ನು ಮೀರುತ್ತಾನೆ; ದೈವವನ್ನು ಕೆಣಕುತ್ತಾನೆ. ದೈವ ಅಥವಾ ವಿಧಿ ಅವನನ್ನು ಮೆಟ್ಟಿ ತುಳಿಯುತ್ತದೆ.

ಗ್ರೀಕ್ ನಾಟಕಗಳಿಗೆಲ್ಲಾ ವಸ್ತುವನ್ನು ಒದಗಿಸಿರುವವುಗಳು ಗ್ರೀಕ್ ಪುರಾಣಗಳು. ಆದ್ದರಿಂದ ಅವುಗಳಲ್ಲಿ ಬರುವ ಪಾತ್ರಗಳೆಲ್ಲವೂ ಸಾಮಾನ್ಯವಾಗಿ ಅಸಾಧಾರಣ ವ್ಯಕ್ತಿಗಳೇ. ಅವುಗಳ ಅಪ್ರಾಕೃತತೆಯನ್ನೂ ಅಸಾಮಾನ್ಯತೆಯನ್ನೂ ತೋರುವುದಕ್ಕಾಗಿ ಪಾತ್ರಧಾರಿಗಳಿಗೆ ಎತ್ತರವಾದ ಜೋಡುಗಳನ್ನು ತೊಡಿಸಿ, ಬಟ್ಟೆ ಬರೆಗಳಿಂದ ವ್ಯಕ್ತಿಯ ಗಾತ್ರವನ್ನು ಹೆಚ್ಚಿಸಿ, ನೋಡುವವರ ಮನಸ್ಸು ಭವ್ಯತೆಯ ಪರಿಣಾಮವನ್ನು ಪಡೆಯುವಂತೆ ಮಾಡುತ್ತಿದ್ದರಂತೆ! ಇಂತಹ ಉನ್ನತ ಪಾತ್ರಗಳು ಅಟ್ಟಣೆಯ ಮೇಲೆ ನಿಂತು ಮೊಗವಾಡದೊಳಗಿನಿಂದ ಮಾತನಾಡಿದಾಗ ಅಸಾಧಾರಣವಾದ ವಾತಾವರಣವೊಂದು ಸೃಷ್ಟಿಯಾಗುತ್ತಿದ್ದುದು ಸ್ವಾಭಾವಿಕವಾಗಿಯೇ ಇದೆ. ಗ್ರೀಕರ ರುದ್ರನಾಟಕಗಳಲ್ಲಿ ಹೆಚ್ಚು ಪಾತ್ರಗಳು ಒಂದು ಸಲ ಬರುವ ಪರಿಪಾಟವಿಲ್ಲ. ಹೆಚ್ಚೆಂದರೆ ಅಟ್ಟಣೆಯ ಮೇಲೆ ಮೂರು ಪಾತ್ರಗಳು ಮಾತ್ರ ಕಾಣಿಸಿಕೊಳ್ಳುತ್ತಿದ್ದವು. ಮೇಳದವರು ಅಟ್ಟಣೆಯ ಮುಂದೆ ಕೆಳಗಡೆ ನಿಲ್ಲುತ್ತಿದ್ದರು.[1]

ಗ್ರೀಕ್ ನಾಟಕ ಶಾಸ್ತ್ರದಲ್ಲಿ ರುದ್ರನಾಟಕಕ್ಕೆ ಮೂರು ಐಕ್ಯಗಳು—ಕ್ರಿಯೈಕ್ಯ, ಕಾಲೈಕ್ಯ ಮತ್ತು ಸ್ಥಳೈಕ್ಯ (Unities of Action, Time and Place)—ಅಗತ್ಯವೆಂದು ಹೇಳಿದೆ. ಕಥೆಯ ವಿಷಯದ ಪ್ರತಿಪಾದನೆಯಲ್ಲಿ ಅನಾವಶ್ಯಕವಾದ ಯಾವ ಪ್ರಸಂಗಕ್ಕೂ ಎಡೆಯಿರಕೂಡದು; ಬರುವ ಪಾತ್ರಗಳೂ ಅವುಗಳ ಮಾತುಗಳೂ ನಾಟಕದ ಮುಖ್ಯ ಉದ್ದೇಶಕ್ಕೆ ಸಹಕಾರಿಯಾಗಿರಬೇಕು. ಇದೇ ಕ್ರಿಯೈಕ್ಯದ ಲಕ್ಷಣ. ಕಾಲೈಕ್ಯದ ಕಟ್ಟುಪಾಡಿನ ಪ್ರಕಾರ ನಾಟಕದ ಕಥೆ ಒಂದು ದಿನದಲ್ಲಿ ನಡೆದಷ್ಟು ಮಾತ್ರ ಪ್ರದರ್ಶಿತವಾಗಬೇಕು. ಸ್ಥಳೈಕ್ಯವು ನಾಟಕದ ಕಥೆ ನಡೆಯಬೇಕಾದ ಸ್ಥಳಕ್ಕೆ ಒಂದು ಪರಿಮಿತಿಯನ್ನು ಏರ್ಪಡಿಸುತ್ತದೆ; ಕಥೆಯ ಕ್ರಿಯೆ ಸ್ಥಳದಿಂದ ಸ್ಥಳಕ್ಕೆ ಬದಲಾಯಿಸಕೂಡದು. ಈ ನಿಯಮಗಳನ್ನು ಮುರಿದ ಸಂದರ್ಭಗಳನ್ನು ಕೆಲವು ನಾಟಕಗಳಲ್ಲಿ ನಾವು ಕಾಣಬಹುದಾದರೂ ಇದು ಸಾಮಾನ್ಯ ನಿಯಮ.

ಗ್ರೀಕ್ ರುದ್ರನಾಟಕ ಸಾಮಾನ್ಯವಾಗಿ ಐದಂಕಗಳಿರಬೇಕೆಂದೂ, ಭಾರತ ನಾಟಕಗಳಲ್ಲಿರುವಂತೆ ಗ್ರೀಕ್ ನಾಟಕದಲ್ಲಿಯೂ ಕೊಲೆ, ಸಾವು, ಯುದ್ಧ ಮೊದಲಾದುವನ್ನು ನಾಟಕರಂಗದಲ್ಲಿ ತೋರಿಸಬಾರದೆಂದೂ ನಿಯಮಗಳಿವೆ.[2] ಆದರೆ ಈ

---

[1] The 'Theatre', A. F. Haighs Attic Theatre.

[2] ಕೆ. ವಿ. ರಾಘವಾಚಾರ್, 'ಅಂತಿಗೊನೆ' ಮುನ್ನುಡಿ.

ನಿಯಮಗಳೆಲ್ಲವೂ ಚಿಲ್ಲರೆ ವಿಚಾರಗಳು. ಇವುಗಳನ್ನು ಮೀರಿರುವ ಪ್ರಸಂಗಗಳು ಬೇಕಾದಷ್ಟಿವೆ.

ಹೃದ್ಗತವಾಗಿದ್ದ ಈ ನಿಯಮಗಳು ಶ್ರೀಯವರ ನಾಟಕದಲ್ಲಿ ಒಡಮೂಡಿರುವುದನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ಈಗ ಅವರ ನಾಟಕಗಳನ್ನು ಒಂದೊಂದನ್ನಾಗಿ ತೆಗೆದುಕೊಂಡು ವಿಮರ್ಶಿಸುತ್ತಾ ಹೋಗೋಣ.—

೧. ಗದಾಯುದ್ಧ

ಕವಿಚಕ್ರವರ್ತಿ ರನ್ನ ಈಗ ಸಹಸ್ರ ವರ್ಷಗಳ ಕೆಳಗೆ ತನ್ನ ಕೃತಿರತ್ನವಾದ ಗದಾಯುದ್ಧವನ್ನು ರಚಿಸಿದನು. ಅದು ರೂಪದಲ್ಲಿ ಕಾವ್ಯವಾಗಿದ್ದರೂ ಅದರ ಚೌಕಟ್ಟಿನಲ್ಲಿ ನಾಟಕವೊಂದು ಹುದುಗಿತ್ತು. ರನ್ನನು ಮೊದಲು ಇದನ್ನು ನಾಟಕವಾಗಿಯೇ ಬರೆಯಬೇಕೆಂದು ಬಯಸಿದ್ದನೋ ಏನೋ! ಮಿಲ್ಟನ್ ಮಹಾಕವಿ ತನ್ನ 'ಪ್ಯಾರಡೈಸ್ ಲಾಸ್ಟ್' ಕಾವ್ಯವನ್ನು ಮೊದಲು ನಾಟಕವಾಗಿಯೇ ಬರೆಯಬೇಕೆಂದು ಬಯಸಿದ್ದನಂತೆ; ಆದರೆ ಯಾವ ಕಾರಣದಿಂದಲೊ ಅದು ಕಾವ್ಯರೂಪದಿಂದ ಹೊರಬಂದಿತು. ಹಾಗೆಯೇ ರನ್ನನ ಪ್ರತಿಭೆಯಲ್ಲಿ ನಾಟಕವಾಗಿಯೇ ಸೃಷ್ಟಿಯಾದ 'ಗದಾಯುದ್ಧಂ' ಕಡೆಯಲ್ಲಿ ಕಾವ್ಯರೂಪವನ್ನು ತಳೆಯಿತು. ಕವಿಹೃದಯದಲ್ಲಿದ್ದ ಈ ಆಸೆ ಶತಮಾನಗಳ ಮೇಲೆ ಬಿ. ಎಂ. ಶ್ರೀ ಯವರ ಹೃದಯದಲ್ಲಿ ಆವಿರ್ಭವಿಸಿ ಮೂರ್ತಿಮತ್ತಾಯಿತೋ ಏನೋ![1] ಕವಿಯು ಪ್ರಕೃತಿಗರ್ಭದಲ್ಲಿರುವ ಕಲೆಯನ್ನು ಹೊರಗೆಳೆವಂತೆ ಶ್ರೀಯವರು ಗದಾಯುದ್ಧ ಕಾವ್ಯದ ಗರ್ಭದಲ್ಲಿ ಹುದುಗಿದ್ದ ನಾಟಕವನ್ನು ಹೊರಗೆಳೆದರು. ಇದರಿಂದ ಅದ್ಭುತ ನಾಟಕವೊಂದು ಕನ್ನಡ ಸಾಹಿತ್ಯಕ್ಕೆ ದೊರೆತಂತಾಯಿತು. ೧೯೨೫ ರಲ್ಲಿ ಮೊದಲ ಬಾರಿ ಇದು ಮಹಾರಾಜ ಕಾಲೇಜಿನ ರಂಗಸ್ಥಳದಲ್ಲಿ ಪ್ರದರ್ಶಿತವಾಗಿ ಜನರ ಮೆಚ್ಚುಗೆಯನ್ನು ಪಡೆಯಿತು.

ಹಳೆಯ ಕಾವ್ಯವೊಂದರ ಪ್ರಭಾವದಿಂದ ಹೊಸ ಕಾವ್ಯವೊಂದು ಉದಯಿಸುವುದು ಸಾಹಿತ್ಯ ಪ್ರಪಂಚದಲ್ಲಿ ಹೊಸದೇನೂ ಅಲ್ಲ. ಮಹಾಕಾವ್ಯಗಳೆಂಬವು ಸಾಹಿತ್ಯವಸ್ತುಗಳ ಗಣಿಗಳು. ಭಾರತ ರಾಮಾಯಣಗಳಿಂದ ಎಷ್ಟು ಜನ ಕವಿಗಳು ತಮ್ಮ ಗ್ರಂಥಗಳಿಗೆ ಕಾವ್ಯವಸ್ತುವನ್ನು ಆಯ್ದುಕೊಂಡಿಲ್ಲ? ಎಷ್ಟು ಮೊಗೆದರೂ ಮುಗಿಯದಷ್ಟು ಕಾವ್ಯರತ್ನಗಳು ಅವುಗಳಲ್ಲಿ ಅವ್ಯಕ್ತವಾಗಿ ಅಡಗಿವೆ. ಅವರವರ ಪ್ರತಿಭೆ, ಸಂಸ್ಕೃತಿಗಳಿಗೆ ತಕ್ಕಂತೆ ಕವಿಗಳು ಅವುಗಳಿಂದ ವಸ್ತುವನ್ನು ಆಯ್ದುಕೊಂಡಿದ್ದಾರೆ; ಆಯ್ದುಕೊಳ್ಳುತ್ತಿದ್ದಾರೆ; ಮುಂದೆಯೂ ಆಯ್ದುಕೊಳ್ಳುತ್ತಾರೆ.

[1] ಕುವೆಂಪು ಅವರ 'ಶಕ್ತಿ ಕವಿರನ್ನ' ಎಂಬ ಲೇಖನವನ್ನು 'ವಿಭೂತಿ ಪೂಜೆ' ಎಂಬ ಗ್ರಂಥದಲ್ಲಿ ನೋಡಿ.

ನವನವೋನ್ಮೇಷಶಾಲಿನಿಯಾದ ಪ್ರತಿಭೆ ಪ್ರಸನ್ನವಾಗಿದ್ದ ಕವಿಗಳಲ್ಲಿ ಪರಂಪರಾನುಗತವಾಗಿ ಬಂದ ಪದ್ಧತಿ ಇದು. ಸಂಸ್ಕೃತ ಭಾರತ ಪಂಪನ ಮಹಾ ಭಾರತಕ್ಕೆ ಪ್ರೇರಕವಸ್ತುವಾಯಿತು ; ಪಂಪಭಾರತ ಗದಾಯುದ್ಧದ ಸೃಷ್ಟಿಗೆ ಕಾವ್ಯವಸ್ತುವನ್ನು ಒದಗಿಸಿತು. ಹಾಗೆಯೇ ಗಧಾಯುದ್ಧ ಕಾವ್ಯ ಅದೇ ಹೆಸರಿನ ನಾಟಕಕ್ಕೆ ಪ್ರೇರಕವಾಯಿತು. ಈ ಪರಂಪರಾಗತ ಪದ್ಧತಿಗೆ ಗದಾಯುದ್ಧ ನಾಟಕವು ಒಂದು ಉದಾಹರಣೆ ಮಾತ್ರವಾಗಿ ಕಾಣಿಸಿದರೂ ಅದರಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವಿದೆ. ಕಾವ್ಯದ ರೂಪವನ್ನು ಅಳಿಸದೆ ಇದ್ದುದನ್ನು ಇದ್ದಹಾಗೆಯೇ ಮತ್ತೊಂದು ಕಾವ್ಯವಾಗಿ ಮಾರ್ಪಡಿಸಿದುದು ಹಿಂದೆ ಎಲ್ಲಿಯೂ ಕಂಡುಬಂದಿರಲಿಲ್ಲ. ಈ ಅಭೂತಪೂರ್ವವಾದ ಕಾರ್ಯ ನಡೆದಿದೆ, ಗಧಾಯುದ್ಧ ನಾಟಕದಲ್ಲಿ. ಹೀಗೆ ಕಾವ್ಯವನ್ನು ಪರಿವರ್ತಿಸುವಂದು ಶ್ರೀಯವರ ಗಾರುಡವಿದ್ಯೆ ಎಷ್ಟರ ಮಟ್ಟಿಗೆ ಸಫಲವಾಗಿದೆಯೆಂಬುದನ್ನೂ, ಹಾಗೆ ಮಾರ್ಪಡಿಸುವಂದು ನಡೆದಿರುವ ಬದಲಾವಣೆಗಳೇನೆಂಬುದನ್ನೂ ಈಗ ಸ್ಥೂಲವಾಗಿ ಪರಿಶೀಲಿಸೋಣ.

ಕಾವ್ಯದಲ್ಲಿದ್ದ ೫೭೬ ಪದ್ಯಗಳು ನಾಟಕದಲ್ಲಿ ೧೪೭ ಪದ್ಯಗಳಿಗೆ ಭಟ್ಟಿ ಇಳಿದಿದ್ದರೂ ಮೂಲದ ರಸವತ್ತಾದ ಸನ್ನಿವೇಶಗಳೊಂದೂ ಕೈಬಿಟ್ಟುಹೋಗದೆ ಅಡಕಗೊಂಡಿರುವುದು ಶ್ರೀಯವರ ಕಲಾಶಕ್ತಿಗೆ ಮೊದಲ ನಿದರ್ಶನ. ರಸವತ್ತಾದ ಸಂಭಾಷಣಾ ಶೈಲಿಯೂ, ನಾಟಕೋಚಿತವಾದ ಕ್ರಿಯಾಸನ್ನಿವೇಶವೂ ಮಾತ್ರವಲ್ಲದೆ ಕನ್ನಡದ ಮತ್ತಾವ ಕಾವ್ಯದಲ್ಲಿಯೂ ಕಾಣಬರದ ವಿದೂಷಕನ ಪಾತ್ರ ಕೂಡ ಗದಾಯುದ್ಧ ಕಾವ್ಯದಲ್ಲಿ ಅಣಿಯಾಗಿತ್ತು. ಇದನ್ನು ಸಂಗ್ರಹಿಸುವುದರ ಜೊತೆಗೆ ಅಲ್ಲಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಇದನ್ನು ಸುಂದರವಾದ ಐದಂಕಗಳ ಒಂದು ನಾಟಕವನ್ನಾಗಿ ಮಾರ್ಪಡಿಸಿದೆ. ಈ ಬದಲಾವಣೆಗಳು ಆಕಾರದಲ್ಲಿ ಸಣ್ಣವಾದರೂ ಪ್ರಭಾವದಲ್ಲಿ ಮಹತ್ವಪೂರ್ಣವಾದವು. ರನ್ನನ ಕಾವ್ಯಕ್ಕೆ ಪಂಪಭಾರತ ಮೇಲ್ಪಂಕ್ತಿ. ಪಂಪನು ಅರಿಕೇಸರಿಯನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ‘ ವಿಕ್ರಮಾರ್ಜುನ ವಿಜಯ ’ವನ್ನು ಬರೆದರೆ, ರನ್ನನು ತನ್ನ ಸ್ವಾಮಿಯಾದ ಇಮ್ಮಡಿ ತೈಲಪನನ್ನು ಕಥಾನಾಯಕನನ್ನಾಗಿ ಆರಿಸಿಕೊಂಡು ‘ ಸಾಹಸ ಭೀಮವಿಜಯ ’ವನ್ನು ಬರೆದನು. “ ಒಳಪೊಕ್ಕು ನೋಡೆ ಭಾರತ | ದೊಳಗಣ ಕಥೆಯೆಲ್ಲಮೀ ಗದಾಯುದ್ಧದೊಳಂ | ತೊಳಕೊಂಡತ್ತೆನೆ ಸಿಂಹಾ | ವಳೋಕನ ಕ್ರಮದಿನಱಿಪಿದಂ ಕವಿರನ್ನಂ ”— ಎಂಬಲ್ಲಿ ರನ್ನನ ಗುರಿಯೇನೆಂಬುದು ಸ್ಪಷ್ಟವಾಗಿದೆ. ಸಂಪ್ರದಾಯದ ಕಟ್ಟುಪಾಡಿಗೆ ಶರಣಾಗಿ ನವರಸಗಳನ್ನೂ ಹದಿನೆಂಟು ವರ್ಣನೆಗಳನ್ನೂ ಕಾವ್ಯದಲ್ಲಿ ತರಬೇಕೆಂಬ ಉದ್ದಿಶ್ಯದಿಂದ ಔಚಿತ್ಯಕ್ಕೆ ಹ್ರಸ್ವಾದೇಶ ಬಂದಿರುವ ಸಂದರ್ಭಗಳು ಕೂಡ ಗದಾ

ಯುದ್ಧದಲ್ಲಿ ಇಲ್ಲದೆಹೋಗಿಲ್ಲ. ಇದರ ಜೊತೆಗೆ ಓಡುವವನ ಕಾಲಿಗೆ ಬೀಸೆಕಲ್ಲು ಕಟ್ಟಿದಂತೆ, ಚರಿತ್ರೆಯ ಕಸ ಸೇರಿಕೊಂಡು ಕಾವ್ಯವಾಹಿನಿಯ ಪ್ರವಾಹವನ್ನು ಕುಂಠಿತಗೊಳಿಸುತ್ತಿದೆ. ನಾಟಕಕ್ಕೆ ಸಂಗ್ರಹ ಔಚಿತ್ಯಗಳೇ ನಿಶ್ವಾಸೋಚ್ಛ್ವಾಸಗಳಾದುದರಿಂದ, ಕಾವ್ಯದಲ್ಲಿ ಕಾಣಬರುವ ಈ ಲೋಪದೋಷಗಳೆಲ್ಲಾ ನಾಟಕದಲ್ಲಿ ನಿವಾರಣೆಯಾಗಿವೆ.

ಗದಾಯುದ್ಧದಲ್ಲಿ ಕಾಣಬರುವ ಸಂವಿಧಾನ ಕೌಶಲವೆಲ್ಲವೂ ಗ್ರೀಕ್ ರುದ್ರನಾಟಕಗಳಲ್ಲಿ ಕಾಣಬರುವ ಕಲಾಕೌಶಲ. ನಾಟಕರಚನೆಯ ಹಿಂದಿನ ವಾಸ್ತುಶಿಲ್ಪ ಗ್ರೀಕ್ ಸಾಹಿತ್ಯದಿಂದ ಬಂದದ್ದು. ಆದರೆ ವಸ್ತು ನಮ್ಮದು; ನಮಗೆ ತಿಳಿದ ಬೃಹದ್ಭಿತ್ತಿಯಲ್ಲಿ ನಡೆದಿದೆ. ವ್ಯಕ್ತಿಗಳ ಪ್ರಭಾವ ನಮ್ಮ ಮೇಲಿದೆ. ಮುಂದೆ ನಡೆಯುವುದೇನೆಂಬುದೂ ನಮಗೆ ಗೊತ್ತಿದೆ. ಹಿಂದಿನ ಈ ಭಾವಕೋಶದ ಪರಿವೇಷ ಈ ಪಾತ್ರಗಳ ಸುತ್ತ ನಿರಂತರ ಸಂಚರಿಸುತ್ತದೆ. ನಮ್ಮ ಸಾಂಪ್ರದಾಯಿಕ ನಾಟಕಗಳೆಲ್ಲವೂ ದಿವ್ಯಸುಂದರ ವಿಗ್ರಹಗಳೆಂದು ಇಟ್ಟುಕೊಳ್ಳುವುದಾದರೆ ಗದಾಯುದ್ಧ ನಾಟಕವೊಂದು ಸಂಪ್ರದಾಯವನ್ನು ದೂಡಿ ನಿಂತಿರುವ ನಿರಾಭರಣ ಸುಂದರಿಯಿದ್ದಂತೆ. ವಿದ್ಯುದ್ವೇಗದಿಂದ ಚಲಿಸುತ್ತಿರುವ ಕಥಾಪ್ರವಾಹ; ಕೇವಲ ಅರ್ಧದಿನದಲ್ಲಿ ನಡೆದ ಕಥಾಘಟನೆ; ಸುತ್ತುಬಳಸಿಲ್ಲದೆ, ಸೂತ್ರಪ್ರಾಯವಾಗಿ, ಈಟಿಯ ಇರಿತದಂತೆ ಅವಿರಾಮಶೀಲವಾಗಿ ಮುಂದುವರಿಯುವ ಸಂವಾದ; ದುರ್ಯೋಧನನ ಪ್ರಲಾಪದಲ್ಲಿ ಈ ಕಥಾಪ್ರವಾಹದ ಓಟ ಸ್ವಲ್ಪ ಕುಂಠಿತವಾಗಿ, ಸುಳಿ ಸುತ್ತುತ್ತಿರುವಂತೆ ಕಾಣಿಸಿದರೂ ಕಾವ್ಯದ ಕಾವಿನಿಂದ ಅದರ ದೀರ್ಘತೆ ಕರಗಿಹೋಗಿದೆ. ಅಲ್ಲದೆ ಆ ಪ್ರಲಾಪವೂ ಒಂದು ಸಿಂಹಪ್ರಲಾಪ. ಶಕ್ತಿ, ಕ್ರಿಯೆಗಳು ಸಗ್ಗವಾಗಿ, ನೇರವಾಗಿ ಗುರಿಗೆ ನುಗ್ಗುತ್ತವೆ; ನಾಟಕದ ಉದ್ದಕ್ಕೂ ಘನೀಭೂತವಾಗಿ ಕಥಾಪ್ರವಾಹದೊಡನೆ ತೇಲಿಕೊಂಡು ಹೋಗುತ್ತವೆ.

ಗದಾಯುದ್ಧ ನಾಟಕದಲ್ಲಿ ಕಾಣಬರುವ ಪಾತ್ರಗಳು ಎರಡೋ ಮೂರೋ. ಬರುವ ಪಾತ್ರಗಳ ಮನೋಧರ್ಮದಲ್ಲಿ ಆದಿಯಿಂದ ಅಂತ್ಯದ ವರೆಗೂ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ದೇವಾಸುರಯುದ್ಧಕ್ಕೆ ಕರಗಂಬೊತ್ತ ಡಾವರಡಾಕಿನಿಯಂತಿರುವ ಆ ಬೆಂಕಿಯ ಮಗಳು ದ್ರೌಪದಿ ಕೇವಲ ಪ್ರತೀಕಾರದ ಪ್ರತಿಕೃತಿ; ಕ್ಷಮೆಯ ಸಾಕಾರದಂತಿರುವ ಯುಧಿಷ್ಠಿರ; ರೌದ್ರತೆಯೇ ಮೈವೆತ್ತಂತಿರುವ ಹಿಡಿಂಬಾಂತಕ; 'ಅಭಿಮಾನವೊಂದನೆ ಬಲ್ವಡಿವಿಡಿವೆಂ' ಎಂಬ ಮಹಾನುಭಾವನಾದ ಸುಯೋಧನ, ಇವೇ ನಾಟಕದ ಪ್ರಮುಖಪಾತ್ರಗಳು. ಆದಿಯಿಂದಲೂ ರೌದ್ರ ಮತ್ತು ಕರುಣ ಪ್ರಧಾನವಾಗಿದ್ದರೂ ನಾಟಕದ ಕೊನೆ ಶಾಂತಿರಸಾಭಿಮುಖವಾಗಿ ಸಾಗುತ್ತಿದೆ. ಕದನ ಕೊನೆಗೊಂಡ ಮೇಲೆ.

"ಪಂಕಜಮುಂ ಸುಹೃದ್ವಧನ ಪಂಕಜಮುಂ ಮುಗಿವನ್ನಮುಗ್ರತೇ
ಜಂ ಕಿಡುಕಿರ್ಪಿನಂ ನಿಜಕರಂಗಳನಂತುಡುಗುತ್ತುಮಿರ್ದು ಚ |
ಕ್ರಾಂಕಮಗಲ್ವಿನಂ ಕ್ರಮದಿನಂಬರಮುಂ ಬಿಸುಟುರ್ಬಿನಂಧಕಾ
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ ||"

ಆ ಅಸ್ತಮಯ ಪ್ರಶಾಂತಸಮಯದಲ್ಲಿ, ನೀರವರಣ ರಂಗದಲ್ಲಿ, ಪ್ರಭಾವಶಾಲಿಯಾಗಿ ಕೇಳಿಬರುತ್ತದೆ—'ಇನ್ನೆನಗೆ ತಪೋವನಮೆ ಬಾಳ್ತೆ' ಎಂಬ ಅಶ್ವತ್ಥಾಮನ ಮಾತು. ಇದರೊಡನೆ ನಾಟಕ ಕೊನೆಯಾಗುತ್ತದೆ. ದುರ್ಭರವಾದ ಅವ್ಯಕ್ತ ಶಕ್ತಿಯೊಂದು ತನ್ನ ಅಪ್ರತಿಹತವಾದ ಆಧಿಪತ್ಯವನ್ನು ನಾಟಕದ ತುಂಬ ಹರಡಿಕೊಂಡಿದೆ. ಕೌರವನು "ಪ್ರತಿಕೂಲದೈವನ್," ಪಾಂಡವರು "ಅನುಕೂಲ ದೈವರ್," "ಸಮರ ಜಯಂ ದೈವಾಯತ್ತಂ" ನಾಟಕದ ಕೊನೆಯೊಡನೆ ತನ್ನ ಬಾಳಕೊನೆಯನ್ನು ಸೇರಿರುವ ಕೌರವ "ಇದೆಲ್ಲಂ ಕೃಷ್ಣನ ಮಾಯೆ! ಹರಿ ಹರಿ! ಪೋಗು. ಇದಕ್ಕೆ ಪ್ರಾಯಶ್ಚಿತ್ತಂ ಮಾಡು. ದೈವದ ಮುಂದೆ ನಾಮಲ್ತು" ಎಂಬ ಪರಮಸಿದ್ಧಾಂತವನ್ನು ಅಶ್ವತ್ಥಾಮನಿಗೆ ಬೋಧಿಸುವ ಘಟ್ಟವನ್ನು ಮುಟ್ಟುತ್ತಾನೆ. ವಿಜಯೋನ್ಮತ್ತನಾದ—ಅಧರ್ಮದಿಂದ ವಿಜಯಿಯಾಗಿರುವ, ಭೀಮನ ತಲೆಯ ಮೇಲೆ ಘೋರಮೂರ್ತಿಗಳು ಆಡುತ್ತಿವೆ. ಇವೆಲ್ಲವೂ ಗ್ರೀಕ್ ರುದ್ರನಾಟಕದ ಆವರಣವನ್ನೇ ತಂದುಹಾಕಿವೆ. ಅದರಲ್ಲಿಯೂ ಭೀಮನ ತಲೆಯ ಮೇಲಾಡುವ ಆ 'ಘೋರಮೂರ್ತಿಗಳು'—ಪ್ರತೀಕಾರಶಕ್ತಿಗಳು (Furies)—ಗ್ರೀಕ್ ರುದ್ರನಾಟಕದ ಪಡಿಯಚ್ಚುಗಳೇ ಸರಿ.

ಕವಿರನ್ನ ತನ್ನ ಕಾವ್ಯವನ್ನು ಸೃಷ್ಟಿಸುವಂದು ಆತನ ಮನೋಭಾವ ಗ್ರೀಕ್ ರುದ್ರನಾಟಕಕಾರನ ಮನೋಭಾವವಾಗಿಯೇನೂ ಇರಲಿಲ್ಲ. ಆತನ ಧೋರಣೆಯೇ ಬೇರೆಯಾಗಿತ್ತು. ನಾಟಕದಲ್ಲಿ ಸುಯೋಧನ ನಾಯಕನಾಗಿದ್ದರೆ ರನ್ನನ ಕಾವ್ಯಕ್ಕೆ ಭೀಮನೇ ನಾಯಕ. "ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ." ಕಾವ್ಯವು ಭೀಮನ ಘೋರ ಅಪರಾಧದಿಂದ ಆರಂಭವಾಗಿ, ಆ ಪ್ರತಿಜ್ಞೆ ನೆರವೇರಿ ಭೀಮನ ಪಟ್ಟಾಭಿಷೇಕದೊಡನೆ ಕೊನೆಗೊಳ್ಳುತ್ತದೆ. ಕಾವ್ಯದ ಪೂರ್ವಾರ್ಧದಲ್ಲೆಲ್ಲಾ ಬರಿಯ ಭೀಮನ ಆಟಾಟೋಪಗಳೇ. ನಾಟಕದಲ್ಲಿ ವಿನಯಹೀನನಾಗಿರುವ ಭೀಮ ಕಾವ್ಯದಲ್ಲಿ "ಕುರುಕುಲಪ್ರಧಾನನೆನಿಸಿದ ಅಜಾತಶತ್ರುವಿಗೆ ಸಾಷ್ಟಾಂಗ ನಮಸ್ಕಾರಮಾಡಿ "ಆನುಂ ವಿಧೇಯನಲ್ಲಂ ನೀನುಂ ಗುರುವಲ್ಲಮಿಂದಿನೊಂದಿವಸದೊಳಂ" ಎಂದು ಆರಂಭಿಸುತ್ತಾನೆ. ಆ ಪೂರ್ವಪೀಠಿಕೆ ಲೋಪವಾಗಿರುವ ನಾಟಕದಲ್ಲಿ ಅವನ ಅವಿನಯ ಮಾತ್ರ ಹೊರಗಾಣುವಂತೆ ಮಾಡಿದ್ದಾರೆ. ನಾಟಕದಲ್ಲಿ, ಸರೋಮಧ್ಯದಿಂದ ನಿಜಭುಜ ಗದೆಯೊಡನೆ ಲಂಘಿಸಿ ಬಂದ ಧುರ್ಯೋಧನನನ್ನು ಮೆಚ್ಚಿ ತಲೆದೂಗುವ ಉದಾತ್ತ

ವ್ಯಕ್ತಿ ಮೂಲದ ಭೀಮ. ಗಧಾಯುದ್ಧ ಆರಂಭವಾಗುವ ಮುನ್ನ ತನ್ನ ಗುರುಗಳನ್ನು ಮನಸ್ಸಿನಲ್ಲೇ ಸ್ಮರಿಸಿ ನಮಸ್ಕರಿಸುತ್ತಾನೆ, ಆತ. ನಾಟಕದಲ್ಲಿ ಇವು ಆಚ್ಛಾದನ ಗೊಂಡು ಆತನ ಒರಟುತನ ಮಾತ್ರ ವಿಜೃಂಭಿಸುತ್ತದೆ. ಮೂಲದಲ್ಲಿ ಭೀಮನ ಅತುಲ ಪರಾಕ್ರಮವೇ ಗದಾಯುದ್ಧಕ್ಕೆ ನಾಂದಿಯಾದರೆ, ನಾಟಕದಲ್ಲಿ ಶ್ರೀ ಕೃಷ್ಣನ ಕೃತ್ರಿಮ ಪ್ರಚೋದನೆಯೇ ಅದಕ್ಕೆ ಕಾರಣವಾಗುತ್ತದೆ. ಶ್ರೀ ಕೃಷ್ಣನು "ವಿನಯಮನೆ ಮೆರೆವ ದುರ್ಯೋಧನನಂ ನೀನೆನ್ನ ಮುಂದೆ ನುಡಿವುದೇ ಭೀಮಾ ?" ಎಂದು ಹೇಳಿ "ಧುರ್ಯೋಧನ! ಧರ್ಮತನೂಜನೊಳ್ಳಿತಂ ಪೇಳ್ದಪನಾತನ ಪೇಳ್ದುದೆಸೆಗಿ ನೀನರಸನಾಗಿ ವಸುಮತಿಯನಾಳ್ವುದಾವುದುದೋಷಂ ?" ಎಂಬ ಮಾತುಗಳ ವಿನಯ ನಾಟಕದಲ್ಲಿ ಮಾಯವಾಗಿ "ದುರ್ಯೋಧನ, ಧರ್ಮಜಂ ಕೃಪೆಯಿನೊಳ್ಳಿತಂ ಪೇಳ್ದಪಂ. ಈಗಳುಂ ಕೇಳ್ದು ಬರ್ದುಕು" ಎಂಬ ಕಟಕಿಯಾಗಿ ಪರಿವರ್ತಿತವಾಗಿದೆ. ಅವೆರಡಕ್ಕಿರುವ ಅಜಗಜಾಂತರ ವ್ಯತ್ಯಾಸವನ್ನು ಗಮನಿಸಬೇಕು. ಅಲ್ಲದೆ "ಕುರುಪತ್ಯೂರು ಕಿರೀಟಭಂಗಮಂ ಪಡೆದು ಜಗತ್ ಸ್ತುತ್ಯ ಕೃತಕೃತ್ಯನೆನಿಸದೆ ಸತ್ಯಾಶ್ರಯವೆಸರ್ಗೆ ಮುಯ್ಯಾನಾಂಪನೆ ಭೀಮಂ" ಎಂಬ ಭಾವನೆ ಪಲ್ಲವಿ ಅನುಪಲ್ಲವಿಯಾಗಿ ಗದಾಯುದ್ಧ ಕಾವ್ಯದಲ್ಲಿ ಮೇಲಿಂದ ಮೇಲೆ ಬರುವುದರಿಂದ, ಭೀಮನ ಪ್ರತಿಜ್ಞೆ ನಡೆದಾಗ ನಮಗೆ ಅದೊಂದು ಮನಕಲಕುವ ಸಂಗತಿಯೇನೂ ಆಗುವುದಿಲ್ಲ. ಕಾವ್ಯದಲ್ಲಿ ಸಹೃದಯನ ಸಹಾನುಭೂತಿ ಭೀಮನನ್ನು ಉದ್ದಕ್ಕೂ ಹಿಂಬಾಲಿಸುತ್ತದೆ. ಆದರೆ ನಾಟಕದಲ್ಲಿ ಅದು ದುರ್ಯೋಧನನ ಕಡೆ ತಿರುಗುತ್ತದೆ; ಮತ್ತು ಅನಿರೀಕ್ಷಿತವಾದ ಅಪಚಾರದ ವ್ಯಕ್ತತೆಯೇ ನಮಗೆ ದೊಡ್ಡ ದುರಂತದ ಅನುಭವವುಂಟುಮಾಡಿಕೊಡಲು ಸಾಧನೆಯಾಗಿದೆ. ರನ್ನನ ಕಾವ್ಯಪಾಠಕರು ಕೇಳುತ್ತಾರೆ—ಭೀಮ ಮಾಡಿದುದು ಅಕಾರ್ಯವಾದರೂ ಕೌರವ ಹೇಳುವ "ಪಸೆಯೊಳ್ಪಸುವಂದರೊಳ| ಗ್ನಿಸಾಕ್ಷಿಯೊಳ್ಕೊಂಡಪಾಂಡುಪತಿಯಿರೆ ದೋಷಾ| ವಸಥಪರ್ಾದರದಿಂಜನಿ| ಯಿಸಿದ ಪರ್ಾಂಡವರೊಳಲ್ಲದೆಮ್ಮೊಳುಮುಂಟೆ?" ಎಂಬ ಕಠೋರವಾಕ್ಯ ಸರಿಯೆ ? ಎಂದು. ರನ್ನನ ದೃಷ್ಟಿಯಲ್ಲಿ ಭೀಮ ದುರ್ಯೋಧನ ರಿಬ್ಬರ ನಿಲವೂ ಒಂದೇ ಮಟ್ಟದ್ದು. ಭೀಮ ಧರ್ಮದ ಪರವಾಗಿಯೂ ದುರ್ಯೋಧನ ಅದಕ್ಕೆ ವಿರುದ್ಧವಾಗಿಯೂ ನಿಂತಿದ್ದಾರೆ. ಆದ್ದರಿಂದ ಮೂಲವನ್ನು ಓದಿದಾಗ ದುರ್ಯೋಧನನ ಮೇಲಿನ ಅಲ್ಪಸ್ವಲ್ಪ ಅನುಕಂಪ ಭೀಮನಿಗೆ ವಿರುದ್ಧವಾಗಿ ಪರಿಣಮಿಸುವುದಿಲ್ಲ. ತದ್ವಿರುದ್ಧವಾಗಿರುವುದು ಗದಾಯುದ್ಧ ನಾಟಕದ ದೃಷ್ಟಿ. ಹೀಗೆ ನಾಟಕಕಾರರು ನಾಯಕನ ಸೃಷ್ಟಿಯಲ್ಲಿ ವ್ಯತ್ಯಾಸಮಾಡಿ, ನಿಜವಾದ ನಾಯಕನನ್ನು ಹಿಂದೊತ್ತಿ, ಪ್ರತಿನಾಯಕನನ್ನು ನಾಯಕನನ್ನಾಗಿ ಮುಂದಕ್ಕೆ ತಂದು, ಗ್ರೀಕ್ ರುದ್ರನಾಯಕನಲ್ಲಿ ಕಾಣಬರುವ ಛಲ ಮತ್ತು ಪ್ರತೀಕಾರ ಮನೋಧರ್ಮಗಳನ್ನು

ಅವನಲ್ಲಿ ನೆಲೆಗೊಳಿಸಿ, ಇಡೀ ನಾಟಕವನ್ನು ಒಂದು ಗ್ರೀಕ್ ರುದ್ರನಾಟಕದ ಮಾದರಿಯಾಗಿ ನೇರ್ಪುಗೊಳಿಸಿದ್ದಾರೆ.

ಮೇಲಿನ ಮಾತುಗಳಲ್ಲಿ ಕಾಣಬರುವ ಒಂದು ತತ್ವವೆಂದರೆ—ಇದ್ದುದನ್ನು ಮುಚ್ಚುವುದರಿಂದಲೇ ಹೊಸದೊಂದನ್ನು ಬಿಚ್ಚಿದಂತಾಗಿದೆ. ಹೊಸತು ಪ್ರವೇಶಿಸಿ ನೂತನ ಸೃಷ್ಟಿಯಾಗುವುದಿಲ್ಲ ; ಹಳೆಯದರ ಆವರಣಚಾತುರ್ಯದ ಪರಿಣಾಮವಾಗಿಯೇ ಒಂದು ಚಿರನೂತನವಾಗಿ ತೋರುವ ವಿಶೇಷ ಉದಿಸಿದೆ. ಇದರ ಜೊತೆಗೆ, ಮೂಲಕಾವ್ಯದಲ್ಲಿನ ಮಾತುಗಳನ್ನೇ ಅಲ್ಲಲ್ಲಿ ಅಲ್ಪಸ್ವಲ್ಪ ಬದಲಾಯಿಸಿರಬಹುದು. 'ಎಂದು ನೊಂದು ನುಡಿಯೆ' ಎಂಬ ಕಾವ್ಯದ ಮಾತನ್ನು 'ನೊಂದು ನುಡಿವಳ್ ತಂಗೆ' ಎಂದು ಕೃಷ್ಣನ ಬಾಯಲ್ಲಿಟ್ಟು ನಾಟಕದ ಸಂಭಾಷಣೆಗೆ ಹೊಂದಿಸಿಕೊಂಡಿದೆ. ಹಾಗೆಯೇ 'ಎಂದು ಪಶ್ಚಾತ್ತಾಪಂಗೆಯ್ದು' ಎಂಬ ಮೂಲದ ಮಾತನ್ನು ಭೀಮನ ಬಾಯಲ್ಲಿ 'ಪ್ರಿಯಮೆನಗೆ ಈ ಪಶ್ಚಾತ್ತಾಪಂ' ಎಂದು ಬರುವಂತೆ ಮಾರ್ಪಡಿಸಿದೆ. 'ಭೀಷ್ಮ ಶರಾಚಾರ್ಯರ ನುಡಿ ತಪ್ಪುಗಡ ಅನಾರ್ಯಂಗಹಿಕೇತನಂಗೆ ವಿಧಿವಿಳಸನದಿಂ' ಎಂಬ ಕಾವ್ಯೋಕ್ತಿಯಲ್ಲಿ 'ಅನಾರ್ಯ' ಎಂಬ ಪದಕ್ಕೆ ಬದಲಾಗಿ 'ಅಕಾರ್ಯ' ಎಂದು ತಿದ್ದಿರುವುದು ಎಷ್ಟು ವಿಹಿತವಾಗಿದೆ! ಸಂಜಯನ ಬಾಯಲ್ಲಿ ಸುಯೋಧನನನ್ನು 'ಅನಾರ್ಯ' ಎಂದು ಹೇಳಿಸುವುದು ನಾಟಕದಲ್ಲಿರುವ ಮನೋಭಾವಕ್ಕೆ ವಿರುದ್ಧವಾಗಿದೆ. "ಎನಗ ಹಿತರೊಡನೆ ಪುದುವಾಳೆನೆ ನೊಂದೆ ನದೀಜನಬ್ಯರ್ಥನೆಯಿಂ" ಎಂಬ ನುಡಿಗಳಿಗೆ ಬದಲಾಗಿ "ಎನಗೆ ತಲೆಗರೆದುನೀರೊಳ್ ಕುನಿಯೆನೆ ನೊಂದೆಂ ನದೀಜನಬ್ಯರ್ಥನೆಯಿಂ" ಎಂಬುದಾಗಿ ಮಾರ್ಪಡಿಸಿರುವುದಾದರೂ ಸ್ಪರ್ಶಮಣಿಯಿಂದಾಗುವ ಮಾರ್ಪಾಡೇ ಸರಿ.

ಕಾವ್ಯದಲ್ಲಿ ಬಂದಿರುವ ಅಖಂಡ ಪದ್ಯಗಳನ್ನು ಮೂಲದ ಸಂದರ್ಭಗಳಿಂದ ಸ್ವಲ್ಪ ಬದಲಾಯಿಸಿರುವುದೂ ಉಂಟು. ಕವಿಯ ಸ್ವಂತ ವರ್ಣನೆಗಳಾದ "ಕುರು ಭೂಭೃದ್ಬಲ ಕೂಲ ತೂಲ ಪವನಂ . . . ಅಭಿವರ್ಣಿಪೆಂ ರಣಯಶಶ್ರೀರಾಮನಂ ಭೀಮನಂ" ಎಂಬ ಪದ್ಯವನ್ನು ಶ್ರೀಕೃಷ್ಣನ ಬಾಯಲ್ಲಿಯೂ "ಇಡೆತೊಡೆಯ ನುಡಿದು ನೆಟ್ಟನೆ . . . ಕೌರವೇಂದ್ರಂ ಮೆರೆವಂ" ಎಂಬ ಪದ್ಯವನ್ನು ಅಶ್ವತ್ಥಾಮನ ಬಾಯಲ್ಲಿಯೂ, "ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ . . . ಮಹಾನುಭಾವನೋ" ಎಂಬ ಪಂಪನ ಪದ್ಯವನ್ನು ಲಕ್ಷ್ಮಿಯ ಬಾಯಲ್ಲಿಯೂ ಹೇಳಿಸಿರುವುದು ನಾಟಕದ ನಾಟಕೀಯತೆಯನ್ನು ಉಳಿಸಲು, ಬೆಳೆಸಲು, ಬೆಳಗಿಸಲು ಸಹಾಯಕವಾಗಿವೆ.

ಶ್ರೀಯವರು ಕಾವ್ಯದಲ್ಲಿಲ್ಲದ ಕೆಲವು ಚಿಕ್ಕ ಚಿಕ್ಕ ಮಾತುಗಳನ್ನು ನಾಟಕದಲ್ಲಿ

ಹೊಸದಾಗಿ ಸೇರಿಸಿದ್ದಾರೆ.—'ಎನ್ನ ಆರಾಧನೆಯ ಶಕ್ತಿ ಇವಳ್,' 'ನಡೆ ಭೀಮನಂ ತೋರು,' 'ತಾಯೆ, ಪಿಂತಿರಿಂ ಕಾರ್ಯಂ ಕೆಟ್ಟುದು,' 'ಮಹಾರಾಜ, ಇತ್ತ ಬಾರಿದಿರ್, ಬಾರದಿರ್,' 'ವಿಜಯೋನ್ಮತ್ತರಿವರ್ ಕಾಣರ್ ; ನಾಂ ಕಾಣ್ಬೆಂ ಭೀಮನ ತಲೆಯ ಮೇಲಾಡುವ ಘೋರಮೂರ್ತಿಗಳಂ' ಈ ನುಡಿಗಳು ಗ್ರೀಕ್ ರುದ್ರನಾಟಕ ಮನೋಧರ್ಮಕ್ಕೆ ಪ್ರತೀಕಗಳಾಗಿವೆ. ಇವುಗಳಿಂದ ವಾತಾವರಣವೇ ಬದಲಾಯಿಸಿ ನೂತನ ಸನ್ನಿವೇಶವೊಂದು ಸೃಷ್ಟಿಯಾಗುತ್ತದೆ; ಪಾತ್ರಗಳ ಸ್ವರೂಪದ ದಿಕ್ಕು ಬದಲಾಯಿಸಿಹೋಗುತ್ತದೆ.

ಗದಾಯುದ್ಧ ನಾಟಕಕ್ಕೆ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಮಹತ್ವಾದ ಒಂದು ಸ್ಥಾನವಿದೆ. ಪ್ರಾಚೀನವೇ ನವೀನಕ್ಕೆ ಸ್ಫೂರ್ತಿಕೊಟ್ಟು, ಆ ಸ್ಫೂರ್ತಿ ಪಾಶ್ಚಾತ್ಯ ಸಾಹಿತ್ಯದ ಸಂಸ್ಕೃತಿಯ ಸಾಣೆಗೆ ಸಿಕ್ಕಿ ಸುಂದರ ರೂಪವನ್ನು ತಳೆದುದು ಈ ನಾಟಕ. ಈ ನವೀನ ನಾಟಕ ನಮ್ಮ ಬರೆಹಗಾರರ ಆತ್ಮಪ್ರತ್ಯಯಕ್ಕೆ ಪ್ರಚೋದನ ಶಕ್ತಿಯಾಯಿತು; ಸುಪ್ತಸ್ಥಿತಿಯಲ್ಲಿದ್ದ ನವಚೇತನವನ್ನು ಬಡಿದು ಎಚ್ಚರಿಸಿತು. ಪದ್ಯನಾಟಕವೊಂದು ಗದ್ಯನಾಟಕದಷ್ಟೇ ಸ್ಫೂರ್ತಿದಾಯಕವಾಗಿರಬಲ್ಲುದೆ—ಎಂಬ ಸಂದೇಹವನ್ನು ನಿವಾರಿಸಿತು. ಕಂದವೃತ್ತಗಳ ಬರಹ ಸಂವಾದವನ್ನು ನಿರ್ವಹಿಸ ಬಲ್ಲುದೆಂದು ಮನದಟ್ಟುಮಾಡಿಕೊಟ್ಟಿತು; ನೂತನ ಪಂಥದ ಸೃಷ್ಟಿಗೆ ಮಾರ್ಗ ಪ್ರೇರಕವಾಯಿತು.

ತ. ಸು. ಶಾಮರಾಯ

ಕಾವ್ಯಾವಲೋಕನ

ಶ್ರೀ ರಮಣಮಹರ್ಷಿ :—ಲೇಖಕರು : ಅರ್ಚಕ ವೆಂಕಟೇಶ್ ಮತ್ತು ಎಚ್. ಎಸ್. ರೇಣುಕಪ್ರಸಾದ್, ಬಿ.ಎ. ; ಪ್ರಕಾಶಕರು : ವಿದ್ಯಾರ್ಥಿ ಪ್ರಕಟನಾಲಯ, ಬೆಂಗಳೂರು, ೨ ; ಕ್ರೌ. ಅ. ಪು. v+೯೮ ; ಬೆಲೆ, ರೂ. ೧-೦-೦.

ಗಡಿಬಿಡಿ, ಕಳವಳ, ಅವಸರ, ಅಸಹನೆ ತುಂಬಿರುವ ಇಂದಿನ ಜನಜೀವನದಲ್ಲಿ ಮಹಾಕಾವ್ಯಗಳ ಅಥವಾ ಮಹಾಪುರುಷರ ಅವತಾರ ಸಾಧ್ಯವೆ ಎಂದು ಮಿತ್ರರೊಬ್ಬರು ನಿರುತ್ಸಾಹದ ಸೊಲ್ಲೆತ್ತಿದರು. ಭಾರತೀಯ ಸಂಸ್ಕೃತಿಯನ್ನೂ ಅದರ ಇತಿಹಾಸವನ್ನೂ ಒಳಹೊಕ್ಕು ನೋಡಿದವರು, ಭಾರತೀಯ ದೃಷ್ಟಿಯಿಂದ ಜೀವನವನ್ನು ಅಖಂಡವಾಗಿ ವೀಕ್ಷಿಸುವವರು ಎಂದೂ ನಿರಾಶರಾಗುವುದಿಲ್ಲ. ಅನೇಕ ಪ್ರಕಾರಗಳ ಮೂಲಕ, ಪ್ರಣಾಳಿಕೆಗಳ ಮೂಲಕ ವಿಭೂತಿತ್ವ ನಿತ್ಯವೂ ಪ್ರಕಟಗೊಳ್ಳುತ್ತಿರುತ್ತದೆ. ಎಂದೋ ಒಂದು ಸಾರಿ ಅದು ನಮ್ಮ ಕಣ್ಣಿಗೆ ಬೀಳುತ್ತದೆ. ನಮ್ಮ ಅಪೂರ್ಣದೃಷ್ಟಿಗೆ ಗೋಚರವಾಗದ ಮಾತ್ರಕ್ಕೆ ಅದು ' ಇಲ್ಲ ' ಎನ್ನುವಂತಿಲ್ಲ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳಿದ್ದು, ' ನಿತ್ಯವೂ ಎಷ್ಟೋ ಮಂದಿ ಬುದ್ಧರು ಆಗಿಹೋಗುತ್ತಿದ್ದಾರೆ ; ನಾವು ನೋಡಿರುವುದು ಒಬ್ಬ ಬುದ್ಧನನ್ನು ಮಾತ್ರ ' ಎಂದು.

ಸುಮಾರು ನೂರೈವತ್ತು ವರ್ಷಗಳ ರಾಜಕೀಯ ದಾಸ್ಯದ ಪರಿಣಾಮವಾಗಿ ಭಾರತೀಯ ಜನಜೀವನ ಹೊರನೋಟಕ್ಕೆ ನಿಶ್ಚೇಷ್ಟಿತವಾಗಿ ಕಂಡುಬಂದರೂ, ಅದರ ಅಂತರಂಗದಲ್ಲಿ ನಿತ್ಯಚೈತನ್ಯದ ಅಗ್ನಿ ಜ್ವಾಲೆ ಅನವರತ ಪ್ರಬುದ್ಧವಾಗಿದೆಯೆನ್ನುವುದಕ್ಕೆ ಮಹಾತ್ಮ ಗಾಂಧೀಜಿ, ಶ್ರೀ ಅರವಿಂದ, ಶ್ರೀ ರಮಣಮಹರ್ಷಿಗಳೇ ನಿದರ್ಶನವಾಗಿದ್ದಾರೆ. ಆದರೆ ಅವರ ಮಾಹಾತ್ಮ್ಯೆ ಅವರ ಜೀವಿತಕಾಲದಲ್ಲಿಯೆ ಎಲ್ಲರಿಗೂ ಸಮಪ್ರಮಾಣದಲ್ಲಿ ಅರಿವಾಗದಿರಬಹುದು. 'ಮಹಿಮೆ ಮಹಿಮೆಗೆ ಮಾತ್ರ ಗೋಚರವಾಗುತ್ತದೆ.' ಆ ಮಹಿಮೆಯನ್ನು ಅರ್ಥಮಾಡಿಕೊಳ್ಳಲು ಮಾನವನಿಗೆ ನೂರಾರು ವರ್ಷಗಳು ಬೇಕಾಗಬಹುದು.

ಜೀವನಚರಿತ್ರೆ ಬರಿಯ ' ಚರಿತ್ರೆ'ಯಲ್ಲ ; ವ್ಯಕ್ತಿಯ ಅಂತರಂಗ ವಿಕಾಸಕ್ರಮದ ನಿಷ್ಠಾಪೂರ್ಣವಾದ ನಿರೂಪಣೆಯೆ ಜೀವನಚರಿತ್ರೆ. ಆದ್ದರಿಂದ ಆ ವ್ಯಕ್ತಿಯ ಆಂತರಿಕ ಜೀವನವನ್ನು ಆತ್ಮೀಯತೆಯಿಂದ ನೋಡಿರುವವರು ಮಾತ್ರ ಜೀವನಚರಿತ್ರೆಯನ್ನು ಬಹುಮಟ್ಟಿಗೆ ಯಶಸ್ವಿಯಾಗಿ ಬರೆಯುಬಲ್ಲರು. ಈ ದೃಷ್ಟಿಯಿಂದ ಶ್ರೀ ಅರವಿಂದರ ಮತ್ತು ಶ್ರೀ ರಮಣಮಹರ್ಷಿಗಳ ಜೀವನಚರಿತ್ರೆಯನ್ನು ಬರೆಯುವ ಭಾಗ್ಯ ಎಲ್ಲರಿಗೂ

ದೊರೆಯಲಾರದು. ಅವರ ಅಂತರಂಗದ ಶಿಷ್ಯರಲ್ಲಿ ಕೆಲವರಾದರೂ ಬರೆಯಬಹುದು. ಆದರೆ ಅವರೂ 'ಪೂರ್ಣ ಜೀವನ'ವನ್ನು ಚಿತ್ರಿಸಬಲ್ಲರೆಂದು ಹೇಳಲಾಗುವುದಿಲ್ಲ. "ನನ್ನ ಜೀವನವನ್ನು ಕುರಿತು ಬರೆಯಲು ಯಾರಿಗೂ ಸಾಧ್ಯವಲ್ಲ; ಏಕೆಂದರೆ ಮನುಷ್ಯದೃಷ್ಟಿಗೆ ಅಗೋಚರವಾದ ಭೂಮಿಕೆಯಲ್ಲಿಯೆ ಅದು ಸಾಗಿದೆ" ಎಂದು ಶ್ರೀ ಅರವಿಂದರೇ ಹೇಳಿದ್ದಾರೆ. "ಮನುಷ್ಯ ಮನೋಮಯದ ವಾಗ್ ವಿಧಾನಗಳಿಂದ ಆ 'ಅತಿಮಾನಸ'ದ ಅನುಭವಗಳನ್ನೂ ತತ್ತ್ವಗಳನ್ನೂ ಅದರ ಸಂಭೂತಿಯ ಪ್ರಕಾರಗಳನ್ನೂ ಉಕ್ತಿವಶವಾಗುವಂತೆ ವರ್ಣಿಸುವುದಾದರೂ ಎಂತು?"

ಶ್ರೀ ಅರವಿಂದರ ಜೀವನದಂತೆಯೆ ಶ್ರೀ ರಮಣಮಹರ್ಷಿಗಳ ಜೀವನವೂ ಗಹನವಾದುದು, ಅಗಮ್ಯವಾದುದು, ಇಂದ್ರಿಯಾತೀತವಾದುದು. ಸಾಮಾನ್ಯ ಮನುಷ್ಯ ಚೇತನ ಅವರ ಜೀವನವನ್ನು ಅರಿಯುವುದಾಗಲೀ, ಅರಿತುದನ್ನು ದಿನಬಳಕೆಯ ಮಾತಿನ ಮೂಲಕ ತಿಳಿಯಪಡಿಸುವುದಾಗಲೀ, ಸುಲಭವಲ್ಲ. ಬಟ್ಟಲು, ಚೆಂಬು, ಬಿಂದಿಗೆ, ಹಂಡೆಗಳು ಸಾಗರದ ನೀರನ್ನು ಅಳೆಯಲು ಯತ್ನಿಸುವಂತಾಗುತ್ತದೆ ಅವರ ಪ್ರಯತ್ನ. ಆದರೆ ಅವರ ಪ್ರಯತ್ನವೂ ಸ್ತುತ್ಯವಾದುದೇ. ಏಕೆಂದರೆ ಭೂಮದ ಸಂಪರ್ಕದಿಂದ ಅಲ್ಪದ ಅಲ್ಪತ್ವ, ಸಂಪರ್ಕವಿರುವಷ್ಟು ಕಾಲವಾದರೂ, ಮರೆಯಾಗುತ್ತದೆ.

ಈ ದೃಷ್ಟಿಯಿಂದ ಈ ಪುಟ್ಟ ಗ್ರಂಥಕ್ಕೆ ಬೆಲೆಯಿದೆ. ಶ್ರೀ ರಮಣಮಹರ್ಷಿಗಳ ಇಹಜೀವನದ ವಿಷಯವಾಗಿ ತಮಗೆ ತಿಳಿದಷ್ಟನ್ನು ಸರಳವಾಗಿ ನಿರೂಪಿಸಿದ್ದಾರೆ. ತಮಗೆ ತಿಳಿದಷ್ಟು ತಿಳಿವನ್ನು ತಿಳಿಯದವರಿಗೆ ಹಂಚುವುದು ತಿಳಿದವರ ಕರ್ತವ್ಯ; ಅದು ಅವರ ಭಾಗ್ಯ.

ದೇ. ಜ. ಗೌ.

*
* *

"ಹೃದಯಗೀತ"—ಲೇಖಕರು: ರಾಮಚಂದ್ರಶರ್ಮ; ಪ್ರಕಾಶಕರು: ಎಚ್. ಎಸ್. ರಂಗಸ್ವಾಮಿ, ಸಾಯ್ ನ್ಯಾಶನಲ್ ಮಾರ್ಟ್, ೧೩ ನಾಗಸಂದ್ರ ರಸ್ತೆ, ಬೆಂಗಳೂರು; ಬೆಲೆ, ಒಂದು ರೂಪಾಯಿ.

ಬೆಂಗಳೂರಿನ ತರುಣಕವಿ ರಾಮಚಂದ್ರಶರ್ಮರ ೩೩ ಕವನಗಳ ಸಂಗ್ರಹ ಇದು; ಕವಿಯ ಮೊದಲ ಕೃತಿ. ಇವುಗಳಲ್ಲಿ ೨೪ ಕವಿಯ ಸ್ವಂತ ಕವನಗಳೂ ೯ ಅನುವಾದಗಳೂ ಇವೆ.

ಸಂಕಲನದ ಆರಂಭದಲ್ಲಿರುವ 'ಯಾವ ಹಾಡ ಹಾಡಲಿ?' ಎಂಬ ಕವನ, ಕವಿಯ ಕಾವ್ಯಜೀವನದ ಆರಂಭದಲ್ಲಿನ ಸಹಜ ಒಳತೋಟಿಯನ್ನು ಬಿಂಬಿಸುತ್ತದೆ. ಪ್ರಕೃತಿಯ

ಮತ್ತು ಮಾನವನ ಬಗೆಬಗೆಯ ಚೆಲುವು ಒಲವುಗಳನ್ನು ಕುರಿತು ಬರೆಯಲೆ ಎಂದು ಪ್ರಶ್ನಿಸಿಕೊಂಡಾಗ ಕವಿಗೆನ್ನಿಸುತ್ತದೆ.

‘ ನನಗಿಂತ ಮುನ್ನವೇ ಬಾಣಸಿಗರೆನಿತೊ ಹದ—
ವರಿತು ಇಟ್ಟಿರಲು ನನ್ನನಾರು
ಬಡ ಅಡಿಗೆಯವನನ್ನು ಕೇಳುವವರು !
ನಾ ಬರೆದ ಕವನಗಳ ಅಚ್ಚು ಹಾಕುವ ಹುಚ್ಚು
ಸಾಹಸಕೆ ಕೈಯಿಡುವ ವೀರನಾರು ? ’

ಎಂದು. ಜಗತ್ತಿನ ಆರ್ಥಿಕ ವಿಷಮತೆಯನ್ನು ಕುರಿತು, ಶ್ರೀಮಂತರ ಸುಲಿಗೆಯನ್ನು ಕುರಿತು ಹಾಡಿ, ಅಲ್ಪಸಂತೃಪ್ತರಾದ ಜನರನ್ನು ಕ್ರಾಂತಿಪಥಕ್ಕೆ ಎಳೆಯಲೆ ಎಂದು ಯೋಚಿಸಿದರೆ,

‘ ದೇವ, ವಿಧಿ, ಕವಿಸೃಷ್ಟಿ ; ಅದುವೆ ವಾಸ್ತವ ದೃಷ್ಟಿ
ಎಂದೆನಲು ನಾ ನಿಜಕು ಧರ್ಮದುಷ್ಟ !
ಸಂಪ್ರದಾಯವನೊಗೆದು ಸ್ವಾರ್ಥಿಜನದೆದೆ ಬಗೆದು
ಸುಖಪಡುವುದೆನೆ ನಾನು ಕಮ್ಯುನಿಷ್ಟ ! ’

ಈ ಒಳತೋಟಿಯನ್ನು, ಎದೆಯ ಹೊಯ್ದಾಟವನ್ನು ಹತ್ತಿಕ್ಕಿ, ಕೊನೆಯಲ್ಲಿ ಕವಿ ಈ ನಿರ್ಧಾರಕ್ಕೆ ಬರುತ್ತಾರೆ.

‘ ನೆಮ್ಮದಿಯನೆನ್ನೆದೆಗೆ ಕರೆಯುವೆನು ಜನದೆದೆಯ
ನೋವು ನಲಿವನು ನುಡಿವ ಹಾಡು ಹಾಡಿ,
ಒಳಗಣ್ಣು ಕಂಡ, ಇಳೆಯೆಸೆವ ಸೌಂದರ್ಯವನು
ನೆರೆಯ ಗೆಳೆಯರು ಕಾಣುವಂತೆ ಮಾಡಿ.’

ಹೀಗೆ ಒಂದು ನಿರ್ಧಾರಕ್ಕೆ ಬಂದ ಕವಿ, ಬಾಳಿನ ಹಲವುಬಗೆಯ ನೋವು ನಲಿವುಗಳನ್ನು, ಕಾಮ ಪ್ರೇಮ ಮೊದಲಾದವುಗಳನ್ನು, ದೇಶದ ಸ್ಥಿತಿಗತಿಗಳನ್ನು, ಮಾನವಕುಲದ ಉದ್ಧಾರಕ್ಕೆಂದೇ ಕಂಕಣಕಟ್ಟಿ ದುಡಿದ ಹಿರಿಯ ನಾಯಕರನ್ನು, ವಸ್ತುವಾಗಿಸಿಕೊಂಡು ತಮ್ಮ ಮುಂದಿನ ಕವನಗಳನ್ನು ಬರೆಯುತ್ತ ಹೋಗಿದ್ದಾರೆ.

‘ ಹೃದಯಗೀತ ’, ‘ ನಿರಾಶೆಯ ಆಳದಿಂದ ’, ‘ ಕ್ಷೋಭೆ ’, ಮೊದಲಾದ ಕವನಗಳಲ್ಲಿ, ಭೂಮವನ್ನು ಬಯಸಿದ ಮನ ತನ್ನ ಸುತ್ತಣ ಸನ್ನಿವೇಶಗಳಲ್ಲಿನ ಅಲ್ಪತನವನ್ನು ಕಂಡು ಕುದಿಯುವ ಕೆದಕುವ ಕೆಲವು ಅವಸ್ಥೆಗಳನ್ನು ಕಾಣಬಹುದು. ‘ ಅಂತು

ಬಂತು ಬಿಡುಗಡೆ', 'ಆಗಸ್ಟ್ ಹದಿನೈದು,' 'ಸ್ವಾತಂತ್ರ್ಯದ ಅಧಿದೇವಿಗೆ' ಎಂಬ ಹೆಸರಿನ ಮೂರು ಅಷ್ಟಷಟ್ಪದಿಗಳು, 'ಹಾಡಿನೊಳಗೊಂದು ಹಾಡು,' 'ಎಂದಿಗೆ', 'ನೆತ್ತರಿಗೆ ಬೆಲೆಯಿಲ್ಲ'—ಈ ಮುಂತಾದ ಕವನಗಳು ಕವಿಯ ದೇಶಪ್ರೇಮವನ್ನು, ದೇಶದ ಒಳಿತನ್ನೇ ಬಯಸಿ ಎಲ್ಲೆಲ್ಲೂ ಕೆಡುಕೇ ಕಂಡಾಗ ಮರುಗುವ, ಕನಲುವ, ವ್ಯಂಗ್ಯವಾಗಿ ಟೀಕಿಸುವ, ಬಿಸಿರಕ್ತ ಸಹಜವಾದ ಉದ್ವೇಗವನ್ನು ಬಿಂಬಿಸುತ್ತವೆ. 'ಹೆರಿಗೆಯ ಮನೆಯ ಹೊರಗೆ', 'ಗೆ . . .', 'ಕೃತಜ್ಞತೆ', ಮಾಯೆ ಮಲಗಿತ್ತು', 'ಜೀ. ವಿ. ಗೆ', ಮೊದಲಾದುವು ಜೀವನದ ವಿಧವಿಧವಾದ ಎಳೆತ ಸೆಳೆತಗಳನ್ನು, ಒಲವನ್ನು ಕುರಿತು ಬರೆದಂಥವು. 'ಸಂಜೆ', 'ಮಳೆ ಬಂತು', 'ಮುಗಿಲ ಮರೆಯ ಚಂದಿರ', 'ಕಲ್ಪನೆ',—ಈ ಕೆಲವು ಕವನಗಳಲ್ಲಿ ನಿಸರ್ಗವ್ಯಾಪಾರಗಳ ಹಿನ್ನೆಲೆಯಲ್ಲಿ ಅತೃಪ್ತ ಚೇತನವೊಂದು ಮಾನವರ ಅಲ್ಪತೆಯನ್ನೆ ಮತ್ತೆ ಕಾಣುವ, 'ತನ್ನ ಹೃದಯದ ವಿಚಿತ್ರಭಾವಗಳನ್ನೆ ಅಲ್ಲಿ ಗುರುತಿಸುವ ಒಂದು ಚಿತ್ತಸ್ಥಿತಿಯೂ, ಹಲವು ವೇಳೆ ನಿಸರ್ಗದ ಚೆಲುವನ್ನು ಕಂಡು ತಣಿದು 'ಧನ್ಯೋಽಸ್ಮಿ' ಎನ್ನುವ ತೃಪ್ತ ಮನೋಭಾವವೂ, ಹೊರಹೊಮ್ಮಿದೆ. "ಹೋವಾರ್ಡ್ ಫಾಸ್ಟ್', 'ಇಂದಿಲ್ಲವೇ ಆ 'ದೇವಮಾನವ', 'ಜೂಲಿಯಸ್ ಫೂಚಿರ್',—ಇವು ಗಣ್ಯವ್ಯಕ್ತಿಗೀತಗಳು.

ಶ್ರೀ ರಾಮಚಂದ್ರಶರ್ಮರಲ್ಲಿ ಸಾಧನೆ, ಅಭ್ಯಾಸ ಮತ್ತು 'ವೃದ್ಧ ಸೇವಾನುರಾಗ'ಗಳ ನೆರವಿನಿಂದ ಉತ್ತಮಮಟ್ಟಕ್ಕೆ ಏರಬಲ್ಲ ಕಾವ್ಯಪ್ರತಿಭೆ ಇರುವುದೆನ್ನುವುದಕ್ಕೆ ಅವರ 'ಹೃದಯಗೀತ.' 'ಹಾಡಿನೊಳಗೊಂದು ಹಾಡು', 'ಎಂದಿಗೆ', 'ಮಾಯೆ ಮಲಗಿತ್ತು' 'ಮಳೆಬಂತು' ಮೊದಲಾದ ಕವನಗಳೇ ಸಾಕ್ಷಿ.

ಉಳಿದ ಗೀತಗಳು ಈ ಕವನಗಳ ಮಟ್ಟಕ್ಕೆ ಬಾರದೇಹೋದರೂ ಅವು ತೀರ ಸಾಮಾನ್ಯವಾದುವುಗಳೇನಲ್ಲ. ಓದಬೇಕಾದಂಥವೇ ಆಗಿವೆ. ತರುಣಕವಿಯ ಪ್ರಥಮಸಂಕಲನದಲ್ಲಿ ಬಂದಿರುವ ಈ ಕವನಗಳು ಸಿದ್ಧಿಯನ್ನಲ್ಲದಿದ್ದರೂ, ಸಿದ್ಧಿಯ ಹಂಬಲವನ್ನು, ಪ್ರಯತ್ನವನ್ನು ತೋರ್ಪಡಿಸುತ್ತವೆ.

ಹೀಗೆ ಅಲ್ಲಲ್ಲಿ ಅಮೋಘವಾದ, ವಿಚಿತ್ರವಾದ ಅನುಭವಗಳನ್ನು ಮನವೊಗುವಂತೆ ಪ್ರತಿಮಿಸಿಕೊಡುವ ಕವಿಯ ವಿಶಿಷ್ಟಶಕ್ತಿಯನ್ನು ಕಾಣುತ್ತೇವೆ.

ಶ್ರೀ ರಾಮಚಂದ್ರಶರ್ಮರ ಕವಿತೆಗಳಲ್ಲಿನ ನಾವೀನ್ಯಕ್ಕೆ ಮುಖ್ಯವಾದ ಒಂದು ಕಾರಣ ಅವರ ನವ್ಯವಾದ ಉಪಮೆ ಮತ್ತು ರೂಪಕಗಳು. ಹಲವು ವೇಳೆ ಅವರ ಉಪಮೆ ರೂಪಕಗಳು ಅಸ್ಪಷ್ಟವೂ, ದೂರಾನ್ವಯವೂ ಆಗುವುದುಂಟು. ಆದರೆ ಅನೇಕ ಕಡೆಗಳಲ್ಲಿ ಅವರ ಉಪಮೆ ರೂಪಕಗಳು ಯಶಸ್ವಿಯಾಗಿ ಓದುಗರಲ್ಲಿ

ತಕ್ಕಮಟ್ಟಿಗೆ ಪರಿಣಾಮವನ್ನುಂಟುಮಾಡುತ್ತವೆ. ಮಾದರಿಗಾಗಿ ಕೆಲವನ್ನಿಲ್ಲಿ ಗಮನಿಸಬಹುದು.

'ತಿರುಪು ಮರವ ಕೊರೆಯುವಂತೆ ಗಂಡೆದೆಯನು ಕೊರೆಯಿತು !'

['ಹೆರಿಗೆ ಮನೆಯ ಹೊರಗೆ']

'ಮೊಲೆಯು ಹೊರಬಂತೆ ಸ್ವಚ್ಛಂದದಂದಚೆಂದಗಳ ಬಯಕೆಯಿಂದ?
ಗೂಡ ತೊರೆದು ಹೊರಬರುವ ಎಳೆ ಪಾರಿವಾಳದಂತೆ,
ನೆಲದಾಳದಿಂದ ನೆಲಕೆದ್ದು ಬರುವ ಬಿಳಿಯ ಮೊಲದಂತೆ ಬಂತೆ!'

['ಮಾಯೆ ಮಲಗಿತ್ತು']

'ನೂರೆರಡು ಡಿಗ್ರಿ ಜ್ವರದಿಂದ ಮೈಬೆಂದ ನರ ಪರಿತಪಿಸುವಂತೆ,
ಮಡಿವಂತ ಮನೆಯ ಬಾಣಂತಿಯಂತೆ,
ಮಲಗಿತ್ತು ನೆಲ ಮಳೆಯು ಬರವ ಕಳವಳಿಸುತ್ತ'

['ಮಳೆ ಬಂತು']

ಇತ್ಯಾದಿ.

ಅನುವಾದಿತ ಕವನಗಳಲ್ಲಿ 'ಇಂದಿರೆ' 'ವೇದಾಂತ' 'ವಿಶ್ವಶಾಂತಿ' 'ಅಪೂರ್ವ ಅನುಭವ'—ಇವು ಚೆನ್ನಾಗಿವೆ.

ಶ್ರೀ ಶರ್ಮರ ಛಂದಸ್ಸಿನಲ್ಲಿ ಅನೇಕ ವೇಳೆ ನವ್ಯತೆಯಿದೆ. ಅಲ್ಲಲ್ಲಿ ಲಾಲಿತ್ಯವೂ ಬಹಳೆಡೆಗಳಲ್ಲಿ ಮೊನಚೂ ಕಾಣಬರುತ್ತದೆ. ಹಲವು ಕಡೆಗಳಲ್ಲಿ ಬಂಧ ಶಿಥಿಲವಾಗಿರುವುದೂ ಉಂಟು. ಇವರ ಸ್ವಚ್ಛಂದಗೀತಗಳು ನಿರರ್ಗಳವಾಗಿ ಓಡುವಾಗ ಹಲವೊಮ್ಮೆ ನಡುವೆ ಕುಂಟುತ್ತವೆ. ಭಾಷೆಯಲ್ಲಿ ನೂತನಪ್ರಯೋಗವನ್ನು ಮಾಡುವ ಆಕಾಂಕ್ಷೆ ಯೋಗ್ಯವಾದರೂ, ಮಧ್ಯೆ ನುಸುಳುವ ಅಪಪ್ರಯೋಗಗಳನ್ನು ನಿವಾರಿಸಿದರೆ ಒಳ್ಳೆಯದು. ಭಾಷೆ ಭಾವಗಳೆರಡೂ ಇನ್ನಷ್ಟು ಪಳಗಿದರೆ, ಸಂಯಮಕ್ಕೊಳಗಾದರೆ ಲೇಸು.

ಸಂಗ್ರಹಕ್ಕೆ ಈ ತಲೆಮಾರಿನ ಇಬ್ಬರು ಕವಿಗಳಾದ ಶ್ರೀ ಗೋಪಾಲಕೃಷ್ಣ ಅಡಿಗ, ಶ್ರೀ ಸು. ರಂ. ಎಕ್ಕುಂಡಿ ಇವರು ಬೇರೆ ಬೇರೆ ಹಿನ್ನುಡಿಯನ್ನು ಬರೆದಿದ್ದಾರೆ. 'ನವ್ಯಕಾವ್ಯದ ಬಗೆಗೆ ನಾನಾಡಬಹುದಾಗಿದ್ದುದನ್ನೆಲ್ಲ ನನ್ನ ಗೆಳೆಯರು ಶ್ರೀ ಗೋಪಾಲಕೃಷ್ಣ ಅಡಿಗ ಮತ್ತು ಶ್ರೀ ಎಕ್ಕುಂಡಿಯವರೇ ಆಡಿದ್ದಾರೆ' ಎಂಬ ಲೇಖಕರ ಮಾತು ವಿಸ್ಮಯವನ್ನುಂಟುಮಾಡುತ್ತದೆ. ಕಾರಣ ಈ ಎರಡು ಹಿನ್ನುಡಿಗಳು ಪರಸ್ಪರ ವಿರುದ್ಧವೆನ್ನುವಂತಿವೆ. ಸಾಮಾನ್ಯ ಓದುಗರಿಗಾದರೂ ಇದರಿಂದಾಗುವ ಪ್ರಯೋಜನ ಅಲ್ಪ.

ಈ ಕವನಗಳನ್ನೋದಿ ಮುಗಿಸಿದ ಮೇಲೆ, ಈ ಕೃತಿಯ ಹಿನ್ನೆಲೆಯಲ್ಲಿ ಜ್ವಲಂತವಾಗಿ ಉರಿಯುತ್ತಿರುವ ರಾಗಭಾವಗಳನ್ನು ಕಾಣಬಲ್ಲವರಾಗುತ್ತೇವೆ. ಈ ಕವಿ ಚೇತನ ಶಕ್ತಿಪೂರ್ಣವಾದದ್ದು, ಬೆಳೆಯುವಂಥದು, ಸಂಪನ್ನ ಮಾರ್ಗದಲ್ಲೆ ಹರಿಯುವಂಥದು ಎಂದು ಓದುಗರಿಗೆ ದೃಢವಾಗುತ್ತದೆ. ಅಂತೆಯೇ ಈ ಕವಿಯಿಂದ ಇನ್ನೂ ಉತ್ತಮೋತ್ತಮವಾದ ಕೃತಿಗಳನ್ನು ಓದುಗರು ಸಹಜವಾಗಿಯೇ ನಿರೀಕ್ಷಿಸುತ್ತಾರೆ.

ಕೆ. ವಿ. ಸುಬ್ಬಣ್ಣ

ವಸ್ತುಕೋಶ

೨೮-೫-೫೪ ನೆಯ ದಿನ ದಾವಣಗೆರೆ ನಗರದಲ್ಲಿ ನಡೆದ ಅಖಂಡ ಕರ್ಣಾಟಕ ರಾಜ್ಯನಿರ್ಮಾಣ ಪರಿಷತ್ತಿನಲ್ಲಿ ಅಧ್ಯಕ್ಷಪೀಠದಿಂದ ಮದ್ರಾಸಿನ ಮಾಜಿ ಸಚಿವರಾದ ಶ್ರೀ ಕೆ. ಆರ್. ಕಾರಂತರು ಮಾಡಿದ ಭಾಷಣದ ಸಾರಸಂಗ್ರಹ:—

ಶ್ರೀ ಕೆ. ಆರ್. ಕಾರಂತರ ಭಾಷಣ

ಕರ್ಣಾಟಕ ಪ್ರಾಂತ ರಚನೆಯ ಪ್ರಶ್ನೆ ಇತ್ತೀಚಿನದಲ್ಲ; ಅಥವಾ ಆಂಧ್ರಪ್ರಾಂತ ರಚನೆಯ ಬೇಡಿಕೆಗೆ ವಿರುದ್ಧವಾಗಿ ಒಡ್ಡಿದ ಸವಾಲಲ್ಲ. ೧೯೧೭ ರಲ್ಲಿಯೆ ಅಂದರೆ ಬ್ರಿಟಿಷರ ಆಡಳಿತಕಾಲದಲ್ಲಿಯೆ ಆ ಪ್ರಶ್ನೆಯನ್ನು ಒತ್ತಾಯ ಪಡಿಸಲಾಯಿತು. ಜನತೆಯ ಸರ್ವತೋಮುಖವಾದ ಕ್ಷೇಮಾಭ್ಯುದಯ ಮತ್ತು ಉತ್ತಮವಾದ ಆಡಳಿತಸೌಕರ್ಯದ ದೃಷ್ಟಿಯಿಂದ ಭಾಷಾವಾರು ಪ್ರಾಂತರಚನೆ ಅತ್ಯಾವಶ್ಯಕವೆಂಬ ಅಂಶ ಮಾಂಟಿಗೋ ಸುಧಾರಣೆಗಳಲ್ಲಿ ಅಂಗೀಕೃತವಾಯಿತು. ೧೯೨೮ ರ ಸರ್ವಪಕ್ಷ ಸಮ್ಮೇಲನದ ವರದಿ ಕರ್ಣಾಟಕ ಪ್ರಾಂತ್ಯನಿರ್ಮಾಣದ ಆದ್ಯತೆಯನ್ನು ಎತ್ತಿಹಿಡಿದುದಲ್ಲದೆ ಅದರ ಆರ್ಥಿಕ ಸುಭದ್ರತೆಯ ವಿಷಯದಲ್ಲಿ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿತು. ಸೈಮನ್ ಕಮೀಷನ್ನು ಸಹ ಈಗಿನ ಪ್ರಾಂತ್ಯಗಳ ಅನನ್ವಯತೆಯನ್ನು ತೋರಿಸಿ ಭಾಷಾವಾರು ಪ್ರಾಂತರಚನೆಯ ಅಗತ್ಯತೆಯನ್ನು ಸ್ಪಷ್ಟಪಡಿಸಿತು. ಮಹಾತ್ಮ ಗಾಂಧಿಯವರ ನೇತೃತ್ವ ಮತ್ತು ಮಾರ್ಗದರ್ಶಿತ್ವಗಳಲ್ಲಿ ೧೯೨೦ ರಿಂದ ಕಾಂಗ್ರೆಸ್ಸು ಭಾಷಾವಾರು ಪ್ರಾಂತರಚನೆಯ ಆಧಾರದ ಮೇಲೆ ತನ್ನ ವ್ಯವಹಾರಗಳನ್ನು ನಡಸುತ್ತಿರುವುದಲ್ಲದೆ, ೧೯೪೭ ರ ಚುನಾವಣಾ ಘೋಷಣೆಯಲ್ಲಿ ಈ ಪ್ರಶ್ನೆಯನ್ನೇ ಪ್ರಧಾನಾಂಶವಾಗಿ ಸ್ವೀಕರಿಸಿತು. ಈ ಗುರಿಯ ಸಾಧನೆಯಲ್ಲಿ ಭಾರತೀಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಆ ಒಂದು ಭರವಸೆಯಿಂದಲೇ ಕಾಂಗ್ರೆಸ್ಸಿಗೆ ಓಟುಕೊಟ್ಟು ಅದಕ್ಕೆ ಜಯವನ್ನು ಗಳಿಸಿಕೊಟ್ಟರು. ಬೊಂಬಾಯಿ ಮತ್ತು ಮದರಾಸು ಪ್ರಾಂತ್ಯಗಳ ಶಾಸನಸಭೆಗಳಲ್ಲಿ ೧೯೪೭-೪೮ ರಲ್ಲಿ ಕೇಂದ್ರ ಕಾಂಗ್ರೆಸ್ ಕಾರ್ಯಸಮಿತಿಯ ನಿರ್ಣಯಗಳಿಗನುಸಾರವಾಗಿ ಭಾಷಾವಾರು ಪ್ರಾಂತಗಳು ಅತಿ ಶೀಘ್ರವಾಗಿ ರೂಪುಗೊಳ್ಳಬೇಕೆಂಬ ನಿರ್ಣಯಗಳು ಅಂಗೀಕೃತವಾದುವು. ೧೯೪೯ ನೆಯ ಸೆಪ್ಟೆಂಬರ್ ತಿಂಗಳಲ್ಲಿ ಕರ್ಣಾಟಕ, ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ನಿಯೋಗವೊಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಕಂಡು ತಮ್ಮ ಬೇಡಿಕೆಗಳನ್ನು ಮಂಡಿಸಿದಾಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಕೂಡಲೇ

ಈ ಕಾರ್ಯವನ್ನು ಕೈಕೊಳ್ಳುವುದಾಗಿ ಆ ಸಮಿತಿ ಸರ್ವಾನುಮತದ ನಿರ್ಣಯದ ಮೂಲಕ ಭರವಸೆಕೊಟ್ಟಿತು.

೧೯೪೭ನೆಯ ಜನವರಿಯಲ್ಲಿ ಬೊಂಬಾಯಲ್ಲಿ ನಡೆದ ಅಖಿಲ ಕರ್ಣಾಟಕ ಏಕೀಕರಣ ಸಮ್ಮೇಲನದ ಉದ್ಘಾಟನ ಸಮಾರಂಭವನ್ನು ನೆರವೇರಿಸುತ್ತಾ ಸರ್ದಾರ್ ವಲ್ಲಭಭಾಯಿ ಪಟೇಲರು ಸಾರಿ ಹೇಳಿದ ಮಾತುಗಳಿವು :—

"ನಿಮ್ಮ ಬೇಡಿಕೆಯಲ್ಲಿ ತಿರುಳಿದೆ. ಬ್ರಿಟಿಷ್ ಕರ್ಣಾಟಕ ಮಾತ್ರವೇ ಆಕಾರ ಮತ್ತು ಜನಬಾಹುಳ್ಯದಲ್ಲಿ ಮೈಸೂರು ಸಂಸ್ಥಾನಕ್ಕಿಂತ ದೊಡ್ಡದು. ಜನಸಂಖ್ಯೆಯ ದೃಷ್ಟಿಯಿಂದ ಅದು ಸಿಂಧ್‌ಪ್ರಾಂತದ ಎರಡರಷ್ಟು, ವಾಯುವ್ಯ ಸರಹದ್ದಿನ ಪ್ರಾಂತ್ಯಕ್ಕಿಂತ ಮೂರರಷ್ಟು ಇದೆ. ಅದು ಆಕಾರದಲ್ಲಿ ಕೊಡಗಿಗಿಂತ ಇಪ್ಪತ್ತರಷ್ಟು ಜನಸಂಖ್ಯೆಯಲ್ಲಿ ನಲವತ್ತರಷ್ಟು ಇದೆ. ಮೈಸೂರು ಮತ್ತು ಹೈದರಾಬಾದು ಬಹುಭಾಗದಲ್ಲಿ ಕನ್ನಡ ಮಾತಾಡುವವರಿದ್ದಾರೆ. ಇವೆಲ್ಲಾ ಭಾಗಗಳನ್ನೂ ಒಟ್ಟುಗೂಡಿಸಿದರೆ ಕರ್ಣಾಟಕವೊಂದು ಹಿರಿಯ ಪ್ರಾಂತ್ಯವಾಗುತ್ತದೆ. ಭರತಖಂಡದ ತೀವ್ರಪ್ರಗತಿಗೆ ಭಾಷಾನುಗುಣವಾದ ಪ್ರಾಂತರಚನೆ ಅತ್ಯಗತ್ಯ. ಹರಿದು ಹಂಚಿಹೋಗಿರುವ ಕರ್ಣಾಟಕ ಒಂದುಗೂಡಿ, ಒಂದು ಆಡಳಿತದ ಆಶ್ರಯದಲ್ಲಿ ಪ್ರಗತಿಹೊಂದುವ ಸುದಿನ ದೂರವಿರಲಾರದೆಂದು ನಾವಿಂದು ನಿಮಗೆ ಭರವಸೆ ಕೊಡುತ್ತೇವೆ."

ಭರತಖಂಡಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ, ಬಂದ ಮೇಲೆ ಕೆಲವು ದಿನಗಳ ತನಕ ಭಾಷಾವಾರು ಪ್ರಾಂತರಚನೆಯ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುತ್ತಿದ್ದ ನಾಯಕರು ಈಚೀಚೆಗೆ ಏನೇನೋ ನೆಪವೊಡ್ಡಿ ಆ ಪ್ರಶ್ನೆಯನ್ನೇ ಮುಂದೂಡಲು ಪ್ರಯತ್ನಿಸಿದರು. ಆದರೆ ಆಂಧ್ರಪ್ರಾಂತದಲ್ಲಿ ನಡೆದ ಕೆಲವು ಘಟನೆಗಳಿಂದಾಗಿ ಕೇಂದ್ರಸರ್ಕಾರ ಆಂಧ್ರರ ಕೋರಿಕೆಯನ್ನು ಈಡೇರಿಸಲೊಪ್ಪಿದೆ. ಈಗ ಗೊತ್ತಾಗಿರುವಂತೆ ಆಂಧ್ರಪ್ರಾಂತ ರಚನೆಯಾಗಿ ಬಳ್ಳಾರಿಯ ಕೆಲವು ತಾಲ್ಲೂಕುಗಳು ಮೈಸೂರಿಗೆ ಸೇರಿದಮೇಲೆ ಉಳಿಕೆ ಮದ್ರಾಸ್ ಪ್ರಾಂತದಲ್ಲಿ ಉಳಿಯಬೇಕಾಗಿರುವ ದಕ್ಷಿಣ ಕನ್ನಡಜಿಲ್ಲೆ, ನೀಲಗಿರಿ, ಕೊಳ್ಳೇಗಾಲ ಮೊದಲಾದ ಭಾಗಗಳ ಗತಿ ಏನೆಂಬುದನ್ನೂ ಅವುಗಳ ಕ್ಷೇಮವನ್ನೂ ವಿಚಾರಿಸುವವರಾರು ? ಹಾಗೆಯೇ ಬಿಟ್ಟರೆ ಅವು ತಮಿಳುನಾಡಿನಲ್ಲಿ ಸೇರಬೇಕಾಗುವ ದಾರುಣಪರಿಸ್ಥಿತಿ ಒದಗಬಹುದಲ್ಲವೆ ?

ಕರ್ಣಾಟಕಪ್ರಾಂತ ನಿರ್ಮಾಣಕ್ಕೆ ಮೈಸೂರು ಅಡ್ಡಿತಂದೊಡ್ಡುತ್ತಿದೆಯೆಂಬ ಭೀತಿಯೂ ಈಗ ನಿವಾರಣೆಯಾಗಿದೆ. ಮೈಸೂರಿನ ರಾಜಪ್ರಮುಖರೂ ಮುಖ್ಯಮಂತ್ರಿಗಳೂ ಕೆಲವು ದಿನಗಳ ಹಿಂದೆ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಕೈಗೊಂಡಿದ್ದ ಪ್ರವಾಸವು ಪಕ್ಷ ಪ್ರತಿಪಕ್ಷದವರ ಭೀತಿ ಸಂಶಯಗಳನ್ನು ಹೋಗಲಾಡಿಸಿದೆ.

ಮಲ್ಲಪ್ಪ ಗಲಗಲಿ ಅವರು ಕನ್ನಡಿಗರ ಮೆಚ್ಚಿನ ಅನುಭಾವಕವಿಗಳು. ಶ್ರೀಯುತರು ಗೀತೆ ಉಪನಿಷತ್ತುಗಳನ್ನೂ ಅರವಿಂದರ ತತ್ವಪ್ರಣಾಲಿಗಳನ್ನೂ ಕಾಳಿದಾಸರವೀಂದ್ರರ ಕೃತಿಗಳನ್ನೂ ಶಿವಶರಣರ ಹರಿದಾಸರ ವಾಙ್ಮಯಗಳನ್ನೂ ಆಳವಾಗಿ ಅಭ್ಯಾಸ ಮಾಡಿದ್ದರು. ಶ್ರೀ ಬೇಂದ್ರೆಯವರು ಕಟ್ಟಿದ ಗೆಳೆಯರ ಗುಂಪಿನಲ್ಲಿ ಒಬ್ಬರಾಗಿ ತಮ್ಮ ಅವ್ಯಾಜ ನಿರ್ಮಲವಾದ ಮೈತ್ರಿಯಿಂದ ಎಲ್ಲರ ಪ್ರೀತಿವಿಶ್ವಾಸಗಳಿಗೂ ಪಾತ್ರ ರಾಗಿದ್ದರು. ನಮ್ಮ ನಾಡಿನ ಜನಪದಸಾಹಿತ್ಯವನ್ನು ಕಲೆಹಾಕಿ ಪ್ರಕಟಿಸಿ, ಆ ಸಾಹಿತ್ಯದ ಸಹಜಶೋಭೆಗೆ ಮಾರುಹೋಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಶ್ರೀ ಮಧುರಚೆನ್ನರು ಒಬ್ಬ ದೊಡ್ಡ ಅನುಭಾವಿಗಳು, ಸಾಧುಜೀವನ ನಡಸಿದ ಮಹಾ ಮಹಿಮರು, ಸಂತಕವಿಗಳಾಗಿ ಅನುಭವಗೀತಗಳನ್ನು ಹಾಡಿದ ಸಾಹಿತ್ಯಜ್ಞರು. ಅವರ ಎಲ್ಲ ಕೃತಿಗಳಲ್ಲಿಯೂ ತಮ್ಮ ಸಾಧನೆಯ ಸಂಗತಿಗಳನ್ನೇ ಸಾಹಿತ್ಯದ ರೀತಿಯಲ್ಲಿ ಬರೆದಿಟ್ಟಿರುವುದನ್ನು ನಾವು ಕಾಣುತ್ತೇವೆ. ಅವರ 'ನನ್ನನಲ್ಲ' 'ಮಧುರಗೀತ' 'ಕಾಳರಾತ್ರಿ' 'ಪೂರ್ವರಂಗ' 'ಬೆಳಕು' ಇವು ಒಂದೊಂದೂ ಅಂತರಂಗವನ್ನು ಬಹಿರಂಗಪಡಿಸುವ ಸಾಹಿತ್ಯದ ಬೆಳಕು ಕಂಡಿಗಳಾಗಿವೆ. ಅವರು ಹೇಗೆ 'ಮಧುರ ಚೆನ್ನ'ರೋ ಹೇಗೆ 'ನನ್ನನಲ್ಲ'ರೋ ಹಾಗೆ 'ಜ್ಞಾನಭಿಕ್ಷು'ಗಳು! ಆತ್ಮೀಯ ಇತಿ ವೃತ್ತವನ್ನೇ ವಸ್ತುವನ್ನಾಗಿ ಮಾಡಿ ಕಾವ್ಯದ ರೀತಿಯಲ್ಲಿ ಹಾಡಿದ ಈ ಸಂತಕವಿ ನಮ್ಮ ಎಲ್ಲರ ಮೆಚ್ಚಿಕೆಗೆ ಪಾತ್ರರಾಗಿದ್ದಾರೆ.

ಹೀಗೆ ವೈಯಕ್ತಿವೂ, ಸ್ವಾನುಭವಜನ್ಯವೂ ಆದ ಅಂತರಂಗದ ಸಾಧನೆಯ ವಿಚಾರ ಗಳನ್ನು ಪ್ರಕಟಪಡಿಸುವುದರ ಮೂಲಕವಾಗಿಯೂ ಶ್ರೀ ಅರವಿಂದರ ಶಿಷ್ಯರಲ್ಲೊಬ್ಬ ರಾಗಿ ಅವರ ತತ್ವಗಳನ್ನು ಕನ್ನಡದಲ್ಲಿ ಪ್ರಕಟಪಡಿಸುವ ಸಲುವಾಗಿಯೂ ಅರವಿಂದ ಗ್ರಂಥಮಾಲೆ ತೆರೆದು ತಾತ್ತ್ವಿಕ ಪುಸ್ತಕಗಳನ್ನು ಕನ್ನಡಿಗರಿಗೆ ಕೊಡುವುದರ ಮೂಲಕ ವಾಗಿಯೂ ಉತ್ತರ ಕರ್ಣಾಟಕದ ಜನಪದಗೀತಗಳನ್ನು ಪ್ರಕಟಿಸಿ ರಸಿಕರ ಮನಸ್ಸು ಸೂರೆಗೊಳ್ಳುವಂತೆ ಮಾಡುವುದರ ಮೂಲಕವಾಗಿಯೂ ತಾವು ನೆಲೆನಿಂತ ಹಳ್ಳಿಯ ಮತ್ತು ಜಿಲ್ಲೆಯ ಜನರ ಚೇತನ ತಮ್ಮ ನಡೆನುಡಿಗಳ ಫಲವಾಗಿ ಜಾಗೃತಗೊಳ್ಳುವಂತೆ ಮಾಡುವುದರ ಮೂಲಕವಾಗಿಯೂ ಈ ಮಧುರಚೆನ್ನರು ಅಹರ್ನಿಶಿ ದುಡಿದು ನಾಡು ನುಡಿಗಳ ಶ್ರೇಯಸ್ಸಿಗೆ ಕಾರಣಕರ್ತರಾಗಿದ್ದರು. ಸೊಲ್ಲಾಪುರದಲ್ಲಿ ಸೇರಿದ ೩೩ ನೆಯ ಕನ್ನಡ ಸಾಹಿತ್ಯಸಮ್ಮೇಳನದ—ಕವಿಗೋಷ್ಠಿಯ ಅಧ್ಯಕ್ಷರಾಗಿ ಶ್ರೀ ಮಧುರಚೆನ್ನರು ಮಾಡಿದ ಭಾಷಣ ನಮ್ಮ ಕಾವ್ಯದ ಮುಂದಿನ ಹಾದಿ ಹೇಗಿರಬೇಕೆಂಬ ವಿಷಯ ವನ್ನು ಕುರಿತು ವಿಚಾರಮಾಡುವವರಿಗೆ ಬೆಳಕಿನ ದೀವಿಗೆಯಾಗಿದೆ. ಮಧುರಚೆನ್ನರು ಆ ಭಾಷಣದಲ್ಲಿ ತಮ್ಮದೇ ಆದ ರೀತಿಯಲ್ಲಿ ಕಾವ್ಯಮೀಮಾಂಸೆಯ ಕೆಲವು ಮಾತು

ಗಳನ್ನು ಹೇಳಿದ್ದಾರೆ. "ನಮ್ಮ ಕವಿತೆ ಮತ್ತು ಸಾಹಿತ್ಯದಲ್ಲಿ ನಾವು ವ್ಯವಹಾರ ಜೀವನದ ಎಲ್ಲ ಮಾತುಗಳನ್ನು ಸ್ವೀಕರಿಸಬಹುದಾದರೂ ಅವುಗಳನ್ನೆಲ್ಲ ನಾವು ಆಧ್ಯಾತ್ಮಿಕ ದೃಷ್ಟಿಕೋನದಿಂದಲೇ ನೋಡಬೇಕು" ಎಂದು ಅಲ್ಲಿ ಹೇಳಿರುವ ಮಾತು ಮನನಯೋಗ್ಯವಾಗಿದೆ.

ಇಂತಹ ಅನುಭಾವಿ ಕವಿಗಳನ್ನು ಕಳೆದುಕೊಂಡ ನಾವು ಅಪಾರವಾದ ದುಃಖಕ್ಕೆ ಒಳಗಾಗಿದ್ದೇವೆ. ಈ ಸನ್ನಿವೇಶದಲ್ಲಿ ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದೂ ಮೃತರ ಬಂಧುಬಳಗದವರಿಗೂ ಇಷ್ಟಮಿತ್ರರಿಗೂ ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಕೊಡಲಿ ಎಂದೂ ಭಗವಂತನನ್ನು ನಾವು ಪ್ರಾರ್ಥಿಸುತ್ತೇವೆ.

* * * *

ಶ್ರೀ ನಾರಾಣ ಶ್ರೀನಿವಾಸ ರಾಜಪುರೋಹಿತರು ಸುಪ್ರಸಿದ್ಧರಾದ ಇತಹಾಸಸಂಶೋಧಕರಾಗಿದ್ದರು. ಕನ್ನಡ ಕವಿಗಳ ಕಾಲ ದೇಶ ಮತ ಕೃತಿ ರಾಜಾಶ್ರಯಾದಿಗಳನ್ನು ನಿರ್ಣಯಿಸುವ ಸಲುವಾಗಿ ಶೋಧನಮಾಡಿ ಬರೆದಿರುವ ಅವರ ವಿಚಾರಪೂರ್ಣವಾದ ಲೇಖನಗಳು ಅವರ ಅಪಾರವಾದ ವಿದ್ವತ್ತಿಗೂ ಆಳವಾದ ಅಭ್ಯಾಸಕ್ಕೂ ದೀರ್ಘಕಾಲದ ಪರಿಶ್ರಮಕ್ಕೂ ನಿದರ್ಶನಗಳಾಗಿವೆ. ಶ್ರೀ ಸುರೇಶ್ವರಾಚಾರ್ಯರ ಚರಿತ್ರೆ, ಶ್ರೀ ಯಾಜ್ಞವಲ್ಕ್ಯ ಮಹಾಮುನಿಗಳ ಚರಿತ್ರೆ, ಶ್ರೀ ಮಧ್ವಾಚಾರ್ಯರ ಚರಿತ್ರೆ, ಕರ್ಣಾಟಕ ಇತಿಹಾಸ, ದಾನಧರ್ಮ ಪದ್ಧತಿ ಮುಂತಾದ ಅನೇಕ ಅಮೂಲ್ಯವಾದ ಗ್ರಂಥಗಳನ್ನು ಶ್ರೀ ಪುರೋಹಿತರು ಬರೆದಿದ್ದಾರೆ. ಧಾರವಾಡದಲ್ಲಿ ಇತಿಹಾಸ ಸಂಶೋಧಕಮಂಡಲವನ್ನು ಕಟ್ಟಿ ಎಷ್ಟೇ ಕಷ್ಟನಷ್ಟಗಳು ಒದಗಿದರೂ ಎದೆಗೆಡದೆ ಅಚಲವಾದ ಶ್ರದ್ಧೆಯಿಂದಲೂ ಏಕಪ್ರಕಾರವಾದ ನಿಷ್ಠೆಯಿಂದಲೂ ಕಾರ್ಯತತ್ಪರರಾಗಿದ್ದ ಈ ಮಹಾನುಭಾವರ ನಿಧನದಿಂದ ನಮ್ಮ ವಿದ್ವತ್ಪ್ರಪಂಚಕ್ಕೆ ತುಂಬ ನಷ್ಟವಾಗಿದೆ. ಯಾಜ್ಞವಲ್ಕ್ಯಮುನಿಗಳ ಚಾರಿತ್ರ್ಯದ ಪುಟಪುಟದಲ್ಲಿಯೂ ಈ ಮಹನೀಯರ ವಿದ್ವತ್ತು, ಪ್ರತಿಭೆ, ರಾಷ್ಟ್ರಪ್ರೇಮ ಮತ್ತು ಮಹಾ ಸಂಶೋಧನಾಶಕ್ತಿ ಪ್ರಕಾಶಿಸುತ್ತವೆ.

ಇಂತಹ ಸುಪ್ರಸಿದ್ಧ ಇತಿಹಾಸಸಂಶೋಧಕರಾದ ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತರನ್ನು ಕಳೆದುಕೊಂಡ ದುಃಖಕ್ಕೆ ಈಡಾಗಿರುವ ಕನ್ನಡಿಗರ ಜೊತೆಯಲ್ಲಿ ನಾವೂ ದುಃಖಭಾಗಿಗಳಾಗಿದ್ದೇವೆ. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಅನುಗ್ರಹಿಸಲೆಂದೂ ಮೃತರ ಬಂಧುಬಳಗದವರಿಗೂ ಇಷ್ಟಮಿತ್ರರಿಗೂ ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಕೊಡಲಿ ಎಂದು ಆ ದಯಾಮಯನಲ್ಲಿ ಮೊರೆಯಿಡುತ್ತೇವೆ.

ಸಾದರ ಸ್ವೀಕಾರ

(೧) **ಜೇನು**(ಕವಿತಾಸಂಗ್ರಹ)—ಶ್ರೀ ಷ|| ಬ್ರ|| ಗಂಗಾಧರ ಶಿವಾಚಾರ್ಯ ಮಹಾಸ್ವಾಮಿ ಗಳವರು, ಮಠಬ ಬೈಲವದ್ದಿರಿ; ಪ್ರಕಾಶಕರು: ಶ್ರೀ ಜಡೆಯ ಶಿವಯೋಗೀಶ ಗ್ರಂಥಮಾಲಾ, ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮ, ಬೈಲವದ್ದಿರಿ, ಹೊಸಕೋಟೆ ತಾ|| ಬಳ್ಳಾರಿ ಜಿಲ್ಲೆ; ಕ್ರೌ. ಅ. ಪು. ೫೧ ; ಬೆಲೆ, ಎಂಟು ಆಣೆ.

(೨) **ಏಕಲವ್ಯ ದರ್ಶನ**—ಲೇಖಕರು : ಸಿ. ಕೆ. ನಾಗರಾಜ್ ಅವರು ; ಮಾರಾಟಗಾರರು: ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು ನಗರ ; ಪುಟ ೫೨ ; ಬೆಲೆ, ಎಂಟು ಆಣೆ.

(೩) **ನಾಲ್ಕು ನಾಡಪದಗಳು**—ಸಂಕಲನಕಾರರು : ಶ್ರೀ ಬಿ. ಎನ್. ಗದ್ದಗಿಮಠ; ಪ್ರಕಾಶಕರು: ಶ್ರೀ ಬಿ. ಎನ್. ಗದ್ದಗಿಮಠ, ಪೂಲಭಾಗಗಲ್ಲಿ ೨೪೪/೬೦, ಬೆಳಗಾವಿ; ಕ್ರೌ. ಅ. ಪು. ೬೪ ; ಬೆಲೆ, ರೂ. ೧-೦-೦.

(೪) **ಮೋಜಿನ ಮದ್ವೆ** (ಏಕಾಂಕ ಪ್ರಹಸನ)—ಲೇಖಕರು : ತ. ಪು. ವೆಂಕಟರಾಂ ಅವರು ; ಪ್ರಕಾಶಕರು : ರೋಹಿಣಿ ಪ್ರಕಾಶಮಂದಿರ, ತರೀಕೆರೆ ; ಕ್ರೌ. ಅ. ಪು. ೪೩ ; ಬೆಲೆ, ಎಂಟು ಆಣೆ.

(೫) **ಕನ್ನಡ ಕುಮಾರಸಂಭವ**—ಅನುವಾದಕರು : ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು; ಪ್ರಕಾಶಕರು: ಶಾರದಾಮಂದಿರ ೫೭೮, ಕೃಷ್ಣರಾಜವನಂ, ಮೈಸೂರು ; ಕ್ರೌ. ಅ. ಪು. xii+೧೬೦ ; ಬೆಲೆ, ರೂ. ೨-೮-೦.

(೬) **ವಿಭೂತಿಪೂಜೆ**—ಲೇಖಕರು : ಶ್ರೀ ಕು.ವೆಂ.ಪು. ಅವರು ; ಸಿಗುವ ಸ್ಥಳ : ಉದಯರವಿ, ವಾಣಿವಿಲಾಸ ಪುರಂ, ಮೈಸೂರು ; ಕ್ರೌ. ಅ. ಪು. ೧೫೦ ; ಉತ್ತಮ ಪ್ರತಿಗೆ ಬೆಲೆ, ರೂ. ೩-೪-೦.

(೭) **ಅಮರುಶತಕ**—ವ್ಯಾಖ್ಯಾನಕಾರರು ; ಆಸ್ಥಾನ ವಿದ್ವಾನ್ ಎಚ್. ಗಂಗಾಧರ ಶಾಸ್ತ್ರಿಗಳು ; ಪ್ರಕಾಶಕರು : ಶಾರದಾಮಂದಿರ, ಕೃಷ್ಣರಾಜವನಂ, ಮೈಸೂರು ; ಕ್ರೌ. ಅ. ಪು. ೩೪+೯೮ ; ಬೆಲೆ, ರೂ. ೧-೮-೦.

(೮) **ಕವಿದರ್ಶನ** (ಶ್ರೀ ಕುವೆಂಪು ಕೃತಿ ಪರಿಚಯ—ವಿವಿಧ ಲೇಖಕರಿಂದ)—ಸಂಪಾದಕ: ದೇ. ಜವರೇಗೌಡ ; ಮಾರಾಟಗಾರರು : ಚೇತನ ಪುಸ್ತಕಾಲಯ, ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು ; ಕ್ರೌ. ಅ. ಪು. iii+೧೬೨ ; ಬೆಲೆ, ರೂ. ೧-೧೨-೦.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ ರ ವರೆಗೆ
ಎ. ಆರ್. ಕೃಷ್ಣ ಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರ ವರೆಗೆ
ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ಐದನೆಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು** (ಸಚಿತ್ರ)—ಅನುವಾದಕರು : ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. ***ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಸಾದಾ ರೂ. ೧-೨-೦ ; ಕ್ಯಾಲಿಕೊ ೨-೨-೦.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. *ಪುರಾಣನಾಮಚೂಡಾಮಣಿ—ಲೇಖಕರು: ಬೆನಗಲ್ ರಾಮರಾವ್, ಎಂ.ಎ., ಎಲ್ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ. ೩-೪-೦.

೧೬. ಯಶೋಧರ ಚರಿತೆಯ ಸಂಗ್ರಹ—ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. *ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ—ಲೇಖಕರು: ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೧೮. ಹಿಂದೂ ದೇಶದ ಭೂಚರಿತ್ರೆ—ಲೇಖಕರು: ವೈ. ನಾಗಪ್ಪ, ಎಂ.ಎಸ್‌ಸಿ.

೧೯. ವಚನಧರ್ಮಸಾರ—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. ಪ್ರಾಣಿಶಾಸ್ತ್ರ—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೧-೮-೦.

೨೧. *ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು—ಜಿ. ಹನುಮಂತರಾವ್, ಎಂ.ಎ.; ಬೆಲೆ, ಸಾದಾ ರೂ. ೧-೦-೦.

೨೨. ಕನ್ನಡ ಕೈಪಿಡಿ (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦; ಕ್ಯಾಲಿಕೊ ರೂ. ೨-೪-೦.

೨೩. ಇಸ್ಲಾಂ ಸಂಸ್ಕೃತಿ—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

೨೪. ತಮಿಳು ಪಾಠಗಳು—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ, ಸಾದಾ ರೂ. ೩-೪-೦.

೨೫. ಅಶೋಕ—ಲೇಖಕರು: ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೨-೦.

೨೬. ಭಾರತೀಯ ಕಾವ್ಯಮೀಮಾಂಸೆ—ಲೇಖಕರು: ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ, ಸಾದಾ ರೂ. ೩-೮-೦; ಉತ್ತಮ ರೂ. ೪-೦-೦.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. *ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪. *ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.